prajavani.net prajavani
ಮಂಗಳವಾರ, ಜನವರಿ 6, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 6 | ಪುಟ 14
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪರೇಡ್...
ಜಾರ್ಖಂಡ್ ಸಶಸ್ತ್ರ ಪೊಲೀಸ್ ವಿಭಾಗದ ಗೂರ್ಖಾ ಬೆಟಾಲಿಯನ್‌ನ ಸಂಸ್ಥಾಪನಾ ದಿನದ ಪರೇಡ್‌ನಲ್ಲಿ ಮಹಿಳಾ ಸಿಬ್ಬಂದಿಯೊಬ್ಬರು ಕತ್ತಿ ಹಿಡಿದು ಸಾಗಿದರು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 85,439 | ನಿಫ್ಟಿ 26,250 | $/₹ 90.30 | ಚಿನ್ನ (Std. 10g) ₹1,41,500 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,50,700 (ಬೆಂಗಳೂರು)

ಮತ್ತೆ ಸುಂಕ ಏರಿಕೆ: ಟ್ರಂಪ್ ಎಚ್ಚರಿಕೆ

ರಷ್ಯಾದಿಂದ ತೈಲ ಆಮದು ಅಮೆರಿಕ ಅಸಮಾಧಾನ

ನವದೆಹಲಿ (ಪಿಟಿಐ): ರಷ್ಯಾದಿಂದ ಕಚ್ಚಾ ತೈಲ ಖರೀದಿಯನ್ನು ಕಡಿತಗೊಳಿಸಬೇಕು ಎಂಬ ಆಗ್ರಹಕ್ಕೆ ಮಣಿಯದಿದ್ದರೆ ಭಾರತದಿಂದ ಆಮದಾಗುವ ಸರಕುಗಳ ಮೇಲಿನ ಸುಂಕವನ್ನು ಹೆಚ್ಚಿಸಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅಮೆರಿಕ ಜೊತೆಗಿನ ಭಾರತದ ವ್ಯಾಪಾರ ಒಪ್ಪಂದವು ಇನ್ನೂ ಅಂತಿಮಗೊಂಡಿಲ್ಲ. ಈ ಸಂದರ್ಭದಲ್ಲಿ ಟ್ರಂಪ್ ಅವರ ಎಚ್ಚರಿಕೆಯು ಭಾರತದ ಮೇಲೆ ಒತ್ತಕ್ಕೆ ಹೇರಬಹುದು ಎನ್ನಲಾಗಿದೆ.

ಟ್ರಂಪ್

‘ಪ್ರಧಾನಿ ನರೇಂದ್ರ ಮೋದಿ ಅವರು ಒಳ್ಳೆಯ ವ್ಯಕ್ತಿ. ನಾನು ಸಂತುಷ್ಟಿಯಿಂದ ಇಲ್ಲ ಎಂಬುದು ಅವರಿಗೆ ತಿಳಿದಿದೆ. ಹಾಗೆಯೇ ನನ್ನನ್ನು ಸಂತುಷ್ಟಗೊಳಿಸುವುದು ಬಹಳ ಮುಖ್ಯ’ ಎಂದು ಅಮೆರಿಕ ಅಧ್ಯಕ್ಷರ ವಿಮಾನ ಏರ್‌ಫೋರ್ಸ್ ಒನ್‌ನಲ್ಲಿ ವರದಿಗಾರರ ಜೊತೆ ಮಾತನಾಡುತ್ತಾ ಟ್ರಂಪ್ ಹೇಳಿದ್ದಾರೆ.

‘ಅವರು ವ್ಯಾಪಾರ ಮಾಡುತ್ತಿದ್ದಾರೆ. ನಾವು ಬಹಳ ವೇಗವಾಗಿ ಸುಂಕವನ್ನು ಹೆಚ್ಚಿಸಬಹುದು’ ಎಂದು ಹೇಳಿದ್ದಾರೆ. ಈ ಕುರಿತಂತೆ ಭಾರತದ ವಾಣಿಜ್ಯ ಸಚಿವಾಲಯವು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಟ್ರಂಪ್ ಅವರು ಭಾರತದ ಸರಕುಗಳ ಮೇಲೆ ಶೇ 50ರಷ್ಟು ಸುಂಕ ಹೇರಿದ್ದಾರೆ. ಇತರ ದೇಶಗಳ ಮೇಲೆ ಹೇರಿರುವ ಸುಂಕಕ್ಕೆ ಹೋಲಿಸಿದರೆ ಇದು ಅತೀ ಹೆಚ್ಚು.

▶10

‘ಸುಂಕ ಕಡಿತಕ್ಕೆ ರಾಯಭಾರಿ ಬೇಡಿಕೆ’

‘ರಷ್ಯಾದಿಂದ ಕಚ್ಚಾ ತೈಲ ಖರೀದಿಯನ್ನು ಕಡಿಮೆ ಮಾಡಲಾಗುತ್ತಿದೆ. ಹಾಗಾಗಿ ಸರಕುಗಳ ಮೇಲೆ ಹೇರಿರುವ ಸುಂಕವನ್ನು ಕಡಿತಗೊಳಿಸಬೇಕು ಎಂದು ಟ್ರಂಪ್ ಅವರಿಗೆ ಹೇಳುವಂತೆ ಭಾರತದ ರಾಯಭಾರಿ ವಿನಯ್ ಕ್ವಾತ್ರಾ ಕೋರಿದ್ದರು’ ಎಂದು ಅಲ್ಲಿನ ಸೆನೆಟರ್ ಲಿಂಡ್ಸೆ ಗ್ರಹಾಂ ಹೇಳಿದ್ದಾರೆ.

ರಷ್ಯಾದಿಂದ ಕಚ್ಚಾ ತೈಲ ಖರೀದಿಸುವ ದೇಶಗಳ ಸರಕುಗಳ ಮೇಲೆ ಶೇ 500ರಷ್ಟು ಸುಂಕ ಹೇರಲು ಅವಕಾಶ ಕಿಡುವ ಮಸೂದೆ ಕುರಿತು ಅವರು ಮಾತನಾಡಿದರು.

‘ತಿಂಗಳ ಹಿಂದೆ ನಾನು ಭಾರತದ ರಾಯಭಾರಿಯ ಮನೆಗೆ ಹೋಗಿದ್ದೆ. ರಷ್ಯಾದಿಂದ ಕಚ್ಚಾ ತೈಲ ಖರೀದಿಯನ್ನು ಹೇಗೆ ಕಡಿಮೆ ಮಾಡಲಾಗಿದೆ ಎಂಬುದರ ಕುರಿತು ಮಾತ್ರ ಅವರು ಮಾತನಾಡಲು ಬಯಸಿದ್ದರು. ಈ ವಿಚಾರವನ್ನು ಅಧ್ಯಕ್ಷರ ಗಮನಕ್ಕೆ ತರಬೇಕು ಎಂದು ಅವರು ಕೋರಿದ್ದರು’ ಎಂದು ಗ್ರಹಾಂ ಹೇಳಿದ್ದಾರೆ.

▶10

ಕಾಂಗ್ರೆಸ್ ತರಾಟೆ

ಟ್ರಂಪ್ ಹೇಳಿಕೆ ಕುರಿತಂತೆ ಕೇಂದ್ರ ಸರ್ಕಾರವನ್ನು ಕಾಂಗ್ರೆಸ್ ಪಕ್ಷ ತರಾಟೆಗೆ ತೆಗೆದುಕೊಂಡಿದೆ. ‘ನಮಸ್ತೆ ಟ್ರಂಪ್, ಹೌಡಿ ಮೋದಿ ಕಾರ್ಯಕ್ರಮ, ಬಲವಂತದ ಅಪ್ಪುಗೆಗಳು, ಅಮೆರಿಕ ಅಧ್ಯಕ್ಷ ಟ್ರಂಪ್ ಅವರನ್ನು ಹೊಗಳಿ ಸಾಮಾಜಿಕ ಜಾಲತಾಣದಲ್ಲಿ ಮಾಡಲಾದ ಪೋಸ್ಟ್‌ಗಳಿಂದ ದೇಶಕ್ಕೆ ಒಳ್ಳೆಯದಾಗಿರುವುದು ಅಷ್ಟರಲ್ಲೇ ಇದೆ’ ಎಂದು ವ್ಯಂಗ್ಯವಾಡಿದೆ.

‘ಪ್ರಧಾನಿಯ ಶ್ವೇತಭವನದಲ್ಲಿರುವ ಅತ್ಯುತ್ತಮ ಸ್ನೇಹಿತ, ಭಾರತದ ವಿಚಾರದಲ್ಲಿ ಆಗೀಗ ಬಿಸಿ ಮುಟ್ಟಿಸುತ್ತಲೇ ತಣ್ಣಗೆ ಇರುವಂತೆ ನಟಿಸುವ ಧೋರಣೆಯನ್ನು ಮುಂದುವರಿಸಿದ್ದಾರೆ. ರಷ್ಯಾದಿಂದ ತೈಲ ಖರೀದಿ ನಿಲ್ಲಿಸದಿದ್ದರೆ, ಭಾರತದಿಂದ ರಫ್ತು ಮಾಡುವ ವಸ್ತುಗಳ ಮೇಲೆ ಹೆಚ್ಚಿನ ಸುಂಕ ಹೇರುವುದಾಗಿ ಬೆದರಿಸಿದ್ದಾರೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ತಿಳಿಸಿದ್ದಾರೆ.

ಗವಿಮಠ ಜಾತ್ರೆ: ಭಕ್ತರ ಮಹಾಸಂಗಮ

ಕೊಪ್ಪಳ: ‘ದಕ್ಷಿಣ ಭಾರತದ ಕುಂಭಮೇಳ’ ಎಂಬ ಕೀರ್ತಿಯುಳ್ಳ ಕೊಪ್ಪಳದ ಗವಿಮಠದ ಜಾತ್ರೆಯ ಮಹಾರಥೋತ್ಸವ ಸೋಮವಾರ ಸಂಜೆ ಲಕ್ಷಾಂತರ ಭಕ್ತರ ಮಹಾ ಸಂಗಮದೊಂದಿಗೆ ಸಂಭ್ರಮದಿಂದ ನೆರವೇರಿತು.

ಸುದ್ದಿ ▶4

ವೆನೆಜುವೆಲಾ: ‘ಮಾತು ಕೇಳದಿದ್ದರೆ ಬೆಲೆ ತೆರಬೇಕು’

ನಿಕೊಲಸ್ ಮಡೂರೊ ಅವರ ಬೆಂಬಲಿಗರು ಕರಾಕಸ್‌ನಲ್ಲಿ ರ‍್ಯಾಲಿ ನಡೆಸಿದರು –ಎಎಫ್‌ಪಿ ಚಿತ್ರ

ನ್ಯೂಯಾರ್ಕ್ (ಎಎಫ್‌ಪಿ/ಎಪಿ): ‘ನಾವು ಬಯಸಿದ ರೀತಿಯಲ್ಲಿ ಆಡಳಿತ ನಡೆಸದಿದ್ದರೆ ಭಾರಿ ತೆಲೆ ತೆರಬೇಕಾಗುತ್ತದೆ’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರಾಡ್ರಿಗಸ್ ಅವರಿಗೆ ಎಚ್ಚರಿಕೆ ನೀಡಿದ್ದಾರೆ.

ಭಾನುವಾರ ‘ನ್ಯೂಯಾರ್ಕ್ ಪೋಸ್ಟ್’ಗೆ ನೀಡಿದ ಸಂದರ್ಶನದಲ್ಲಿ ಟ್ರಂಪ್, ‘ಅಮೆರಿಕದ ಆಶಯಗಳಿಗೆ ಮಣಿಯದಿದ್ದರೆ ಭಾರಿ ಬೆಲೆ ತೆರಬೇಕಾಗುತ್ತದೆ. ಬಹುಶಃ ನಿಕೊಲಸ್ ಮಡೂರೊ ಅವರಿಗೆ ಆದ ಪರಿಸ್ಥಿತಿಗಿಂತಲೂ ಕೆಟ್ಟ ಸ್ಥಿತಿ ಎದುರಿಸಬೇಕಾದೀತು’ ಎಂದು ಎಚ್ಚರಿಸಿದ್ದಾರೆ. ‘ನಾವು ಬಯಸಿದ್ದನ್ನು ವೆನೆಜುವೆಲಾ ಮಾಡಿದರೆ ಅಮೆರಿಕವು ಅಲ್ಲಿ ಸೇನೆಯನ್ನು ನಿಯೋಜಿಸುವ ಅಗತ್ಯವಿಲ್ಲ’ ಎಂದೂ ಹೇಳಿದ್ದಾರೆ.

ಟ್ರಂಪ್ ಅವರು ಎಚ್ಚರಿಕೆ ನೀಡಿದ ಕೆಲ ಗಂಟೆಗಳಲ್ಲೇ ಡೆಲ್ಸಿ ಅವರು ಅಮೆರಿಕದ ಬಗ್ಗೆ ತಾವು ಹೊಂದಿದ್ದ ಕಠಿಣ ನಿಲುವನ್ನು ಅಲ್ಪ ಸಡಿಲಿಸಿದ್ದಾರೆ.

▶10

ಹಲ್ಲೆ ಪ್ರಕರಣ: ಶಾಸಕ ಸವದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಲಕ್ಷ್ಮಣ ಸವದಿ

ಚಿದಾನಂದ ಸವದಿ

ಅಥಣಿ: ಬೆಳಗಾವಿ ಜಿಲ್ಲಾ ಸಹಕಾರಿ ಬ್ಯಾಂಕ್ (ಬಿಡಿಸಿಸಿ) ನೌಕರರ ಸಂಘದ ಅಧ್ಯಕ್ಷ ನಿಂಗಪ್ಪ ಕರೆಣ್ಣವರ ಮೇಲೆ ಹಲ್ಲೆ ನಡೆಸಿದ ಆರೋಪದಡಿ ಶಾಸಕ ಲಕ್ಷ್ಮಣ ಸವದಿ, ಅವರ ಪುತ್ರ ಚಿದಾನಂದ ಮತ್ತು ಅವರ ಬೆಂಬಲಿಗರ ವಿರುದ್ಧ ಅಥಣಿ ಠಾಣೆಯಲ್ಲಿ ಭಾನುವಾರ ತಡರಾತ್ರಿ ಎಫ್‌ಐಆರ್ ದಾಖಲಾಗಿದೆ.

‘ನಾಲ್ಕು ಜನ ಸೇರಿ ಲಕ್ಷ್ಮಣ ಸವದಿ ಅವರ ಮನೆಗೆ ಹೋಗಿದ್ದೆವು. ಆಗ ಶಾಸಕರು ಅವಾಚ್ಯ ಶಬ್ದಗಳಿಂದ ನಿಂದಿಸುವ ಜತೆಗೆ, ನನಗೆ ಕಪಾಳಕ್ಕೆ ಹೊಡೆದರು. ಅವರ ಪುತ್ರ ಚಿದಾನಂದ ಸೊಂಟಕ್ಕೆ ಒದ್ದರು. ಏಳೆಂಟು ಜನ ಬೆಂಬಲಿಗರೆಲ್ಲ ಸೇರಿ ಹಲ್ಲೆ ಮಾಡಿದರು’ ಎಂದು ನಿಂಗಪ್ಪ ಕರೆಣ್ಣವರ ದೂರಿನಲ್ಲಿ ತಿಳಿಸಿದ್ದಾರೆ.

▶4

ಹಲ್ಲೆಗೆ ಸಂಬಂಧಿಸಿ ಶಾಸಕ ಲಕ್ಷ್ಮಣ ಸವದಿ, ಅವರ ಪುತ್ರ ಚಿದಾನಂದ, ಬೆಂಬಲಿಗರನ್ನು ಬಂಧಿಸಬೇಕು. ಇಲ್ಲದಿದ್ದರೆ ಬಿಜೆಪಿಯಿಂದ ಹೋರಾಟ ಅನಿವಾರ್ಯ
ಸುಭಾಷ ಪಾಟೀಲ, ಅಧ್ಯಕ್ಷ, ಬಿಜೆಪಿ ಗ್ರಾಮೀಣ ಜಿಲ್ಲಾ ಘಟಕ

ಉಮರ್, ಶರ್ಜೀಲ್‌ಗೆ ‘ಸುಪ್ರೀಂ’ ಜಾಮೀನು ಇಲ್ಲ

ನವದೆಹಲಿ (ಪಿಟಿಐ): ದೆಹಲಿ ಗಲಭೆ ಪಿತೂರಿ ಪ್ರಕರಣದಲ್ಲಿ ಬಂಧನದಲ್ಲಿರುವ ಜೆಎನ್‌ಯು ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್ ಅವರಿಗೆ ಸುಪ್ರೀಂ ಕೋರ್ಟ್ ಸೋಮವಾರ ಜಾಮೀನು ನಿರಾಕರಿಸಿದೆ.



ಶರ್ಜೀಲ್ ಇಮಾಮ್

ಪ್ರಕರಣದ ಇತರ ಐವರು ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿದ ಕೋರ್ಟ್, ‘ಪ್ರಕರಣದ ಎಲ್ಲ ಆರೋಪಿಗಳನ್ನು ಒಂದೇ ನೆಲೆಯಲ್ಲಿ ನೋಡಲಾಗದು’ ಎಂದು ಹೇಳಿದೆ.

ಗಲಭೆಯ ಯೋಜನೆ ರೂಪಿಸುವಿಕೆ, ಸಜ್ಜುಗೊಳಿಸುವಿಕೆ ಮತ್ತು ಕಾರ್ಯತಂತ್ರ ಹೆಣೆಯುವುದರಲ್ಲಿ ಖಾಲಿದ್ ಮತ್ತು ಇಮಾಮ್ ಭಾಗಿಯಾಗಿದ್ದಾರೆ ಎಂಬ ಆರೋಪ ಮೇಲ್ನೋಟಕ್ಕೆ ನಿಜ ಎಂಬುದಾಗಿ ಕಂಡು ಬಂದಿದೆ. ಹೀಗಾಗಿಯೇ ಅವರಿಗೆ ಜಾಮೀನು ನಿರಾಕರಿಸಲಾಗಿದೆ ಎಂದು ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಎನ್.ವಿ.ಅಂಜಾರಿಯಾ ಅವರ ಪೀಠ ಹೇಳಿದೆ.

ಪ್ರಕರಣದ ಡೈರಿ ಅಥವಾ ದೋಷಾರೋಪ ಪಟ್ಟಿಯನ್ನು ಪರಿಶೀಲಿಸಿದ ಬಳಿಕ ಆರೋಪಿಗಳ ವಿರುದ್ಧದ ಆರೋಪವು ಪ್ರಾಥಮಿಕವಾಗಿ ಸತ್ಯ ಎಂದು ನಂಬಲು ಪೂರಕವಾದ ಆಧಾರಗಳಿವೆ ಎಂಬುದು ನ್ಯಾಯಾಲಯಕ್ಕೆ ಮನವರಿಕೆಯಾದರೆ ಯುಎಪಿಎ ಸೆಕ್ಷನ್ 43ಡಿ (5) ಅಡಿ ಜಾಮೀನು ನಿರಾಕರಿಸಬಹುದು ಎಂದು ಪೀಠ ತಿಳಿಸಿದೆ.

▶7

‘ಈಗ ಜೈಲೇ ನನ್ನ ಜೀವನ’

ಉಮರ್

‘ಜೈಲೇ ಈಗ ನನ್ನ ಜೀವನವಾಗಿದೆ. ಇತರರಿಗೆ ಜಾಮೀನು ದೊರೆತಿರುವುದಕ್ಕೆ ಸಂತಸ ಮತ್ತು ನಿರಾಳವಾಗಿದೆ’ ಎಂದು ಉಮರ್ ಖಾಲಿದ್ ಪ್ರತಿಕ್ರಿಯಿಸಿದ್ದಾರೆ ಎಂಬುದಾಗಿ ಅವರ ಸ್ನೇಹಿತೆ ಬನೋಜ್ಯೋತ್ಸ್ನಾ ಲಹಿರಿ ತಿಳಿಸಿದ್ದಾರೆ.

‘ಇತರರಿಗೆ ಜಾಮೀನು ದೊರೆತಿರುವುದಕ್ಕೆ ನಿಜವಾಗಿಯೂ ಸಂತಸವಾಗಿದೆ ಎಂದು ಉಮರ್ ನನ್ನ ಬಳಿ ತಿಳಿಸಿದರು. ಅದಕ್ಕೆ ನಾನು, ನಾಳೆ ನಿಮ್ಮನ್ನು ನೋಡಲು ಬರುತ್ತೇನೆ ಎಂದು ಅವರಿಗೆ ಹೇಳಿದೆ. ಅದಕ್ಕೆ ಅವರು ಒಳ್ಳೆಯದು, ಬಾ, ಈಗ ಇದೇ ನನ್ನ ಜೀವನ ಎಂದು ಪ್ರತಿಕ್ರಿಯಿಸಿದರು’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ನಾನು ನಿರಪರಾಧಿ: ಮಡೂರೊ

ನ್ಯೂಯಾರ್ಕ್ (ಎಪಿ): ‘ನನ್ನ ವಿರುದ್ಧ ಡ್ರಗ್ಸ್ ಕಳ್ಳಸಾಗಣೆ ಆರೋಪ ಹೊರಿಸಲಾಗಿದ್ದು, ನನ್ನನ್ನು ಸೆರೆ ಹಿಡಿದು ಇಲ್ಲಿಗೆ ಕರೆದು ತರಲಾಗಿದೆ. ಆದರೆ ನಾನು ನಿರಪರಾಧಿ’ ಎಂದು ನಿಕೊಲಸ್ ಮಡೂರೊ ಸೋಮವಾರ ಹೇಳಿದ್ದಾರೆ.

ಇಲ್ಲಿನ ನ್ಯಾಯಾಲಯಕ್ಕೆ ಹಾಜರುಪಡಿಸಿದ ವೇಳೆ, ‘ನಾನು ಯಾವುದೇ ತಪ್ಪು ಮಾಡಿಲ್ಲ. ನಾನು ಸಭ್ಯ ವ್ಯಕ್ತಿ. ನಾನು ನನ್ನ ದೇಶದ ಅಧ್ಯಕ್ಷ’ ಎಂದು ಮಡುರೊ ಅವರು ನ್ಯಾಯಾಲಯಕ್ಕೆ ತಿಳಿಸಿದರು.

▶10

‘ಸ್ವಾದಭರಿತ ಹಾಲಿಗೆ ಶೇ 5ರಷ್ಟು ಜಿಎಸ್‌ಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ವಾದಭರಿತ ಹಾಲನ್ನು ಡೇರಿ ಉತ್ಪನ್ನವೆಂದು ಪರಿಗಣಿಸಬೇಕೇ ಹೊರತು ಪಾನೀಯ ಎಂದು ವರ್ಗೀಕರಿಸುವಂತಿಲ್ಲ. ಹಾಗಾಗಿ, ಅದಕ್ಕೆ ಶೇ12ರಷ್ಟು ಜಿಎಸ್‌ಟಿ ವಿಧಿಸುವ ಬದಲು ಶೇ 5ರಷ್ಟು ಮಾತ್ರ ವಿಧಿಸಬೇಕು’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ‘ದೊಡ್ಲ’ ಡೇರಿ ಲಿಮಿಟೆಡ್ ಕಂಪನಿ ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಅರ್ಜಿದಾರ ದೊಡ್ಲ ಕಂಪನಿ ಪಾವತಿ ಮಾಡಿರುವ ತೆರಿಗೆ ಹಣವನ್ನು ಮರು ಪಾವತಿಸುವಂತೆ ನಿರ್ದೇಶಿಸಿದೆ.

‘ಸುವಾಸನೆಭರಿತ ಹಾಲನ್ನು ಹೊಂದಿರುವ ಪಾನೀಯಗಳು ಉದ್ದೇಶಿತ ಜಿಎಸ್‌ಟಿ ಸುಂಕದ ಶೀರ್ಷಿಕೆಯ ಅಡಿಯಲ್ಲಿ ಬರುತ್ತವೆಯೇ ಅಥವಾ ಹಾಲು ಮತ್ತು ಕೆನೆ ಬೆರೆಸಿದ ಸಕ್ಕರೆ ಅಥವಾ ಸಿಹಿಕಾರಕಗಳನ್ನು ಒಳಗೊಂಡ ವರ್ಗದಡಿಯಲ್ಲಿ ಬರುತ್ತವೆಯೇ’ ಎಂಬುದರ ಪರಾಮರ್ಶೆಯನ್ನು ನ್ಯಾಯಪೀಠ ನಡೆಸಿತು.

▶5

ಚಿನಕುರುಳಿ

ಪ್ರಕಾಶ್ ಶೆಟ್ಟಿ





ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಕವಿದ ವಾತಾವರಣ.

ಭಕ್ತಿಗೀತೆ, ಭಜನಾ ಕಾರ್ಯಕ್ರಮ

ಬೆಂಗಳೂರು: ಹೊಸ ವರ್ಷದ ಪ್ರಯುಕ್ತ ಎಚ್‌ಬಿಆರ್ ಲೇಔಟ್‌ನ ಇಸ್ಕಾನ್‌ನಲ್ಲಿ ಎರಡು ದಿನ ವಿವಿಧ ಕಾರ್ಯಕ್ರಮಗಳು ನಡೆದವು.

ಡಿ. 31 ಮತ್ತು ಜ.1ರಂದು ಭಕ್ತಿಗೀತೆಗಳು ಮತ್ತು ಭಜನಾ ಕಾರ್ಯಕ್ರಮ ನೆರವೇರಿದವು. 'ಭಕ್ತಿ ಬಾಷ್' ಕಾರ್ಯಕ್ರಮ ಭಕ್ತರಲ್ಲಿ ಸಂತಸದ ವಾತಾವರಣ ಸೃಷ್ಟಿಸಿತು. ರಷ್ಯಾ ತಂಡದ ಸಂಗೀತ ಪ್ರದರ್ಶನ ಪ್ರಮುಖ ಆಕರ್ಷಣೆಯಾಗಿತ್ತು.

ಬೇಗೂರಿನಲ್ಲಿ ರಾಮ್‌ರಾಜ್ ಕಾಟನ್ ಶೋರೂಂ ಉದ್ಘಾಟನೆ

ಬೆಂಗಳೂರು: ದಕ್ಷಿಣ ಭಾರತದ ಪ್ರಸಿದ್ಧ ರೆಡಿಮೆಡ್ ಉಡುಪುಗಳ ಸಂಸ್ಥೆ ರಾಮ್‌ರಾಜ್ ಕಾಟನ್ ಬೆಂಗಳೂರಿನ ಬೇಗೂರಿನಲ್ಲಿ ತನ್ನ ನೂತನ ಶೋರೂಂ ಆರಂಭಿಸಿದೆ. ಸಂಪ್ರದಾಯ ಮತ್ತು ಆಧುನಿಕತೆಯ ಸೊಬಗಿನೊಂದಿಗೆ ಆರಂಭಗೊಂಡಿರುವ ಈ ಮಳಿಗೆ ಸಾರ್ವಜನಿಕರ ಖರೀದಿಗೆ ಮುಕ್ತವಾಗಿದೆ.

ಸಾಂಪ್ರದಾಯಿಕ ಸೊಬಗು : ದೇಶಾದ್ಯಂತ ಸಾಂಪ್ರದಾಯಿಕ ಉಡುಪುಗಳಿಗೆ ಹೆಸರಾದ ರಾಮ್‌ರಾಜ್ ಕಾಟನ್ ಬೆಂಗಳೂರಿನ ನೂತನ ಮಳಿಗೆಯಲ್ಲಿ ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಸೇವೆ ನೀಡಲು ಸಜ್ಜಾಗಿದೆ. ತನ್ನ ಅತ್ಯುತ್ತಮ ಶ್ರೇಣಿಯ ಉತ್ಪನ್ನಗಳಾದ ಪಂಚೆಗಳು, ಶರ್ಟ್‌ಗಳು, ಸೀರೆಗಳು ಸೇರಿದಂತೆ ವಿವಿಧ ಉಡುಪುಗಳೊಂದಿಗೆ ಬೆಂಗಳೂರಿನ ಜನರಿಗೆ ಸೇವೆ ನೀಡುತ್ತಿದೆ. ವಿಶೇಷವಾಗಿ ಸ್ಟೇನ್ ಗಾರ್ಡ್ ಪಂಚೆಗಳು, ಸುಗಂಧಭರಿತ ಪಂಚೆಗಳು, ರಿಂಕಲ್ ಫ್ರೀ, ಎಂಬ್ರಾಯ್ಡರಿ, ಮಯಿಲ್ಕಣ್, ಕಚ್ಚೆಪಂಚೆ ಮತ್ತು ರೇಷ್ಮೆ ಪಂಚೆಗಳು, ಎಂಬ್ರಾಯ್ಡರಿ ಶರ್ಟ್‌ಗಳು, ಕೂಲ್ ಕಾಟನ್, ರಿಂಕಲ್ ಫ್ರೀ, ಡಿಸೈನರ್ ಮತ್ತು ಲಿನಿನ್ ಶರ್ಟ್‌ಗಳು, ಟಿ-ಶರ್ಟ್‌ಗಳು, ಜೆನ್‌ಎಕ್ಸ್‌ಟಿ, ಮಹಿಳೆಯರು ಮತ್ತು ಮಕ್ಕಳಿಗಾಗಿ ಕಾಟನ್ ಸೀರೆಗಳು, ಟಸ್ಸಾರ್ ಸೀರೆಗಳು, ಕುರ್ತಿಗಳು ಹಾಗೂ ಮಕ್ಕಳಿಗೆ ವೆಲ್ಕ್ರೋ ಪಂಚೆಗಳು ಸಹ ಇಲ್ಲಿ ಲಭ್ಯವಿದೆ. 'ರಾಜಿ ಇಲ್ಲದ ಗುಣಮಟ್ಟ' ಎಂಬ ಧ್ಯೇಯವಾಕ್ಯದೊಂದಿಗೆ ಬೆಳೆಯುತ್ತಿರುವ ರಾಮ್‌ರಾಜ್ ಸಂಸ್ಥೆಯು ವಾರ್ಷಿಕವಾಗಿ 25 % ಕ್ಕಿಂತ ಹೆಚ್ಚು ಬೆಳವಣಿಗೆಯನ್ನು ಕಾಣುತ್ತಿದೆ. ದಕ್ಷಿಣ ಭಾರತದ ರಾಜಕಾರಣಿಗಳು ಮತ್ತು ಗಣ್ಯರ ನೆಚ್ಚಿನ ಬ್ರ್ಯಾಂಡ್ ಆಗಿರುವ ರಾಮ್‌ರಾಜ್, ಈಗ ಉತ್ತರ ಭಾರತ ಹಾಗೂ ವಿದೇಶಗಳಲ್ಲೂ ತನ್ನ ಮಾರುಕಟ್ಟೆಯನ್ನು ವಿಸ್ತರಿಸಿದೆ.

ಬೆಂಗಳೂರಿನ ಬೇಗೂರಿನಲ್ಲಿ ರಾಮ್‌ರಾಜ್ ಕಾಟನ್‌ನ ನೂತನ ಮಳಿಗೆಯನ್ನು ಖ್ಯಾತ ಚಾರ್ಟರ್ಡ್ ಅಕೌಂಟೆಂಟ್ ಹೆಚ್.ಪದ್ಮಚಂದ ಖಿಂಚಾ ಉದ್ಘಾಟಿಸಿದರು.

ಉದ್ಘಾಟನಾ ಸಮಾರಂಭ : ಖ್ಯಾತ ಚಾರ್ಟರ್ಡ್ ಅಕೌಂಟೆಂಟ್ ಹೆಚ್.ಪದ್ಮಚಂದ್ ಖಿಂಚಾರವರು ನೂತನ ಶೋರೂಮ್ ಉದ್ಘಾಟಿಸಿ, ಜ್ಯೋತಿ ಬೆಳಗಿಸಿದರು. ಸಮಾರಂಭದಲ್ಲಿ ರಾಮ್ ರಾಜ್ ಕಾಟನ್ ಸಂಸ್ಥೆಯ ಸಂಸ್ಥಾಪಕರು ಹಾಗೂ ಅಧ್ಯಕ್ಷರಾದ ಕೆ.ಆರ್.ನಾಗರಾಜನ್ ಗಣ್ಯರನ್ನು ಸ್ವಾಗತಿಸಿದರು. ಪಿಇಎಸ್ ಪಬ್ಲಿಕ್ ಸ್ಕೂಲ್ ಹಾಗೂ ಎನ್‌ಟಿಎಸ್ ವಿಂಡೋಸ್ ಸಂಸ್ಥೆಯ ಸಂಸ್ಥಾಪಕರಾದ ಪಟೇಲ್ ಕೆ.ಅಣ್ಣಯ್ಯಪ್ಪ ಮತ್ತು ನಳಿನಾ ಪಟೇಲ್ ದಂಪತಿಗಳು ಶೋರೂಮ್‌ನಲ್ಲಿ ಮೊದಲ ಖರೀದಿಯನ್ನು ಮಾಡಿದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ನಿವೃತ್ತ ನೌಕರರ ಮಾಸಿಕ ಸಭೆ

ಬೆಂಗಳೂರು: ಇಪಿಎಸ್–95, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ 96ನೇ ಮಾಸಿಕ ಸಭೆ ಲಾಲ್‌ಬಾಗ್ ಆವರಣದಲ್ಲಿ ಭಾನುವಾರ ನಡೆಯಿತು.

ಕನಿಷ್ಠ ₹7,500 ಪಿಂಚಣಿ ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ಘೋಷಿಸಲಾಗುತ್ತದೆ ಎಂಬ ನಿರೀಕ್ಷೆ ಹುಸಿಯಾಗಿದೆ ಎಂದು ನೌಕರರು ಬೇಸರ ವ್ಯಕ್ತಪಡಿಸಿದರು. ಸಂಘದ ಪದಾಧಿಕಾರಿಗಳಾದ ನಂಜುಂಡೇಗೌಡ, ಬ್ರಹ್ಮಚಾರಿ, ಮನೋಹರ್ ಭಾಗವಹಿಸಿದ್ದರು.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101 ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427

ಇಮೇಲ್ : eemidcbpura@gmail.com

ಸಂಖ್ಯೆ : ಕಾಇಬ/ಸ.ನೀ ಮತ್ತು ಅ.ಅ.ವಿ/ಚಿ.ಪುರ/ತಾಂಶಾ/ತಾಂಶ/ಟೆಂಡರ್ ಪ್ರಕಟಣೆ / 2379/2025–26 ದಿನಾಂಕ : 01/01/2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 22/2025–26, ದಿನಾಂಕ: 01/01/2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಕೆಡಬ್ಲ್ಯೂ– 3 ಮತ್ತು 4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 4702 ವಿಶೇಷ ಘಟಕ ಯೋಜನೆ, 4702 ಗಿರಿಜನ ಉಪ ಯೋಜನೆ, ಮತ್ತು 4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಅಂದಾಜು ಮೊತ್ತ 275.00 ಲಕ್ಷ ಮತ್ತು ಕನಿಷ್ಠ ಅಂದಾಜು ಮೊತ್ತ ರೂ. 100.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೋಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ದಿನಾಂಕ: 02/01/2026 ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ (Upload) ದಿನಾಂಕ: 12/01/2026 ಸಂಜೆ 04:30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14/01/2026 ರ ಬೆಳಿಗ್ಗೆ 11:00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ನಾಳೆಯಿಂದ ಸ್ವದೇಶಿ ಮೇಳ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಜನರಿಗೆ ಸ್ವದೇಶಿ ವಸ್ತುಗಳನ್ನು ಪರಿಚಯಿಸುವ ಉದ್ದೇಶದಿಂದ ಸ್ವದೇಶಿ ಜಾಗರಣ ಮಂಚ್ - ಕರ್ನಾಟಕ ವತಿಯಿಂದ ಬಾಗಲಗುಂಟೆಯ ಎಂ.ಇ.ಐ ಆಟದ ಮೈದಾನದಲ್ಲಿ ಜನವರಿ 7 ರಿಂದ 11ರವರೆಗೆ ಸ್ವದೇಶಿ ಮೇಳ ಆಯೋಜನೆ ಮಾಡಲಾಗಿದೆ ಎಂದು ಮೇಳದ ಗೌರವಾಧ್ಯಕ್ಷ, ಶಾಸಕ ಎಸ್.ಮುನಿರಾಜು ತಿಳಿಸಿದರು.

ಸಣ್ಣ ಉತ್ಪಾದಕರಿಗೆ ಮಾರುಕಟ್ಟೆ ಒದಗಿಸುತ್ತಿದ್ದು, ಮೇಳದಲ್ಲಿ 200ಕ್ಕೂ ಅಧಿಕ ಮಳಿಗೆಗಳನ್ನು ತೆರೆಯಲಾಗುವುದು. ಮೂರು ಲಕ್ಷಕ್ಕೂ ಅಧಿಕ ಜನರು ಭೇಟಿ ನೀಡುವ ನಿರೀಕ್ಷೆ ಇದೆ. ಸ್ವದೇಶಿ ಆಹಾರ, ಖಾದಿ ವಸ್ತ್ರ, ಸಾವಯವ ಕೃಷಿ, ಗಾಣದ ಎಣ್ಣೆ ಮಳಿಗೆಗಳು ಇರಲಿವೆ. ಮಕ್ಕಳಿಗಾಗಿ ಮನರಂಜನಾ ಚಟುವಟಿಕೆ, ಮ್ಯಾಜಿಕ್ ಶೋ ಸಹ ಆಯೋಜಿಸಿದ್ದು, ಕಲಾವಿದರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿ ಕೊಡಲಿದ್ದಾರೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಜನವರಿ 7ರಂದು 'ಲೋಕ ಕಲಾ ಸಂಭ್ರಮ' ಸಾಂಸ್ಕೃತಿಕ ಕಾರ್ಯಕ್ರಮ, 8 ರಂದು ಸೌಂದರ್ಯವರ್ಧಕ ವಸ್ತುಗಳ ತಯಾರಿಕಾ ಶಿಬಿರ, 9 ರಂದು ಆಯುರ್ವೇದ ಆರೋಗ್ಯ ಶಿಬಿರ ಮತ್ತು ಮಧ್ಯಾಹ್ನ 3 ಗಂಟೆಗೆ ಮಹಿಳಾ ಸಮಾವೇಶ, ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮದ ಜೊತೆಗೆ ದಕ್ಷಯಜ್ಞ ಯಕ್ಷಗಾನ ಪ್ರಸಂಗ ನಾಟಕ, 10 ರಂದು ತಾರಸಿ ತೋಟ ಮತ್ತು ಕೈತೋಟ ತರಬೇತಿ ಶಿಬಿರ, 11 ರಂದು ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿದೆ. ಸಂಜೆ 7ಕ್ಕೆ ಕಡಬಗೆರೆ ಮುನಿರಾಜು ಮತ್ತು ತಂಡದವರು ಜನಪದ ಕಾರ್ಯಕ್ರಮ ನಡೆಸಿ ಕೊಡಲಿದ್ದಾರೆ ಎಂದು ವಿವರಿಸಿದರು.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡುವರು. ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಮುಖ್ಯ ಭಾಷಣ ಮಾಡಲಿದ್ದಾರೆ. ಸಮಾರೋಪ ಸಮಾರಂಭದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ವೇದಿಕೆಯ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಸತೀಶ್, ಕೈಗಾರಿಕೋದ್ಯಮಿಗಳು ಭಾಗವಹಿಸಲಿದ್ದಾರೆ ಎಂದರು.

ಸ್ವದೇಶಿ ಜಾಗರಣ ಮಂಚ್ ಪ್ರಾಂತ ಸಂಘಟನಾ ಕಾರ್ಯದರ್ಶಿ ಜಗದೀಶ್, ಮೇಳದ ಸಂಘಟಕ ಭರತ್ ಸೌಂದರ್ಯ, ಸಹ ಸಂಘಟಕ ಲಕ್ಷ್ಮಿ ವೆಂಕಟೇಶ್, ಸಂಚಾಲಕ ವಸಂತ ಮೂರ್ತಿ, ಪ್ರಾಂತ ಸ್ವದೇಶಿ ಮೇಳ ಪ್ರಮುಖ್ ಮಹಾಂತೇಶ್ ಇದ್ದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:ಮುಇಂ(ವಿ)/ಎಸ್‌ಎಲ್‌ಡಿಸಿ/ಕಾನಿಇಂ/ಸಕಾನಿಇಂ–1/2025-26/9268-73 ದಿನಾಂಕ:03.01.2026

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು, ಬಿಡ್ ವಿಚಾರಣೆ ಸಂಖ್ಯೆ: **ಕವಿಪ್ರನಿನಿ/ಸಿಇಇ/ಎಸ್‌ಎಲ್‌ಡಿಸಿ/ಇಇ/ಎಇಇ–1/ಡಿಆರ್‌ಐ–013/2025–26** ಕ್ಕೆ ಸಂಬಂಧಿಸಿದಂತೆ, ಮುಖ್ಯ ಇಂಜಿನಿಯರ್(ವಿ), ಎಸ್‌ಎಲ್‌ಡಿಸಿ, ಕವಿಪ್ರನಿನಿ, ಬೆಂಗಳೂರುರವರ ಕಛೇರಿಗೆ ಅಗತ್ಯವಿರುವ ಇಬ್ಬರು ವಾಹನ ಚಾಲಕರ ಮಾನವ ಸಂಪನ್ಮೂಲ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ 11 ತಿಂಗಳ ಅವಧಿಗೆ ಒದಗಿಸಲು ಆಸಕ್ತಿ ಇರುವ ಸಂಸ್ಥೆಗಳಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ಗೆ ದಿನಾಂಕ: **06.01.2026** ರಂದು ಮಧ್ಯಾಹ್ನ 3.00 ಗಂಟೆಗೆ ಅಥವಾ ನಂತರ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದು.

ಸಹಿ/–ಮುಖ್ಯ ಇಂಜಿನಿಯರ್(ವಿ),
ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕವಿಪ್ರನಿನಿ,
ನಂ.28, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560009.

ನೈರುತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂಖ್ಯೆ ಪ್ರಕಟಣೆ ಬಿ/ಟಿಆರ್‌ಡಿ. 2025–26/35 ದಿನಾಂಕ: 30.12.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬಿಐಡಿ ಟ್ರಾಕ್ಷನ್ ಸಬ್–ಸ್ಟೇಷನ್ ಮತ್ತು ಡಬ್ಲ್ಯುಎಫ್‌ಡಿ ಟ್ರಾಕ್ಷನ್ ಸಬ್–ಸ್ಟೇಷನ್ ನಡುವಿನ 220/25 ಕೆ.ವ್ಯಾ. ಟ್ರಾಕ್ಷನ್ ಟ್ರಾನ್ಸ್‌ಫಾರ್ಮರ್‌ಗಳ ವರ್ಗಾವಣೆ ಹಾಗೂ ಕಿತ್ತುಹಾಕುವಿಕೆ, ಸಾಗಣೆ, ಸ್ಥಾಪನೆ ಮತ್ತು ಕಾರ್ಯಾರಂಭ.	ರೂ. 46,87,992.00/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **20–01–2026 ರಂದು 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಳಿಗಾಗಿ: **www.ireps.gov.in** ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ಟಿಆರ್‌ಡಿ, ಬೆಂಗಳೂರು

ಪಿಯುಬಿ/793/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸೂಚನೆ ಸಂಖ್ಯೆ ಇ–ಜಿಎಸ್‌ಯು–ಎಲ್‌ಇ–2025–26–ಒಟಿ–ಜಿಇಎಂ–02 ದಿನಾಂಕ 30.12.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ.ಸ	ಕೆಲಸದ ಹೆಸರು	ಅಂದಾಜು ಮೌಲ್ಯ
1	24 ತಿಂಗಳ (ಎರಡು ವರ್ಷಗಳು) ಅವಧಿಗೆ ಬೆಂಗಳೂರು ವಿಭಾಗದಲ್ಲಿ ಗತಿ ಶಕ್ತಿ/ಬೆಂಗಳೂರು ಮತ್ತು ಅಸೋಸಿಯೇಟ್ ಫೈನಾನ್ಸ್ ಅಧಿಕಾರಿಗಳು/ ಮೇಲ್ವಿಚಾರಕರ ಅಧಿಕೃತ ಬಳಕೆಗಾಗಿ ವಾಹನ ಬಾಡಿಗೆ	ರೂ. 3,48,25,244/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **21–01–2026 ರಂದು 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಳಿಗಾಗಿ: **www.gem.gov.in** ಲಾಗಿನ್ ಮಾಡಿ

ಉಪ ಮುಖ್ಯ ವಿದ್ಯುತ್ ಅಭಿಯಂತರರು, ಗತಿ ಶಕ್ತಿ ಘಟಕ, ಬೆಂಗಳೂರು

ಪಿಯುಬಿ/792/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈರುತ್ಯ ರೈಲ್ವೆ

ಟೆಂಡರ್ ತಿದ್ದುಪಡಿ ಪ್ರಕಟಣೆ ಸೂಚನೆ ಸಂಖ್ಯೆ ಸಿಎಒ/ಸಿಎನ್/ಬಿಎನ್‌ಸಿ/155/2025 ದಿನಾಂಕ 04.11.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಅನ್ನು ಆಹ್ವಾನಿಸಿದ್ದಾರೆ.

ಕೆಲಸದ ವಿವರಣೆ	ಅಂದಾಜು ಮೌಲ್ಯ
ಥಣಿಸಂದ್ರ ರೈಲು ನಿಲ್ದಾಣದಲ್ಲಿ ವಂದೇ ಭಾರತ್ ಸ್ಲೀಪರ್ ರೈಲುಗಳ ನಿರ್ವಹಣಾ ಡಿಪೋ ಅಭಿವೃದ್ಧಿ ಮತ್ತು ಎಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ) ಒಪ್ಪಂದಗಳ ಮೂಲಕ ತುಮಕೂರು ರೈಲು ನಿಲ್ದಾಣದಲ್ಲಿ ಪ್ರಮುಖ ಮೇಲ್ದರ್ಜೆಗೇರಿಸುವ ಯೋಜನಾ ನಿರ್ವಹಣಾ ಸೇವೆಗಳನ್ನು ಒದಗಿಸುವುದು. (ಟೆಂಡರ್ ಉಲ್ಲೇಖ ಸಂಖ್ಯೆ. ಪಿಎಂಎಸ್–ಟಿಕೆ–ಎಸ್‌ಎನ್‌ಟಿ–ಡಿಇವಿ–ವಂದೇ ಭಾರತ್)	ರೂ. 10,95,43,438/–

ಮುಕ್ತಾಯ ದಿನಾಂಕ	
ಅಸ್ತಿತ್ವದಲ್ಲಿರುವುದು	ಪರಿಷ್ಕರಿಸಿರುವುದು
05–01–2026 (15.00 ಗಂಟೆಗಳು)	20–01–2026 (15.00 ಗಂಟೆಗಳು)

ಹೆಚ್ಚಿನ ಮಾಹಿತಿಗಳಿಗಾಗಿ: **www.ireps.gov.in** ಲಾಗಿನ್ ಮಾಡಿ

ಉಪ ಮುಖ್ಯ ಅಭಿಯಂತರರು/ನಿರ್ಮಾಣ/ಕೆಲಸಗಳು, ಬೆಂಗಳೂರು ದಂಡು

ಪಿಯುಬಿ/791/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಸಾರ್ವಜನಿಕ ನೋಟೀಸು – ಇ–ಹರಾಜು

ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ (RCCPL) (ಸಮಾಪನ ಪ್ರಕ್ರಿಯೆಯಲ್ಲಿ–in Liquidation)

ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಸಂಹಿತೆ 2016 ರ ಅಡಿಯಲ್ಲಿ

ಇ–ಹರಾಜು

ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಸಂಹಿತೆ 2016 ರ ಅಡಿಯಲ್ಲಿ ಆಸ್ತಿಗಳ ಮಾರಾಟ

ಇ–ಹರಾಜಿನ ದಿನಗಳು: 30.01.2026 ಮತ್ತು 31.01.2026

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಲಯ, ಚೆನ್ನೈ (NCLT, Chennai) ಇದರ 09/08/2024 ರ ಆದೇಶದ ಅನುಸಾರ ಮತ್ತು ಕಲಂ 35 (f) ರ IBC, 2016 ಮತ್ತು ನಿಬಂಧನೆ 32(e) ಹಾಗು 32A ಸಮಾಪನ ಪ್ರಕ್ರಿಯೆ ನಿಬಂಧನೆಗಳು, 2016 ಅನುಸಾರವಾಗಿ ಕಂಪನಿಯ ಆಸ್ತಿಗಳನ್ನು ಸಕ್ರಿಯ ಸಂಸ್ಥೆಯಂತೆ ಇಡಿಯಾಗಿ ಅಥವಾ ಬಿಡಿ ಬಿಡಿಯಾಗಿ ಮಾರಾಟ ಮಾಡಲು ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಈ ಮಾರಾಟವು 'ಯಾವುದು ಹೇಗಿದೆಯೋ, ಎಲ್ಲಿದೆಯೋ ಮತ್ತು ಎಷ್ಟಿದೆಯೋ' ಮತ್ತು ಮರು ಪಡೆಯುವಿಕೆ ಇಲ್ಲದೆ **("AS IS WHERE IS ", "AS IS WHAT IS", "WHATEVER THERE IS BASIS" and "NO RECOURSE BASIS")** ಮಾರಾಟ ಮಾಡಲಾಗುವುದು.

ಸದರಿ ಮಾರಾಟವನ್ನು ಇ–ಹರಾಜು ವೇದಿಕೆಯ ಮೂಲಕ https://ibbi.baanknet.com/eauction-ibbi/home ನಲ್ಲಿ ಮಾಡಲಾಗುವುದು. ಮಾರಾಟದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿವೆ:

ಆಸ್ತಿಗಳ ಪಟ್ಟಿ	ಆಸ್ತಿಗಳು	ಮೀಸಲು ಬೆಲೆ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
'ಎ' ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ಇ–ಹರಾಜಿನ ದಿನ ಮತ್ತು ಸಮಯ: 30.01.2026ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ			
ಆಸ್ತಿ ಪಟ್ಟಿ 1	ಪ್ರಧಾನವಲ್ಲದ (non-core) ಆಸ್ತಿಗಳು ಸೇರಿದಂತೆ, ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದು ಮತ್ತು ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	9.710 ಕೋಟಿ	0.971 ಕೋಟಿ
'ಬಿ' ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ('ಎ' ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 30.01.2026ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ			
ಆಸ್ತಿ ಪಟ್ಟಿ 2	ಪ್ರಧಾನವಲ್ಲದ (non-core) ಆಸ್ತಿಗಳನ್ನು ಹೊರತುಪಡಿಸಿ ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ವರ್ಗ 'ಸಿ'ಯಲ್ಲಿ ಹೇಳಿರುವಂತೆ ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಪ್ರಧಾನವಲ್ಲದ ಆಸ್ತಿಗಳು iii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು	4.540 ಕೋಟಿ	0.454 ಕೋಟಿ
'ಸಿ' ವರ್ಗ: ದೈನಂದಿನ ಕಾರ್ಯಾಚರಣೆಗಳಿಗೆ ಅತ್ಯವಶ್ಯವಲ್ಲದ ಆಸ್ತಿಗಳ (ಭೂಭಾಗಗಳು ಮಾತ್ರ) ಮಾರಾಟ (ಒಂದೊಮ್ಮೆ ವರ್ಗ ಎ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 30.01.2026ರಂದು ಸಂಜೆ 05.00ರಿಂದ 06.00 ಗಂಟೆಯವರೆಗೆ			
ಆಸ್ತಿ ಪಟ್ಟಿ 3	ಮಂಗಳೂರು ಉಪ–ಜಿಲ್ಲೆಯ ನೋಂದಣಿ, ಕರ್ನಾಟಕ, ಇದಕ್ಕೆ ಒಳಪಟ್ಟು ಮಂಗಳೂರು ನಗರ ಕಾರ್ಪೊರೇಷನ್ನಿಗೆ ಸೇರಿದ ಮರಕಡ ಗ್ರಾಮ, ಮಂಗಳೂರು ತಾಲ್ಲೂಕು, ಇಲ್ಲಿ ಸರ್ವೇ ನಂ. 37–1ರಲ್ಲಿರುವ 65.50 ಸೆಂಟ್ ವಿಸ್ತೀರ್ಣದ, ಒಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	87.00 ಲಕ್ಷ	8.70 ಲಕ್ಷ
ಆಸ್ತಿ ಪಟ್ಟಿ 4	ಮಂಗಳೂರಿನ ಬಾಂಗ್ರಾ ಕುಲೂರಿನಲ್ಲಿರುವ 5.45 ಸೆಂಟ್ಸ್ ವಿಸ್ತೀರ್ಣದ ವಾಣಿಜ್ಯ ನಿವೇಶನ ಸಂಖ್ಯೆ 15 ರ ಎಲ್ಲಾ ಭಾಗಗಳು.	34.00 ಲಕ್ಷ	3.40 ಲಕ್ಷ
ಆಸ್ತಿ ಪಟ್ಟಿ 5	ಮಂಗಳೂರಿನ ಬಾಂಗ್ರಾ ಕುಲೂರಿನಲ್ಲಿರುವ 5.19 ಸೆಂಟ್ಸ್ ವಿಸ್ತೀರ್ಣದ ವಾಣಿಜ್ಯ ನಿವೇಶನ ಸಂಖ್ಯೆ 16 ರ ಎಲ್ಲಾ ಭಾಗಗಳು.	33.00 ಲಕ್ಷ	3.30 ಲಕ್ಷ
ಆಸ್ತಿ ಪಟ್ಟಿ 6	ಮಂಗಳೂರಿನ ಬಾಂಗ್ರಾ ಕುಲೂರಿನಲ್ಲಿರುವ 5.19 ಸೆಂಟ್ಸ್ ವಿಸ್ತೀರ್ಣದ ವಾಣಿಜ್ಯ ನಿವೇಶನ ಸಂಖ್ಯೆ 17 ರ ಎಲ್ಲಾ ಭಾಗಗಳು.	33.00 ಲಕ್ಷ	3.30 ಲಕ್ಷ
ಆಸ್ತಿ ಪಟ್ಟಿ 7	ಮಂಗಳೂರಿನ ಬಾಂಗ್ರಾ ಕುಲೂರಿನಲ್ಲಿರುವ 5 ಸೆಂಟ್ಸ್ ವಿಸ್ತೀರ್ಣದ ವಾಣಿಜ್ಯ ನಿವೇಶನ ಸಂಖ್ಯೆ 24 ರ ಎಲ್ಲಾ ಭಾಗಗಳು.	31.00 ಲಕ್ಷ	3.10 ಲಕ್ಷ
ಆಸ್ತಿ ಪಟ್ಟಿ 8	ಮಂಗಳೂರಿನ ಬಾಂಗ್ರಾ ಕುಲೂರಿನಲ್ಲಿರುವ 5.30 ಸೆಂಟ್ಸ್ ವಿಸ್ತೀರ್ಣದ ವಾಣಿಜ್ಯ ನಿವೇಶನ ಸಂಖ್ಯೆ 25 ರ ಎಲ್ಲಾ ಭಾಗಗಳು.	33.00 ಲಕ್ಷ	3.30 ಲಕ್ಷ
ಆಸ್ತಿ ಪಟ್ಟಿ 9	ಮಂಗಳೂರಿನ ಬಾಂಗ್ರಾ ಕುಲೂರಿನಲ್ಲಿರುವ 6.20 ಸೆಂಟ್ಸ್ ವಿಸ್ತೀರ್ಣದ ವಾಣಿಜ್ಯ ನಿವೇಶನ ಸಂಖ್ಯೆ 26 ರ ಎಲ್ಲಾ ಭಾಗಗಳು.	39.00 ಲಕ್ಷ	3.90 ಲಕ್ಷ
ಆಸ್ತಿ ಪಟ್ಟಿ 10	ಉಡುಪಿ ಜಿಲ್ಲೆಯ ಬ್ರಹ್ಮಾವರದ ಆರ್.ಎಸ್. ನಂ. 110/3, 1ರಲ್ಲಿರುವ 3.17 ಎಕರೆ ವಿಸ್ತೀರ್ಣದ, ಇಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	2.50 ಕೋಟಿ	0.250 ಕೋಟಿ
'ಡಿ' ವರ್ಗ: ಭೋಗ್ಯದಲ್ಲಿರುವ ಆವರಣದಲ್ಲಿರುವ ಚರಾಸ್ತಿಗಳ ಮಾರಾಟ (ಒಂದೊಮ್ಮೆ ವರ್ಗ ಎ ಅಥವಾ ಬಿ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 31.01.2026ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ			
ಆಸ್ತಿ ಪಟ್ಟಿ 11	ಡಿ. ನಂ. 12/92 ಮತ್ತು 12/93, ಪಡವು ಪೋಸ್ಟ್, ಶಕ್ತಿನಗರ, ಕುಲಶೇಖರ, ಮಂಗಳೂರು, ಕರ್ನಾಟಕ, ಇಲ್ಲಿರುವ ಯಂತ್ರೋಪಕರಣ ಮತ್ತು ಒಂದು ವಾಹನ	44.00 ಲಕ್ಷ	4.40 ಲಕ್ಷ
'ಇ' ವರ್ಗ: ಆಸ್ತಿಗಳ ಪ್ರತ್ಯೇಕ ಯೂನಿಟ್‌ಗಳ ಮಾರಾಟ (ಚರ ಮತ್ತು ಸ್ಥಿರ ಆಸ್ತಿಗಳು) (ಒಂದೊಮ್ಮೆ ವರ್ಗ ಎ ಅಥವಾ ಬಿ ಅಥವಾ ಸಿ ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 31.01.2026ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ			
ಆಸ್ತಿ ಪಟ್ಟಿ 12	**ಕೈಗಾರಿಕಾ ಸ್ವತ್ತು** (ಸ್ಥಿರ ಮತ್ತು ಚರ ಆಸ್ತಿಗಳು) ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿನ 100 ಸೆಂಟ್ ವಿಸ್ತೀರ್ಣದ ಸಮಸ್ತ ಭೂಮಿ – ಕಟ್ಟಡ, ಯಂತ್ರೋಪಕರಣಗಳು ಮತ್ತು ಪೀಠೋಪಕರಣಗಳು, ವಾಹನಗಳು	1.93 ಕೋಟಿ	0.193 ಕೋಟಿ
'ಎಫ್' ವರ್ಗ: ಚರಾಸ್ತಿಗಳ ಮಾರಾಟ (ಒಂದೊಮ್ಮೆ ಅಸೆಟ್ ಸೆಟ್ 12 ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 31.01.2026ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ			
ಆಸ್ತಿ ಪಟ್ಟಿ 13	**ಯಂತ್ರೋಪಕರಣಗಳು ಮತ್ತು ಚರಾಸ್ತಿಗಳು** ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ ಎಲ್ಲಾ ಚರಾಸ್ತಿಗಳು ಮತ್ತು ವಾಹನಗಳು	29.00 ಲಕ್ಷ	2.90 ಲಕ್ಷ
'ಜಿ' ವರ್ಗ: ಸ್ಥಿರಾಸ್ತಿಗಳ ಮಾರಾಟ (ಒಂದೊಮ್ಮೆ ಹರಾಜು ಯಶಸ್ವಿಯಾಗಿ ಅಸೆಟ್ ಸೆಟ್ 13 ಅಡಿಯಲ್ಲಿ ಹರಾಜಿಗೆ ಬಿಡ್ ಗಳು ಬಂದಿದ್ದರೆ, ಇ–ಹರಾಜು ಮೂಲಕ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ 31.01.2026 ರಂದು ಸಂಜೆ 05.00 ರಿಂದ 06.00 ರವರೆಗೆ			
ಆಸ್ತಿ ಪಟ್ಟಿ 14	**ಸ್ಥಿರಾಸ್ತಿ (ಭೂಮಿ ಮತ್ತು ಕಟ್ಟಡ)** ಸರ್ವೇ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ 100 ಸೆಂಟ್ ವಿಸ್ತೀರ್ಣದ ಭೂಮಿ – ಕಟ್ಟಡದ ಸಹಿತವಾಗಿ.	1.64 ಕೋಟಿ	0.164 ಕೋಟಿ

1. ಈ ಮಾರಾಟದ ನೋಟೀಸನ್ನು ಆಸ್ತಿಗಳ ವಿವರಗಳು ಅರ್ಹತೆ ಇ–ಹರಾಜು ಬಿಡ್ ಪ್ರಪತ್ರ ಇತ್ಯಾದಿಗಳನ್ನು ಒಳಗೊಂಡ ಸಂಪೂರ್ಣ 'ಇ–ಹರಾಜು ಪ್ರಕ್ರಿಯೆಯ ಮಾಹಿತಿ' (ಪ್ರಕ್ರಿಯೆ ದಾಖಲೆ)ಯ ಜೊತೆಯಲ್ಲಿ ಓದಿಕೊಳ್ಳತಕ್ಕದ್ದು. ಇದು https://ibbi.baanknet.com/eauction-ibbi/home ನಲ್ಲಿ ದೊರೆಯುತ್ತದೆ, ಅಥವಾ ಹೆಚ್ಚಿನ ವಿವರಗಳಿಗೆ ಲಿಕ್ವಿಡೇಟರ್‌ರನ್ನು ಸಂಪರ್ಕಿಸಬಹುದು.
2. ದಯವಿಟ್ಟು ಗಮನಿಸಿ: **'ಎ' ಅಥವಾ 'ಬಿ' ಆಸ್ತಿ ವರ್ಗಕ್ಕೆ** ಹರಾಜು ಪ್ರಕ್ರಿಯೆಯಲ್ಲಿ ಬಿಡ್ಡರುಗಳು ಪಾಲುಗೊಳ್ಳದೆ ಯಶಸ್ವಿಯಾಗದೆ ಇದ್ದಲ್ಲಿ ಸದರಿ ಆಸ್ತಿಗಳನ್ನು ಮೇಲಿನ ಕೋಷ್ಟಕದ ಅನುಸಾರ ಪ್ರತ್ಯೇಕವಾಗಿ ಮಾರಾಟ ಮಾಡಲಾಗುವುದು. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ವರ್ಗದ(ಗಳ) ಅಡಿಯಲ್ಲಿ ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಇ–ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸುವ ಹಕ್ಕನ್ನು ಲಿಕ್ವಿಡೇಟರ್ ಉಳಿಸಿಕೊಂಡಿರುತ್ತಾರೆ. ಈ ವರ್ಗದ ಅಡಿಯಲ್ಲಿನ ಆಸ್ತಿಗಳ ಮಾರಾಟ, ಅಂದರೆ ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿದ ಮಾರಾಟವು ನ್ಯಾಯನಿರ್ಣಯ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟಿರುತ್ತದೆ.
3. ಆಯಾ ವರ್ಗದ ಮತ್ತು/ಅಥವಾ ಆಸ್ತಿ(ಗಳ) ಸಲುವಾಗಿ ಆಸಕ್ತ ಬಿಡ್‌ದಾರರು ಅರ್ಹತಾ ದಾಖಲೆಗಳನ್ನು ಇಎಂಡಿ ಜೊತೆಯಲ್ಲಿ, ಪ್ರಕ್ರಿಯಾ ದಾಖಲೆಯಲ್ಲಿ ತಿಳಿಸಿರುವ ಪ್ರಕಾರ, **27.01.2026**ರಂದು ಇಲ್ಲವೆ ಅದಕ್ಕೆ ಮುನ್ನ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮಾತ್ರ ಸಲ್ಲಿಸಬೇಕು.
4. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳೂ (ಸೂಚಿತ ಸಮಯಗಳು) ಸೇರಿದಂತೆ ಮುಖ್ಯ ಷರತ್ತುಗಳನ್ನು ಮಾರ್ಪಡಿಸುವ ಅಧಿಕಾರ ಲಿಕ್ವಿಡೇಟರ್ ಅವರಿಗೆ ಇರುತ್ತದೆ – ಸಂಬಂಧಿತ ಕಾನೂನು ಮತ್ತು ನಿಬಂಧನೆಗಳ ಅನ್ವಯ ಇರುವ ಮಿತಿಗಳ ಒಳಗೆ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳ ಬದಲಾವಣೆಗಳ/ ವಿಸ್ತರಣೆಗಳ ಕುರಿತಾದ ಎಲ್ಲಾ ಮಾಹಿತಿಯು ಇ–ಹರಾಜು ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ, ಮತ್ತು ಅರ್ಹ/ಅರ್ಹತೆ ಗಳಿಸಿದ/ ಯಶಸ್ವೀ ಬಿಡ್‌ದಾರರಿಗೆ ತಿಳಿಯಪಡಿಸಲಾಗುವುದು.
5. ಸಂಭಾವ್ಯ ಬಿಡ್ಡುದಾರರು ಮುಂಗಡ ಹಣ ಪಾವತಿಯನ್ನು ಬ್ಯಾಂಕ್‌ನೆಟ್ ಹರಾಜು ವೇದಿಕೆಯ ಮೂಲಕ ಮಾತ್ರ ಮಾಡಬೇಕು. ಬಿಡ್ಡುದಾರರು ಅನರ್ಹರೆಂದು ಕಂಡುಬಂದರೆ, ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
6. ಈ ಪ್ರಕಟಣೆಯಲ್ಲಿ ತಿಳಿಸಿರುವ ಯಾವುದೇ ಆಸ್ತಿ ಮಾರಾಟ / ಸಕ್ರಿಯ ಸಂಸ್ಥೆಯಂತೆ ಪರಿಗಣಿತ ಮಾರಾಟ ಪ್ರಸ್ತಾಪವನ್ನು ಬದ್ಧ ಕರಾರು ಎಂದು ಪರಿಗಣಿಸಬಾರದು.

ಸಂಕ್ಷಿಪ್ತ ವಿವರಗಳಿಗಾಗಿ ದಯವಿಟ್ಟು ಕೆಳಗಿನ QR ಕೋಡ್‌ಅನ್ನು ಸ್ಕ್ಯಾನ್ ಮಾಡಿರಿ.

ದಿನಾಂಕ: 5.01.2026
ಸ್ಥಳ: ಬೆಂಗಳೂರು

ಸಹಿ/–
ರವೀಂದ್ರ ಬೆಳೆಯೂರ್
ಲಿಕ್ವಿಡೇಟರ್
ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ ಇನ್ ಲಿಕ್ವಿಡೇಶನ್,
428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು 11
ಈಮೇಲ್: Reliable_Cashew_CIRP@beleyur.com
ಫೋನ್: 080 26540193 ಮೊಬೈಲ್: +91 94481 46963

PUBLIC NOTICE

Notice is hereby given to the general public that **Scania Commercial Vehicles India Private Limited**, having its registered office at Plot No. 64-66, 88-97, Narasapura KIADB Industrial Area, Achhatanahalli Village, Narasapura Hobli, Kolar, Karnataka, India – 563133 ('Owner') being the absolute owner of the immovable property being vacant & undeveloped land converted for commercial & industrial purpose and bearing Survey No. 139, situated at Achatanahalli Village, Narasapura Hobli, Kolar Taluk, Kolar District, measuring 02 Acres 14 Guntas ('**Property**') has lost/misplaced the following original documents in connection with the Property ('**Original Documents**'):

1. Sale Deed dated 16.05.1977 (Registered as Document No. 516/1977-78, Book-I, Volume No. 1611, at Pages 93 to 96, at the office of the Sub Registrar, Kolar) executed by Mr. A. K. Nanjappa, son of Mr. Motappa in favour of Mr. Ramappa, son of Mr. Honoorappa in connection with property bearing Survey No. 139, measuring 01 Acre 07 Guntas;
2. Sale Deed dated 25.08.1997 (Registered as Document No. 1539/1997-98, Book-I, Volume No. 2307, at Pages 61 to 63, at the office of the Sub Registrar, Kolar) executed by Mrs. Gowramma, wife of Late Ramappa in favour of Mr. Narayanappa, son of Late Honoorappa in connection with property bearing Survey No. 139, measuring 01 Acre 07 Guntas;
3. Sale Deed dated 15.04.1998 (Registered as Document No. 129/1998-99, Book-I, Volume No. 2333, at Pages 186 to 188, at the office of the Sub Registrar, Kolar) executed by Mr. Narayanappa, son of Late Honoorappa and his sons Mr. Anjinappa and Mr. N. Nagaraj in favour of Mrs. R. Manjula, wife of Mr. M. Ramachandra in connection with property bearing Survey No. 139, measuring 01 Acre 07 Guntas;
4. Sale Deed dated 26.07.1999 (Registered as Document No. 1246/1999-2000, Book-I, Volume No. 2396, at Pages 211 to 213, at the office of the Sub Registrar, Kolar) executed by Mrs. R. Manjula, wife of Mr. M. Ramachandra in favour of Mr. P. L. Bhanuprakash, son of Mr. P. S L. Gupta in connection with property bearing Survey No. 139, measuring 01 Acre 07 Guntas;
5. Sale Deed dated 16.05.1977 (Registered as Document No. 515/1977-78, Book-I, Volume No. 1612, at Pages 33 to 34, at the office of the Sub Registrar, Kolar) executed by Mr. A. K. Nanjappa, son of Mr. Motappa in favour of Mr. Narayanappa, son of Mr. Honoorappa in connection with property bearing Survey No. 139 measuring 01 Acre 07 Guntas;
6. Sale Deed dated 24.04.1985 (Registered as Document No. 308/1985-86, Book-I, Volume No. 1844, at Pages 217 to 219, at the office of the Sub Registrar, Kolar) executed by Mr. Narayanappa, son of Mr. Honoorappa in favour of Mrs. Nirmalamma, daughter of Mr. Narayanappa in connection with property bearing Survey No. 139 measuring 01 Acre 07 Guntas;
7. Sale Deed dated 15.10.1999 (Registered as Document No. 2163/1999-2000, Book-I, Volume No. 2409, at Pages 195 to 197, at the office of the Sub Registrar, Kolar) executed by Mrs. Nirmalamma, daughter of Mr. Narayanappa along with her husband Mr. N. Devaraju and children Master Anand Kumar and Ms. Netravathi, minors (represented by their mother and minor guardian Mrs. Nirmalamma) in favour of Mr. P. L. Bhanuprakash, son of Mr. P. S L. Gupta in connection with property bearing Survey No. 139 measuring 01 Acre 07 Guntas;
8. Sale Deed dated 07.08.2000 (Registered as Document No. 1428/2000-01, Book-I, Volume No. 2446, at Pages 165 to 168, at the office of the Sub Registrar, Kolar) executed by Mr. P. L. Bhanuprakash, son of Mr. P. S L. Gupta in favour of Mr. C. Venkatesh and Mr. C. Ramachandra, both sons of Late Chinnappa Naidu in connection with property bearing Survey No. 139 measuring 02 Acre 14 Guntas;
9. Official Memorandum dated 23.01.2012 bearing No. ALN.SR(K)50/2011-12 issued by the Deputy Commissioner, Kolar District in connection with the conversion of property bearing Survey No. 139 measuring 02 Acre 14 Guntas; and
10. Sale Deed dated 23.03.2013 (Registered as Document No. KLR-1-10973-2012-13, Book-1, C.D. No. KLRD119, at the office of the Sub Registrar, Kolar) executed by Mr. C. Venkatesh and Mr. C. Ramachandra, both sons of Late Chinnappa Naidu in favour of Scania Commercial Vehicles India Private Limited in connection with property bearing Survey No. 139 measuring 02 Acre 14 Guntas.

Despite best efforts, the Owner is unable to trace the Original Documents for which Police Complaint intimating the loss has been filed with Karnataka State Police, Kolar on 30.12.2025 vide E-Lost Reports bearing Reference Nos. 1983318/2025, 1983355/2025, 1983423/2025, 1983519/2025, 1983528/2025, 1983586/2025, 1983594/2025, 1983607/2025, 1983613/2025 and 1983622/2025. Members of the public are hereby notified that in the event any person/s has/have found/ discovered/ is in custody of the Original Documents, such person/s is/are hereby requested to return the Original Documents to the undersigned, at the below-mentioned address.

Ms. Brijita Prakash, Partner
J. Sagar Associates, Advocates & Solicitors,
18th Floor, SKAV 909, No. 9/1, Residency Road,
Richmond Circle, Bengaluru – 560025, Karnataka, India.
Ph. 080-43503600/080-43503676. Email: brijita.prakash@jsalaw.com
Date: 06.01.2026, Place: Bengaluru

PUBLIC NOTICE

Notice is hereby given to the general public that **Scania Commercial Vehicles India Private Limited**, having its registered office at Plot No. 64-66, 88-97, Narasapura KIADB Industrial Area, Achhatanahalli Village, Narasapura Hobli, Kolar, Karnataka, India – 563133 ('Owner') being the absolute owner of the immovable property bearing Plot Nos. 61, 62, 63 P, 63 Part, 64, 65, 66, 84, 85, 86, 87, 88 to 97 located in Narasapura Industrial Area, Kolar [formed out of Survey Nos. Parts of 135, 140, 141, 159, 162P, 170, 171, 20, 31, 30/1, 32P, 33, 33P and 34 within the limits of Achatanahalli Village, Narasapura Hobli, Kolar Taluk and Kolar District], bearing Khata No. 207/ E-Khata No. 151900700900120551, measuring 1,44,428.71 Square Meters/ 35 Acres 27.56 Guntas along with building constructed thereon ('**Property**') has lost/misplaced the following original documents in connection with the Property ('**Original Documents**'):

1. Lease cum Sale Agreement dated 07.03.2012 (Registered on 20.03.2012 as Document No. KLR-1-06917-2011-12, Book-1, stored in C.D. No. KLRD92, at the office of the Sub Registrar, Kolar) entered between Karnataka Industrial Areas Development Board and Scania Commercial Vehicles India Private Limited;
2. Allotment Letter dated 13.04.2012 bearing No. IADB/DO-II/96/2012-13 issued by the Development Officer & Executive Engineer-II, Karnataka Industrial Areas Development Board in favour of Scania Commercial Vehicles India Private Limited;
3. Allotment Letter dated 27.08.2012 bearing No. KIADB/DO-II/295/1081/2012-13 issued by the Development Officer & Executive Engineer – II, Karnataka Industrial Areas Development Board in favour of Scania Commercial Vehicles India Private Limited;
4. Allotment Letter dated 18.09.2012 bearing No. IADB/DO-II/1275/2012-13 issued by the Development Officer & Executive Engineer – II, Karnataka Industrial Areas Development Board in favour of Scania Commercial Vehicles India Private Limited;
5. Possession Certificate dated 28.09.2012 bearing No. IADB/__/D.O-II/1355/2012-13 issued by the Assistant Engineer, Karnataka Industrial Areas Development Board along with the sketch;
6. Possession Certificate dated 28.09.2012 bearing No. IADB/D.O-II/1356/2012-13 issued by the Assistant Engineer, Karnataka Industrial Areas Development Board along with the sketch;
7. Lease cum Sale Agreement dated 12.10.2012 (Registered on 18.10.2012 as Document No. KLR-1-05961-2012-13, Book-1, stored in C.D. No. KLRD106, at the office of the Sub Registrar, Kolar) entered between Karnataka Industrial Areas Development Board and Scania Commercial Vehicles India Private Limited;
8. Occupancy Certificate dated 06.05.2013 bearing No. KIADB/DO-II/321/2013-14 issued by the Development Officer & Executive Engineer, Karnataka Industrial Areas Development Board;
9. Occupancy Certificate dated 15.10.2013 bearing No. KIADB/DO-II/1765/2013-14 issued by the Development Officer & Executive Engineer, Karnataka Industrial Areas Development Board; and
10. Occupancy Certificate dated 05.08.2014 bearing No. KIADB/DO-II/1251/2014-15 issued by the Development Officer & Executive Engineer, Karnataka Industrial Areas Development Board.

Despite best efforts, the Owner is unable to trace the Original Documents for which Police Complaint intimating the loss have been filed with Karnataka State Police, Kolar on 17.01.2022 and 30.12.2025 vide E-Lost Reports bearing Reference Nos. 1983634/2025, 1983638/2025, 1983643/2025, 1983650/2025, 1983657/2025, 1983670/2025, 0137630/2022, 1983679/2025, 1983683/2025 and 1983687/2025. Members of the public are hereby notified that in the event any person/s has/have found/ discovered/ is in custody of the Original Documents, such person/s is/are hereby requested to return the Original Documents to the undersigned, at the below-mentioned address.

Ms. Brijita Prakash, Partner
J. Sagar Associates, Advocates & Solicitors,
18th Floor, SKAV 909, No. 9/1, Residency Road,
Richmond Circle, Bengaluru – 560025, Karnataka, India.
Ph. 080-43503600/080-43503676. Email: brijita.prakash@jsalaw.com
Date: 06.01.2026, Place: Bengaluru

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

ನಂದಿನಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿ.,

ನಂ. 6/6, ಸರಸ್ವತಿಪುರ ಮುಖ್ಯರಸ್ತೆ, ಗಣೇಶ ಬ್ಲಾಕ್, ನಂದಿನಿ ಬಡಾವಣೆ, ಬೆಂಗಳೂರು–560096. ದೂ. 080 23193156/57
ಇ–ಮೇಲ್. nandinicreditcoop1993@ gmail.com Mob : 9663733733

ಶ್ರೀಮತಿ. ಲಕ್ಷ್ಮೀಬಾಯಿ, ಸಾಲಗಾರರು

ಬಹಿರಂಗ ಹರಾಜು ನೋಟೀಸ್

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನಮ್ಮ ಸಂಘಕ್ಕೆ ಈ ಕೆಳಗೆ ನಮೂದಿಸಿರುವತಕ್ಕವರಾದ ಸುಸ್ತಿದಾರರಿಂದ ಬರಬೇಕಾದ ಸಾಲಕ್ಕೆ ವಸೂಲಾಧಿಕಾರಿ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ನ್ಯಾಯಾಲಯ ನಂ.146, ಸಹಕಾರ ಸೌಧ, 1ನೇ ಮಹಡಿ, 8ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003 ರವರ ಹುಕುಂ ಜಾರಿಯಾಗಿದ್ದು ಸದರಿ ಡಿಕ್ರಿ ಹಣದ ವಸೂಲಿಗಾಗಿ ಸದರಿಯವರ ಬಾಬ್ತು ಈ ಕೆಳಗೆ ನಮೂದಿಸಿರುವ ಸ್ಥಿರಾಸ್ತಿಯನ್ನು ಸಹಕಾರ ಸಂಘದ ಕಾಯಿದೆಗಳಿಗೆ ಅನುಗುಣವಾಗಿ ಈ ಕೆಳಕಂಡಂತೆ ತಾರೀಖು, ಕಾಲ ಮತ್ತು ಸ್ಥಳಗಳಲ್ಲಿ ಬಹಿರಂಗ ಹರಾಜು ಮಾಡಲಾಗುತ್ತದೆ. ಸದರಿ ಸ್ವತ್ತುಗಳನ್ನು ಕೊಳ್ಳಲು ಇಚ್ಛಿಸುವವರು ಹರಾಜಿನಲ್ಲಿ ಬಿಡ್ ಸವಾಲಿನ ಮೂಲಕ ಕೊಂಡುಕೊಳ್ಳಬಹುದು.

ಕ್ರ. ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಬರಬೇಕಾದ ಮೊಬಲಗು	ಡಿಕ್ರಿ ಮತ್ತು ಸಿಇಪಿ ನಂ.	ಹರಾಜು ಮಾಡುವ ಸ್ಥಿರಾಸ್ತಿಗಳ ವಿವರ	ಚಕ್ಕು ಬಂದಿ	ಹರಾಜು ತಾರೀಖು, ವೇಳೆ, ಸ್ಥಳ
1	ಶ್ರೀಮತಿ. ಲಕ್ಷ್ಮೀಬಾಯಿ ಕೋಂ ಲೇಟ್ ಈಶ್ವರ್ ರಾವ್ ನಂ.9/1, 3ನೇ ಮೈನ್, ಶ್ರೀಕಂಠೇಶ್ವರನಗರ, ಮಹಾಲಕ್ಷ್ಮೀ ಬಡಾವಣೆ, ಬೆಂಗಳೂರು–560096.	ದಿನಾಂಕ: 27–11–2025 ರ ಅಂತ್ಯಕ್ಕೆ ಇದ್ದಂತೆ ರೂ.23,82,460/– (ರೂ. ಇಪ್ಪತ್ಮೂರು ಲಕ್ಷದ ಎಂಬತ್ತೆರಡು ಸಾವಿರದ ನಾಲ್ಕು ನೂರ ಅರವತ್ತು) ಗಳು ಮಾತ್ರ. ಸಾಲ ವಸೂಲಾಗುವವರೆಗೆ ಬಡ್ಡಿ ಶೇ.16 ಹಾಗೂ ಶೇ.3 ಸುಸ್ತಿಬಡ್ಡಿ ಮತ್ತು ಇತರೆ ವೆಚ್ಚಗಳು.	ದಾವಾ ಸಂಖ್ಯೆ: ಎಆರ್–44/ಡಿಐಎಸ್/1823/2022–23 ಅಮಲ್ಜಾರಿ ಸಂಖ್ಯೆ: ಎಆರ್‌ಬಿ–44/ಸಿಇಪಿ/12/2025–26 ಮತ್ತು ದಾವಾ ಸಂಖ್ಯೆ: ಯುಬಿಸಿ–3/ಡಿಐಎಸ್/1830/2022–23 ಅಮಲ್ಜಾರಿ ಸಂಖ್ಯೆ: ಎಆರ್‌ಬಿ–44/ಸಿಇಪಿ/10/2025–26	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.44(10)ರ ವಾರ್ಡಿಗೆ ಸೇರಿದ ಶ್ರೀ ಕಂಠೇಶ್ವರನಗರದ 3ನೇ ಮುಖ್ಯರಸ್ತೆಯಲ್ಲಿರುವ ಹಿಂದೆ ಬೆಂಗಳೂರು ಜಾರಕಬಂಡೆ ಕಾವಲು ಗ್ರಾಮದ ಸರ್ವೆ ನಂ.96/2 ಮತ್ತು 2/3 ನೇ ನಂಬರು ಜಮೀನುಗಳಲ್ಲಿ ವಿಂಗಡಿಸಿರುವ ನಿವೇಶನಗಳ ಪೈಕಿ 10ನೇ ನಂಬರುಳ್ಳ ಹಾಲಿ ಮುನಿಸಿಪಲ್ ನಂ.9/1 ಹಳೆ ನಂ.9ನೇ ನಂಬರುಳ್ಳ, ಪಿ.ಐ.ಡಿ ನಂ.10–44–9/1 ನೇ ನಂಬರಿನ ದಕ್ಷಿಣಾರ್ಧ–ಪಶ್ಚಿಮಾರ್ಧ ಭಾಗದ ಸ್ವತ್ತು.	ಚಕ್ಕು ಬಂದಿ :– ಪೂರ್ವಕ್ಕೆ : ಇದೇ ಸ್ವತ್ತಿನಲ್ಲಿ ರಸ್ತೆಗೆ ತಿರುಗಾಡಲು ಬಿಟ್ಟಿರುವ 3 ಅಡಿ ಅಗಲದ ಕಾಮನ್ ಪ್ಯಾಸೇಜು ಜಾಗ, ನಂತರ ಇದೇ ಸ್ವತ್ತಿನ ಪೈಕಿ ಗಣೇಶ್ ರಾವ್‌ಗೆ ಸೇರಿದ ಸ್ವತ್ತು. ಪಶ್ಚಿಮಕ್ಕೆ : ಬೇರೆಯವರ ಸ್ವತ್ತು. ಉತ್ತರಕ್ಕೆ : ಇದೇ ಸ್ವತ್ತಿನ ಪೈಕಿ ಗಾಯತ್ರಿ ಬಾಯಿರವರಿಗೆ ಸೇರಿದ ಸ್ವತ್ತು. ದಕ್ಷಿಣಕ್ಕೆ : ಬೇರೆಯವರ ಸ್ವತ್ತು. ವಿಸ್ತೀರ್ಣ :– ಪೂರ್ವ – ಪಶ್ಚಿಮ: 12 ಅಡಿಗಳು ಉತ್ತರ–ದಕ್ಷಿಣ : ಪಶ್ಚಿಮದ ಕಡೆ 22–8 ಅಡಿಗಳು, ಪೂರ್ವದ ಕಡೆ : 22 ಅಡಿಗಳ ಜೊತೆಗೆ ಉತ್ತರದಿಂದ ದಕ್ಷಿಣಕ್ಕೆ ಚಲಿಸಲು 3 ಅಡಿ ಕಾಮನ್ ಪ್ಯಾಸೇಜ್ ಅಳತೆಯುಳ್ಳ 268 ಚದರ ಅಡಿಗಳು.	ದಿನಾಂಕ:13–01–2026 ರ ಮಂಗಳವಾರ ಬೆಳಿಗ್ಗೆ:11–00 ಗಂಟೆಗೆ ಸ್ಥಳ : ಹರಾಜು ಮಾಡುವ ಸ್ಥಿರಾಸ್ತಿಗಳ ವಿವರದಲ್ಲಿರುವಂತೆ

ಷರತ್ತುಗಳು: 1. ಹರಾಜಿಗೆ ಮುನ್ನ ಸಂಘಕ್ಕೆ ಬರಬೇಕಾದ ಹಣವನ್ನು ಸಾಲಗಾರನಿಂದಾಗಲೀ / ಜೊತೆ ಸಾಲಗಾರರಿಂದಾಗಲೀ ಮರುಪಾವತಿಯಾದಲ್ಲಿ ಸದರಿ ಸ್ವತ್ತನ್ನು ಹರಾಜು ಮಾಡುವುದಿಲ್ಲ. 2. ಹರಾಜಿನಲ್ಲಿ ಭಾಗವಹಿಸುವವರು ಹೆಚ್ಚಿನ ವಿವರಗಳನ್ನು ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ/ ಈ ಕೆಳಗಿನ ವಿಳಾಸದಲ್ಲಿನ ಮಾರಾಟಾಧಿಕಾರಿಗಳು ಇವರಿಂದ ಪಡೆಯಬಹುದು. 3. ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚಿತವಾಗಿ ರೂ. 25,000/– (ರೂ. ಇಪ್ಪತ್ತೈದು ಸಾವಿರ ಮಾತ್ರ) ಪ್ರಾರಂಭಿಕ ಹಣವನ್ನು ಸಂಘದ ಹೆಸರಿಗೆ ಡಿ.ಡಿ./ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ ಪಾವತಿಸುವುದು. 4. ಯಶಸ್ವಿಯಾದ ಬಿಡ್‌ದಾರರು ಬಿಡ್ಡಿನ ಮೊಬಲಗಿನ ಪೈಕಿ ಶೇ.15 ರಷ್ಟು ಮೊಬಲಗನ್ನು ಹರಾಜಿನ ದಿನವೇ ಸಂಘದ ಹೆಸರಿಗೆ ಡಿ.ಡಿ. /ಆರ್.ಟಿ.ಜಿ.ಎಸ್/ಎಸ್.ಇ.ಎಫ್.ಟಿ ಮೂಲಕ ಪಾವತಿಸತಕ್ಕದ್ದು, ಬಿಡ್ಡಿನ ಹಣದ ಉಳಿಕೆ ಮೊಬಲಗನ್ನು ಅಂದರೆ ಶೇ.85 ರಷ್ಟನ್ನು ಮಾರಾಟದ ತಾರೀಖಿನಿಂದ 45 ದಿವಸಗಳೊಳಗೆ ಪಾವತಿಸತಕ್ಕದ್ದು, ತಪ್ಪಿದರೆ ಬಿಡ್ಡುದಾರರು ಪಾವತಿಸಿರುವ ಮೊಬಲಗನ್ನು ಕಳೆದುಕೊಳ್ಳಲು ಬಾಧ್ಯರಾಗಿರತಕ್ಕದ್ದು. 5. ಹರಾಜಿನ ಇತರೆ ಷರತ್ತುಗಳನ್ನು ಫಾರಂ ನಂ.8 ರಲ್ಲಿ ಪ್ರಕಟಿಸಿ ಬಹಿರಂಗ ಪಡಿಸಿರುತ್ತದೆ. ಸ್ವತ್ತಿನ ವಿವರಣೆ ಅಥವಾ ಅವುಗಳ ಅಂದಾಜು ಮಾಡಲಾಗಿರುವ ವಿಸ್ತೀರ್ಣದ ವಿಷಯದಲ್ಲಿ ಹಾಗೂ ಮೌಲ್ಯಮಾಪನವಾಗಿರುವ ತಪ್ಪುಗಳಿಗೆ ಈ ನ್ಯಾಯಾಲಯ ಮತ್ತು ಸರ್ಕಾರ ಹಾಗೂ ಸಂಘವು ಜವಾಬ್ದಾರಿಯಲ್ಲ. 6. ಹರಾಜಿಗಿಟ್ಟಿರುವ ಸ್ಥಿರಾಸ್ತಿಯ ಮೀಸಲು ಬೆಲೆ ಕನಿಷ್ಠ ರೂ. 24,66,496/– (ರೂ. ಇಪ್ಪತ್ತ ನಾಲ್ಕು ಲಕ್ಷದ ಅರವತ್ತಾರು ಸಾವಿರದ ನಾಲ್ಕುನೂರ ತೊಂಭತ್ತಾರು ಮಾತ್ರ) ಬಿಡ್ಡುದಾರರು ಮೀಸಲು ಬೆಲೆಗಿಂತ ಹೆಚ್ಚಿನ ಬಿಡ್ ಮಾಡಬೇಕು. 7. ಬಿಡ್ ಮೊಬಲಗು ಸ್ಥಳೀಯ ಮಾರುಕಟ್ಟೆ ಮೊಬಲಗಿಗಿಂತ ಕಡಿಮೆಯಾದಲ್ಲಿ ಆಸ್ತಿಯನ್ನು ಅಂತಹ ಬಿಡ್‌ದಾರನಿಗೆ ಬಿಡುವುದು ಅಥವಾ ಬಿಡದಿರುವುದು ಕೆ.ಸಿ.ಎಸ್ ರೂಲ್ಸ್ 38(ಎಫ್) ಪ್ರಕಾರ ಮಾರಾಟಾಧಿಕಾರಿಗಳ ವಿವೇಚನೆಗೆ ಬಿಟ್ಟಿರುತ್ತದೆ. 8. ಒಂದು ವೇಳೆ ಸದರಿ ಸ್ವತ್ತಿನ ಬಗ್ಗೆ ನ್ಯಾಯಾಲಯದಿಂದ ವ್ಯಾಜ್ಯವಾದಲ್ಲಿ ತಡೆಯಾಜ್ಞೆಯೇನಾದರೂ ಬಂದಲ್ಲಿ ಬಿಡ್‌ದಾರರು ಪಾವತಿಸಿದ ಶೇ.15 ರಷ್ಟು ಮೊತ್ತಕ್ಕೆ ಬಡ್ಡಿ ನೀಡಲಾಗುವುದಿಲ್ಲ, ನ್ಯಾಯಾಲಯದ ತೀರ್ಪಿಗೆ ಸದರಿ ಹರಾಜು ಒಳಪಡುತ್ತದೆ. 9. ಬಾಕಿದಾರನು ಸಂಘಕ್ಕೆ ಪಾವತಿಸಬೇಕಾಗಿರುವ ಸಂಪೂರ್ಣ ಸಾಲದ ಮೊತ್ತವನ್ನು (ಅಸಲು+ಬಡ್ಡಿ+ಸುಸ್ತಿ ಬಡ್ಡಿ+ಇತರೆ ಖರ್ಚು+ಹರಾಜು ವೆಚ್ಚಗಳನ್ನು) ಮರುಪಾವತಿಸಲು ಇಚ್ಛಿಸಿದ್ದಲ್ಲಿ ಬಹಿರಂಗ ಹರಾಜಿನ ದಿನಾಂಕದಿಂದ 30 ದಿನಗಳೊಳಗಾಗಿ ಬಹಿರಂಗ ಹರಾಜಿನಲ್ಲಿ ಯಶಸ್ವಿ ಬಿಡ್ಡುದಾರರು ಪಾವತಿಸಿರುವ ಶೇ.15 ರ ಪಾವತಿ ಮೊತ್ತಕ್ಕೆ ಶೇ.5 ರಂತೆ ಸೇರಿದ ಮೊತ್ತವನ್ನು ಮರುಪಾವತಿಸಲು ಬಾಧ್ಯತರಾಗಿರತಕ್ಕದ್ದು.

ಸ್ಥಳ: ಬೆಂಗಳೂರು
ದಿನಾಂಕ: 06–01–2026

ಸಹಿ/– ವಸೂಲಾಧಿಕಾರಿ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು
1ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

ಸೂಚನೆ : ಹೆಚ್ಚಿನ ವಿವರಗಳನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ನಂದಿನಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿ., ನಂ.6/6, ಸರಸ್ವತಿಪುರ ಮುಖ್ಯರಸ್ತೆ, ಗಣೇಶ ಬ್ಲಾಕ್, ನಂದಿನಿಬಡಾವಣೆ, ಬೆಂಗಳೂರು– 560096 ಇವರಿಂದ ಪಡೆಯಬಹುದು.

ಎಲ್ಲಾ ಗ್ರಾಮಗಳಿಗೂ ಸರ್ವಋತು ರಸ್ತೆಗಳು
ಕಳೆದ 11.5 ವರ್ಷಗಳಲ್ಲಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಅಡಿಯಲ್ಲಿ ಒಟ್ಟು 4.06 ಲಕ್ಷ ಕಿ.ಮೀ.ಗಳ ಉದ್ದದ 82,000+ರಸ್ತೆಗಳನ್ನು ನಿರ್ಮಿಸಲಾಗಿದೆ.
ಗ್ರಾಮೀಣ ಅಭಿವೃದ್ಧಿ ಮುಖಾಂತರ ರಾಷ್ಟ್ರ ನಿರ್ಮಾಣ
ग्रामीण विकास मंत्रालय
भारत सरकार
CBC 35101/13/0048/2526

‘ಲೋಕಾ’ಕ್ಕೆ ದೂರು

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲೆಯ ನರಸಾಪುರ ಹೋಬಳಿಯ ಗರುಡನಪಾಳ್ಯದ 21.16 ಎಕರೆ ಭೂ ಕಬಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಕಂದಾಯ ಸಚಿವ ಕೃಷ್ಣಬೈರೇಗೌಡ ವಿರುದ್ಧ ಬಿಜೆಪಿ ಸೋಮವಾರ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದೆ.

ಜಿಲ್ಲಾ ಬಿಜೆಪಿ ಅಧ್ಯಕ್ಷ ಓಂಶಕ್ತಿ ಚಲಪತಿ ನೇತೃತ್ವದಲ್ಲಿ ಮುಖಂಡರಾದ ವಿ.ವಿಜಯಕುಮಾರ್ ಹಾಗೂ ಎಸ್.ಎಂ.ಅನಿಲ್ ಕುಮಾರ್ ಸೋಮವಾರ ನಗರದ ಜಿಲ್ಲಾ ಲೋಕಾಯುಕ್ತ ಪೊಲೀಸ್ ಅಧೀಕ್ಷಕರ ಕಚೇರಿಗೆ ವಕೀಲರೊಂದಿಗೆ ಬಂದು ಡಿವೈಎಸ್ಪಿ ವೆಂಕಟೇಶ್ ಅವರಿಗೆ ದೂರು ನೀಡಿ, ತನಿಖೆಗೆ ಆಗ್ರಹಿಸಿದರು.

ಕೃಷ್ಣಬೈರೇಗೌಡರು ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು. ಲೋಕಾಯುಕ್ತದಲ್ಲಿ ಕ್ರಮ ಆಗದಿದ್ದರೆ ನ್ಯಾಯಾಲಯ ಮೊರೆ ಹೋಗುತ್ತೇವೆ ಎಂದು ತಿಳಿಸಿದ್ದಾರೆ.

‘6 ತಿಂಗಳಲ್ಲಿ ಭೂ ದಾಖಲೆ ಡಿಜಿಟಲೀಕರಣ’

ಉಪವಿಭಾಗಾಧಿಕಾರಿ ಕಚೇರಿಯ ದಾಖಲೆಗಳ ಸ್ಕ್ಯಾನಿಂಗ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಹಶೀಲ್ದಾರ್, ಜಿಲ್ಲಾಧಿಕಾರಿ ಕಚೇರಿ ಬಳಿಕ ಉಪ ವಿಭಾಗಾಧಿಕಾರಿ ಕಚೇರಿಯಲ್ಲಿನ ಕಂದಾಯ ದಾಖಲೆಗಳ ಸ್ಕ್ಯಾನಿಂಗ್ ಮತ್ತು ಡಿಜಿಟಲೀಕರಣಕ್ಕೆ ಚಾಲನೆ ನೀಡಿದ್ದು, ಕಂದಾಯ ಇಲಾಖೆಯಂತೆ ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ನೋಂದಣಿ ಮತ್ತು ಮುದ್ರಾಂಕ ಇಲಾಖೆ ದಾಖಲೆಗಳೂ ಗಣಕೀಕರಣಗೊಳ್ಳಲಿವೆ.

ಬೆಂಗಳೂರು ಉತ್ತರ ಹಾಗೂ ದಕ್ಷಿಣ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಸೋಮವಾರ ಭೂಸುರಕ್ಷಾ ಯೋಜನೆಗೆ ಚಾಲನೆ ನೀಡಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ‘ಒಂದು ವರ್ಷದ ಹಿಂದೆಯೇ 240 ತಾಲ್ಲೂಕು ಕಚೇರಿಗಳಲ್ಲಿನ 100 ಕೋಟಿ ಪುಟಗಳ ಡಿಜಿಟಲೀಕರಣಕ್ಕೆ ಚಾಲನೆ ನೀಡಲಾಗಿತ್ತು. ಈಗಾಗಲೇ 62 ಕೋಟಿ ಪುಟಗಳನ್ನು ಸ್ಕ್ಯಾನ್ ಮಾಡಿ ಪೋರ್ಟಲ್‌ಗೆ ಹಾಕಲಾಗಿದೆ. 70 ತಾಲ್ಲೂಕು ಕಚೇರಿಯಲ್ಲಿ ಈ ಕೆಲಸ ಪೂರ್ಣ ಮುಗಿದಿದೆ. ಉಳಿದ ಕಡೆ ಆರು ತಿಂಗಳಲ್ಲಿ ಮುಗಿಯುವ ವಿಶ್ವಾಸವಿದೆ. ತಾಲ್ಲೂಕು ಕಚೇರಿಗಳಿಂದ 39,39,569 ಪುಟಗಳ ದಾಖಲೆಯನ್ನು ಜನರು ಆನ್‌ಲೈನ್ ಮೂಲಕವೇ ಪಡೆದುಕೊಂಡಿದ್ದಾರೆ’ ಎಂದರು.

‘ಈಗಾಗಲೇ ಅಪ್ಲೋಡ್ ಆಗಿರುವ ದಾಖಲೆಗಳ ನೈಜತೆ ಅರಿಯುವಂತೆ ಸುತ್ತೋಲೆ ಹೊರಡಿಸಲಾಗಿದೆ. ದಾಖಲೆಗಳ ತಿದ್ದುಪಡಿ, ನಕಲು ಮಾಡಿ ದಾಖಲೆ ಅಪ್ಲೋಡ್ ಮಾಡಿದ್ದರೆ ಅಂತ ಅಧಿಕಾರಿಗಳ ವಿರುದ್ಧ ಕ್ರಮ ಆಗಲಿದೆ. ಅನುಮಾನಾಸ್ಪದ ಪ್ರಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅಗತ್ಯವಿದ್ದಲ್ಲಿ ಫೋರೆನ್ಸಿಕ್ ಲ್ಯಾಬ್‌ಗೆ ಕಳಿಸಿ ದಾಖಲೆಗಳ ನೈಜತೆ ಕುರಿತ ವರದಿ ಪಡೆದು ಕ್ರಮ ವಹಿಸುತ್ತೇವೆ’ ಎಂದರು.

ಕಂದಾಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ, ಆಯುಕ್ತರಾದ ಮೀನಾ ನಾಗರಾಜ್, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಆಯುಕ್ತ ವೆಂಕಟರಾಜಾ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ ಉಪಸ್ಥಿತರಿದ್ದರು.


ಉಪವಿಭಾಗಾಧಿಕಾರಿ ಕಚೇರಿಗಳಲ್ಲಿನ ಕಂದಾಯ ದಾಖಲೆಗಳ ಡಿಜಿಟಲೀಕರಣಕ್ಕೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಸೋಮವಾರ ಚಾಲನೆ ನೀಡಿದರು.

> ಸಿದ್ದರಾಮಯ್ಯ ಅವರು ಜನನಾಯಕ ಅಷ್ಟೇ ಅಲ್ಲ, ಅತ್ಯುತ್ತಮ ಆಡಳಿತಗಾರ. ಅವರು ಹೆಚ್ಚು ದಿನ ಆಡಳಿತದಲ್ಲಿರುವ ಕರ್ನಾಟಕದ ಮುಖ್ಯಮಂತ್ರಿ ಎನ್ನುವ ದಾಖಲೆ ನಿರ್ಮಿಸಿರುವುದು ಯಾವುದೇ ನಾಯಕರಿಗೆ ಗೌರವ ತರುವಂತದ್ದು.
> **ಕೃಷ್ಣ ಬೈರೇಗೌಡ,** ಕಂದಾಯ ಸಚಿವ

ಚಿತ್ರಾವಳಿ

ಅಲ್ಪಸಂಖ್ಯಾತರ ನಿರ್ದೇಶನಾಲಯ ಅಧೀನದ ವಸತಿ ಶಾಲೆಗಳಲ್ಲಿ 2026–27ನೇ ಶೈಕ್ಷಣಿಕ ಸಾಲಿನ 6ನೇ ತರಗತಿ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಸಚಿವ ಜಮೀರ್ ಅಹಮದ್ ಖಾನ್ ಚಾಲನೆ ನೀಡಿದರು. ನಿರ್ದೇಶಕ ಜಿಲಾನಿ ಮೊಕಾಶಿ, ಸಚಿವರ ಆಪ್ತ ಕಾರ್ಯದರ್ಶಿ ಸರ್ಫ್ರಾಜ್ ಖಾನ್ ಉಪಸ್ಥಿತರಿದ್ದರು.

ಚೆನ್ನೈನ ಡಾ. ಎಂ.ಜಿ.ಆರ್ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಯ 34ನೇ ಘಟಿಕೋತ್ಸವದಲ್ಲಿ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆ ಮುಖ್ಯಸ್ಥ ಎ.ಸಿ.ಷಣ್ಮುಗಂ, ವ್ಯವಸ್ಥಾಪಕ ಟ್ರಸ್ಟಿ ಎ.ರವಿಕುಮಾರ್, ಸಿ.ಬಿ.ಪಳಣಿವೇಲು, ಪದ್ಮನಾಭನ್ ಉಪಸ್ಥಿತರಿದ್ದರು.

ಬೆಂಗಳೂರಿನ ವಿಜಯನಗರದ ಕಾಸಿಯಾದಲ್ಲಿ ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್, ಕರ್ನಾಟಕ ಸೋಮವಾರ ಆಯೋಜಿಸಿದ್ದ ‘ವಿಶ್ವ ಬ್ರೈಲ್ ದಿನಾಚರಣೆ’ಯಲ್ಲಿ ಸಾಧಕರಾದ ಮಧು ಸಿಂಘಾಲ್, ಎಸ್.ಗೋವಿಂದರಾಜ್ ಹಾಗೂ ಕೆ.ಟಿ. ಮೇಘನಾ ಅವರನ್ನು ಸನ್ಮಾನಿಸಲಾಯಿತು. ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್, ಕರ್ನಾಟಕ ಅಧ್ಯಕ್ಷ ಎಂ. ನಾಗರಾಜ್, ಪ್ರಧಾನ ಕಾರ್ಯದರ್ಶಿ ಗೌತಮ್ ಅಗರ್‌ವಾಲ್, ಕಾಸಿಯಾ ಅಧ್ಯಕ್ಷ ಬಿ.ಆರ್.ಗಣೇಶ ರಾವ್, ರೋಟರಿ ದಕ್ಷಿಣದ ನಿರ್ದೇಶಕ ಸೋಮಶೇಖರ್ ಮುರಲ್ ಮತ್ತು ಕೃಷ್ಣಮೂರ್ತಿ ಉಪಸ್ಥಿತರಿದ್ದಾರೆ.

ಲಿಂಗರಾಜಪುರ ಭಾಗದಲ್ಲಿ ಸಮಸ್ಯೆ, ಎಚ್ಚೆತ್ತ ಜಲಮಂಡಳಿ

‘ಪೈಪ್ ತುಕ್ಕು ಹಿಡಿದು ನೀರು ಕಲುಷಿತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗರಾಜಪುರದಲ್ಲಿ ಕೆಲವು ದಿನಗಳಿಂದ ಕಲುಷಿತ ನೀರು ಸರಬರಾಜು ಆಗಿರುವುದಕ್ಕೆ ಹಳೆ ಪೈಪ್‌ಲೈನ್ ಒಡೆದಿರುವುದೇ ಮುಖ್ಯ ಕಾರಣ ಎಂದು ಜಲಮಂಡಳಿ ತಿಳಿಸಿದೆ.

40 ವರ್ಷ ಹಳೆಯದಾದ ಪೈಪ್‌ಲೈನ್ ತುಕ್ಕು ಹಿಡಿದಿರುವುದು ತಪಾಸಣೆ ವೇಳೆ ಕಂಡುಬಂದಿದೆ. ಇದರಿಂದಾಗಿ ನೀರು ಕಲುಷಿತಗೊಳ್ಳುತ್ತಿತ್ತು ಎಂದು ಮಂಡಳಿಯ ಅಧಿಕಾರಿಗಳು ದೃಢಪಡಿಸಿದ್ದಾರೆ.

ಲಿಂಗರಾಜಪುರದಲ್ಲಿ ಕಾಣಿಸಿಕೊಂಡಿದ್ದ ಕಲುಷಿತ ನೀರಿನ ಸಮಸ್ಯೆಯ ಮೂಲವನ್ನು ರೋಬೋಟಿಕ್ ತಂತ್ರಜ್ಞಾನ ಬಳಸಿಕೊಂಡು ಪತ್ತೆಹಚ್ಚಲಾಗಿದೆ. ಈಗಾಗಲೇ ಬಡಾವಣೆಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿದ್ದು, ಅದನ್ನು ಮುಂದುವರಿಸಲಾಗುತ್ತಿದೆ. ವಾರದ ಹಿಂದೆಯೇ ಲಿಂಗರಾಜಪುರ ಬಡಾವಣೆಯ ಕನಕದಾಸ ಲೇಔಟ್, ಕೆಎಸ್‌ಆರ್‌ಟಿಸಿ ಲೇಔಟ್‌ನ ಹಲವು ಮನೆಗಳಿಗೆ ಕಲುಷಿತ ನೀರು ಹರಿದು ಬರುತ್ತಿರುವ ಕುರಿತು ಸ್ಥಳೀಯರು ಜಲಮಂಡಳಿಗೆ ದೂರು ನೀಡಿದ್ದರು. ಆದರೆ ಕ್ರಮ ಆಗಿರಲಿಲ್ಲ.

ಲಿಂಗರಾಜಪುರದಲ್ಲಿ ನೀರು ಪೂರೈಕೆಯ ಪೈಪ್ ಬದಲಾವಣೆಯಲ್ಲಿ ನಿರತರಾಗಿದ್ದ ಜಲಮಂಡಳಿ ಸಿಬ್ಬಂದಿ

ಸಮಸ್ಯೆ ತೀವ್ರಗೊಳ್ಳುತಿದ್ದಂತೆ ಎಚ್ಚೆತ್ತ ಜಲಮಂಡಳಿ ಸಮಸ್ಯೆ ಮೂಲ ಪತ್ತೆ ಮಾಡುವ ಜತೆಗೆ ನೀರು ಪೂರೈಕೆಗೆ ಪರ್ಯಾಯ ವ್ಯವಸ್ಥೆ ಕೈಗೊಂಡಿತ್ತು.

‘ಈ ಭಾಗದಲ್ಲಿ ಆಗಾಗ ಕಲುಷಿತ ನೀರು ಸರಬರಾಜು ಆಗುತ್ತಲೇ ಇರುತ್ತದೆ. ದೂರು ನೀಡಿದಾಗ ಜಲಮಂಡಳಿ ಸಿಬ್ಬಂದಿ ಸರಿಪಡಿಸಿದರೂ ಶಾಶ್ವತ ಪರಿಹಾರ ಕಂಡುಕೊಳ್ಳುತ್ತಿಲ್ಲ. ಇದರಿಂದ ಈಗ ಮತ್ತೆ ಸಮಸ್ಯೆ ಉಲ್ಬಣಿಸಿದೆ. ಕಾವೇರಿ ನೀರಿಗೆ ಚರಂಡಿ ನೀರು ಸೇರಿಕೊಂಡು ಮನೆ ಸೇರುತ್ತಿದೆ. ಕೆಲವರು ಅಸ್ವಸ್ಥಗೊಂಡು ಚಿಕಿತ್ಸೆ ಪಡೆದಿದ್ದಾರೆ’ ಎಂದು ಸ್ಥಳೀಯ ನಿವಾಸಿಗಳು ಹೇಳಿದರು.

‘ಹಳೆಯ ಪೈಪ್‌ಲೈನ್ ಅನ್ನು ಬದಲಾಯಿಸಲು ತೀರ್ಮಾನಿಸಲಾಗಿದೆ. ಪೈಪ್ ಬದಲಾವಣೆ ಕಾರ್ಯ ಮುಗಿದ ತಕ್ಷಣ ಶುದ್ಧ ನೀರು ಸರಬರಾಜು ಪುನರಾರಂಭವಾಗಲಿದೆ’ ಎಂದು ಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

8ಕ್ಕೆ ಕಪ್ಪುಪಟ್ಟಿ ಧರಿಸಿ ಶಿಕ್ಷಕರ ಪಾಠ

ಬೆಂಗಳೂರು: ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಗೊಳಿಸಿ, ಹಳೇ ಪಿಂಚಣಿ ಯೋಜನೆ (ಒಪಿಎಸ್) ಮರು ಜಾರಿಗೊಳಿಸು ವುದೂ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರಾಥಮಿಕ ಶಾಲಾ ಶಿಕ್ಷಕರು ಜ.8ರಂದು ಕಪ್ಪು ಪಟ್ಟಿ ಧರಿಸಿ ಪಾಠ ಮಾಡಲಿದ್ದಾರೆ.

ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ಸೇವಾನಿರತರಿಗೂ ಕಡ್ಡಾಯಗೊಳಿಸಿರುವ ಸುಪ್ರೀಂ ಕೋರ್ಟ್ ಆದೇಶ ಶಿಕ್ಷಕರಿಗೆ ನೋವು ತಂದಿದೆ. ಹೀಗಾಗಿ ಕಾನೂನಿಗೆ ಸೂಕ್ತ ತಿದ್ದುಪಡಿ ತರಬೇಕು. ಟಿಇಟಿ ಕಡ್ಡಾಯ ಮಾಡಬಾರದು. ಗುತ್ತಿಗೆ ಆಧಾರದ ನೇಮಕಾತಿ ಕೈಬಿಟ್ಟು ಕಾಯಂ ನೇಮಕಕ್ಕೆ ಆದ್ಯತೆ ನೀಡಬೇಕು. ಕೇಂದ್ರದ ವೇತನವನ್ನು ರಾಜ್ಯದ ಶಿಕ್ಷಕರಿಗೂ ಅನ್ವಯಿಸಬೇಕು ಎಂಬ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಒಂದು ದಿನದ ಸಾಂಕೇತಿಕ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ. ಅಖಿಲ ಭಾರತ ಶಿಕ್ಷಕರ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಕರೆಯ ಮೇರೆಗೆ ಪ್ರಾಥಮಿಕ ಶಾಲೆ ಶಿಕ್ಷಕರು ಕಪ್ಪು ಪಟ್ಟಿ ಧರಿಸಿ ಶಾಲೆಗೆ ಹಾಜರಾಗಲಿದ್ದಾರೆ ಎಂದು ಕರ್ನಾಟಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ ತಿಳಿಸಿದ್ದಾರೆ.

ಉದ್ದಿಮೆ ಪರವಾನಗಿ ಐಡಿ ಬೇಕು: ಕಂದಾಯ ವಿಭಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆ ಸಂಗ್ರಹ ಸೇರಿದಂತೆ ಕಂದಾಯ ವಿಭಾಗದಲ್ಲಿರುವ ಕೆಲಸಗಳು ಸಕಾಲದಲ್ಲಿ ಆಗುತ್ತಿಲ್ಲದಿದ್ದರೂ, ಉದ್ದಿಮೆ ಪರವಾನಗಿಯನ್ನೂ ಕಂದಾಯ ವಿಭಾಗಕ್ಕೆ ವಹಿಸಬೇಕು ಎಂಬ ಪೂರ್ವ ನಗರ ಪಾಲಿಕೆ ಆಯುಕ್ತರ ಆದೇಶಕ್ಕೆ ಪ್ರತಿರೋಧ ವ್ಯಕ್ತವಾಗಿದೆ.

‘ಆರೋಗ್ಯ ಇಲಾಖೆಯ ಉದ್ದಿಮೆ ಪರವಾನಗಿಯ ಲಾಗಿನ್ ಐಡಿಯನ್ನು ಕಂದಾಯ ವಿಭಾಗದ ಸಿಬ್ಬಂದಿಗೆ ನೀಡಬೇಕು’ ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅವರು ಜಿಬಿಎ ಆರೋಗ್ಯ ವಿಭಾಗದ ವಿಶೇಷ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಐದು ನಗರ ಪಾಲಿಕೆ ವ್ಯಾಪ್ತಿಯ ಆಯುಕ್ತರಡಿಯ ಕಂದಾಯ ವಿಭಾಗದ ಹೆಚ್ಚುವರಿ ಆಯುಕ್ತರಿಗೆ ಆರೋಗ್ಯ ವಿಭಾಗದ ಸಾರ್ವಜನಿಕ ಆರೋಗ್ಯ ವಿಭಾಗ ಮತ್ತು ಉದ್ದಿಮೆ ಪರವಾನಗಿ ವಿತರಿಸುವ ಅಧಿಕಾರವನ್ನು ಪತ್ಯಾಯೋಜಿಸಲಾಗಿದೆ. ಅದರಂತೆ, ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಉದ್ದಿಮೆ ಪರವಾನಗಿ ಕೋರಿ ಲಾಗಿನ್‌ನಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಣಾಮಕಾರಿಯಾಗಿ ವಿತರಿಸಲು ಕಂದಾಯ ವಿಭಾಗದ ಹೆಚ್ಚುವರಿ ಆಯುಕ್ತರಿಗೆ ಲಾಗಿನ್ ಸೃಜಿಸಬೇಕು ಎಂದು ಕೋರಿದ್ದಾರೆ.

‘ಜಿಬಿಎ ಕಾಯ್ದೆಯಂತೆ ಕೆಲವು ಉದ್ದಿಮೆ ಪರವಾನಗಿಗಳನ್ನು ಮಾತ್ರ ಆರೋಗ್ಯ ವಿಭಾಗದಿಂದ ನೀಡಬಹುದಾಗಿದೆ. ಆದರೆ, ಎಲ್ಲ ರೀತಿಯ ಉದ್ದಿಮೆ ಪರವಾನಗಿಯನ್ನು ನೀಡಲು ಅವಕಾಶವಿಲ್ಲ’ ಎಂದು ಜಿಬಿಎ ಆರೋಗ್ಯ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದರು.

ಜಿಬಿಎ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ರಾಮಚಂದ್ರನ್ ಅವರ ಪ್ರತಿಕ್ರಿಯೆಗೆ ಸಂಪರ್ಕಿಸಿದಾಗ ಅವರು ಸ್ಪಂದಿಸಲಿಲ್ಲ.

ಕರ್ನಾಟಕ ಸರ್ಕಾರ
ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಉದ್ಘಾಟನಾ ಸಮಾರಂಭ
ಉದ್ಘಾಟನೆ: ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಜೆ.ಪಿ. ನಡ್ಡಾ
ಸನ್ಮಾನ್ಯ ಕೇಂದ್ರ ಸಚಿವರು

ಶ್ರೀ ಡಿ ಕೆ ಶಿವಕುಮಾರ
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು

ಘನ ಉಪಸ್ಥಿತಿ
ಶ್ರೀ ಜೆ.ಪಿ. ನಡ್ಡಾ
ಸನ್ಮಾನ್ಯ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು
ಶ್ರೀ ಪ್ರಹ್ಲಾದ ಜ್ಯೋಷಿ
ಸನ್ಮಾನ್ಯ ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಖಾತೆ ಸಚಿವರು
ಶ್ರೀ ಡಿ.ಕೆ. ಶಿವಕುಮಾರ
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಅಧ್ಯಕ್ಷತೆ
ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ
ಸನ್ಮಾನ್ಯ ಉಪ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ ಹಾಗೂ ಶಾಸಕರು ಹಾವೇರಿ ಕ್ಷೇತ್ರ

ಸನ್ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ, ಮತ್ತು ಕೃಷಿ ಮಾರುಕಟ್ಟೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಶಿವಾನಂದ ಎಸ್ ಪಾಟೀಲ ಮತ್ತು ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಶ್ರೀ ಡಾ. ಶರಣ ಪ್ರಕಾಶ ರುದ್ರಪ್ಪ ಪಾಟೀಲ, ಸನ್ಮಾನ್ಯ ಉಪ ಸಭಾಧ್ಯಕ್ಷ ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ ಅವರು ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರಗತಿ ಪರಿಶೀಲಿಸುತ್ತಿರುವುದು.

ಮುಖ್ಯ ಅತಿಥಿಗಳು
ಶ್ರೀ ಶಿವಾನಂದ ಎಸ್ ಪಾಟೀಲ
ಸನ್ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರು
ಶ್ರೀ ಡಾ. ಶರಣ ಪ್ರಕಾಶ ಪಾಟೀಲ
ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು
ಶ್ರೀ ದಿನೇಶ್ ಗುಂಡೂರಾವ್
ಸನ್ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು
ಶ್ರೀ ಬಸವರಾಜ ಎಸ್. ಹೊರಟ್ಟಿ
ಸನ್ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು
ಶ್ರೀ ಬಸವರಾಜ ಬೊಮ್ಮಾಯಿ
ಸನ್ಮಾನ್ಯ ಲೋಕಸಭಾ ಸದಸ್ಯರು ಮತ್ತು ಮಾಜಿ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ

ಸ್ಥಳ: ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ದೇವಗಿರಿ-ಯಲ್ಲಾಪುರ, ಹಾವೇರಿ. ದಿನಾಂಕ: 07.01.2026, ಬುಧವಾರ, ಬೆಳಿಗ್ಗೆ 11:00 ಗಂಟೆ

ಚಿಟಿಕೆ ಸುದ್ದಿ

ಮೊಬೈಲ್ ಆಧಾರಿತ ಹಾಜರಿ

ಬೆಂಗಳೂರು: ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗೆ ಮೊಬೈಲ್ ಆಧಾರಿತ ಹಾಜರಾತಿ ಕಡ್ಡಾಯಗೊಳಿಸಿ ಆದೇಶ ಹೊರಡಿಸಲಾಗಿದೆ.

ಈಗಾಗಲೇ ಚಾಲ್ತಿಯಲ್ಲಿದ್ದ ಬಯೊಮೆಟ್ರಿಕ್ ಹಾಜರಾತಿಯನ್ನು ರದ್ದುಗೊಳಿಸಿ, ಮೊಬೈಲ್ ಆಧಾರಿತ ಹಾಜರಾತಿಯನ್ನು (ಕರ್ನಾಟಕ ಹಾಜರಾತಿ ನಿರ್ವಹಣಾ ವ್ಯವಸ್ಥೆ) ಜಾರಿಗೊಳಿಸಿದೆ. ಇದರ ಮೂಲಕವೇ ಎಲ್ಲ ಅಧಿಕಾರಿ, ನೌಕರರು ಕಡ್ಡಾಯವಾಗಿ ಹಾಜರಾತಿ ನೀಡಬೇಕು ಎಂದು ಸೂಚಿಸಿದೆ.

ಟೆಕಿ ಸಾವು: ಎಫ್‌ಎಸ್‌ಎಲ್ ತಜ್ಞರಿಂದ ಪರಿಶೀಲನೆ

ಬೆಂಗಳೂರು: ಬೆಂಕಿ ಅವಘಡದಲ್ಲಿ ಉಸಿರುಗಟ್ಟಿ ಟೆಕಿ ಶರ್ಮಿಳಾ (34) ಮೃತಪಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಮಮೂರ್ತಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಸುಬ್ರಹ್ಮಣ್ಯ ಲೇಔಟ್‌ನ ವಸತಿ ಸಮುಚ್ಚಯದ ಫ್ಲ್ಯಾಟ್‌ಗೆ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು (ಎಫ್‌ಎಸ್‌ಎಲ್) ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.

ಶರ್ಮಿಳಾ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಶರ್ಮಿಳಾ ಅವರು ನಗರದ ಸಾಫ್ಟ್‌ವೇರ್ ಕಂಪನಿಯಲ್ಲಿ ಟೆಕಿಯಾಗಿ ಕೆಲಸ ಮಾಡುತ್ತಿದ್ದರು. ಸ್ನೇಹಿತೆಯ ಜತೆಗೆ ಫ್ಲ್ಯಾಟ್‌ನಲ್ಲಿ ತಂಗಿದ್ದರು. ಸ್ನೇಹಿತ ಊರಿಗೆ ತೆರಳಿದ್ದ ವೇಳೆ ಶನಿವಾರ ಘಟನೆ ನಡೆದಿತ್ತು ಎಂದು ಪೊಲೀಸರು ಹೇಳಿದರು.

‘ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಬೆಂಕಿ ಅವಘಡ ಸಂಭವಿಸಿದೆಯೇ ಅಥವಾ ವಿದ್ಯುತ್ ಶಾರ್ಟ್‌ಸರ್ಕಿಟ್ ಕಾರಣವೇ ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ರಾಮಮೂರ್ತಿನಗರ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

ವಸತಿ ಕಟ್ಟಡ: ಸೆಟ್ ಬ್ಯಾಕ್‌ನಲ್ಲಿ ಕಡಿತ

ಅಂತಿಮ ಅಧಿಸೂಚನೆ ಪ್ರಕಟ: 60 x 40 ಅಡಿ ನಿವೇಶನಕ್ಕೆ ಭಾರಿ ಕಡಿತ; ಹೆಚ್ಚು ಮನೆ ಕಟ್ಟಲೂ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 2,690 ಚದರಡಿ ವಿಸ್ತೀರ್ಣದ ನಿವೇಶನಗಳಲ್ಲಿನ ವಸತಿ ಕಟ್ಟಡಗಳ ಸೆಟ್‌ಬ್ಯಾಕ್‌ನಲ್ಲಿ ಭಾರಿ ಕಡಿತ ಮಾಡಿ ನಗರಾಭಿವೃದ್ಧಿ ಇಲಾಖೆ ಅಂತಿಮ ಅಧಿಸೂಚನೆ ಹೊರಡಿಸಿದೆ.

2025ರ ನವೆಂಬರ್ 11ರಂದು ಕರಡು ಅಧಿಸೂಚನೆ ಹೊರಡಿಸಿ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿತ್ತು. ಸಾರ್ವಜನಿಕರಿಂದ ಬಂದ ಸಲಹೆಗಳನ್ನು ಸ್ವೀಕರಿಸಿ ನಂತರ ಸೋಮವಾರ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

ನಿವೇಶನದ ಉದ್ದ–ಅಗಲಕ್ಕೆ ಅನುಗುಣವಾಗಿ ಸೆಟ್‌ಬ್ಯಾಕ್ ನಿರ್ಧರಿಸುವುದನ್ನು ಕೈಬಿಟ್ಟು, ಒಟ್ಟಾರೆ ಚದರ ಮೀಟರ್‌ಗೆ ಅನುಗುಣವಾಗಿ ಸೆಟ್‌ಬ್ಯಾಕ್ ಅನ್ನು ನಿಗದಿಪಡಿಸಲಾಗಿದೆ. ಇದರಿಂದ, 60 ಚದರ ಮೀಟರ್‌ವರೆಗಿನ (600 ಚದರಡಿ) ನಿವೇಶನದ ಕಟ್ಟಡ ಹಿಂಭಾಗ ಸೆಟ್‌ಬ್ಯಾಕ್ ಬಿಡುವ ಅಗತ್ಯವಿಲ್ಲ. ಮುಂಭಾಗದಲ್ಲಿ 0.75 ಮೀ (ಎರಡೂವರೆ ಅಡಿ), ಎಡ ಅಥವಾ ಬಲ ಭಾಗದಲ್ಲಿ 0.6 ಮೀ (ಎರಡು ಅಡಿ) ಜಾಗ ಬಿಡಬೇಕು.

1,500 ಚದರಡಿ ನಿವೇಶನದವರೆಗಿನ ಕಟ್ಟಡಗಳಿಗೆ ಹೊಸ ಸೆಟ್‌ಬ್ಯಾಕ್‌ನಲ್ಲಿ ಕಡಿಮೆ ಜಾಗವನ್ನು ನಿಗದಿಪಡಿಸಲಾಗಿದೆ. ಈ ಸೆಟ್‌ಬ್ಯಾಕ್ ಈಗಾಗಲೇ ನಿರ್ಮಾಣವಾಗಿರುವ ಕಟ್ಟಡಗಳಿಗೂ ಅನ್ವಯಿಸುತ್ತದೆ. ಇದರ ಜೊತೆಗೆ 250 ಚದರ ಮೀಟರ್ (ಸುಮಾರು 60 x 40 ಅಡಿ) ನಿವೇಶನದಲ್ಲಿ ನಿರ್ಮಿಸುವ ಕಟ್ಟಡಕ್ಕೂ ಸೆಟ್‌ಬ್ಯಾಕ್‌ನಲ್ಲಿ ಭಾರಿ ರಿಯಾಯಿತಿ ನೀಡಲಾಗಿದೆ. ಹೊಸ ಸೆಟ್‌ಬ್ಯಾಕ್‌ನಂತೆ, ಸ್ಟಿಲ್ಟ್ ಸೇರಿದಂತೆ ನಾಲ್ಕು ಅಂತಸ್ತು ವಸತಿ ಕಟ್ಟಡಗಳನ್ನು 12 ಮೀಟರ್ ಎತ್ತರ ಮೀರದಂತೆ ನಿರ್ಮಿಸಬಹುದಾಗಿದೆ.

ಹಿಂದಿನ ನಿಯಮಗಳ ಪ್ರಕಾರ, 20 x 30 ಅಡಿ ನಿವೇಶನಗಳಲ್ಲಿ ಕಟ್ಟಡದ ಸುತ್ತಲೂ ಒಂದು ಮೀಟರ್ (3 ಅಡಿ 4 ಇಂಚು) ಜಾಗ ಬಿಡಬೇಕು. 30 x 40 ಅಡಿ ನಿವೇಶನಗಳಲ್ಲಿ ಸುತ್ತಲೂ 1.50 ಮೀಟರ್ (5 ಅಡಿ) ಸೆಟ್‌ಬ್ಯಾಕ್ ಇತ್ತು.

ಹೊಸ ನಿಯಮದ ಪ್ರಕಾರ, 30 ಅಡಿ ರಸ್ತೆ ಹೊಂದಿರುವ 250 ಚದರಡಿ ನಿವೇಶನದಲ್ಲಿ ಅಭಿವೃದ್ಧಿ ವರ್ಗಾವಣೆ ಹಕ್ಕು (ಟಿಡಿಆರ್) ಹಾಗೂ ಪ್ರೀಮಿಯಂ ಎಫ್‌ಎಆರ್ ಅನ್ನೂ ಬಳಸಿಕೊಳ್ಳಬಹುದಾಗಿದೆ.

60 x 40 ಅಡಿಯಲ್ಲಿ 6 ಮನೆ: 200 ಚದರ ಮೀಟರ್‌ನಿಂದ 360 ಚದರ ಮೀಟರ್‌ವರೆಗಿನ ನಿವೇಶನದಲ್ಲಿ ಗರಿಷ್ಠ ಆರು ಮನೆಗಳನ್ನು ನಿರ್ಮಿಸಲು ಹೊಸ ನಿಯಮಗಳಲ್ಲಿ ಅವಕಾಶ ಮಾಡಿಕೊಡಲಾಗಿದೆ. ಈ ಹಿಂದೆ 60 x 40 ಅಡಿ ನಿವೇಶನದಲ್ಲಿ ನಾಲ್ಕು ಮನೆಗಳನ್ನು ಮಾತ್ರ ನಿರ್ಮಿಸಬಹುದಾಗಿತ್ತು. ಇನ್ನು, ಹೊಸ ನಿಯಮದಂತೆ 360 ಚದರ ಮೀಟರ್‌ನಿಂದ 750 ಮೀಟರ್‌ವರೆಗಿನ ನಿವೇಶನದಲ್ಲಿ ಎಂಟು ಮನೆಗಳನ್ನು ನಿರ್ಮಿಸಬಹುದಾಗಿದೆ. ಈ ಎಲ್ಲ ನಿವೇಶನಗಳು ಕನಿಷ್ಠ 9 ಮೀಟರ್ (30 ಅಡಿ) ರಸ್ತೆಯನ್ನು ಹೊಂದಿರಬೇಕು.

ರ್‍ಯಾಂಪ್‌ಗೆ ವಿನಾಯಿತಿ: ಅಪಾರ್ಟ್‌ಮೆಂಟ್ ಸೇರಿದಂತೆ ವಾಣಿಜ್ಯ ಸಂಕೀರ್ಣಗಳಲ್ಲಿ ಸೆಟ್‌ಬ್ಯಾಕ್ ಜಾಗವನ್ನು ಹೊರತುಪಡಿಸಿ ರ್‍ಯಾಂಪ್ ನಿರ್ಮಾಣ ಮಾಡಬೇಕಾದ ನಿಯಮವನ್ನು ಕೈಬಿಡಲಾಗಿದೆ. ಸೆಟ್‌ಬ್ಯಾಕ್ ಪ್ರದೇಶವನ್ನು ವಾಹನಗಳ ರ್‍ಯಾಂಪ್ ನಿರ್ಮಾಣಕ್ಕೆ ಬಳಸಿಕೊಳ್ಳಬಹುದು. ಈ ಜಾಗದಿಂದ ಕಾರುಗಳನ್ನು ಕೆಳ ಅಥವಾ ಮೇಲಿನ ಅಂತಸ್ತುಗಳಿಗೆ ಲಿಫ್ಟ್ ಮಾಡುವ ಅವಕಾಶವನ್ನೂ ನೀಡಲಾಗಿದೆ. 25 ಕಾರುಗಳ ನಿಲುಗಡೆಯಿಂದ 800 ಕಾರುಗಳ ನಿಲುಗಡೆವರೆಗಿನ ಪ್ರದೇಶಕ್ಕೆ ರ್‍ಯಾಂಪ್ ಅಗಲ ಮತ್ತು ಸಂಖ್ಯೆಗಳನ್ನು ನಿಗದಿ ಮಾಡಲಾಗಿದೆ.

ಕೈಗಾರಿಕೆಗಳಿಗೆ ವಿನಾಯಿತಿ

500 ಚದರ ಮೀಟರ್‌ವರೆಗಿನ ನಿವೇಶನದಲ್ಲಿ ನಿರ್ಮಿಸುವ ಕೈಗಾರಿಕೆ ಕಟ್ಟಡಗಳಿಗೂ ಸೆಟ್‌ಬ್ಯಾಕ್‌ನಲ್ಲಿ ಭಾರಿ ರಿಯಾಯಿತಿ ನೀಡಲಾಗಿದೆ. ಸುತ್ತಲೂ 4.5 ಮೀಟರ್ ಬಿಡಬೇಕೆಂಬ ನಿಯಮವನ್ನು ಬದಲಾಯಿಸಿ, ನಿವೇಶನದ ಉದ್ದಕ್ಕೆ ಅನುಗುಣವಾಗಿ ಮುಂಭಾಗ 10 ಮತ್ತು 12 ಹಾಗೂ ಹಿಂಭಾಗ, ಅಕ್ಕ–ಪಕ್ಕ ತಲಾ 8 ಅಥವಾ 6 ಮೀ ಸೆಟ್‌ಬ್ಯಾಕ್ ನಿಗದಿ ಮಾಡಲಾಗಿದೆ.

ನಿವೇಶನದ ವಿಸ್ತೀರ್ಣ	ಸೆಟ್‌ಬ್ಯಾಕ್: ಮುಂದೆ	ಸೆಟ್‌ಬ್ಯಾಕ್: ಹಿಂದೆ ಮತ್ತು ಅಕ್ಕಪಕ್ಕ
500 ಚದರ ಮೀಟರ್‌ನಿಂದ 1,000 ಚದರ ಮೀಟರ್	4.50 ಮೀ	4.50 ಮೀ
1,000 ಚದರ ಮೀಟರ್‌ನಿಂದ 3,000 ಚದರ ಮೀಟರ್	6 ಮೀ	6 ಮೀ
3,000 ಚದರ ಮೀಟರ್‌ಗಿಂತ ಹೆಚ್ಚು	10 ಮೀ	8 ಮೀ

ಯಾವ ನಿವೇಶನಕ್ಕೆ ಎಷ್ಟು ಸೆಟ್‌ಬ್ಯಾಕ್?

ನಿವೇಶನದ ವಿಸ್ತೀರ್ಣ	ಸೆಟ್‌ಬ್ಯಾಕ್			
	ಮುಂದೆ	ಹಿಂದೆ	ಎಡ	ಬಲ
60 ಚದರ ಮೀಟರ್‌ವರೆಗೆ	0.75 ಮೀ	0	0.6 ಮೀ ಯಾವುದಾದರೂ ಒಂದು ಬದಿ	
60 ಚದರ ಮೀಟರ್‌ನಿಂದ 150 ಚದರ ಮೀಟರ್‌ವರೆಗೆ	0.90 ಮೀ	0.70 ಮೀ	0.7 ಮೀ ಯಾವುದಾದರೂ ಒಂದು ಬದಿ	
150 ಚದರ ಮೀಟರ್‌ನಿಂದ 250 ಚದರ ಮೀಟರ್	1 ಮೀ	0.80 ಮೀ	0.8 ಮೀ	0.8 ಮೀ
250 ಚದರ ಮೀಟರ್‌ನಿಂದ 4,000 ಚದರ ಮೀಟರ್	ನಿವೇಶನ ಉದ್ದದ 12%	ನಿವೇಶನ ಉದ್ದದ 8%	ನಿವೇಶನ ಉದ್ದದ 8%	ನಿವೇಶನ ಉದ್ದದ 8%

ಸುದ್ದಿ 2 ನಿಮಿಷ

‘ಕಸಾಪ ಸಿಬ್ಬಂದಿಗೆ ಸಂಬಳ ನೀಡಿ’

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಸಿಬ್ಬಂದಿಗೆ ಮೂರು ತಿಂಗಳಿಂದ ಸಂಬಳ ನೀಡದಿರುವುದು ಸರಿಯಲ್ಲ. ಕೂಡಲೇ ಅವರಿಗೆ ವೇತನ ಬಿಡುಗಡೆ ಮಾಡಬೇಕು’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಒತ್ತಾಯಿಸಿದ್ದಾರೆ.

‘ಕಸಾಪ ಆಡಳಿತಾಧಿಕಾರಿ ಆಗಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಈ ಬಗ್ಗೆ ಪರಿಶೀಲಿಸಿ, ಮೂರು ತಿಂಗಳ ಸಂಬಳವನ್ನು ಪಾವತಿಸಬೇಕು. ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ವಹಿಸಬೇಕು’ ಎಂದು ತಿಳಿಸಿದ್ದಾರೆ.

‘46 ಸಿಬ್ಬಂದಿಗೆ ಮೂರು ತಿಂಗಳಿಂದ ಸಂಬಳ ನೀಡದಿರುವುದು ಖಂಡನೀಯ’ ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಹೇಳಿದ್ದಾರೆ.

‘ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಮೇಲಿನ ಆರೋಪಗಳ ತನಿಖೆಯ ನೆಪವೊಡ್ಡಿ ಸಿಬ್ಬಂದಿಗೆ ಸಂಬಳ ನೀಡದಿರುವುದು ಸರಿಯಲ್ಲ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಅವರು ಮಧ್ಯಪ್ರವೇಶಿಸಿ ವೇತನ ಬಿಡುಗಡೆಗೆ ಕ್ರಮಕೈಗೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

ಮಹಿಳಾ ಶೌಚಾಲಯದಲ್ಲಿ ಮೊಬೈಲ್ ಇಟ್ಟು ಚಿತ್ರೀಕರಣ

ಬೆಂಗಳೂರು: ಚಿತ್ರಮಂದಿರವೊಂದರ ಮಹಿಳಾ ಶೌಚಾಲಯದಲ್ಲಿ ಮೊಬೈಲ್ ಅನ್ನು ರಹಸ್ಯವಾಗಿ ಇಟ್ಟು ಚಿತ್ರೀಕರಣ ಮಾಡುತ್ತಿದ್ದ ನೇಪಾಳದ ಬಾಲಕನನ್ನು ಮಡಿವಾಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಡಿವಾಳದ ಬಿ.ಪಿ ರಸ್ತೆಯಲ್ಲಿರುವ ಚಿತ್ರಮಂದಿರದಲ್ಲಿ ವ್ಯಕ್ತಿಯೊಬ್ಬರು ಹೌಸ್‌ಕೀಪಿಂಗ್ ಕೆಲಸ ಮಾಡುತ್ತಿದ್ದರು. ಅವರ ಅಣ್ಣನ ಮಗ (14 ವರ್ಷ) ಇತ್ತೀಚೆಗೆ ಮನೆಗೆ ಬಂದಿದ್ದ. ಹೌಸ್‌ಕೀಪಿಂಗ್ ಕೆಲಸಕ್ಕೆ ಹೋಗುವಾಗ ಬಾಲಕನನ್ನು ಜತೆಯಲ್ಲಿ ಕರೆದುಕೊಂಡು ಹೋಗಿದ್ದರು. ಆಗ ಬಾಲಕ ಮೊಬೈಲ್ ತೆಗೆದುಕೊಂಡು ಹೋಗಿ ಕ್ಯಾಮೆರಾ ಆನ್ ಮಾಡಿ ಶೌಚಾಲಯದಲ್ಲಿ ಇಟ್ಟಿದ್ದ. ಸಿನಿಮಾ ವೀಕ್ಷಣೆಗೆಂದು ಬಂದಿದ್ದ ಮಹಿಳೆಯೊಬ್ಬರು ಮಧ್ಯಂತರದ ಅವಧಿಯಲ್ಲಿ ಶೌಚಾಲಯಕ್ಕೆ ತೆರಳಿದ್ದರು. ಮೊಬೈಲ್ ಇಟ್ಟು ರಹಸ್ಯವಾಗಿ ಚಿತ್ರೀಕರಣ ಮಾಡುತ್ತಿರುವುದು ಗಮನಿಸಿದ್ದರು. ತಕ್ಷಣವೇ ಚಿತ್ರಮಂದಿರದ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು, ಬಾಲಕನನ್ನು ವಶಕ್ಕೆ ಪಡೆದುಕೊಂಡು ಬಂಧಿಸಿದರು ಎಂದು ಮೂಲಗಳು ಹೇಳಿವೆ.

ಅಪಘಾತ: ಇಬ್ಬರು ಸ್ಥಳದಲ್ಲೇ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದನಾಯಕ-ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮಾಚೋಹಳ್ಳಿ ಬಳಿ ಬಲೆರೊ ಪಿಕ್‌ಅಪ್ ವಾಹನ ಹಾಗೂ ಕಾರಿನ ನಡುವೆ ಭಾನುವಾರ ತಡರಾತ್ರಿ ಸಂಭವಿಸಿದ ಅಪಘಾತದಲ್ಲಿ ಕಾರಿನಲ್ಲಿದ್ದ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹಾಸನ ಜಿಲ್ಲೆ, ಚನ್ನರಾಯಪಟ್ಟಣದ ಗಗನ್ (27) ಹಾಗೂ ಅವರ ಸ್ನೇಹಿತ, ಹೊಳೆನರಸೀಪುರದ ನಿವಾಸಿ ದರ್ಶನ್ (26) ಮೃತಪಟ್ಟವರು. ಕಾರಿನಲ್ಲಿದ್ದ ಮತ್ತೊಬ್ಬ ಸ್ನೇಹಿತ ಸಿದ್ದೇಶ್ ಅವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಮೂವರು ಎಲೆಕ್ಟ್ರಾನಿಕ್‌ಸಿಟಿ



ಅಪಘಾತದಿಂದ ನಜ್ಜುಗುಜ್ಜಾದ ಕಾರು

ಬಳಿಯಿರುವ ಸ್ನೇಹಿತನ ಮನೆಗೆ ತೆರಳುತ್ತಿದ್ದಾಗ ಭಾನುವಾರ ತಡರಾತ್ರಿ ಈ ದುರ್ಘಟನೆ ನಡೆದಿದೆ. ಮಾದನಾಯಕನ-ಹಳ್ಳಿಯ ಬಾರ್‌ನಲ್ಲಿ ಗಗನ್ ಅವರು ಕೆಲಸ ಮಾಡುತ್ತಿದ್ದರು. ಕೋಳಿ ಸಾಗಣೆ ವಾಹನದ ಚಾಲಕರಾಗಿ ದರ್ಶನ್ ಅವರು ಕೆಲಸ ಮಾಡುತ್ತಿದ್ದರು.

ಗಗನ್ ಅವರು ಕಾರು ಚಾಲನೆ ಮಾಡುತ್ತಿದ್ದರು. ರಸ್ತೆಬದಿಯಲ್ಲಿ ನಿಂತಿದ್ದ ಬಲೆರೊ ವಾಹನಕ್ಕೆ ಹಿಂದಿನಿಂದ ಕಾರು ಡಿಕ್ಕಿಯಾಗಿದೆ. ಪಕ್ಕದ ಸೀಟಿನಲ್ಲಿ ದರ್ಶನ್ ಅವರು ಕುಳಿತಿದ್ದರು. ಕಾರಿನ ಹಿಂದಿನ ಸೀಟಿನಲ್ಲಿ ಸಿದ್ದೇಶ್ ಕುಳಿತಿದ್ದರು. ಗಗನ್ ಹಾಗೂ ದರ್ಶನ್ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಕಾರು ಚಾಲಕನ ಅಜಾಗರೂಕತೆ ಹಾಗೂ ಅತಿ ವೇಗವೇ ಅಪಘಾತಕ್ಕೆ ಕಾರಣ. ಅಪಘಾತದ ತೀವ್ರತೆಗೆ ಕಾರು ನಜ್ಜುಗುಜ್ಜಾಗಿದೆ ಎಂದು ಪೊಲೀಸರು ಹೇಳಿದರು. ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹಗಳನ್ನು ಕುಟುಂಬದವರಿಗೆ ಹಸ್ತಾಂತರ ಮಾಡಲಾಗಿದೆ. ಮಾದನಾಯಕನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

9ನೇ ತರಗತಿ ಮಕ್ಕಳಿಗೆ ಗಣಿತ ಕಾರ್ಯಾಗಾರ

ಬೆಂಗಳೂರು: ಪ್ರಯೋಗ ಶೈಕ್ಷಣಿಕ ಸಂಶೋಧನಾ ಸಂಸ್ಥೆಯು ಧಾತು ಯೋಜನೆ ಅಡಿ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಒಂಬತ್ತನೇ ತರಗತಿ ವಿದ್ಯಾರ್ಥಿಗಳಿಗೆ ಗಣಿತ ವಿಷಯದ ಬಗ್ಗೆ ಒಂದು ದಿನದ ತರಬೇತಿ ಕಾರ್ಯಾಗಾರ ಏರ್ಪಡಿಸಿದೆ.

‘ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಜೆಫ್ರಿ ಡಿ. ಉಲ್ಮನ್ ಅವರು ಇದೇ 9ರಂದು ವಿದ್ಯಾರ್ಥಿಗಳಿಗೆ ಉಚಿತವಾಗಿ ಗಣಿತಕ್ಕೆ ಸಂಬಂಧಿಸಿದ ವಿವಿಧ ಚಟುವಟಿಕೆಗಳ ಬಗ್ಗೆ ತಿಳಿಸಿಕೊಡಲಿದ್ದಾರೆ’ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

‘ವಿದ್ಯಾರ್ಥಿಗಳೊಡನೆ ಗಣಿತ ಶಿಕ್ಷಕರು ಮತ್ತು ಆಡಳಿತ ವಿಭಾಗದ ಪ್ರತಿನಿಧಿ ಇರಬೇಕು. ಶಾಲೆಗಳು https://forms.office.com/r/85FcCJ4Xqp?origin=lprLink ಮೂಲಕ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ sip@prayoga.org.in ಸಂಪರ್ಕಿಸಬಹುದು.

ಓಂ ಶಕ್ತಿ ಮಾಲಾಧಾರಿಗಳ ಮೆರವಣಿಗೆ ಸಾಗುವಾಗ ಕೃತ್ಯ

ಕಲ್ಲೆಸೆತ: ಮೂವರು ಬಾಲಕರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿ.ಎಸ್.ಗಾರ್ಡನ್‌ನ ಎರಡನೇ ಮುಖ್ಯರಸ್ತೆಯ 10ನೇ ಅಡ್ಡರಸ್ತೆಯಲ್ಲಿ ಸಾಗುತ್ತಿದ್ದ ಓಂ ಶಕ್ತಿ ಮಾಲಾಧಾರಿಗಳ ಮೆರವಣಿಗೆಯ ಮೇಲೆ ಕಲ್ಲು ಎಸೆದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಬಾಲಕರನ್ನು ಜಗಜೀವನ್‌ರಾಮ್ ನಗರ ಠಾಣೆಯ ಬಂಧಿಸಿದ್ದಾರೆ.

‘ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಪತ್ತೆ ಹಚ್ಚಲಾಯಿತು. ಭಾನುವಾರ ತಡರಾತ್ರಿಯೇ ಮೂವರನ್ನು ವಶಕ್ಕೆ ಪಡೆದು ಬಂಧಿಸಲಾಯಿತು. ಕೃತ್ಯ ಎಸಗಿದ ಮೂವರು ಬಾಲಕರು. ಅವರ ಹಿಂದೆ ಯಾರಿದ್ದಾರೆ ಎಂಬುದುರ ಕುರಿತು ಎಸಿಪಿ ನೇತೃತ್ವದಲ್ಲಿ ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ವಿ.ಎಸ್.ಗಾರ್ಡನ್ ನಿವಾಸಿ ಎನ್. ಶಶಿಕುಮಾರ್ ಅವರು ನೀಡಿದ ದೂರು ಆಧರಿಸಿ ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯಿದೆ 1989 ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 118(1), 196(2), ಆರ್/ಡಬ್ಲ್ಯು 3(5) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಎಫ್‌ಐಆರ್‌ನಲ್ಲಿ ಏನಿದೆ?: ‘ಭಾನುವಾರ ರಾತ್ರಿ 8.15ರಿಂದ 9 ಗಂಟೆಯ ಸುಮಾರಿಗೆ ಪಂಚಮುಖಿ ದೇವಸ್ಥಾನದ ಬಳಿ ಓಂ ಶಕ್ತಿ ಮಾಲಾಧಾರಿಗಳು ಮೆರವಣಿಗೆಯಲ್ಲಿ ಸಾಗುತ್ತಿದ್ದರು. ಮೆರವಣಿಗೆ ಸಾಗುವಾಗ ನಾಲ್ವರು ಮುಸ್ಲಿಂ ಯುವಕರು ಕಲ್ಲು ತೂರಾಟ ಮಾಡಿದ್ದಾರೆ. ಕಲ್ಲು ಬಿದ್ದಿದ್ದರಿಂದ ಯುವತಿಯ ತಲೆಗೆ ಗಾಯವಾಗಿದೆ. ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲು ಮಾಡಲಾಗಿದೆ’ ಎಂದು ಶಶಿಕುಮಾರ್ ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಈ ರೀತಿಯ ಘಟನೆಗಳು ಹಿಂದಿನಿಂದಲೂ ನಡೆಯುತ್ತಿವೆ. ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿದ್ದಾಗ ಮೂರು ಬಾರಿ ಬೆಂಕಿ ಹಾಕಲಾಗಿತ್ತು. ಈ ಪ್ರದೇಶದಲ್ಲಿ ದಲಿತರು ಇರುವ ಕಾರಣಕ್ಕೆ ಅವರ ಮೇಲೆ ದೌರ್ಜನ್ಯ ಎಸಗಲಾಗುತ್ತಿದೆ. ಹಿಂದೂ ಸಮುದಾಯದ ಭಾವನೆಗಳಿಗೆ ಧಕ್ಕೆ ತಂದು ದಲಿತರ ಮೇಲೆ ದೌರ್ಜನ್ಯ ಎಸಗಿದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ದೂರುದಾರರು ಕೋರಿದ್ದರು.

ಸಚಿವ ಜಮೀರ್ ಅಹಮ್ಮದ್ ಖಾನ್ ಅವರು ಠಾಣೆಗೆ ಭೇಟಿ ನೀಡಿ, ಪ್ರಕರಣ ಸಂಬಂಧ ಮಾಹಿತಿ ಪಡೆದುಕೊಂಡರು.

ಪೊಲೀಸ್ ಪಂಥಸಂಚಲನ

ಕೃತ್ಯ ನಡೆದ ಸ್ಥಳ ಹಾಗೂ ಜೆಜೆ ನಗರ ಠಾಣೆಗೆ ಪಶ್ಚಿಮ ಉಪ ವಿಭಾಗದ ಡಿಸಿಪಿ ಯತೀಶ್ ಅವರು ಭೇಟಿ ನೀಡಿ ಪರಿಶೀಲಿಸಿದರು. ಎಸಿಪಿ ಹಾಗೂ ಇನ್‌ಸ್ಪೆಕ್ಟರ್‌ರಿಂದ ಮಾಹಿತಿ ಪಡೆದುಕೊಂಡರು.

ಕೃತ್ಯ ನಡೆದ ಬಳಿಕ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಕೆಎಸ್‌ಆರ್‌ಪಿಯ ಮೂರು ತುಕಡಿಯನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ. ಗಸ್ತು ಹೆಚ್ಚಿಸಲಾಗಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದರು.

ಕೃತ್ಯ ನಡೆದ ರಸ್ತೆ ಹಾಗೂ ದೇವಸ್ಥಾನದ ಸುತ್ತಮುತ್ತ ಸೋಮವಾರ ಸಂಜೆ ಪೊಲೀಸರು ಪಥಸಂಚಲನ ನಡೆಸಿ ಧೈರ್ಯ ತುಂಬಿದರು.

ಕೊಕ್ಕೊ: ಕರ್ನಾಟಕ ಚಾಂಪಿಯನ್

ಬೆಂಗಳೂರು: ಕರ್ನಾಟಕ ಬಾಲಕರ ತಂಡವು ಭಾನುವಾರ ನಗರದ ಗುಂಜೂರಿನಲ್ಲಿ ಮುಕ್ತಾಯಗೊಂಡ 44ನೇ ರಾಷ್ಟ್ರೀಯ ಜೂನಿಯರ್ ಕೊಕ್ಕೊ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ಕರ್ನಾಟಕ ತಂಡವು ಫೈನಲ್‌ನಲ್ಲಿ 35–30ರಿಂದ ಮಹಾರಾಷ್ಟ್ರ ವಿರುದ್ಧ ರೋಚಕ ಜಯ ಸಾಧಿಸಿತು. ಕೊಲ್ಹಾಪುರ ಹಾಗೂ ಮಧ್ಯಭಾರತ ತಂಡಗಳು ಕಂಚು ಜಯಿಸಿದವು. ರಾಜ್ಯ ತಂಡದ ಬಿ.ವಿಜಯ್ ಅವರು ‘ವೀರ ಅಭಿಮನ್ಯು ಪ್ರಶಸ್ತಿ’ಗೆ ಹಾಗೂ ಪ್ರಜ್ವಲ್.ವೈ. ಅವರು ‘ಬೆಸ್ಟ್ ಡಿಫೆಂಡರ್’ ಪ್ರಶಸ್ತಿಗೆ ಭಾಜನರಾದರು.

ಸೆಮಿಫೈನಲ್ ಪಂದ್ಯಗಳಲ್ಲಿ ಮಹಾರಾಷ್ಟ್ರ ತಂಡವು 33–31ರಿಂದ ಕೊಲ್ಹಾಪುರ ತಂಡವನ್ನು ಹಾಗೂ ಕರ್ನಾಟಕ ತಂಡವು 33–20ರಿಂದ ಮಧ್ಯ ಭಾರತ ತಂಡವನ್ನು ಮಣಿಸಿದ್ದವು.

ಟ್ರೋಫಿಯೊಂದಿಗೆ ಕರ್ನಾಟಕ ಬಾಲಕರ ಕೊಕ್ಕೊ ತಂಡ

ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಮಹಾರಾಷ್ಟ್ರ ತಂಡವು 34–33ರಿಂದ ಒಡಿಶಾ ತಂಡವನ್ನು ಮಣಿಸಿತು. ಪಂಜಾಬ್ ಹಾಗೂ ಕೊಲ್ಹಾಪುರ ತಂಡಗಳು ಕಂಚಿನ ಪದಕ ತಮ್ಮದಾಗಿಸಿಕೊಂಡವು. ನಾಲ್ಕರ ಘಟ್ಟದಲ್ಲಿ ಮಹಾರಾಷ್ಟ್ರ ತಂಡವು 28–14ರಿಂದ ಪಂಜಾಬ್ ವಿರುದ್ಧ ಹಾಗೂ ಒಡಿಶಾ 29–27ರಿಂದ ಕೊಲ್ಹಾಪುರ ವಿರುದ್ಧ ಜಯಗಳಿಸಿದ್ದವು.

ಗುಂಜೂರಿನ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ‘ಗುಂಜೂರು ಕೊಕ್ಕೊ ಕ್ಲಬ್’ ಆಯೋಜಿಸಿದ್ದ ಪಂದ್ಯದಲ್ಲಿ ವಿವಿಧ ರಾಜ್ಯಗಳ 33 ತಂಡಗಳು ಭಾಗವಹಿಸಿದ್ದವು.

ಕರ್ನಾಟಕ ತಂಡಕ್ಕೆ ಜಯ

ಬೆಂಗಳೂರು: ಯಾಶಿಕಾ ಕೆ. ಗೌಡ ಅವರ ಅಜೇಯ ಅರ್ಧಶತಕ ಹಾಗೂ ಬೌಲರ್‌ಗಳ ಸಂಘಟಿತ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 15 ವರ್ಷದೊಳಗಿನ ಬಾಲಕಿಯರ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 111 ರನ್ ಗಳಿಂದ ದೆಹಲಿ ತಂಡವನ್ನು ಸುಲಭವಾಗಿ ಮಣಿಸಿತು.

ಕೋಲ್ಕತ್ತದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡ ನಿಗದಿತ ಓವರ್‌ಗಳಲ್ಲಿ (35 ಓವರ್) 5 ವಿಕೆಟ್ ನಷ್ಟಕ್ಕೆ 215 ರನ್ ಗಳಿಸಿತು. ಯಾಶಿಕಾ ಔಟಾಗದೇ 50 ರನ್ ಗಳಿಸಿದರು.

ದೆಹಲಿ ತಂಡವು 6 ವಿಕೆಟ್ ನಷ್ಟಕ್ಕೆ 104 ರನ್ ಗಳಿಸಿ ಹೋರಾಟ ಮುಗಿಸಿತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 35 ಓವರ್‌ಗಳಲ್ಲಿ 5 ವಿಕೆಟ್‌ಗೆ 215 (ಯಾಶಿಕಾ ಔಟಾಗದೇ 50, ಹರ್ಷಿತಾ ಕೆ. ಔಟಾಗದೇ 36; ಸಿದ್ಧಿ 38ಕ್ಕೆ2, ಹಿಮಾಕ್ಷಿ 45ಕ್ಕೆ2). ದೆಹಲಿ: 35 ಓವರ್‌ಗಳಲ್ಲಿ 6 ವಿಕೆಟ್‌ಗೆ 104 (ಖುಷಿ 37, ತಾನ್ವಾರ್ ಔಟಾಗದೇ 20; ಶ್ರೀಕಾ ಚತುರಾ 16ಕ್ಕೆ2).

ಟೆಕಿಯೊಬ್ಬರ ಹೆಲ್ಮೆಟ್‌ನಲ್ಲಿ ಕ್ಯಾಮೆರಾ ಅಳವಡಿಕೆ

ಸಂಚಾರ ನಿಯಮ ಉಲ್ಲಂಘನೆ ದೃಶ್ಯ ರವಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಚಾರ ದಟ್ಟಣೆ ಒಂದೆಡೆಯಾದರೆ, ನಿಯಮ ಉಲ್ಲಂಘನೆ ಮಾಡುವವರು ಮತ್ತೊಂದೆಡೆ. ಇದಕ್ಕೆ ಪರಿಹಾರ ಕಂಡುಕೊಂಡಿರುವ 27 ವರ್ಷದ ಟೆಕಿಯೊಬ್ಬರು ಹೆಲ್ಮೆಟ್‌ನಲ್ಲಿ ಕ್ಯಾಮೆರಾ ಅಳವಡಿಸಿಕೊಂಡು ಸಂಚಾರ ನಿಯಮ ಉಲ್ಲಂಘನೆಯ ದೃಶ್ಯಗಳನ್ನು ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದ ಮೂಲಕ ಪೊಲೀಸರಿಗೆ ರವಾನಿಸುತ್ತಿದ್ದಾರೆ.

ನಗರದ ಸಾಫ್ಟ್‌ವೇರ್ ಎಂಜಿನಿಯರ್ ಪಂಕಜ್ ತನ್ವಾರ್ ಅವರು ಎ.ಐ ಸೌಲಭ್ಯ ಹೊಂದಿರುವ ಕ್ಯಾಮೆರಾವನ್ನು ತಮ್ಮ ಹೆಲ್ಮೆಟ್‌ಗೆ ಅಳವಡಿಸಿದ್ದು, ನಿಯಮ ಉಲ್ಲಂಘನೆಗಳನ್ನು ಸ್ವಯಂಚಾಲಿತವಾಗಿ ಪತ್ತೆ ಹಚ್ಚಿ, ಸಾಕ್ಷ್ಯಗಳೊಂದಿಗೆ ನೇರವಾಗಿ ಸಂಚಾರ ಪೊಲೀಸರಿಗೆ ವರದಿ ಮಾಡುತ್ತದೆ.

ಈ ವ್ಯವಸ್ಥೆಯ ಕುರಿತು ಪಂಕಜ್ ಅವರು ವಿಡಿಯೊ ಮತ್ತು ವಿವರವನ್ನು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ ನಂತರ ಸಾರ್ವಜನಿಕರ ಗಮನ ಸೆಳೆದಿದೆ.

‘ನಿಯಮಗಳನ್ನು ಉಲ್ಲಂಘಿಸುವ ಜನರನ್ನು ನೋಡಿ ಬೇಸತ್ತಿದ್ದೆ. ಹಾಗಾಗಿ ನನ್ನ ಹೆಲ್ಮೆಟ್ ಅನ್ನು ಸಂಚಾರ ಪೊಲೀಸರ ಸಾಧನವಾಗಿ ಮಾಡಿಕೊಂಡು, ಸಂಚಾರ ನಿಯಮ ಉಲ್ಲಂಘನೆಗಳನ್ನು ಗುರುತಿಸಿ, ಸ್ಥಳ ಮತ್ತು ವಾಹನ ಸಂಖ್ಯೆಯೊಂದಿಗೆ ಸಾಕ್ಷ್ಯಗಳನ್ನು ಪೊಲೀಸರಿಗೆ ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ’ ಎಂದು ಪಂಕಜ್ ಹೇಳಿದರು.

ರಾಜಸ್ಥಾನದ ಪಂಕಜ್ ತನ್ವಾರ್ ಕಾಡುಬೀಸನಹಳ್ಳಿಯಲ್ಲಿ ವಾಸವಾಗಿದ್ದಾರೆ. ‘ಈ ಆಲೋಚನೆ ದಿನನಿತ್ಯದ ಅಸಹನೀಯ ಅನುಭವ-ಗಳಿಂದಲೇ ಹುಟ್ಟಿಕೊಂಡದ್ದು. ನನ್ನ ಸುತ್ತಲೂ ನಿಯಮ ಉಲ್ಲಂಘನೆಯ ದೃಶ್ಯಗಳು ಕಾಣಿಸುತ್ತಿದ್ದವು.

ಚಾಲಕರೊಂದಿಗೆ ವಾದಿಸುವುದು ಅರ್ಥವಿಲ್ಲದ ಕೆಲಸವಾಗಿತ್ತು. ಆದ್ದರಿಂದ ತಾಂತ್ರಿಕ ಪರಿಹಾರವನ್ನು ಹುಡುಕಿದೆ’ ಎಂದು ತಿಳಿಸಿದ್ದಾರೆ.

ನಗರ ಸಂಚಾರ ಪೊಲೀಸರು ಈಗಾಗಲೇ ತಮ್ಮ ಆ್ಯಪ್, ಇಮೇಲ್ ಮತ್ತು ವಾಟ್ಸ್‌ಆ್ಯಪ್ ಮೂಲಕ ನಾಗರಿಕರಿಂದ ಸಂಚಾರ ನಿಯಮ ಉಲ್ಲಂಘನೆಗಳ ದೂರುಗಳನ್ನು ಸ್ವೀಕರಿಸುತ್ತಾರೆ ಎಂಬುದನ್ನು ಪಂಕಜ್ ತಿಳಿದುಕೊಂಡರು. ಆದರೆ, ದೂರು ಸಲ್ಲಿಸುವ ವೇಳೆ ಫೋಟೊಗಳು, ವಿಡಿಯೊಗಳು ಮತ್ತು ಸ್ಥಳದ ವಿವರದ ಸಾಕ್ಷ್ಯಗಳು ಇರಬೇಕು ಎಂಬುದು ಅವಶ್ಯಕ ಎಂಬುದನ್ನು ಮನಗಂಡು, ಈ ವ್ಯವಸ್ಥೆ ಅಳವಡಿಸಿಕೊಂಡರು.

ಹೆಲ್ಮೆಟ್‌ಗೆ ಲಾಜಿಟೆಕ್ ವೆಬ್‌ಕ್ಯಾಮ್ ಬಳಸಲಾಗಿದ್ದು, ಅದನ್ನು ಸಣ್ಣ ಗಣಕಯಂತ್ರವಾದ ರಾಸ್ಪ್ಬೆರಿ ಪೈಗೆ ಸಂಪರ್ಕಿಸಲಾಗಿದೆ. ಪ್ರತಿಯೊಂದು ಫ್ರೇಮ್ ಅನ್ನು ಎ.ಐ ಮಾದರಿಗಳು ವಿಶ್ಲೇಷಿಸಿ, ನಾಲ್ಕು ಸಾಮಾನ್ಯ ಸಂಚಾರ ನಿಯಮ ಉಲ್ಲಂಘನೆಗಳನ್ನು ಪತ್ತೆ ಹಚ್ಚುತ್ತವೆ. ಹೆಲ್ಮೆಟ್ ಇಲ್ಲದೆ ವಾಹನ ಚಾಲನೆ, ರಸ್ತೆ ವಿಭಜಕಗಳನ್ನು ದಾಟುವುದು, ಸಿಗ್ನಲ್ ಜಂಪ್ ಮಾಡುವುದು ಮತ್ತು ವಿರುದ್ಧ ದಿಕ್ಕಿನಲ್ಲಿ ಸಾಗುವುದು.

ಒಮ್ಮೆ ಪರಿಶೀಲನೆ ಪೂರ್ಣಗೊಂಡ ಬಳಿಕ, ಚಿತ್ರಗಳು, ವಿಡಿಯೊಗಳು, ವಾಹನದ ಸಂಖ್ಯೆ ಮತ್ತು ಜಿಪಿಎಸ್ ಸಂಯೋಜನೆಯೊಂದಿಗೆ ಇ–ಮೇಲ್ ಅನ್ನು ಪೊಲೀಸರಿಗೆ ಕಳುಹಿಸಲಾಗುತ್ತದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಫಾರಂ ನಂ. ಯುಆರ್‌ಸಿ–2

ಅಧ್ಯಾಯ 21ರ ಭಾಗ 1ರ ಅಡಿಯಲ್ಲಿ ನೋಂದಣಿ ಕುರಿತಾದ ಜಾಹೀರಾತು ಪ್ರಕಟಣೆ

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 374 (ಬಿ) ಮತ್ತು ಕಂಪನಿಗಳ (ನೋಂದಣಿಗೆ ಅಧಿಕೃತ) ನಿಯಮಗಳು, 2014ರ ನಿಯಮ 4(1)ರ ಪ್ರಕಾರ]

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 366ರ ಸಬ್ ಸೆಕ್ಷನ್ (2)ರ ಪ್ರಕಾರ, ಬೆಂಗಳೂರಿನ ರಿಜಿಸ್ಟ್ರಾರ್‌ಗೆ ಒಂದು ಅರ್ಜಿ ಸಲ್ಲಿಕೆಯಾಗಿದ್ದು, ಸದರಿ ಅರ್ಜಿಯಲ್ಲಿ ಸೂಪರ್‌ಪ್ಯಾಕ್ಸ್ ಬಿಜನೆಸ್ ಸೊಲ್ಯೂಷನ್ಸ್ ಎಲ್‌ಎಲ್‌ಪಿ ಎಂಬ ಒಂದು ಸೀಮಿತ ಹೊಣೆಗಾರಿಕೆಯ ಪಾಲುದಾರ ಕಂಪನಿಯನ್ನು, ಕಂಪನಿಗಳ ಕಾಯ್ದೆ, 2013ರ ಅಧ್ಯಾಯ 21ರ ಭಾಗ 1ರ ಅಡಿಯಲ್ಲಿ, ಅದರ ಷೇರುಗಳ ಮುಖಾಂತರ ಕಂಪನಿ ಲಿಮಿಟೆಡ್ ಎಂಬುದಾಗಿ ನೋಂದಾಯಿಸಬೇಕೆಂದು ಕೋರಲಾಗಿರುತ್ತದೆ.

ಕಂಪನಿಯ ಪ್ರಮುಖ ಉದ್ದೇಶಗಳು ಕೆಳಗಿನಂತಿರುತ್ತವೆ:

ಕೊರುಗೇಟೆಡ್ ಬಾಕ್ಸ್‌ಗಳು, ಕಾರ್ಟನ್‌ಗಳು ಇತ್ಯಾದಿಗಳನ್ನು ಉತ್ಪಾದಿಸುವುದು ಮತ್ತು ಅವುಗಳನ್ನು ಆರೋಗ್ಯ ಆರೈಕೆ, ಐಟಿ, ರಿಟೇಲ್ ಕ್ಷೇತ್ರಗಳು ಸೇರಿದಂತೆ ಇನ್ನಿತರ ಕ್ಷೇತ್ರಗಳಿಗೆ ಪೂರೈಕೆ ಮಾಡುವುದು ಕಂಪನಿಯ ವ್ಯವಹಾರ ಸ್ವರೂಪವಾಗಿರುತ್ತದೆ.

ಉದ್ದೇಶಿತ ಕಂಪನಿಯ ಕರಡು ಮೆಮೊರಾಂಡಮ್ ಹಾಗೂ ಆರ್ಟಿಕಲ್ಸ್ ಆಫ್ ಅಸೋಸಿಯೇಶನ್ ಪ್ರತಿಗಳನ್ನು 4ನೇ ಮಹಡಿ, ಚಿತ್ರಾಪುರ ಭವನ, 8ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ವಿಳಾಸದಲ್ಲಿ ಪರಿಶೀಲನೆಗೆ ಲಭ್ಯವಿರುತ್ತವೆ.

ಆದ್ದರಿಂದ, ಸದರಿ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಸದರಿ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಹನ್ನೆರಡು ದಿನಗಳೊಳಗೆ, ತಮ್ಮ ಆಕ್ಷೇಪಣೆಯನ್ನು ಲಿಖಿತ ರೂಪದಲ್ಲಿ ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಭಾರತೀಯ ಕಾರ್ಪೊರೇಟ್ ವ್ಯವಹಾರಗಳ ಸಂಸ್ಥೆ (ಐಐಸಿಎ), ಪ್ಲಾಟ್ ನಂ. 6, 7, 8, ಸೆಕ್ಟರ್–5, ಐಎಂಟಿ ಮಾನೇಸರ್, ಗುರಗಾಂವ್ ಜಿಲ್ಲೆ (ಹರಿಯಾಣ), ಪಿನ್ ಕ್ರಮಾಂಕ – 122050 ವಿಳಾಸಕ್ಕೆ ಸಲ್ಲಿಸುವುದು ಮತ್ತು ಒಂದು ಪ್ರತಿಯನ್ನು ಕಂಪನಿಯ ನೋಂದಾಯಿತ ಕಚೇರಿ ವಿಳಾಸಕ್ಕೆ ಕೂಡ ರವಾನಿಸುವುದು.

ಅರ್ಜಿದಾರರ ಹೆಸರುಗಳು:
ಅದಿತಿ ಕಡೂರ್
ಉದಯ್ ಮಧುಕರ್ ಬಾಪು
ಅಭಿಷೇಕ ಕಡೂರ್
ಚಂದ್ರಿಕಾ ಕಡೂರ್

ದಿನಾಂಕ: 06.01.2026 ಸ್ಥಳ: ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ಎಸ್‌ಪಿ ಇನ್ನೊವೇಶನ್ಸ್ ಟೆಕ್ನಾಲಜೀಸ್ ಎಲ್‌ಎಲ್‌ಪಿ, ನಂ. 1408, 40ನೇ ಮುಖ್ಯರಸ್ತೆ, ಜೆಪಿ ನಗರ 1ನೇ ಹಂತ, ಬೆಂಗಳೂರು – 5600078 (www.sppinnovations.net) ಎಂಬ ಈ ಸಂಸ್ಥೆಯು ಒಂದು ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಹಾಗೂ ಕನ್ಸಲ್ಟಿಂಗ್ ಕಂಪನಿಯಾಗಿದ್ದು, ಬ್ಯಾಂಕಿಂಗ್ ಡೊಮೇನ್‌ನಲ್ಲಿ ಕೂಡ ಕಾರ್ಯನಿರ್ವಹಿಸುತ್ತಿದೆ ಮತ್ತು ವ್ಯಾಪಾರಸ್ಥರಿಗೆ ಪೇಮೆಂಟ್ ಸೊಲ್ಯೂಷನ್ ಒದಗಿಸುವುದಲ್ಲಿ ವಿಶೇಷ ಪರಿಣಿತಿ ಹೊಂದಿದೆ. ಇದೀಗ, ಈ ಕಂಪನಿಯು, ಶೀಘ್ರದಲ್ಲಿಯೇ ಎಲ್‌ಎಲ್‌ಪಿ ಇಂದ ಪ್ರೈವೇಟ್ ಲಿಮಿಟೆಡ್ ಆಗಿ ಪರಿವರ್ತನೆಗೊಳ್ಳಲಿದೆ ಎಂದು ಈ ಮೂಲಕ ತಿಳಿಸಲಾಗುತ್ತಿದೆ.
ಎಸ್‌ಪಿ ಇನ್ನೊವೇಶನ್ಸ್ ಟೆಕ್ನಾಲಜೀಸ್ ಎಲ್‌ಎಲ್‌ಪಿ ಪರವಾಗಿ
ಪಾಲುದಾರರು: ಪದ್ಮನಾಭ ಪಿ.ಎನ್.
ನಂ. 6362574038

JOB
To Place your Classified Ads Contact:
9886213331

PUBLIC NOTICE

This is to inform the general public that my client intends to purchase the immovable properties mentioned and described in the schedule below from its respective Owners. The Owners represent that they are the absolute owners of their respective portion of the Schedule Property and the same is free from all encumbrances, mortgage, charge, lien or litigation and they have not entered into any sort of agreement/MOU/Deeds etc., for transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, agreement of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/ objection(s)/demand(s) with the undersigned supported by documentary evidence within Fifteen (15) days from the date of publication of this notice failing which, my client shall proceed with the above-mentioned transaction as though there are no claim(s) / objection(s) / demand(s) to the proposed transaction.

SCHEDULE

All that piece and parcel of the below mentioned properties situated at Honnurakuppe Village, Antharasanthe Hobli, Hegada Devanakote Taluk, Mysore District:

Sl. No.	Property Details	Owners	Extent in Acres & Guntas	East by	West by	North by	South by
1.	E-khatha No. 152200102824020035 (earlier bearing Survey Nos. 6/3, 6/4 and 6/5)	M/s. Kabini Hospitality Private Limited	04-20½	Property bearing Survey No. 18/2.	in Kabini Back Waters.	Property bearing Survey No. 6/4.	Property bearing Survey No. 5.
2.	E-Khatha No. 152200102824020024 (earlier bearing Survey No. 18/2)	Sri. Vijay Kumar N son of Late Neelakantan	04-00	Property bearing Survey No.18/1.	Property bearing Survey No. 18/6.	Property bearing Survey Nos. 6 & 7.	Property bearing Survey Nos. 5 & 19.

Vinay K.S.
Advocates,
Vinay Kademane & Associates,
307, 3rd Floor, Prestige Centre Point, No. 7/49, Edward Road, Bengaluru - 560 001.
Ph: 080-22863885; email id: vinay@vinaykademane.in

Date: 06-01-2026
Place: Bangalore

PUBLIC NOTICE

This is to inform the general public that my client MRS.ANITHA H S, Aged about 48 years, W/o.Late Mr.B.V.Srinivas, Residing at : No.490, 8th Main, 2nd Cross, ITI Colony, Magammanapalya, Bommanahalli, Bangalore South, Bangalore - 560 068, has lost the following Original Documents : (a) Original Registered Release Deed dated 28-12-2005, Registered as Document No. KRI-1-11443-2005-06, Book - 1, stored in CD No. KRID 167, Registered before the Sub-Registrar, K.R. Puram, Bangalore, (executed by Smt.Lalitha in favour of Mr.B.V.Srinivasa) and, (b) Original Allotment Letter dated 20.12.1988, issued by Bangalore Development Authority in the name of Mr.R.V.Venkata Subramanya, and (c) Original Lease cum Sale Agreement dated 17.08.1989, registered as Document No.1905/1989-90, book-1, Volume 39, at pages 124-129, registered at the Office of Sub-Registrar, Krishnarajapura, Bangalore, in favor of Mr.R.V.Venkata Subramanya, pertaining to residential property bearing BDA SITE NO.1628, E - PID No.4094027657, Present Khatha No.1093/2853/1628, situated at HENNUR – BELLARY ROAD (HBR) Layout, Bangalore, now comes under the Jurisdiction of Bruhath Bangalore Mahanagara Palike (BBMP), Ward No.24 - HBR Layout, Bangalore, measuring East to West : 40 Feet and North to South: 30 feet, in all measuring 1200 Sq.Ft.
In this regards my client had preferred a Police complaint before the Bengaluru City Police, in Lost Article Report No. 1993780/2026 dated 05-01-2026 in Serial No 1993780 If found, the said documents may kindly be delivered to the under mentioned address. Any objection from the concerned public will not be entertained or bind my client after expiry of 7 days from the date of publication of this NOTICE.
SAJIKUMAR K.B, Advocate
No.4, 1st Floor, 80 Feet Road, 2nd Cross, Chairman Layout, HRBR 1st Block, Kalyan Nagar Post, Bengaluru - 560 043.
Mob No.8792770700

JOB OPPORTUNITIES

Part-Time Jobs

CHANNEL PARTNER with HDFC Bank Subsidiary. Age 40-69, 75K, PF/ MC, Experience Only: 9902072424

REAL ESTATE SELLING

Sites

Uttarahalli

SALE: KUMARASWAMY layout, ISRO housing society, 3rd B Main road 3630 sq ft, 17.5 K/ sq ft,Serious buyers only Call +17028216450 Whatspp or email animalhouzvet@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL

Change of Name

CHANGE OF NAME
I, **MUMTAZ ALI** S/o Ather Nazeer, residing at No.8/2, Hosahalli Gollarapalya, Near Service Road, Bengaluru-91, have changed my name from **MAMTAZ ALI** S/o **ATHER NAZIR** to **MUMTAZ ALI** S/o **ATHER NAZEER** for all future purposes. Vide affidavit dated 05.01.2026 before notary H R Karunakara, Bengaluru

I, V. MUNIRAJU, S/o Venkataramanappa, R/a No. 1046, 2nd cross, Weavers Colony, Bannerughatta Road, Bangalore - 560083, have changed my name to V. MUNIRAJAMMA (Transgender) vide affidavit dated 03.01.2026 before Notary A.R. Muneer Ahmed, Bangalore.

I, ANKIT Budur Lulla S/o Anil Budur Lulla R/O F 216, 2nd Floor, Purva Graces Apartment, Amruthahalli, Bangalore North, Bengaluru, Karnataka- 560092, have changed my name to ANKIT L.

CHANGE OF NAME
I, **S. Subash**, residing No. 9, Near Excel Building Opp Pearl Garden, Munnekolala, Marathahalli Colony, Bengaluru-560037, have changed my minor daughter's name from **PRINCY S** to **PRINCY MUTHU S** vide affidavit dated 17-11-2025 before notary B.M. Chandrashekar, Bengaluru. Henceforth I shall be called **PRINCY MUTHU S** only

CHANGE OF NAME
I, V. Sai Raghunandan S/o. Shri D.N. Vidhya Shankar, R/a No.7, 7th Cross, 60 Feet Road, Near Sathyanarayana Choultry J.C. Nagar, Kurubarahalli, Mahalakshmipuram, Bangalore-560 086 have changed my name from **V. SAI RAGHUNANDAN** to **RAGHUNANDAN SHARMA** vide affidavit dated 03-01-2026 Sworn before Notary B.Prasanna, Bangalore.

CHANGE OF NAME
I, **FATHIMA BATOOL MOHAMMED FAHIM UDYAWAR**, residing at No.S-1, Vastav Regency 1st Cross, 9th A Main, 1st Stage, BTM Layout, Bengaluru - 560029 have changed my name to **FATIMA BATOOL** vide affidavit dtd: 01-12-2025 before notary K.N.Ramadevi, Bengaluru, Henceforth I shall be called as **FATIMA BATOOL** only.

DH DECCAN HERALD
THANKSGIVING

Book your Thanksgiving Advertisement in Deccan Herald for ANNUAL FEAST OF INFANT JESUS ON 14th January 2026
@ 2100 with GST (Size 4cmx5cm)
For more Details Contact:
Ph :080 - 45557163 | 164 | 9731810277

ನಗರದಲ್ಲಿ 4 ವರ್ಷಗಳಲ್ಲಿ 9,450 ಮಂದಿ ಆತ್ಮಹತ್ಯೆ

• ವರುಣ ಹೆಗಡೆ

ಬೆಂಗಳೂರು: ಕೌಟುಂಬಿಕ ಕಲಹ, ಆರ್ಥಿಕ ಸಂಕಷ್ಟ, ನಿರುದ್ಯೋಗ ಸೇರಿ ವಿವಿಧ ಕಾರಣಗಳಿಗೆ ನಗರದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ 9,450 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರತಿ ದಿನ ಸರಾಸರಿ ಆರರಿಂದ ಏಳು ಜನರು ಆತ್ಮಹತ್ಯೆಯ ಮೂಲಕ ಕೊನೆಯುಸಿರೆಳೆಯುತ್ತಿದ್ದಾರೆ.

ಮಾನಸಿಕ ಅನಾರೋಗ್ಯ ಸಮಸ್ಯೆಗಳು ಆತ್ಮಹತ್ಯೆಯಂತಹ ನಿರ್ಧಾರಕ್ಕೆ ಕಾರಣವಾಗುತ್ತಿವೆ. ಗೃಹ ಇಲಾಖೆಯ ಮಾಹಿತಿ ಪ್ರಕಾರ, ನಗರದಲ್ಲಿ ಪ್ರತಿ ವರ್ಷ ಎರಡು ಸಾವಿರಕ್ಕೂ ಅಧಿಕ ಮಂದಿ ಆತ್ಮಹತ್ಯೆಯಿಂದ ಮೃತಪಡುತ್ತಿದ್ದಾರೆ. ಕಟ್ಟಡದಿಂದ ಜಿಗಿದು, ನೇಣು ಬಿಗಿದುಕೊಂಡು, ವಿಷ ಸೇವಿಸಿ, ರೈಲ್ವೆ ಹಳಿಗೆ ಹಾರಿ, ಗುಂಡು ಹಾರಿಸಿಕೊಂಡು ಸೇರಿ ವಿವಿಧ ವಿಧಾನಗಳ ಮೂಲಕ ಆತ್ಮಹತ್ಯೆ ಪ್ರಯತ್ನ ಮಾಡುತ್ತಿದ್ದು, ಈ ರೀತಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಿರುವವರಲ್ಲಿ ಹೆಚ್ಚಿನವರು ಯುವಜನರೇ ಆಗಿದ್ದಾರೆ.

2022ರ ಜನವರಿಯಿಂದ 2025ರ ನವೆಂಬರ್‌ವರೆಗೆ ಆತ್ಮಹತ್ಯೆ ಮಾಡಿಕೊಂಡ 9,450 ಮಂದಿಯಲ್ಲಿ, 8,148 ಮಂದಿ ಆತ್ಮಹತ್ಯೆಗೆ ನೇಣು ಬಿಗಿದುಕೊಳ್ಳುವ ವಿಧಾನ ಅನುಸರಿಸಿದ್ದಾರೆ. 740 ಜನರು ವಿಷ ಸೇವಿಸಿ ಮೃತಪಟ್ಟರೆ, 204 ಜನರು ಕಟ್ಟಡಗಳು ಮತ್ತು ಇತರ ಎತ್ತರದ ಸ್ಥಳಗಳಿಂದ ಹಾರಿ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ.

ನಗರದಲ್ಲಿ ವರ್ಷವಾರು ಆತ್ಮಹತ್ಯೆ



ಮನೋವ್ಯಾಧಿ: ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ವಿಶ್ಲೇಷಣೆ ಪ್ರಕಾರ ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ಮೂರನೇ ಒಂದರಷ್ಟು ಮಂದಿ ಮಾನಸಿಕ ಕಾಯಿಲೆಗಳಿಂದ ಬಳಲುತ್ತಿರುತ್ತಾರೆ. ಉಳಿದ ಎರಡು ಭಾಗದಷ್ಟು ಮಂದಿ ಆರ್ಥಿಕ ಸಮಸ್ಯೆ ಹಾಗೂ ಕುಟುಂಬದ ಬಾಂಧವ್ಯ ಕಡಿದುಕೊಳ್ಳುವಿಕೆಯಿಂದ ಆತ್ಮಹತ್ಯೆಗೆ ಒಳಗಾಗುತ್ತಿದ್ದಾರೆ. ಮಾನಸಿಕ ಅನಾರೋಗ್ಯ ಸಮಸ್ಯೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ನಿಮ್ಹಾನ್ಸ್ ಪ್ರಾರಂಭಿಸಿರುವ 'ಟೆಲಿ ಮನಸ್' ಸಹಾಯವಾಣಿಗೆ (14416) ಪ್ರತಿನಿತ್ಯ ಸಾವಿರಾರು ದೂರವಾಣಿ ಕರೆಗಳು ಬರುತ್ತಿದ್ದು, ಆತ್ಮಹತ್ಯೆಯ ಆಲೋಚನೆ ಮಾಡುತ್ತಿರುವವರೂ ಈ ಸಹಾಯವಾಣಿ ಮೂಲಕ ಸಮಾಲೋಚನೆಗೆ ಒಳಪಡುತ್ತಿದ್ದಾರೆ.

'ಭಾವನಾತ್ಮಕವಾಗಿ ತೀವ್ರ ಘಾಸಿಗೊಳ್ಳುವಿಕೆ ಮತ್ತು ವಿವಿಧ ಸಮಸ್ಯೆಗಳು ಆತ್ಮಹತ್ಯೆಗೆ ದಾರಿ ಮಾಡಿಕೊಡುತ್ತಿವೆ. ಮನೋಸಾಮಾಜಿಕ ಸಮಸ್ಯೆಗಳು ಆತ್ಮಹತ್ಯೆಗೆ ಕಾರಣವಾಗುತ್ತಿವೆ. ಹಿಂದೆ ಆತ್ಮಹತ್ಯೆಗೆ ಸಹಕಾರಿಯಾದ ಕೀಟನಾಶಕಗಳು ಸೇರಿ ವಿವಿಧ ಸಾಧನಗಳು ಸುಲಭವಾಗಿ ದೊರೆಯುತ್ತಿರಲಿಲ್ಲ' ಎಂದು ಮನೋವೈದ್ಯಕೀಯ ತಜ್ಞ ಡಾ. ರವೀಶ್ ಬಿ.ಎನ್. ವಿವರಿಸಿದರು.

ಪ್ರತಿದಿನ ಸರಾಸರಿ ಏಳು ಆತ್ಮಹತ್ಯೆ

'ಕೌಟುಂಬಿಕ ಕಲಹ, ಶೈಕ್ಷಣಿಕ, ಆರ್ಥಿಕ ಮತ್ತು ಹದಿಹರೆಯದ ಸಮಸ್ಯೆಗಳು ಆತ್ಮಹತ್ಯೆಯ ಆಲೋಚನೆಗೆ ಅವಕಾಶ ಮಾಡಿಕೊಡುತ್ತಿವೆ. ಅಂತಹ ಆಲೋಚನೆ ಬಂದಲ್ಲಿ 'ಟೆಲಿಮನಸ್' ಸಹಾಯವಾಣಿಗೆ ಸಂಪರ್ಕಿಸಿ, ಸಹಾಯ ಪಡೆಯಬಹುದು' ಎಂದು ನಿಮ್ಹಾನ್ಸ್‌ನ ಮನೋವೈದ್ಯ ಡಾ. ಕಿರಣ್ ಆರ್. ತಿಳಿಸಿದರು.

ಯುವಜನರಿಂದ ಅಧಿಕ ಕರೆ

ನಿಮ್ಹಾನ್ಸ್ ನಿರ್ವಹಣೆ ಮಾಡುತ್ತಿರುವ 'ಟೆಲಿಮನಸ್' ಸಹಾಯವಾಣಿಗೆ ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ–ಬಿ) ತಾಂತ್ರಿಕ ನೆರವು ಒದಗಿಸುತ್ತಿದೆ. ವಾರದ ಎಲ್ಲ ದಿನಗಳು 24 ಗಂಟೆಗಳೂ ದೂರವಾಣಿ ಕರೆಗಳನ್ನು 20 ಭಾಷೆಗಳಲ್ಲಿ ಸ್ವೀಕರಿಸಲಾಗುತ್ತಿದೆ. 2022ರ ಅಕ್ಟೋಬರ್‌ನಲ್ಲಿ ಪ್ರಾರಂಭಿಸಲಾದ ಈ ಸಹಾಯವಾಣಿಗೆ, ಆತ್ಮಹತ್ಯೆ ಆಲೋಚನೆ ಸೇರಿ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಈವರೆಗೆ 30 ಲಕ್ಷಕ್ಕೂ ಅಧಿಕ ದೂರವಾಣಿ ಕರೆಗಳು ಬಂದಿವೆ. ಸಂಸ್ಥೆಯ ವಿಶ್ಲೇಷಣೆ ಪ್ರಕಾರ ಹೆಚ್ಚಿನ ದೂರವಾಣಿ ಕರೆಗಳು 18 ರಿಂದ 45 ವರ್ಷದೊಳಗಿನವರದ್ದಾಗಿದೆ.

'ದುಃಖ, ಭಯ, ಆತಂಕ, ಮದುವೆಗೆ ಸಂಬಂಧಿಸಿದ ಸಮಸ್ಯೆಗಳು, ಆರ್ಥಿಕ ತೊಂದರೆಗಳು, ಪರೀಕ್ಷೆಯ ಒತ್ತಡ ಸೇರಿ ವಿವಿಧ ಕಾರಣಗಳಿಂದ ಆತ್ಮಹತ್ಯೆ ಆಲೋಚನೆಗಳು ಬರುತ್ತವೆ. ಈ ಆಲೋಚನೆಯಿಂದ ಹೊರಬರಲು ಟೆಲಿಮನಸ್ ಸಹಯಾವಾಣಿ ನೆರವಾಗುತ್ತಿದೆ. ಅಗತ್ಯವಿದ್ದಲ್ಲಿ ವಿಡಿಯೊ ಸಮಾಲೋಚನೆಯನ್ನೂ ಮಾಡಲಾಗುತ್ತಿದೆ' ಎಂದು ಐಐಐಟಿ–ಬಿಯ ಟೆಲಿ ಮನಸ್ ಇ-ಹೆಲ್ತ್ ರಿಸರ್ಚ್ ಸೆಂಟರ್‌ನ ಯೋಜನಾ ವ್ಯವಸ್ಥಾಪಕಿ ಅರ್ಚನಾ ಕಾರ್ತಿಕ್ ತಿಳಿಸಿದರು.

ಚಿಟಿಕೆ ಸುದ್ದಿ

ಎಸ್‌ಡಿಪಿಐ ರಾಷ್ಟ್ರೀಯ ಪ್ರತಿನಿಧಿ ಸಭೆ 20ರಿಂದ

ಬೆಂಗಳೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಆರನೇ ರಾಷ್ಟ್ರೀಯ ಪ್ರತಿನಿಧಿ ಮಂಡಳಿ ಸಭೆಯನ್ನು ಜನವರಿ 20 ಹಾಗೂ 21ರಂದು ಮಂಗಳೂರಿನಲ್ಲಿ ಆಯೋಜಿಸಲಾಗಿದೆ ಎಂದು ಎಸ್‌ಡಿಪಿಐ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಇಲ್ಯಾಸ್ ತುಂಬೆ ತಿಳಿಸಿದರು.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎರಡು ದಿನ ನಡೆಯುವ ಈ ಸಭೆಯಲ್ಲಿ ದೇಶದ ವಿವಿಧ ರಾಜ್ಯಗಳಿಂದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಹಾಗೂ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಯಲಿದೆ. ಇದರ ಜೊತೆಗೆ ಪ್ರಸ್ತುತ ರಾಜಕೀಯ ಪರಿಸ್ಥಿತಿಯ ಸಮಗ್ರ ಪರಿಶೀಲನೆ ನಡೆಸಿ, ಪಕ್ಷದ ರಾಜಕೀಯ ನಿಲುವು ಮತ್ತು ಭವಿಷ್ಯದ ತಂತ್ರಗಳ ಕುರಿತು ಚರ್ಚೆಗಳು ನಡೆಯಲಿವೆ' ಎಂದು ಮಾಹಿತಿ ನೀಡಿದರು.

ಎಸ್‌ಡಿಪಿಐ ರಾಷ್ಟ್ರೀಯ ಕಾರ್ಯದರ್ಶಿ ರಿಜಾ ಫರಂಗಿಪೇಟೆ, ಎಸ್‌ಡಿಪಿಐ ರಾಜ್ಯ ಘಟಕದ ಉಪಾಧ್ಯಕ್ಷ ಪುಟ್ಟನಂಜಯ್ಯ, ಪ್ರಧಾನ ಕಾರ್ಯದರ್ಶಿ ಅಪ್ಸರ್ ಕೊಡ್ಲಿಪೇಟೆ ಸುದ್ದಿಗೋಷ್ಠಿಯಲ್ಲಿದ್ದರು.

'ವಿದ್ಯಾರ್ಥಿಗಳಿಗೆ ಮೆಟ್ರೊದಲ್ಲಿ ಪಾಸ್ ಒದಗಿಸಿ'

ಬೆಂಗಳೂರು: ನಮ್ಮ ಮೆಟ್ರೊದಲ್ಲಿ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದ ಪಾಸ್ ಒದಗಿಸಬೇಕು ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಯುವ ಘಟಕದ ಅಧ್ಯಕ್ಷ ಲೋಹಿತ್ ಹನುಮಾಪುರ ಆಗ್ರಹಿಸಿದರು.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ಮೆಟ್ರೊ ಈಗಾಗಲೇ ದುಬಾರಿಯಾಗಿದೆ. ನಗರದಲ್ಲಿ ವ್ಯಾಸಂಗ ಮಾಡುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನುಕೂಲ ಆಗುವ ಉದ್ದೇಶದಿಂದ ನಮ್ಮ ಮೆಟ್ರೊದಲ್ಲಿ ರಿಯಾಯಿತಿ ದರದಲ್ಲಿ ಪಾಸ್‌ಗಳನ್ನು ವಿತರಿಸಬೇಕು. ನಗರದಲ್ಲಿ ಸಂಚಾರ ದಟ್ಟಣೆಯ ನಡುವೆ ವಿದ್ಯಾರ್ಥಿಗಳು ನಿತ್ಯ ಬಿಎಂಟಿಸಿಯಲ್ಲಿಯೇ ಸಂಚರಿಸುತ್ತಿದ್ದು, ಶಾಲಾ–ಕಾಲೇಜುಗಳಿಗೆ ತಲುಪಲು ತಡವಾಗುತ್ತಿದೆ' ಎಂದರು.

ಬೆಂಗಳೂರು ನಗರ ಯುವ ಘಟಕದ ಅಧ್ಯಕ್ಷ ಓಂಕಾರ್ ಮಂಜುನಾಥ್ ಮಾತನಾಡಿ, 'ನಮ್ಮ ತಂಡ ಎಲ್ಲ ಶಾಲಾ–ಕಾಲೇಜುಗಳ ಬಳಿ ತೆರಳಿ ಕನಿಷ್ಠ 1 ಲಕ್ಷ ವಿದ್ಯಾರ್ಥಿಗಳ ಸಹಿ ಸಂಗ್ರಹ ಮಾಡಲಿದೆ. ಇದೇ 7ಕ್ಕೆ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದ ಬಳಿ ಬೆಳಿಗ್ಗೆ 10ಕ್ಕೆ ಎಎಪಿ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಅವರು ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ' ಎಂದು ಹೇಳಿದರು.

ಬಡವರಿಗೆ ದ್ರೋಹ: ಸರ್ಕಾರದ ವಿರುದ್ಧ ಬಿಜೆಪಿ ಕಿಡಿ

ಬಾಗಲೂರು ಮುಖ್ಯ ರಸ್ತೆ ಬಳಿ ಬಿಜೆಪಿ ಪ್ರತಿಭಟನೆ • ಎರಡೂವರೆ ವರ್ಷದಿಂದ ಒಂದು ಮನೆಯನ್ನೂ ಕೊಟ್ಟಿಲ್ಲ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ತೆರವು ಪ್ರಕರಣಕ್ಕೆ ಸಂಬಂಧಿಸಿದಂತೆ ಕೋಗಿಲು ಉಳಿಸಿ ಎಂದು ಆಗ್ರಹಿಸಿ, ನಗರದ ಬಾಗಲೂರು ಮುಖ್ಯ ರಸ್ತೆಯ ಕಂಟ್ರಿ ಕ್ಲಬ್ ಬಳಿ ಬಿಜೆಪಿಯಿಂದ ಸೋಮವಾರ ಬೃಹತ್ ಪ್ರತಿಭಟನೆ ನಡೆಯಿತು.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಘೋಷಣೆ ಕೂಗಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, 'ಅಕ್ರಮವಾಗಿ ಮನೆ ನಿರ್ಮಿಸಲಾಗಿದೆ ಎಂದು ಹೇಳಿ ಮನೆ ತೆರವು ಮಾಡಿದ್ದೇ ರಾಜ್ಯ ಸರ್ಕಾರ. ಆದರೆ, ಕೆ.ಸಿ. ವೇಣುಗೋಪಾಲ್ ಅವರು ಬೆದರಿಸಿದ ತಕ್ಷಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಕುರ್ಚಿ ಕಳೆದುಕೊಳ್ಳುವ ಭೀತಿಯಿಂದ ವಲಸಿಗರಿಗೆ ಮನೆ ಕೊಡಲು ಮುಂದಾಗಿದ್ದಾರೆ. ರಾಜ್ಯದ ಬಡವರಿಗೆ ದ್ರೋಹ ಎಸಗಲಾಗುತ್ತಿದೆ' ಎಂದು ಕಿಡಿಕಾರಿದರು.

'ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಕುರ್ಚಿ ಕಸಿದುಕೊಳ್ಳಬೇಕೆಂಬ ಕಾರಣಕ್ಕಾಗಿ ಕೆ.ಸಿ. ವೇಣುಗೋಪಾಲ್ ಮೂಲಕ ಮುಖ್ಯಮಂತ್ರಿಗೆ ಧಮ್ಕಿ ಹಾಕಿಸಿ ಅವರೂ ವಲಸಿಗರಿಗೆ ಮನೆ ಕೊಡಲು ಹೊರಟಿದ್ದಾರೆ' ಎಂದು ಟೀಕಿಸಿದರು.

'ರಾಜ್ಯದಲ್ಲಿ 38 ಲಕ್ಷ ಮಂದಿ ಮನೆಗಾಗಿ ಅರ್ಜಿ ಹಾಕಿದ್ದಾರೆ. ಡಾ.ಬಿ. ಆರ್.ಅಂಬೇಡ್ಕರ್ ಅವರ ಹೆಸರು ಹೇಳುವ ಮುಖ್ಯಮಂತ್ರಿ ಕಳೆದ ಎರಡೂವರೆ ವರ್ಷದಲ್ಲಿ ಒಂದೇ ಒಂದು ಮನೆಯನ್ನೂ ಕೊಟ್ಟಿಲ್ಲ' ಎಂದು ದೂರಿದರು.

ಕನ್ನಡಿಗರಿಗೆ ಸೇರಿದ ಜಮೀನು: ಅಶೋಕ

'ಕನ್ನಡಿಗರಿಗೆ ಸೇರಿದ ಜಮೀನನ್ನು ಬೇರೆಯವರಿಗೆ ಕೊಡಲು ಅವಕಾಶ ನೀಡುವುದಿಲ್ಲ' ಎಂದು ವಿರೋಧ ಪಕ್ಷದ ನಾಯಕ ನಾಯಕ ಆರ್.ಅಶೋಕ ಎಚ್ಚರಿಕೆ ನೀಡಿದರು.

'ಬೆಂಗಳೂರಿಗೆ ಕೆಲಸ ಹುಡುಕಿಕೊಂಡು ಬಂದ ರಾಜ್ಯದ ಅನೇಕರು ಮನೆ ಇಲ್ಲದೆ ಪಾದಚಾರಿ ಮಾರ್ಗದಲ್ಲಿ ಮಲಗುತ್ತಿದ್ದಾರೆ. ಸಿದ್ದರಾಮಯ್ಯ ಅವರಿಗೆ ಅಂತವರು ಕಾಣುವುದಿಲ್ಲ. ಸರ್ಕಾರದ ದಾಖಲೆ ಪ್ರಕಾರ, ರಾಜ್ಯದಲ್ಲಿ 36 ಲಕ್ಷ ಬಡವರು ಮನೆ ಹಾಗೂ ನಿವೇಶನಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಅಂತಹವರಿಗೆ ಮನೆ ನೀಡಿಲ್ಲ. ಇವರೆಲ್ಲರೂ ಗೃಹಮಂಡಳಿ ಬಳಿ ಹೋದರೆ ನಾಳೆ ಬಾ ಎನ್ನುತ್ತಾರೆ' ಎಂದು ಆಕ್ರೋಶ ಹೊರಹಾಕಿದರು.

'150 ಅಕ್ರಮ ಮನೆಗಳನ್ನು ಒಡೆದು ಹಾಕಲಾಗಿದೆ. ಆದರೆ, ಈಗ 280 ನಿವಾಸಿಗಳು ಬಂದಿದ್ದಾರೆ ಎಂಬುದಾಗಿ ಅಧಿಕಾರಿಗಳು ಹೇಳುತ್ತಿದ್ದಾರೆ. ಇಷ್ಟಾದರೂ ಬ್ಯಾಟರಾಯನಪುರ ಶಾಸಕರು ಪತ್ತೆಯೇ ಇಲ್ಲ' ಎಂದು ಅಶೋಕ ಅವರು ಆಕ್ರೋಶ ಹೊರಹಾಕಿದರು.

'ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಮನೆಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿ ಇತ್ಯರ್ಥವಾಗಲು ಎರಡು ವರ್ಷ ಬೇಕಾಗುತ್ತದೆ. ಆದರೆ, ಇಲ್ಲಿನ ನಿವಾಸಿಗಳಿಗೆ ಎರಡೇ ದಿನದಲ್ಲಿ ಮನೆ ಮಂಜೂರು ಮಾಡುತ್ತಿದ್ದಾರೆ. ಇದು ಇಡೀ ಕನ್ನಡಿಗರ ಪ್ರಶ್ನೆ. ಕರ್ನಾಟಕವನ್ನು ಕನ್ನಡಿಗರಿಗೆ ಉಳಿಸಿ ಎಂಬ ಸಂದೇಶ ನೀಡುತ್ತಿದ್ದೇವೆ' ಎಂದರು.

ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಕೇರಳದವರು ಇಲ್ಲಿಗೆ ಬಂದು ವಿವರ ಪಡೆದು ಹೋಗಿದ್ದಾರೆ. ಅವರು ರಾಜ್ಯಕ್ಕೆ ಬಂದಾಗ ಇಲ್ಲಿಗೆ ಬರಲು ಅವಕಾಶ ನೀಡಿದ್ದು ಸರಿಯಲ್ಲ. ಅವರನ್ನು ಬಂಧಿಸಬೇಕಿತ್ತು ಎಂದು ತಿಳಿಸಿದರು.

ಶಾಸಕ ಸಿ.ಎನ್.ಅಶ್ವತ್ಥನಾರಾಯಣ್ ಮಾತನಾಡಿ, ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರಕ್ಕೆ ಆತ್ಮಸ್ಥೈರ್ಯ- ಸ್ವಾಭಿಮಾನ ಇಲ್ಲ ಎಂದು ಟೀಕಿಸಿದರು.

ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ಶಾಸಕರಾದ ಕೆ. ಗೋಪಾಲಯ್ಯ, ಎಸ್. ಆರ್. ವಿಶ್ವನಾಥ್, ಎನ್. ಮುನಿರತ್ನ, ಸಿ.ಕೆ. ರಾಮಮೂರ್ತಿ, ವಿಧಾನ ಪರಿಷತ್ ಸದಸ್ಯರಾದ ಸಿ.ಟಿ.ರವಿ ಭಾರತಿ ಶೆಟ್ಟಿ, ಕೇಶವ ಪ್ರಸಾದ್, ಬಿಜೆಪಿ ರಾಜ್ಯ ಕಾರ್ಯದರ್ಶಿ ಎಚ್.ಸಿ. ತಮ್ಮೇಶ್ ಗೌಡ, ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಹರೀಶ್ ಹಾಜರಿದ್ದರು.

> **ಪ್ರತಿಭಟನೆಗೆ ವೇದಿಕೆ ಹಾಕಲು ಅವಕಾಶ ಕೊಡುವುದಿಲ್ಲ ಎಂದು ರಾಜ್ಯ ಸರ್ಕಾರ ಹೇಳಿತ್ತು. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದ್ದೇವೆ. ಅಂತಹ ಬೆದರಿಕೆಗೆ ನಾವು ಬಗ್ಗುವುದಿಲ್ಲ**
> **ಬಿ.ವೈ.ವಿಜಯೇಂದ್ರ,** ರಾಜ್ಯ ಅಧ್ಯಕ್ಷ, ಬಿಜೆಪಿ

ಬಾಗಲೂರು ಮುಖ್ಯ ರಸ್ತೆಯ ಕಂಟ್ರಿ ಕ್ಲಬ್ ಬಳಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು

'ಕೋಗಿಲು ಒತ್ತುವರಿ ಬಿಜೆಪಿ ಪ್ರಾಯೋಜಿತವೇ?'

ಬೆಂಗಳೂರು: 'ಕೋಗಿಲು ಬಡಾವಣೆಯಲ್ಲಿ ಅತಿಹೆಚ್ಚು ಒತ್ತುವರಿಯಾಗಿರುವುದು 2021ರಲ್ಲಿ. ಆಗ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇತ್ತು. ಹಾಗಾದರೆ ಇದನ್ನು ಬಿಜೆಪಿ ಪ್ರಾಯೋಜಿತ ಒತ್ತುವರಿ ಎಂಬುದಾಗಿ ಕರೆಯಬೇಕೇ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಪ್ರಶ್ನಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸುಳ್ಳನ್ನು ಸತ್ಯ ಮಾಡುವುದನ್ನಷ್ಟೇ ಬಿಜೆಪಿ ನಾಯಕರು ಕರಗತ ಮಾಡಿಕೊಂಡಿದ್ದಾರೆ. ಅವರ ಮಾತಿಗೆ ತಲೆ ಬುಡ ಇಲ್ಲ. ಈ ವಿಚಾರದಲ್ಲಿ ಕೇಂದ್ರ ಗೃಹ ಸಚಿವಾಲಯ ನಾಲಾಯಕ್ ಎಂದು ಬಿಜೆಪಿಯವರು ಪ್ರತಿಭಟನೆ ನಡೆಸುತ್ತಿದ್ದಾರೆಯೇ' ಎಂದು ವ್ಯಂಗ್ಯವಾಡಿದರು.

'ನಾವು ಒತ್ತುವರಿಗೆ ಬೆಂಬಲ ನೀಡಿದ್ದರೆ ತೆರವಿಗೆ ಮುಂದಾಗುತ್ತಿರಲಿಲ್ಲ. ಎರಡು ತಿಂಗಳ ಹಿಂದೆಯೇ ಬಡಾವಣೆಯಲ್ಲಿ 10 ಅನಧಿಕೃತ ಮನೆಗಳನ್ನು ತೆರವು ಮಾಡಿಸಿ, ಬೇರೆಯವರಿಗೂ ಖಾಲಿ ಮಾಡುವಂತೆ ಅಧಿಕಾರಿಗಳು ಸೂಚನೆ ನೀಡಿದ್ದರು. ಆದರೆ, ಇದಕ್ಕೆ ಯಾರೂ ಕಿವಿಗೊಡಲಿಲ್ಲ. ಇನ್ನೂ ಹಲವರು ಬಂದು ಸೇರಿಕೊಂಡರು. ಅನಿವಾರ್ಯವಾಗಿ ತೆರವು ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಕೆಲವರು ನನ್ನ ವಿರುದ್ಧ, ಇದನ್ನು ರಾಜಕೀಯ ಅಸ್ತ್ರ ಮಾಡಿಕೊಂಡಿದ್ದಾರೆ. ಇದಕ್ಕೆಲ್ಲ ಜಗ್ಗುವುದಿಲ್ಲ. ನನ್ನ ಒಳ್ಳೆಯ ಕೆಲಸ ಮುಂದುವರಿಸುವೆ' ಎಂದು ಸ್ಪಷ್ಟಪಡಿಸಿದರು.

'ಅಧಿಕಾರಿಗಳ ಜಂಟಿ ತಂಡಗಳಿಂದ ಅಲ್ಲಿ ನೆಲೆಸಿರುವವರ ಸಮೀಕ್ಷೆ ಮುಗಿದಿದೆ. ಪೊಲೀಸರೂ ತನಿಖೆ ನಡೆಸುತ್ತಿದ್ದಾರೆ. ವರದಿ ಬಂದ ನಂತರ ಅರ್ಹರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗುತ್ತದೆ. ಮುಖ್ಯಮಂತ್ರಿ ಅವರು ಮಾನವೀಯ ನೆಲೆಯಲ್ಲಿ ಇದನ್ನು ನೋಡಿದ್ದಾರೆ. ಅರ್ಹರಿಗೆ ಕಾನೂನು ಬದ್ಧವಾಗಿ ಪರ್ಯಾಯ ನೆಲೆ ಒದಗಿಸಲಾಗುತ್ತಿದೆ. ಇದರಲ್ಲಿ ನಾವು ರಾಜಕೀಯ ಮಾಡುವುದು ಏನಿದೆ' ಎಂದು ಕೃಷ್ಣ ಬೈರೇಗೌಡ ಹೇಳಿದರು.

'ಇನ್ಫೊಸಿಸ್‌ಗೆ ನೀಡಿದ ಭೂಮಿ ಮಾರಾಟ ಮಾಡಲಾಗಿದೆ ಎನ್ನುವ ದೂರಿನ ಹಿನ್ನೆಲೆಯಲ್ಲಿ ತನಿಖೆ ನಡೆಸಲು ಬೆಂಗಳೂರು ಜಿಲ್ಲಾಧಿಕಾರಿ ಅವರಿಗೆ ಸೂಚನೆ ನೀಡಲಾಗಿದೆ' ಎಂದು ತಿಳಿಸಿದರು.

'ಗುರುವಾರದ ಒಳಗೆ ಮನೆ ಕೊಡಿ'

ಬೆಂಗಳೂರು: 'ಕೋಗಿಲು ಬಡಾವಣೆಯ ಫಕೀರ್ ಕಾಲೊನಿಯಲ್ಲಿ ವಾಸಿಸುತ್ತಿದ್ದ ಅರ್ಹ 25 ರಿಂದ 30 ಜನರಿಗೆ ಗುರುವಾರದ ಒಳಗೆ ಮನೆ ನೀಡಬೇಕು. ಉಳಿದ ಎಲ್ಲಾ ಅರ್ಹರಿಗೂ ಹಂತ ಹಂತವಾಗಿ ಮನೆ ನೀಡುವ ಕೆಲಸ ಆಗಬೇಕು' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹಾಗೂ ವಸತಿ ಸಚಿವ ಜಮೀರ್ ಅಹಮದ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸೋಮವಾರ ನಡೆದ ಸಭೆಯಲ್ಲಿ ಬಡಾವಣೆಯಲ್ಲಿನ ಬೆಳವಣಿಗೆಗಳ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಮಾಹಿತಿ ಪಡೆದ ಇಬ್ಬರೂ ಸಚಿವರು, 'ಕನ್ನಡಿಗರಾಗಿದ್ದು ಕೋಗಿಲು ಬಡಾವಣೆಯಲ್ಲಿ ಐದು ವರ್ಷಕ್ಕಿಂತ ಹೆಚ್ಚು ಕಾಲ ನೆಲಸಿದ್ದರೆ ಪರಿಗಣಿಸಬೇಕು. ರಾಜ್ಯದ ಬೇರೆ ಕಡೆಯಿಂದ ಬೆಂಗಳೂರಿಗೆ ಬಂದು ನೆಲಸಿದ್ದರೆ ಅಂತವರಿಗೆ ಮೊದಲ ಆದ್ಯತೆಯಾಗಿ ಮನೆ ನೀಡಲು ಪರಿಗಣಿಸಬೇಕು' ಎಂದು ಹೇಳಿದರು.

'ಮಾತೃಭಾಷೆ ಬೇರೆಯಾಗಿದ್ದರೂ ತಲೆಮಾರಿನಿಂದ ಕರ್ನಾಟಕದಲ್ಲಿ ವಾಸ ಇದ್ದು, ಬೆಂಗಳೂರಿಗೆ ವಲಸೆ ಬಂದಿದ್ದರೆ ಮೂಲ ತಾಲ್ಲೂಕು-ಊರು ಯಾವುದು ಎಂದು ತಿಳಿದು ಅಲ್ಲಿನ ಗ್ರಾಮ ಲೆಕ್ಕಾಧಿಕಾರಿ ಹಾಗೂ ಪೊಲೀಸ್ ಹೆಡ್ ಕಾನ್‌ಸ್ಟೆಬಲ್ ಪರಿಶೀಲಿಸಿ ಮಾಹಿತಿ ನೀಡಿದ ನಂತರ ನಿರಾಶ್ರಿತರಿಗೆ ಮನೆ ನೀಡಬೇಕು. ಹೊರ ರಾಜ್ಯದವರನ್ನು ಹುಡುಕುವ ಸಲುವಾಗಿ ಕನ್ನಡಿಗರಿಗೆ ಮನೆ ನೀಡುವುದಕ್ಕೆ ತಡ ಮಾಡುವುದು ಸರಿಯಲ್ಲ' ಎಂದು ತಿಳಿಸಿದರು.

'ಅಲೆಮಾರಿಗಳಿಗೆ ಭೂ ಒತ್ತುವರಿ ಅಗತ್ಯ ಇಲ್ಲ. ಅವರು ಬಂದು ಹೋಗುತ್ತಲೇ ಇರುತ್ತಾರೆ. ಒತ್ತುವರಿದಾರರನ್ನು ಸಹಿಸಲು ಸಾಧ್ಯವಿಲ್ಲ' ಎಂದರು.

'ವೇದಾಂತ ಮೇಕಥಾನ್' ವಿಶೇಷ ಕಾರ್ಯಕ್ರಮ 28ರಿಂದ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜ್ಞಾನ ಪರಂಪರೆಯನ್ನು ಆಧುನಿಕ ವಿಜ್ಞಾನದೊಂದಿಗೆ ಬೆಸೆಯುವ ಭಾಗವಾಗಿ ಪರಮ್ ಫೌಂಡೇಷನ್ ಮತ್ತು ವೇದಾಂತ ಭಾರತಿ ಜಂಟಿಯಾಗಿ ವಿದ್ಯಾರ್ಥಿಗಳಿಗಾಗಿ 'ವೇದಾಂತ ಮೇಕಥಾನ್' ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿವೆ. ಮೇಕಥಾನ್‌ನಲ್ಲಿ ತಯಾರಾದ ಅತ್ಯುತ್ತಮ ಮಾದರಿಗಳನ್ನು ಜ.28 ರಿಂದ 31ರ ವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ (ತ್ರಿಪುರ ವಾಸಿನಿ) ನಡೆಯಲಿರುವ 'ದಕ್ಷಿಣಾಸ್ಯ ದರ್ಶಿನಿ' ಕಾರ್ಯಕ್ರಮದಲ್ಲಿ ಪ್ರದರ್ಶಿಸಲಾಗುತ್ತದೆ.

ವೇದಾಂತ ಮೇಕಥಾನ್ ಪ್ರಶ್ನೆಗಳು ಅನುಭವಗಳಾಗಿ ಬದಲಾಗುವ ವಿಶಿಷ್ಟ ವೇದಿಕೆಯಾಗಿದೆ. ವಿದ್ಯಾರ್ಥಿಗಳು ವೇದಾಂತದ 'ಮಾಯೆ', 'ಚೈತನ್ಯ' ದಂತಹ ದಾರ್ಶನಿಕ ವಿಚಾರಗಳನ್ನು ದೃಷ್ಟಿ ಭ್ರಮೆ ಅಥವಾ ನರವಿಜ್ಞಾನದಂತಹ ಆಧುನಿಕ ತಂತ್ರಜ್ಞಾನದೊಂದಿಗೆ ಜೋಡಿಸಿ, ಸಂವಾದಾತ್ಮಕ ಪ್ರದರ್ಶಿಕೆಗಳನ್ನು ಸಿದ್ಧಪಡಿಸಲಿದ್ದಾರೆ.

ವಿಜ್ಞಾನ, ಎಂಜಿನಿಯರಿಂಗ್ ಮಾತ್ರವಲ್ಲದೆ ವಿನ್ಯಾಸ, ಮನೋವಿಜ್ಞಾನ ಮತ್ತು ಮಾನವಿಕ ವಿಭಾಗದ ವಿದ್ಯಾರ್ಥಿಗಳೂ ಭಾಗವಹಿಸಬಹುದು. ಆಯ್ಕೆಯಾದ ತಂಡಗಳಿಗೆ ವಿಜ್ಞಾನಿಗಳು, ಕಲಾಕಾರರು ಮತ್ತು ವಿದ್ವಾಂಸರು ಮಾರ್ಗದರ್ಶನ ನೀಡಲಿದ್ದಾರೆ. ತತ್ವಶಾಸ್ತ್ರದ ವಿಚಾರಗಳನ್ನು ಸೆನ್ಸರ್‌ಗಳು, ಕೃತಕ ಬುದ್ಧಿಮತ್ತೆ ಮತ್ತು ಎಂಜಿನಿಯರಿಂಗ್ ಬಳಸಿ ಪ್ರದರ್ಶಿಕೆಗಳನ್ನು ಮಾಡಲಾಗುತ್ತಿದೆ.

ಜ. 15ರ ಒಳಗೆ ನೋಂದಣಿ ಮಾಡಿಕೊಳ್ಳಬೇಕು. ಜ.15ರಂದು ವೃತ್ತಿ ತರಬೇತಿ ನಡೆಯಲಿದೆ. ಪ್ರತಿ ತಂಡದಲ್ಲಿ ಐದು ಸದಸ್ಯರು ಇರಲಿದ್ದಾರೆ. ಮಾಹಿತಿಗಾಗಿ vedanta-makeathon@ paraminnovation.org ಸಂಪರ್ಕಿಸಬಹುದು ಎಂದು ಸಂಘಟಕರು ತಿಳಿಸಿದ್ದಾರೆ.

ನೋಯ್ಡಾ ವಿಮಾನ ನಿಲ್ದಾಣಕ್ಕೆ ಸ್ವಚ್ಛತಾ ವಾಹನ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲ ಬಾರಿಗೆ ದೇಶಿಯವಾಗಿ ತಯಾರಿಸಲಾದ 'ರನ್ ವೇ ಕ್ಲೀನಿಂಗ್' ಯಂತ್ರವನ್ನು ನೋಯ್ಡಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರಾಜ್ಯದ ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಅವರು ಹಸ್ತಾಂತರಿಸಿದರು.

ದೊಡ್ಡಬಳ್ಳಾಪುರದ ಆದಿನಾರಾಯಣ ಹೊಸಹಳ್ಳಿ ಕೈಗಾರಿಕೆ ಪ್ರದೇಶದಲ್ಲಿರುವ, ಎಂಜಿ ನಿಯರಿಂಗ್ ಕ್ಷೇತ್ರದ ನಾವೀನ್ಯ ಮತ್ತು ಮೂಲಸೌಕರ್ಯ ಉಪಕರಣಗಳನ್ನು ಉತ್ಪಾದಿಸುವ ಬೆಂಗಳೂರಿನ 'ಆನ್ ಲಾನ್ ಟೆಕ್ನಾಲಜಿ ಸಲ್ಯೂಷನ್ಸ್ ಲಿಮಿಟೆಡ್, ಸ್ವಿಟ್ಜರ್‌ಲೆಂಡ್‌ನ 'ಮೆಸರ್ಸ್ ಬುಕರ್ ಮುನಿಸಿಪಲ್' ಸಹಯೋಗದಲ್ಲಿ ಯಂತ್ರವನ್ನು ತಯಾರಿಸಿದೆ.

'ಕೇಂದ್ರ ಸರ್ಕಾರದ 'ಮೇಕ್ ಇನ್ ಇಂಡಿಯಾ' ಉಪಕ್ರಮದಡಿ ತಯಾರಿಸಲಾಗಿದೆ. ರನ್‌ವೇಯಿಂದ ಮೊಳೆಗಳು ಹಾಗೂ ಚೂಪಾದ ಲೋಹದ ತುಣುಕುಗಳನ್ನು ಯಂತ್ರ ತೆರವು ಗೊಳಿಸಲಿದೆ. ಮುಖ್ಯವಾಗಿ, ರನ್ ವೇಯಲ್ಲಿನ ಅಪಾಯಕಾರಿ ಪಾಚಿ ತೆಗೆದು, ದೂಳನ್ನೂ ಹೀರಿಕೊಳ್ಳಲಿದೆ' ಎಂದು ಎಂ.ಬಿ. ಪಾಟೀಲ ವಿವರಿಸಿದರು.

ಈ ಮಾದರಿಯ ಎರಡು ವಾಹನಗಳ ಕೀಗಳನ್ನು ನೋಯ್ಡಾ ವಿಮಾನ ನಿಲ್ದಾಣದ ಪ್ರತಿನಿಧಿ ಪ್ರದೀಪ್ ರಾಣಾ ಅವರಿಗೆ ಸಚಿವ ಪಾಟೀಲ ಹಸ್ತಾಂತರಿಸಿದರು.

'ನಗರದ ರಸ್ತೆಗಳನ್ನು ಸ್ವಚ್ಛ ಮಾಡುವ 'ಸ್ವೀಪಿಂಗ್ ಮಿಷಿನ್' ತಯಾರಿಕೆಗೂ ಆನ್ ಲಾನ್‌ನಂತಹ ಕಂಪನಿಗಳು ಬುನಾದಿಯಾಗಿವೆ. ನಮ್ಮ ಕೈಗಾರಿಕಾ ನೀತಿಯ (2025-30) ಬೆಂಬಲ ಹಾಗೂ ಗುಣಮಟ್ಟ ಪ್ರಮಾಣಪತ್ರ ಪ್ರೋತ್ಸಾಹಕ ಕ್ರಮಗಳ ಮೂಲಕ ಇಂತಹ ಕಂಪನಿಗಳಿಗೆ ಉತ್ತೇಜನ ನೀಡುತ್ತದೆ' ಎಂದರು.

'ಫಾಕ್ಸ್ ಕಾನ್ ಕಂಪನಿಯು 30 ಸಾವಿರ ಜನರಿಗೆ ಉದ್ಯೋಗ ನೀಡಿದ್ದು, ಇದರಲ್ಲಿ ಶೇ 80ರಷ್ಟು ಮಂದಿ ಮಹಿಳೆಯರೇ ಇದ್ದಾರೆ. ಮುಂದಿನ ದಿನಗಳಲ್ಲಿ ಇನ್ನೂ 20 ಸಾವಿರ ಉದ್ಯೋಗ ಸೃಷ್ಟಿಯಾಗಲಿವೆ. ಚೀನಾ ಮತ್ತು ವಿಯೆಟ್ನಾಂ ರೀತಿ ತಯಾರಿಕಾ ವಲಯದಲ್ಲಿ ಮುಂಚೂಣಿಗೆ ತರುವ ನಿಟ್ಟಿನಲ್ಲಿ ಕೆಲಸ ನಡೆಯುತ್ತಿದೆ' ಎಂದು ತಿಳಿಸಿದರು.

ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಪಿ.ಎಂ. ಉನ್ನಿಕೃಷ್ಣನ್ ನಾಯರ್, ಮಾಜಿ ಶಾಸಕ ವೆಂಕಟರಮಣ, ಲೆಕ್ಕಪರಿಶೋಧಕ ಜಿ.ಜಿ.ಪಾಟೀಲ, ನೋಯ್ಡಾ ವಿಮಾನ ನಿಲ್ದಾಣದ ಲೀಡ್ ಗ್ರೌಂಡ್ ವಿನೋದ್ ಉಪಸ್ಥಿತರಿದ್ದರು.

'ನರೇಗಾ ಉಳಿಸಿ' ಹೋರಾಟ: 8ಕ್ಕೆ ಸಭೆ– ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನರೇಗಾ ಉಳಿಸಿ ಹೋರಾಟದ ರೂಪುರೇಷೆಗಳ ಕುರಿತು ಚರ್ಚಿಸಲು ಇದೇ 8ರಂದು ಪಕ್ಷದ ಎಲ್ಲ ಶಾಸಕರು, ಪರಿಷತ್ ಸದಸ್ಯರು ಮತ್ತು ಸಂಸದರ ಸಭೆ ಕರೆಯಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

'ಲಲಿತ್ ಅಶೋಕ ಹೋಟೆಲ್‌ನಲ್ಲಿ ಸಂಜೆ 6 ಗಂಟೆಗೆ ನಡೆಯಲಿರುವ ಈ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷರು, ಉಸ್ತುವಾರಿ ಎಐಸಿಸಿ ಕಾರ್ಯದರ್ಶಿಗಳು ಭಾಗವಹಿಸಲಿದ್ದಾರೆ' ಎಂದಿದ್ದಾರೆ.

ಡಿ.ಕೆ. ಶಿವಕುಮಾರ್

'ಯುಪಿಎ ಸರ್ಕಾರ ಜಾರಿಗೆ ತಂದಿದ್ದ ನರೇಗಾ ಕಾಯ್ದೆಯು ಗ್ರಾಮೀಣ ಭಾಗದ ಕಾರ್ಮಿಕ ವರ್ಗಕ್ಕೆ ಜೀವನದ ಆಸರೆಯಾಗಿತ್ತು. ಈ ಕಾಯ್ದೆಯ ಹೆಸರು ಮತ್ತು ಮೂಲ ಆಶಯಗಳನ್ನು ಬದಲಿಸಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ, ಗ್ರಾಮೀಣ ಜನರಿಗೆ ಅನ್ಯಾಯ ಮಾಡಿದೆ. ನರೇಗಾ ಯೋಜನೆಯ ಮೂಲ ಸ್ವರೂಪವನ್ನು ಮರುಸ್ಥಾಪಿಸಬೇಕೆಂದು ಆಗ್ರಹಿಸಿ ದೇಶದಾದ್ಯಂತ ಪಕ್ಷವು 'ನರೇಗಾ ಬಚಾವೊ ಸಂಗ್ರಾಮ' ಕೈಗೊಳ್ಳಲು ನಿರ್ಧರಿಸಿದೆ. ಈ ಹೋರಾಟದ ಕುರಿತು ಚರ್ಚಿಸಲು ಈ ಸಭೆ ಆಯೋಜಿಸಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಶ್ರೀಪುರಂದರದಾಸರ, ತ್ಯಾಗರಾಜರ ಆರಾಧನೆ, ವಾರ್ಷಿಕೋತ್ಸವ ಸಮಾರಂಭ: ರಾಮತಾರಕ ಹೋಮ, ದಕ್ಷಿಣಾಮೂರ್ತಿ ಹೋಮ, ಸಂಗೀತ ಕಛೇರಿ, ಆಯೋಜನೆ: ಶ್ರೀಪುರಂದರ ತ್ಯಾಗರಾಜ ದೇವಾಲಯ, ಸಂಗೀತ ಸೇವಾ ಮಂಡಲಿ, ಸ್ಥಳ: ಶ್ರೀಭವಾನಿ ಶಂಕರ ದೇವಸ್ಥಾನ, ವಸಂತಪುರ, ಬೆಳಿಗ್ಗೆ 8.30ರಿಂದ

'ವಿಮರ್ಶೆ–ಸಮಕಾಲೀನ ಸಂದರ್ಭ' ರಾಷ್ಟ್ರೀಯ ಸಂವಾದ: ಉದ್ಘಾಟನೆ: ಎಚ್.ಎಸ್. ಶಿವಪ್ರಕಾಶ್, ಪ್ರಾಸ್ತಾವಿಕ ನುಡಿ: ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಮೋಹನ್ ಕುಮಾರ್ ಕೊಂಡಜ್ಜಿ, 'ವಿಮರ್ಶೆ–ಭಾರತೀಯ ಸಂದರ್ಭ' ಗೋಷ್ಠಿ: ಉದಯನ್ ವಾಜಪೇಯಿ, 'ವಿಮರ್ಶೆ–ಕನ್ನಡದ ಸಂದರ್ಭ' ಗೋಷ್ಠಿ: ರಾಜೇಂದ್ರ ಚೆನ್ನಿ, 'ವಿಮರ್ಶೆ–ದಲಿತ ಮತ್ತು ಮಹಿಳಾ ಸಂದರ್ಭ' ಗೋಷ್ಠಿ: ತಾರಿಣಿ ಶುಭದಾಯಿನಿ, ಆಯೋಜನೆ: ರಾಷ್ಟ್ರಕವಿ ಡಾ.ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

ಎಚ್.ಎಸ್. ಶಿವಪ್ರಕಾಶ್

ವಿಶ್ವ ಬ್ರೈಲ್ ದಿನ ಮತ್ತು ನರ್ಮದಾ ದಿನ: ಅತಿಥಿಗಳು: ಮೇಘನಾ ಕೆ.ಟಿ., ಸಿದ್ಧಪ್ಪ ಮಗರಿ, ಅಧ್ಯಕ್ಷತೆ: ವಿಷ್ಣುಭರತ್ ಅಲಂಪಲ್ಲಿ, ಉಪಸ್ಥಿತಿ: ಎ. ಪ್ರಕಾಶ್, ಆಯೋಜನೆ ಮತ್ತು ಸ್ಥಳ: ಎಪಿಎಸ್ ಎಜುಕೇಷನಲ್ ಟ್ರಸ್ಟ್, ಎನ್.ಆರ್. ಕಾಲೊನಿ, ಬೆಳಿಗ್ಗೆ 10

'ಪ್ರಪೋಸಲ್ ರೈಟಿಂಗ್ ಆ್ಯಂಡ್ ರಿಸರ್ಚ್ ಎಥಿಕ್ಸ್ ಇನ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ' ಶಿಬಿರದ ಉದ್ಘಾಟನೆ: ಎಸ್.ಎಂ. ಜಯಕರ, ಅತಿಥಿಗಳು: ಸತ್ಯಂ ಸುವಾಸ್, ಪ್ರವೀಣ್ ಕುಮಾರ್, ಕೆ.ಟಿ. ಶಾಂತಲಾ, ಎನ್. ನಾಗಯ್ಯ, ಅಶೋಕ್ ಡಿ. ಹಂಜಗಿ, ಆಯೋಜನೆ: ಅನುಸಂಧಾನ ನ್ಯಾಷನಲ್ ರಿಸರ್ಚ್ ಫೌಂಡೇಷನ್, ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಪ್ರೊ.ವಿ.ಬಿ. ಕುಟಿನ್ಹೊ ಸೆಮಿನಾರ್ ಹಾಲ್, ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು, ಬೆಳಿಗ್ಗೆ 11

ಧ್ವನಿಗಳ ಹುಡುಕಾಟ: 'ಜರ್ನಿ ಎ ಟು ಇ–ಟ್ರಾನ್ಸ್‌ಮ್ಯಾನ್ ಒಬ್ಬರ ಧ್ವನಿಯ ಹುಡುಕಾಟದ ಕಥೆ': ರೂಮಿ ಹರೀಶ್, ವಿನ್ಯಾಸ: ದಾದಾಪೀರ್ ಜೈಮನ್, ನಿರ್ದೇಶನ: ಜೇಮ್ಸ್ ಬ್ರೂನರ್, ಗೋಷ್ಠಿ: ದು. ಸರಸ್ವತಿ, ಶರಣ್ಯ ರಾಮ್ ಪ್ರಕಾಶ್, ಬಾಲಕೃಷ್ಣ ರಾಘವನ್, ಸ್ಥಳ: ಸಭಾ, ಕಾಮರಾಜ ರಸ್ತೆ, ಶಿವಾಜಿನಗರ, ಸಂಜೆ 5.30

ಮಾರ್ಗಶೀರ್ಷೋತ್ಸವ: ವೀಣಾ ವಾದನ: ರಮಣ ಬಾಲಚಂದರ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಕೃಷಿಕರ ಸಂಖ್ಯೆಯಲ್ಲಿ ಇಳಿಮುಖ: ಬಾರದ ರಾಸುಗಳು, ಗ್ರಾಮಸ್ಥರ ಬೇಸರ

ಶಿವಗಂಗೆ: ನಡೆಯದ ದನಗಳ ಜಾತ್ರೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೆಸರಾಗಿದ್ದ ನೆಲಮಂಗಲ ತಾಲ್ಲೂಕಿನ 'ಶಿವಗಂಗೆ ಗಂಗಾಧರೇಶ್ವರ ದನಗಳ ಜಾತ್ರೆ' ಈ ವರ್ಷ ನಡೆದಿಲ್ಲ.

'ವರ್ಷದಿಂದ ವರ್ಷಕ್ಕೆ ಆಕರ್ಷಣೆ ಕಳೆದುಕೊಳ್ಳುತ್ತಿದ್ದ ಜಾತ್ರೆ ಈ ವರ್ಷ ಸಂಪೂರ್ಣ ನಿಂತು ಹೋಗಿರುವುದು ಬೇಸರ ತಂದಿದೆ. ಕೆಲವು ವರ್ಷಗಳ ಹಿಂದೆ ಸಾವಿರಕ್ಕೂ ಅಧಿಕಾರ ಹಸುಗಳು ಜಾತ್ರೆಗೆ ಬರುತ್ತಿದ್ದವು. ಇಲ್ಲಿನ ಹಿಪ್ಪೆ ತೋಪು ಭರ್ತಿಯಾಗಿ ಪಕ್ಕದ ಹೊಲಗಳಲ್ಲಿಯೂ ಜಾನುವಾರುಗಳನ್ನು ಕಟ್ಟುತ್ತಿದ್ದರು' ಎಂದು ಶಿವಗಂಗೆ ಸಿದ್ದರಾಜು ಹೇಳಿದರು.

'ನಮ್ಮ ಭಾಗದಲ್ಲಿ ಕೆಐಡಿಬಿಗೆ ರೈತರ ಜಮೀನು ಹೋಗಿದ್ದು, ವ್ಯವಸಾಯ ಮಾಡುವವರು ಇಲ್ಲ, ಜಾನುವಾರುಗಳನ್ನು ಸಾಕುತ್ತಿಲ್ಲ. ಇದರಿಂದ ಜಾತ್ರೆಗೆ ದನಗಳೇ ಬಂದಿಲ್ಲ. ಹಿಪ್ಪೆ ತೋಪು ಕಡಿಮೆಯಾಗಿದೆ. ಒಂದು ಕಡೆ ಪ್ರವಾಸಿ ಮಂದಿರ ಇನ್ನೊಂದು ಕಡೆ ಯಾತ್ರಿ ನಿವಾಸ ನಿರ್ಮಾಣ ಆಗಿ ದನಗಳ ಜಾತ್ರೆಗೆ ಜಾಗವೂ ಇಲ್ಲವಾಗಿದೆ' ಎಂದರು.

ಜಾನುವಾರುಗಳು ಸೇರುತ್ತಿದ್ದ ಹಿಪ್ಪೆ ತೋಪು

'ಅಕ್ಕಪಕ್ಕದ ಜಿಲ್ಲೆ ತಾಲ್ಲೂಕುಗಳಿಂದ ರೈತರು ಜಾತ್ರೆಗೆ ರಾಸುಗಳನ್ನು ಕರೆತರುತ್ತಿದ್ದರು. ರೈತರು ಕೃಷಿಯನ್ನು ಯಂತ್ರಗಳ ಮೂಲಕ ಮಾಡುತ್ತಿರುವುದು, ರಾಸುಗಳ ಸಾಕಾಣಿಕೆ ವೆಚ್ಚದ ಹೆಚ್ಚಳದಿಂದ ಗ್ರಾಮೀಣ ಜನ ವಿಮುಖರಾಗುತ್ತಿದ್ದಾರೆ' ಎಂದು ರೈತ ಆನಂದ್ ಹೇಳಿದರು.

'ನಾಟಿ ದನ ಸಾಕುವುದನ್ನು ಬಿಡುತ್ತಿದ್ದಾರೆ. ಹಾಗಾಗಿ ಜಾತ್ರೆಗೆ ಜಾನುವಾರುಗಳು ಬರುತ್ತಿಲ್ಲ. ಜಾತ್ರೆ ರಾಸುಗಳ ಮಾರಾಟಕ್ಕೆ ಅಷ್ಟೇ ಅಲ್ಲ. ಹತ್ತಾರು ಜನಕ್ಕೆ ಜೀವನೋಪಾಯದ ದಾರಿಯಾಗಿತ್ತು. ಕೊಳ್ಳುವವರ ಮಾರುವವರ ಮಧ್ಯೆ ದಳ್ಳಾಳಿಗಳು ವ್ಯಾಪಾರ ಕುದುರಿಸಿ ಕಮಿಷನ್ ಪಡೆಯುತ್ತಿದ್ದರು. ಸಣ್ಣ ಹೋಟೆಲ್, ಅಂಗಡಿಗಳ ತೆರೆದು ವ್ಯಾಪಾರ ಮಾಡುತ್ತಿದ್ದರು' ಎಂದರು.

'ಹತ್ತಾರು ವರ್ಷಗಳಲ್ಲಿ ಇದೇ ಮೊದಲ ಬಾರಿ ಒಂದು ರಾಸು ಕೂಡ ಕಾಣದೆ ಮುರೀಚಿಕೆಯಾಗಿದೆ. ಈ ಹಿಂದೆ ನೂರಾರು ಕಿಲೋಮೀಟರ್ ಇಂದ ರಾಸುಗಳನ್ನು ಕರೆದುಕೊಂಡು ಬರುತ್ತಿದ್ದರು. ಈ ಬಾರಿ ಯಾರು ಬಂದಿಲ್ಲ. ಪಶು ಸಂಗೋಪನೆ ಇಲಾಖೆಯಿಂದ ಉತ್ತಮ ರಾಸುಗಳಿಗೆ ಜಾತ್ರೆ ದಿನ ಬಹುಮಾನ ವಿತರಣೆ ಮಾಡುತ್ತಿದ್ದರು. ಆದರೆ ಈ ವರ್ಷ ಇದೆಲ್ಲ ಕಾಣದಾಗಿದೆ' ಎಂದು ರೈತ ಹನುಮಂತರಾಯಪ್ಪ ತಿಳಿಸಿದರು.

'ಘಾಟಿ ಜಾತ್ರೆಯ ನಂತರ ಶಿವಗಂಗೆ ಜಾತ್ರೆ ಸೇರಬೇಕಿತ್ತು. ಗ್ರಾಮ ಪಂಚಾಯಿತಿ ಪಶುಸಂಗೋಪನೆ ಇಲಾಖೆ ಹಾಗೂ ಧಾರ್ಮಿಕ ದತ್ತಿ ಇಲಾಖೆ ಸಹಕಾರದಲ್ಲಿ ಜಾತ್ರಾ ಮೈದಾನ ಸ್ವಚ್ಛತೆ, ನೀರಿನ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ ಸೇರಿ ಅಗತ್ಯ ಪೂರ್ವಭಾವಿ ಸಿದ್ಧತೆ ಮಾಡಿ ಕೊಂಡಿದ್ದೆವು. ಆದರೆ ರಾಸುಗಳು ಬಂದಿಲ್ಲ' ಎಂದು ಗಂಗಾಧರೇಶ್ವರ ಹೊನ್ನಾದೇವಿ ದೇವಾಲಯದ ಕಾರ್ಯ ನಿರ್ವಹಣಾಧಿಕಾರಿ ಎಂ.ಎನ್.ಬೃಂದಾ ಮಾಹಿತಿ ನೀಡಿದರು.

'ಇದೇ ಮೊದಲ ಬಾರಿಗೆ ಒಂದೇ ಒಂದು ರಾಸು ಜಾತ್ರೆಗೆ ಬಂದಿಲ್ಲ. ರೈತರಲ್ಲಿ ಜಾತ್ರೆಯ ಆಸಕ್ತಿ ಕಡಿಮೆ ಆದಂತಿದೆ. ನೀರು, ಊಟ, ಬಹುಮಾನ ಎಲ್ಲ ಸೌಲಭ್ಯ ಕೊಟ್ಟರೂ ಜಾತ್ರೆಗೆ ದನ ಬಾರದಿರುವುದು ಆಶ್ಚರ್ಯ' ಎಂದು ಶಿವಗಂಗೆ ಗ್ರಾಮ ಪಂಚಾಯತಿ ಅಧ್ಯಕ್ಷ ಶ್ರೀನಿವಾಸ್ ಹೇಳಿದರು.

'ಜಾತ್ರೆ ಕಾಲಕ್ಕೆ ಇಲ್ಲಿನ ಶಾಲೆಗಳಿಗೆ ಒಂದು ವಾರ ರಜೆ ಕೊಡುತ್ತಿದ್ದರು. ರಾಸುಗಳ ಸಂಖ್ಯೆ ಜಾಸ್ತಿ ಇರುತ್ತಿತ್ತು. ಓಡಾಡಲು ಕೂಡ ಸಾಧ್ಯವಾಗುತ್ತಿರುತ್ತಿಲ್ಲ. ಆದರೆ, ನಮ್ಮ ಕಣ್ಣಮುಂದೆ ಜಾತ್ರೆ ದನವೇ ಇಲ್ಲವಾಗಿವೆ' ಎಂದು ಹೊಸಪಾಳ್ಯದ ಎಸ್ ಆರ್ ಸುರೇಶ್ ತಿಳಿಸಿದರು.

ಬೃಂದಾ

ಶ್ರೀನಿವಾಸ್

ಸುರೇಶ್

ಕೆಪಿಸಿಎಲ್ ನೇಮಕ: ಎಂಟೇ ದಿನಕ್ಕೆ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿಎಲ್) 622 ಹುದ್ದೆಗಳ ನೇಮಕಾತಿಗೆ ಡಿ.27 ಮತ್ತು 28ರಂದು ನಡೆದ ಮರುಪರೀಕ್ಷೆಯ ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೋಮವಾರ ಪ್ರಕಟಿಸಿದೆ.

ಪರೀಕ್ಷೆ ನಡೆದು ಎಂಟು ದಿನಗಳಲ್ಲೇ ಫಲಿತಾಂಶವನ್ನೂ ಪ್ರಕಟಿಸಿದ್ದು, ಆಕ್ಷೇಪಣೆಗಳು ಇದ್ದಲ್ಲಿ ಜ.7ರ ಒಳಗೆ ಸಲ್ಲಿಸಬಹುದು. ವಿವಿಧ ಹುದ್ದೆಗಳ ನೇಮಕಾತಿಗೆ ನಡೆಸಿದ್ದ ಕನ್ನಡ ಕಡ್ಡಾಯ ಪರೀಕ್ಷೆಯ ಅಂತಿಮ ಅಂಕಪಟ್ಟಿಯನ್ನೂ ಪ್ರಕಟಿಸಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಮಾಹಿತಿ ನೀಡಿದ್ದಾರೆ.

ಹಿಂದೆ ನಡೆಸಲಾಗಿದ್ದ ನೇಮಕಾತಿ ಪರೀಕ್ಷೆಯ ಫಲಿತಾಂಶಗಳನ್ನು ಸುಪ್ರೀಂ ಆದೇಶದಂತೆ ರದ್ದು ಮಾಡಲಾಗಿತ್ತು. ಬಳಿಕ, ಔಷಧ ಮೇಲ್ವಿಚಾರಕರು, ಕೆಮಿಕಲ್ ಸೂಪರ್ ವೈಸರ್, ವಿವಿಧ ವಿಭಾಗಗಳ ಸಹಾಯಕ ಎಂಜಿನಿಯರ್, ವಿವಿಧ ವಿಭಾಗಗಳ ಕಿರಿಯ ಎಂಜಿನಿಯರ್ ಸೇರಿ ಎಲ್ಲ ಹುದ್ದೆಗಳಿಗೂ ಮರು ಪರೀಕ್ಷೆ ನಡೆಸಲಾಗಿತ್ತು.

ಗವಿಮಠ ಜಾತ್ರೆ: ಭಕ್ತರ ಮಹಾಸಂಗಮ

ಲಕ್ಷಾಂತರ ಜನ ಸಮೂಹದ ಮಧ್ಯೆ ಸಂಭ್ರಮದ ರಥೋತ್ಸವ

• ಪ್ರಮೋದ ಕುಲಕರ್ಣಿ

ಕೊಪ್ಪಳ: 'ದಕ್ಷಿಣ ಭಾರತದ ಕುಂಭಮೇಳ' ಎಂಬ ಕೀರ್ತಿಯುಳ್ಳ ಕೊಪ್ಪಳದ ಗವಿಮಠದ ಜಾತ್ರೆಯ ಮಹಾ ರಥೋತ್ಸವ ಸೋಮವಾರ ಸಂಜೆ ಲಕ್ಷಾಂತರ ಭಕ್ತರ ಮಹಾ ಸಂಗಮದೊಂದಿಗೆ ಸಂಭ್ರಮದಿಂದ ನೆರವೇರಿತು.

ವಿವಿಧ ಜಿಲ್ಲೆ, ನೆರೆರಾಜ್ಯಗಳಿಂದಲೂ ಸಾಗರೋಪಾದಿಯಲ್ಲಿ ಬಂದಿದ್ದ ಭಕ್ತರು ಗವಿಸಿದ್ಧೇಶ್ವರ ಗದ್ದುಗೆಯ ದರ್ಶನ ಪಡೆದು ಮಹಾದಾಸೋಹ ಸವಿದ ಬಳಿಕ ಅದ್ದೂರಿ ರಥೋತ್ಸವಕ್ಕೆ ಸಾಕ್ಷಿಯಾದರು.

ಮೇಘಾಲಯದ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಅವರು ಧ್ವಜಾರೋಹಣ ನೆರವೇರಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ಇದಕ್ಕೂ ಮೊದಲು ಮಠದಿಂದ ಸಾಂಪ್ರದಾಯಿಕ ಕಾರ್ಯಕ್ರಮಗಳು ಜರುಗಿದವು.

ಕಾಲು ನೋವಿನ ಕಾರಣಕ್ಕೆ ಊರುಗೋಲಿನ ನೆರವಿನೊಂದಿಗೆ ಬಂದ, ಮೂಲತಃ ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ಬಿನ್ನಾಳ ಗ್ರಾಮದವರಾದ ಸಿ.ಎಚ್. ವಿಜಯಶಂಕರ್ ಅವರು ಲಕ್ಷಾಂತರ ಜನರನ್ನು ನೋಡಿ ವಿಸ್ಮಯರಾದರು. ತಲೆ ಭಾಗಿ ಜನಸಮೂಹಕ್ಕೆ ನಮಸ್ಕರಿಸಿದರು.

'ಐತಿಹಾಸಿಕ, ಧಾರ್ಮಿಕ, ಪಾರಂಪರಿಕ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದು ಖುಷಿ ನೀಡಿದೆ. ಬಹಳ ಹೆಮ್ಮೆ ಹಾಗೂ ಅಭಿಮಾನದಿಂದ ಜಾತ್ರೆಗೆ ಚಾಲನೆ ಕೊಟ್ಟಿದ್ದೇನೆ. ದಸರಾ ವೈಭವ ನೋಡಲು ಮೈಸೂರಿಗೆ, ಜಾತ್ರೆಯ ಸೊಬಗು ಕಾಣಲು ಕೊಪ್ಪಳಕ್ಕೆ ಬರಬೇಕು' ಎಂದು ಹೇಳಿದರು.

ಗವಿಮಠದ ಆವರಣದಿಂದ ಒಂದು ಕಿ.ಮೀ. ದೂರದ ಬಸವೇಶ್ವರ ವೃತ್ತದ ತನಕ ಕಣ್ಣು ಹಾಯಿಸಿದಷ್ಟೂ ದೂರ ಜನಜಂಗುಳಿಯಿದ್ದರೂ ಮಹಾರಥೋತ್ಸವಕ್ಕೆ ಚಾಲನೆ ನೀಡಿದ ಸಂದರ್ಭದಲ್ಲಿ ಗಾಢಮೌನ ಆವರಿಸಿತ್ತು.

ಧ್ವಜಾರೋಹಣದ ವೇಳೆ ಭಕ್ತಗಣ ಭಕ್ತಿಯಿಂದ ಕೈ ಮುಗಿದು ಘೋಷಣೆಗಳನ್ನು ಮೊಳಗಿಸಿತು. ರಥ ಪಾದಗಟ್ಟೆ ತಲುಪಿ ಸ್ವಸ್ಥಾನಕ್ಕೆ ಮರಳಿ ಬಂದ ಬಳಿಕ ಭಕ್ತರು ಕೈಮುಗಿದು ಚಪ್ಪಾಳೆ ಹೊಡೆದು ಭಕ್ತಿ ಸಮರ್ಪಿಸಿದರು.

> **ಕೈಯಲ್ಲಿ ಸತ್ಕಾರ್ಯ, ತಲೆಯಲ್ಲಿ ಸದ್ವಿಚಾರ, ಬಾಯಲ್ಲಿ ಸವಿ ಮಾತು, ಮನದಲ್ಲಿ ಸವಿಪ್ರೇಮ ಇದ್ದರೆ ಬದುಕು ಸಾರ್ಥಕವಾಗುತ್ತದೆ. ಆಗ ಗವಿಸಿದ್ಧೇಶ್ವರನೇ ಬಂದು ನಿಮ್ಮ ಮನೆ ಜಗುಲಿ ಮೇಲೆ ದೀಪ ಹಚ್ಚುತ್ತಾನೆ**
> **ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ**
> ಗವಿಮಠ ಕೊಪ್ಪಳ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಕೊಪ್ಪಳದ ಗವಿಸಿದ್ಧೇಶ್ವರ ಮಠದ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಲಕ್ಷಾಂತರ ಭಕ್ತರ ನಡುವೆ ಸಾಗಿದ ರಥ ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಸುದ್ದಿ 2 ನಿಮಿಷ

ನದಿ ಜೋಡಣೆ ವಿರೋಧಿಸಿ ಸಮಾವೇಶ 11ಕ್ಕೆ: ಸ್ವರ್ಣವಲ್ಲೀ ಶ್ರೀ

ಶಿರಸಿ: 'ಬೇಡ್ತಿ-ವರದಾ, ಅಘನಾಶಿನಿ-ವೇದಾವತಿ ನದಿ ಜೋಡಣೆ ಯೋಜನೆಗಳು ಜೀವವೈವಿಧ್ಯಕ್ಕೆ ಮಾರಕವಾಗಿದ್ದು, ಇದನ್ನು ಕೇಂದ್ರ, ರಾಜ್ಯ ಸರ್ಕಾರ ತಕ್ಷಣವೇ ಕೈಬಿಡಬೇಕು' ಎಂದು ಒತ್ತಾಯಿಸಿ ಶಿರಸಿಯ ಎಂಇಎಸ್ ಕಾಲೇಜು ಮೈದಾನದಲ್ಲಿ ಜ.11ರಂದು ಜನ ಸಮಾವೇಶ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಗೌರವಾಧ್ಯಕ್ಷ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಅವರು, 'ಸಮಾವೇಶದಲ್ಲಿ 20 ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈ ಮೂಲಕ ಬೃಹತ್ ಹೋರಾಟಕ್ಕೆ ಚಾಲನೆ ನೀಡಲಾಗುವುದು' ಎಂದರು.

'ಕುಡಿಯುವ ನೀರು, ಕೃಷಿ, ನೀರಾವರಿ ನೆಪವೊಡ್ಡಿ ನದಿ ಜೋಡಣೆ ವಿಸ್ತೃತ ಯೋಜನಾ ವರದಿ ರೂಪಿಸಲು ಸರ್ಕಾರಗಳು ಮುಂದಾಗಿವೆ. ಆದರೆ, ಈ ಯೋಜನೆಯಲ್ಲಿ ಮೂರು ಜಲಾಶಯಗಳು, ಕಿಲೋಮೀಟರ್‌ಗಟ್ಟಲೆ ಉದ್ದದ ಸುರಂಗ ಮಾರ್ಗ ಮತ್ತು ಕಾಲುವೆಗಳ ನಿರ್ಮಾಣವು ಸೇರಿದೆ. ಇದು ಜಾರಿಯಾದಲ್ಲಿ ಲಕ್ಷಾಂತರ ಎಕರೆ ವಿಸ್ತೀರ್ಣದ ದಟ್ಟ ಅರಣ್ಯ ಮತ್ತು ಪರಿಸರ ನಾಶವಾಗುವುದು ನಿಶ್ಚಿತ' ಎಂದು ಸೋಮವಾರ ಪ್ರತಿಪಾದಿಸಿದರು.

'ಮೈಸೂರಿನಲ್ಲೂ ಕಂಬಳ'

ಮಂಗಳೂರು: ಕಂಬಳಕ್ಕೆ ರಾಜ್ಯದ ಕ್ರೀಡೆ ಸ್ಥಾನ ಲಭಿಸಿದ ಕಾರಣ ಮೈಸೂರು, ಶಿವಮೊಗ್ಗದಲ್ಲಿ ಕಂಬಳ ಆಯೋಜಿಸುವ ಪ್ರಸ್ತಾಪ ಮುನ್ನೆಲೆಗೆ ಬಂದಿದ್ದು ಮುಂದಿನ ವರ್ಷ ಯೋಜನೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಕಂಬಳ ಸಂಸ್ಥೆಯ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ ಬೆಳಪು ಸೋಮವಾರ ತಿಳಿಸಿದರು.

ಜಿಲ್ಲಾ ಕಂಬಳ ಸಮಿತಿ ಮತ್ತು ರಾಜ್ಯ ಸಂಸ್ಥೆಯ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಡಿಸಿಎಂ ಡಿ.ಕೆ ಶಿವಕುಮಾರ್ ಮೈಸೂರಿನಲ್ಲಿ ಕಂಬಳ ಆಯೋಜಿಸಲು ಮುಂದಾಗಿದ್ದಾರೆ. ಹೀಗಾಗಿ, ಸಂಸ್ಥೆಯ ಪ್ರತಿನಿಧಿಗಳು ಮೈಸೂರಿಗೆ ತೆರಳಿ ಪರಿಶೀಲಿಸಿದ್ದು, ದಸರಾ ಸಂದರ್ಭ ಆಯೋಜಿಸುವ ಉದ್ದೇಶವಿದೆ ಎಂದರು.

ಶಿವಮೊಗ್ಗ ಮತ್ತು ಬೆಂಗಳೂರಿನಲ್ಲಿ ಕಂಬಳ ಆಯೋಜನೆಗೆ ಮತ್ತೆ ಅವಕಾಶ ಸಿಗುವ ಭರವಸೆ ಇದೆ. ಉತ್ತರ ಕನ್ನಡದಲ್ಲಿ ಆಯೋಜಿಸಲು ಸಚಿವ ಮಂಕಾಳ ವೈದ್ಯ ಉತ್ಸಾಹ ತೋರಿಸಿದ್ದಾರೆ. ಕಂಬಳದಲ್ಲಿ ತೊಡಗಿಸಿಕೊಂಡವರಿಗೆ ಕಾರ್ಮಿಕ ಕಾರ್ಡ್ ನೀಡುವುದಕ್ಕೆ ಸಂಬಂಧಿಸಿ ಮಾತುಕತೆ ನಡೆದಿದೆ ಎಂದರು.

ಶಿರೂರು ಮಠದ ವೇದವರ್ಧನತೀರ್ಥ ಶ್ರೀ

ಮಠಕ್ಕೆ ಬರುವವರು ಮೊದಲೇ ತಿಳಿಸಿದರೆ, ಹೂ ಕಟ್ಟುವುದು, ಆವರಣದ ಕಸಗುಡಿಸುವುದು ಸೇರಿದಂತೆ ಅನೇಕ ಕೆಲಸಗಳಿಗೆ ಅವಕಾಶ ಇದೆ

'ಭಕ್ತರ ಸೇವೆಗೆ ಮಠ ಮುಕ್ತ'

ಮಂಗಳೂರು: ಉಡುಪಿ ಕೃಷ್ಣಮಠದಲ್ಲಿ ಭಕ್ತರ ಸೇವೆಗೆ ತಮ್ಮ ಅವಧಿಯಲ್ಲಿ ಮುಕ್ತ ಅವಕಾಶ ನೀಡಲಾಗುವುದು ಎಂದು ಶೀರೂರು ಮಠದ ವೇದವರ್ಧನತೀರ್ಥ ಸ್ವಾಮೀಜಿ ತಿಳಿಸಿದರು.

ಇದೇ 18ರಂದು ಪರ್ಯಾಯ ಆರಂಭವಾಗಲಿದ್ದು, ಅದರ ಪೂರ್ವಭಾವಿ ಸಂಚಾರದಲ್ಲಿರುವ ಶ್ರೀಗಳು ಮಂಗಳೂರಿನಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.


ವೇದವರ್ಧನತೀರ್ಥ ಶ್ರೀ

'ಇದು ಕೃಷ್ಣಭಕ್ತರ ಪರ್ಯಾಯ, ಎಲ್ಲರ ಪರ್ಯಾಯ' ಎಂದು ಬಣ್ಣಿಸಿದ ಶ್ರೀಗಳು ರಜಾದಿನಗಳು ಮತ್ತಿತರ ಸಂದರ್ಭದಲ್ಲಿ ಸಮಯ ಲಭಿಸಿದಾಗ ಅದನ್ನು ಮಠದ ಆವರಣದಲ್ಲಿ ವಿನಿಯೋಗಿಸಲು ಮುಂದಾಗಬೇಕು ಎಂದರು.

'ವೇದ ಓದಿದವರು 12 ವರ್ಷ ಅದರಲ್ಲೇ ಕಾಲ ಕಳೆಯುವುದರಿಂದ ಉದ್ಯೋಗದ ಕಡೆಗೆ ಗಮನ ಕೊಡಲು ಆಗುವುದಿಲ್ಲ. ಆದ್ದರಿಂದ ವೇದ ಪಂಡಿತರಿಗೆ ಆಶ್ರಯ ನೀಡಲು ಮಠ ಮುಂದಾಗಿದೆ. ಒಂದೇ ಕಂಠದಲ್ಲಿ ಮಠದಲ್ಲಿ ವೇದ ಪಾರಾಯಣ ಮಾಡಲು ಅವಕಾಶ ನೀಡಲಾಗುವುದು' ಎಂದರು.

ಎಲ್ಲರೂ ಬರಲಿ: ಪರ್ಯಾಯದ ಸಂದರ್ಭದಲ್ಲಿ ಮುಸ್ಲಿಮರು ಹೊರೆ ಕಾಣಿಕೆ ಸಮರ್ಪಿಸುವುದಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು 'ಎಲ್ಲರೂ ಬರಲಿ' ಎಂದು ತಿಳಿಸಿದರು.

ಮಠದ ದಿವಾನ ಉದಯಕುಮಾರ್ ಸರಳತ್ತಾಯ, 'ಹೊರೆಕಾಣಿಕೆ ತರುವವರಿಗೆ ವಿಶೇಷ ಗೌರವ ನೀಡಲಾಗುತ್ತದೆ. ಮೊದಲೇ ಮಾಹಿತಿ ನೀಡಬೇಕು. ಇಷ್ಟು ವರ್ಷ ಮುಸ್ಲಿಂ ಸಮುದಾಯದವರು ಮೊದಲೇ ತಿಳಿಸುತ್ತಿದ್ದರು. ಈ ಬಾರಿ ಅದನ್ನು ಮಾಡಿಲ್ಲ ಎಂದಷ್ಟೇ ಪರ್ಯಾಯ ಸಮಿತಿ ಹೇಳಿದೆ' ಎಂದು ಇದೇ ವೇಳೆ ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಹುಲಿ ಗಣತಿ ಆರಂಭ

38 ಅರಣ್ಯ ವಿಭಾಗಗಳಲ್ಲಿ ಗಣತಿಗಾಗಿ ಅಗತ್ಯ ತರಬೇತಿ –ಸಚಿವ ಈಶ್ವರ ಖಂಡ್ರೆ

ಪ್ರಜಾವಾಣಿ ವಾರ್ತೆ

ಬೀದರ್: 'ರಾಜ್ಯದ ಎಲ್ಲ ಅರಣ್ಯ ಪ್ರದೇಶಗಳಲ್ಲಿ ಸೋಮವಾರದಿಂದ (ಜ.5) ಹುಲಿ ಹಾಗೂ ಮಾಂಸಾಹಾರಿ ಪ್ರಾಣಿಗಳ ಗಣತಿ ಆರಂಭಗೊಂಡಿದೆ' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಇಲ್ಲಿ ತಿಳಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಕಾಳಿ, ಭದ್ರಾ, ನಾಗರಹೊಳೆ, ಬಂಡೀಪುರ, ಬಿ.ಆರ್.ಟಿ ಹುಲಿ ಸಂರಕ್ಷಿತ ಧಾಮ ಸೇರಿದಂತೆ ರಾಜ್ಯದ ಎಲ್ಲ ಅರಣ್ಯ ಪ್ರದೇಶದಲ್ಲಿ ಗಣತಿ ಆರಂಭವಾಗಿದೆ. ನಾಲ್ಕು ವರ್ಷಗಳಿಗೊಮ್ಮೆ ದೇಶದಾದ್ಯಂತ ಹುಲಿ ಅಂದಾಜು ಗಣತಿ ನಡೆಯುತ್ತಿದೆ' ಎಂದರು.

'ಈಗ ನಡೆಯುವುದು ಆರನೇ ಗಣತಿ. ಹಿಂದೆ 2006, 2010, 2014, 2018, 2022ರಲ್ಲಿ ಗಣತಿ ನಡೆದಿತ್ತು. ರಾಜ್ಯದಲ್ಲಿ ಸುಮಾರು 563 ಹುಲಿಗಳಿವೆ ಎಂಬ ಅಂದಾಜಿದೆ. ದೇಶದಲ್ಲೇ ರಾಜ್ಯ ಎರಡನೇ ಸ್ಥಾನದಲ್ಲಿತ್ತು' ಎಂದರು.

ಅರಣ್ಯ ಪ್ರದೇಶಗಳ ಪ್ರತಿ ವಲಯದಲ್ಲಿರುವ ಎಲ್ಲ 38 ಅರಣ್ಯ ವಿಭಾಗದ ಗಸ್ತುಗಳಲ್ಲಿ ಈ ಕಾರ್ಯ ನಡೆಯಲಿದೆ. ಇದಕ್ಕಾಗಿ ಕಳೆದ ಅಕ್ಟೋಬರ್–ಡಿಸೆಂಬರ್‌ನಲ್ಲಿ 5 ಹುಲಿ ಸಂರಕ್ಷಿತ ಪ್ರದೇಶಗಳಿಗೆ ಪ್ರತ್ಯೇಕವಾಗಿ ಮತ್ತು ರಾಜ್ಯದ ಎಲ್ಲಾ 13 ಅರಣ್ಯ ವೃತ್ತಗಳ ಮುಂಚೂಣಿ ಸಿಬ್ಬಂದಿಗೂ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.

ಮೂರು ದಿನ ಎಲ್ಲ ವಿಭಾಗಗಳಲ್ಲಿ ಮೂವರ ತಂಡ ನಿತ್ಯ 5 ಕಿ.ಮೀ. ಕಾಡಿನಲ್ಲಿ ಸಂಚರಿಸಿ ಹುಲಿ, ಚಿರತೆ ಸೇರಿ ಎಲ್ಲ ಮಾಂಸಾಹಾರಿ ಪ್ರಾಣಿಗಳ ಮತ್ತು ಆನೆಯ ಕಾಲು ಗುರುತು, ಲದ್ದಿ, ಪ್ರತ್ಯಕ್ಷ ದರ್ಶನ ಇತ್ಯಾದಿ ವಿವರ ಕಲೆ ಹಾಕಲಿದೆ. ಜ. 15ರಿಂದ 17ರವರೆಗೆ 14 ಅರಣ್ಯ ವಿಭಾಗಗಳಲ್ಲಿ 2ನೇ ಹಂತದ ಗಣತಿ ನಡೆಯಲಿದೆ. ಪ್ರತಿ ತಂಡ ಕಾಡಿನಲ್ಲಿ ಸಂಚರಿಸಿ ಜಿಂಕೆ, ಕಡವೆ, ಕಾಡೆಮ್ಮೆ, ಕಾಡುಕೋಣ ಸೇರಿ ಸಸ್ಯಾಹಾರಿ ಪ್ರಾಣಿಗಳ ದರ್ಶನದ ಮಾಹಿತಿ ಕಲೆ ಹಾಕಲಿದೆ. ಇದರಿಂದ ಎಲ್ಲಿ ಕ್ಯಾಮೆರಾ ಟ್ರ್ಯಾಪ್ ಅಳವಡಿಸಬೇಕು ಎಂಬುದನ್ನು ನಿರ್ಧರಿಸಲು ಅನುಕೂಲವಾಗುತ್ತದೆ ಎಂದರು.

ಹುಲಿ ಯೋಜನೆ ನಿರ್ದೇಶಕ ರಮೇಶ್ ಕುಮಾರ್ ಅವರನ್ನು ಎನ್.ಟಿ.ಸಿ.ಎ.ಗೆ ನೋಡಲ್ ಅಧಿಕಾರಿಯಾಗಿ ನಾಮನಿರ್ದೇಶನ ಮಾಡಲಾಗಿದೆ. ಇವರು ಈ ಅಂದಾಜಿನ ಉಸ್ತುವಾರಿ ವಹಿಸಲಿದ್ದಾರೆ. ಯಾವ ಪ್ರದೇಶದಲ್ಲಿ ಎಷ್ಟು ಹುಲಿ, ಇತರೆ ಮಾಂಸಾಹಾರಿ ಪ್ರಾಣಿಗಳಿವೆ. ಎಷ್ಟು ಸಸ್ಯಾಹಾರಿ ಪ್ರಾಣಿಗಳಿವೆ ಎಂದು ಪಟ್ಟಿಮಾಡಿ, ಅರಣ್ಯವಾರು ಎಷ್ಟು ಹುಲಿಗಳಿವೆ, ಅವುಗಳಿಗೆ ಆಹಾರವಾದ ಸಸ್ಯಾಹಾರಿ ಪ್ರಾಣಿಗಳು ಎಷ್ಟಿವೆ ಎಂದು ಗ್ರಹಿಸಿ ಕಾನನದ ಧಾರಣಾ ಸಾಮರ್ಥ್ಯ ಗುರುತಿಸಲು ಸೂಚಿಸಲಾಗಿದೆ ಎಂದು ವಿವರಿಸಿದರು.

'ಹುಲಿಗಳು ಕಾಡಿನಿಂದ ನಾಡಿಗೆ ಬರುತ್ತಿರುವುದನ್ನು ನೋಡಿದರೆ ಈ ಬಾರಿ ರಾಜ್ಯದಲ್ಲಿ ಹುಲಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದು ಗೋಚರಿಸುತ್ತಿದೆ. ಇದು ಗಣತಿಯಿಂದ ನಿಖರವಾಗಿ ತಿಳಿಯಲಿದೆ' ಎಂದು ಹೇಳಿದರು.

ಮುಖ್ಯಾಂಶಗಳು
- ಹಿಂದಿನ ಸಮೀಕ್ಷೆಯಂತೆ ರಾಜ್ಯದಲ್ಲಿ 563 ಹುಲಿಗಳಿರುವ ಅಂದಾಜು
- ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಗಣತಿ ಪ್ರಕ್ರಿಯೆ
- ಹುಲಿಗಳ ಸಂಖ್ಯೆ ವೃದ್ಧಿಸಿರುವ ಸಾಧ್ಯತೆ

2,300 ಕ್ಯಾಮೆರಾ ಟ್ರ್ಯಾಪ್ ಅಳವಡಿಕೆ

ಈಶ್ವರ್ ಖಂಡ್ರೆ

2ನೇ ಹಂತದ ಸಮೀಕ್ಷೆಯ ಮಾಂಸಾಹಾರಿ ಪ್ರಾಣಿಗಳ ದತ್ತಾಂಶ ಆಧರಿಸಿ ಮೂರನೇ ಹಂತದಲ್ಲಿ ಸೂಕ್ತ ಸ್ಥಳಗಳಲ್ಲಿ ಕ್ಯಾಮೆರಾ ಟ್ರ್ಯಾಪ್ ಅಳವಡಿಸಲಾಗುವುದು. 5 ಹುಲಿ ಮೀಸಲು ಪ್ರದೇಶಗಳಲ್ಲಿ 2,230 ಕ್ಯಾಮೆರಾ ಟ್ರ್ಯಾಪ್‌ಗಳಿದ್ದು, ಎಲ್ಲಾ 5 ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಕ್ಯಾಮೆರಾ ಟ್ರ್ಯಾಪ್ ಸಮೀಕ್ಷೆ ಆರಂಭವಾಗಿದೆ ಎಂದು ಸಚಿವ ಈಶ್ವರ ಖಂಡ್ರೆ ಅವರು ತಿಳಿಸಿದರು.

ನಾಗರಹೊಳೆ ಹುಲಿ ಮೀಸಲು ಪ್ರದೇಶ (600 ಕ್ಯಾಮೆರಾ ಟ್ರ್ಯಾಪ್), ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ (550), ಬಿಆರ್‌.ಟಿಯಲ್ಲಿ (300), ಭದ್ರಾದಲ್ಲಿ (330), ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ (450) ಕ್ಯಾಮೆರಾ ಟ್ರ್ಯಾಪ್ ಇವೆ ಎಂದೂ ವಿವರಿಸಿದರು.

ಹುಲಿ ಸಂರಕ್ಷಿತ ಪ್ರದೇಶದ ಹೊರಗೆ ಸಹ ಕ್ಯಾಮೆರಾ ಟ್ರ್ಯಾಪ್ ಅಳವಡಿಸಲು ಕ್ರಮ ವಹಿಸಲಾಗಿದೆ ಎಂದೂ ತಿಳಿಸಿದರು.

ಪದವಿ ಕಾಲೇಜು: ಶೇ 75 ದಾಖಲಾತಿ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕನಿಷ್ಠ ಶೇ 75ರಷ್ಟು ವಿದ್ಯಾರ್ಥಿಗಳ ದಾಖಲಾತಿ ಗುರಿ ನಿಗದಿ ಮಾಡಿ ಕಾಲೇಜು ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಹಲವು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಪ್ರತಿ ವರ್ಷವೂ ಕಡಿಮೆಯಾಗುತ್ತಿದ್ದು, ಹಲವು ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ನಿರಾಸಕ್ತಿ ತೋರುತ್ತಿದ್ದಾರೆ. ಹಾಗಾಗಿ, ಪ್ರವೇಶ ಹೆಚ್ಚಳಕ್ಕೆ ಆಯಾ ಕಾಲೇಜುಗಳ ಪ್ರಾಂಶುಪಾಲರು, ಅಧ್ಯಾಪಕರು ಹಾಗೂ ಬೋಧಕೇತರ ಸಿಬ್ಬಂದಿ ಒಟ್ಟಾಗಿ ಶ್ರಮಿಸಬೇಕು. 2026–27ನೇ ಶೈಕ್ಷಣಿಕ ಸಾಲಿನಲ್ಲಿ ಪ್ರತಿ ಕಾಲೇಜೂ ನಿಗದಿ ಮಾಡಿದ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಶೇ 75ರಷ್ಟು ದಾಖಲಾತಿ ಪಡೆಯಬೇಕು. ಈಗಾಗಲೇ ಶೇ 75ರಷ್ಟು ದಾಖಲಾತಿ ಹೊಂದಿರುವ ಕಾಲೇಜುಗಳು ಕನಿಷ್ಠ ಶೇ 10ರಷ್ಟು ಹೆಚ್ಚಳ ಮಾಡಿಕೊಳ್ಳಬೇಕು ಎಂದು ಇಲಾಖೆ ಸೂಚಿಸಿದೆ.

ಕಾಲೇಜುಗಳಲ್ಲಿ ದಾಖಲಾತಿ ಪ್ರಮಾಣ ಹೆಚ್ಚಿಸಲು ಪ್ರತಿ ಕಾಲೇಜೂ ಪ್ರವೇಶ ಅಭಿಯಾನ ಹಮ್ಮಿಕೊಳ್ಳಬೇಕು. ಪ್ರವೇಶಾತಿ ಹೆಚ್ಚಿಸಲು ಪ್ರಾಂಶುಪಾಲರು ಸಮಿತಿಯನ್ನು ರಚಿಸಬೇಕು. ಅಭಿಯಾನದ ವಿವರಗಳನ್ನು ಒಳಗೊಂಡ ವೇಳಾಪಟ್ಟಿ ಪ್ರಕಟಿಸಬೇಕು. ತಮ್ಮ ಕಾಲೇಜು ವ್ಯಾಪ್ತಿಯ ಪದವಿಪೂರ್ವ ಕಾಲೇಜುಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳ ವಿವರ ಸಂಗ್ರಹಿಸಬೇಕು. ವಿದ್ಯಾರ್ಥಿಗಳನ್ನು ಸರ್ಕಾರಿ ಪದವಿ ಕಾಲೇಜುಗಳತ್ತ ಆಕರ್ಷಿಸಬೇಕು. ಈ ಅಭಿಯಾನದಲ್ಲಿ ಎಲ್ಲ ಅಧ್ಯಾಪಕರು ಮತ್ತು ಸಿಬ್ಬಂದಿ ತೊಡಗಿಸಿಕೊಳ್ಳಬೇಕು. ಪ್ರಗತಿಯ ವಿವರಗಳನ್ನು ಇಲಾಖೆಗೆ ಸಲ್ಲಿಸಬೇಕು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

'ಕುಂಬಾರ ನಿಗಮಕ್ಕೆ ಶೀಘ್ರ ಅನುದಾನ'

ಸಮುದಾಯದ ಸಮಾವೇಶ: ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಕುಂಬಾರ ಅಭಿವೃದ್ಧಿ ನಿಗಮಕ್ಕೆ ಚಾಲನೆ ನೀಡುವ ಜೊತೆಗೆ ಶೀಘ್ರ ಅನುದಾನ ಒದಗಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಇಲ್ಲಿ ಭರವಸೆ ನೀಡಿದರು.

ಮೈಸೂರು ಜಿಲ್ಲಾ ಕುಂಬಾರ ಸಂಘವು ಇಲ್ಲಿನ ಕಲಾಮಂದಿರದಲ್ಲಿ ಆಯೋಜಿಸಿದ್ದ ಕುಂಬಾರರ ರಾಜ್ಯ ಮಟ್ಟದ ಮೊದಲ ಮಹಾಸಮ್ಮೇಳನವನ್ನು ಉದ್ಘಾಟಿಸಿದ ಅವರು, 'ಸರ್ಕಾರ ಈಗಾಗಲೇ ಕುಂಬಾರ ಅಭಿವೃದ್ಧಿ ನಿಗಮ ಸ್ಥಾಪನೆಯ ಘೋಷಣೆ ಮಾಡಿದೆ. ಆದರೆ, ನೋಂದಣಿ ಸೇರಿ ಕೆಲವು ತಾಂತ್ರಿಕ ಕಾರ್ಯಗಳು ಬಾಕಿ ಇವೆ. ಶೀಘ್ರ ಅವನ್ನು ಪೂರ್ಣಗೊಳಿಸಿ ನಿಗಮಕ್ಕೆ ಚಾಲನೆ ನೀಡುತ್ತೇವೆ' ಎಂದರು.

'ಸರ್ವಜ್ಞ ಮಹಾಕವಿ ಇದೇ ಸಮುದಾಯಕ್ಕೆ ಸೇರಿದವರು ಎಂಬುದು ಹೆಮ್ಮೆಯ ಸಂಗತಿ. ಅವರ ಹೆಸರಿನಲ್ಲಿ ಈಗಾಗಲೇ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದ್ದು, ಅದಕ್ಕೂ ಅನುದಾನ ಒದಗಿಸಲಾಗುವುದು' ಎಂದರು.

ಬೇಡಿಕೆಗಳು: ಕುಂಬಾರ ಸಂಘದ ಪದಾಧಿಕಾರಿಗಳು ಮುಖ್ಯಮಂತ್ರಿಗೆ ವಿವಿಧ ಬೇಡಿಕೆಗಳ ಮನವಿಯನ್ನು ವೇದಿಕೆಯಲ್ಲಿ ಸಲ್ಲಿಸಿದರು.

'ನಿಗಮ ಅಸ್ತಿತ್ವಕ್ಕೆ ತರಲು ಕಾನೂನಾತ್ಮಕ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಸ್ವತಂತ್ರ ಸ್ಥಾನಮಾನ ನೀಡಬೇಕು. ಸಮುದಾಯದ ಅಭಿವೃದ್ಧಿಗೆ ₹100 ಕೋಟಿ ಅನುದಾನ ಒದಗಿಸಬೇಕು. ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರಕ್ಕೆ ವಿವಿಧ ಕ್ಷೇತ್ರಗಳ ತಜ್ಞರನ್ನು ನೇಮಿಸಬೇಕು. 'ತ್ರಿಪದಿ ಬ್ರಹ್ಮ ಸರ್ವಜ್ಞ' ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಿ, ಸಮುದಾಯದ ಸಾಧಕರಿಗೆ ಪ್ರತಿ ವರ್ಷ ನೀಡಬೇಕು. ಸಮುದಾಯವು ನಿರ್ಮಿಸುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರದ ಕಟ್ಟಡಕ್ಕೆ ಅನುದಾನ ನೀಡಬೇಕು' ಎಂದು ಕೋರಿದರು.

'ಪ್ರೊ. ಲಕ್ಷ್ಮಿಸಾಗರ್ ಹೊರತುಪಡಿಸಿ ಸಮುದಾಯದ ಯಾರೊಬ್ಬರೂ ಶಾಸಕ–ವಿಧಾನಪರಿಷತ್ ಸದಸ್ಯರಾಗಿಲ್ಲ. ಸಮಾಜಕ್ಕೆ ಸೂಕ್ತ ರಾಜಕೀಯ ಸ್ಥಾನಮಾನ ನೀಡಬೇಕು. ಮೈಸೂರಿನಲ್ಲಿ ಒಂದು ಬಡಾವಣೆ ಹಾಗೂ ಕುಂಬಾರ ಕೊಪ್ಪಲು ವೃತ್ತಕ್ಕೆ ಸರ್ವಜ್ಞರ ಹೆಸರಿಡಬೇಕು' ಎಂದು ಕೋರಿದರು.

ಕುಂಬಾರ ಸಮುದಾಯದ ಮೋಹನದಾಸ ಪರಮಹಂಸ ಸ್ವಾಮೀಜಿ, ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಸತೀಶ ಜಾರಕಿಹೊಳಿ, ಕೆ. ವೆಂಕಟೇಶ್, ಉತ್ತರಪ್ರದೇಶದ ಸಚಿವ ಧರ್ಮವೀರ್ ಪ್ರಜಾಪತಿ ಕುಂಬಾರ, ಶಾಸಕರಾದ ಕೆ.ಹರೀಶ್ ಗೌಡ, ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ. ತಿಮ್ಮಯ್ಯ, ಡಾ.ಯತೀಂದ್ರ ಸಿದ್ದರಾಮಯ್ಯ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಮೈಸೂರು ಜಿಲ್ಲಾ ಕುಂಬಾರರ ಸಂಘದ ಅಧ್ಯಕ್ಷ ಎಚ್.ಎಸ್. ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೆ.ಆರ್. ಸೋಮಶೇಖರ್ ಪಾಲ್ಗೊಂಡರು.

ಕುಂಬಾರ ಸಮುದಾಯದ ರಾಜ್ಯಮಟ್ಟದ ಮಹಾ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಚಕ್ರ ತಿರುಗಿಸುವ ಮೂಲಕ ಉದ್ಘಾಟಿಸಿದರು. ಡಾ.ಎಚ್.ಸಿ.ಮಹದೇವಪ್ಪ, ಉತ್ತರಪ್ರದೇಶದ ಸಚಿವ ಧರ್ಮವೀರ್ ಪ್ರಜಾಪತಿ ಹಾಗೂ ಸಮಾಜದ ಮುಖಂಡರು ಜೊತೆಗಿದ್ದರು ಪ್ರಜಾವಾಣಿ ಚಿತ್ರ.

ವಿಧಾನಸಭಾ ಉಪಚುನಾವಣೆ, ಪರಿಷತ್‌ನ ನಾಲ್ಕು ಸ್ಥಾನಗಳ ಚುನಾವಣೆ

ಚುನಾವಣೆ ಗೆಲ್ಲಲು ಕಾರ್ಯತಂತ್ರ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಗೆಲ್ಲಲು ರಣತಂತ್ರ ರೂಪಿಸುವ ಬಗ್ಗೆ ಸೋಮವಾರ ನಡೆದ ಬಿಜೆಪಿ ಪ್ರಮುಖರ ಸಮಿತಿ ಸಭೆಯಲ್ಲಿ ಚರ್ಚೆ ನಡೆದಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಈ ಎರಡೂ ಕ್ಷೇತ್ರಗಳಲ್ಲದೇ ಪರಿಷತ್ತಿನ ನಾಲ್ಕು ಸ್ಥಾನಗಳಿಗೆ ನಡೆಯುವ ಚುನಾವಣೆಗೂ ಅಭ್ಯರ್ಥಿ ಆಕಾಂಕ್ಷಿಗಳ ಪಟ್ಟಿಯನ್ನು ಪಕ್ಷದ ವರಿಷ್ಠರಿಗೆ ಕಳುಹಿಸಲು ನಿರ್ಧರಿಸಲಾಗಿದೆ.

ನಿರಾಶ್ರಿತ ಪರ ಹೋರಾಟ: ಹಲವು ವರ್ಷಗಳಿಂದ ಸರ್ಕಾರದ ಮನೆಗಳಿಗಾಗಿ ಕಾಯುತ್ತಿರುವ ನಿರಾಶ್ರಿತರು ಮತ್ತು ಇತರ ಫಲಾನುಭವಿಗಳನ್ನು ಸಂಘಟಿಸಿ ರಾಜ್ಯ ವ್ಯಾಪಿ ಹೋರಾಟ ಆಯೋಜಿಸಬೇಕು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಕೋಗಿಲು ಘಟನೆಗೆ ಸಂಬಂಧಿಸಿದಂತೆ ಸರ್ಕಾರ ಬಾಂಗ್ಲಾದೇಶಿಯರು ಮತ್ತು ಅನ್ಯ ರಾಜ್ಯದವರಿಗೆ ಮನೆಗಳನ್ನು ನೀಡಲು ಹೊರಟಿದೆ. ಈ ವಿಚಾರವಾಗಿ ನ್ಯಾಯಾಲಯದ ಮೆಟ್ಟಿಲು ಹತ್ತಲು ನಿರ್ಧರಿಸಲಾಯಿತು ಎಂದು ಬಿಜೆಪಿ ಮೂಲಗಳು ಹೇಳಿವೆ.

ಬಳ್ಳಾರಿ ಗಲಾಟೆ ವಿಚಾರವನ್ನೂ ಚರ್ಚಿಸಲಾಯಿತು. ಕಾಂಗ್ರೆಸ್‌ನ ಶಾಸಕ ಮತ್ತು ಅವರ ಬೆಂಬಲಿಗರು ಗಲಾಟೆ ಎಬ್ಬಿಸಿ, ಜನಾರ್ದನ ರೆಡ್ಡಿ ಮೇಲೆ ದಾಳಿ ನಡೆಸುವುದು ಪೂರ್ವನಿಯೋಜಿತವಾಗಿದೆ. ಈ ಹಿಂಸಾತ್ಮಕ ದಾಳಿಯ ವಿರುದ್ಧ ರಾಜ್ಯ ವ್ಯಾಪಿ ಹೋರಾಟ ನಡೆಸಬೇಕು ಎಂಬ ತೀರ್ಮಾನವೂ ಆಯಿತು ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ವಿಪಕ್ಷದ ನಾಯಕ ಆರ್. ಅಶೋಕ, ರಾಜ್ಯ ಸಹ-ಉಸ್ತುವಾರಿ ಸುಧಾಕರ್ ರೆಡ್ಡಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ಸಂಸದ ಗೋವಿಂದ ಕಾರಜೋಳ, ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ, ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ನಳಿನ್‌ಕುಮಾರ್ ಕಟೀಲ್, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಇದ್ದರು.

ಜಿಲ್ಲಾ ಪ್ರವಾಸ, ಹೊಸ ಸಂಘಟನಾ ಪರ್ವ: ಡಿವಿಎಸ್

ಪಕ್ಷದ ಸಂಘಟನೆ ಬಲಪಡಿಸುವ ಉದ್ದೇಶದಿಂದ ಮುಂದಿನ ದಿನಗಳಲ್ಲಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಗೆ ಪ್ರವಾಸ ಮಾಡುವ 'ಹೊಸ ಸಂಘಟನಾ ಪರ್ವ'ವನ್ನು ಆರಂಭಿಸಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೇಳಿದರು.

ಸಂಘಟನೆಗೆ ಚುರುಕು ನೀಡುವ ಉದ್ದೇಶದಿಂದ ಎಲ್ಲ ಜಿಲ್ಲೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಸಂಸದರು, ಹಾಲಿ ಮತ್ತು ಮಾಜಿ ಶಾಸಕರು ಹಾಗೂ ಪ್ರಮುಖ ನಾಯಕರ ಸಭೆ ನಡೆಸಲಾಗುತ್ತಿದೆ. ಈ ಸಭೆ ಇದೇ 13 ರವರೆಗೆ ನಡೆಯಲಿದೆ. ಆ ಬಳಿಕ ಎಲ್ಲ ಜಿಲ್ಲೆಗಳಿಗೆ ಪ್ರವಾಸ ಮಾಡಲಾಗುವುದು ಎಂದರು.

'ತಿಥಿ' ಸಿನಿಮಾದ ಸೆಂಚುರಿಗೌಡ ಇನ್ನಿಲ್ಲ


ಸಿಂಗ್ರೀಗೌಡ

ಮಂಡ್ಯ: ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ 'ತಿಥಿ' ಸಿನಿಮಾದ 'ಸೆಂಚುರಿಗೌಡ' ಪಾತ್ರದಿಂದ ಖ್ಯಾತಿಯಾಗಿದ್ದ ಪಾಂಡವಪುರ ತಾಲ್ಲೂಕಿನ ಸಿಂಗ್ರೇಗೌಡನಕೊಪ್ಪಲು ಗ್ರಾಮದ ಸಿಂಗ್ರೀಗೌಡ (100) ಭಾನುವಾರ ತಡರಾತ್ರಿ ಮೃತಪಟ್ಟರು.

ಮಂಡ್ಯ ನೆಲದ ಸೊಗಡಿನ ಭಾಷೆ ಮತ್ತು ಸಹಜ ನಟನೆ ಮೂಲಕ ಚಿತ್ರರಸಿಕರನ್ನು ರಂಜಿಸಿದ್ದ ಅವರನ್ನು 'ತಿಥಿ' ಸಿನಿಮಾದ ನಂತರ ಎಲ್ಲರೂ 'ಸೆಂಚುರಿಗೌಡ' ಎಂದೇ ಕರೆಯುತ್ತಿದ್ದರು. ಕೆಲವು ತಿಂಗಳ ಹಿಂದೆ ಮನೆ ಹತ್ತಿರ ಬಿದ್ದ ಪರಿಣಾಮ ಸೊಂಟದ ಮೂಳೆ ಮುರಿದಿತ್ತು. ವಯೋಸಹಜ ಕಾಯಿಲೆಯಿಂದಲೂ ಬಳಲುತ್ತಿದ್ದರು.

ತಿಥಿ, ತರ್ಲೆ ವಿಲೇಜ್ ಸೇರಿದಂತೆ ಕೆಲವು ಸಿನಿಮಾಗಳಲ್ಲಿ ಸಿಂಗ್ರೀಗೌಡ ನಟಿಸಿದ್ದರು. ಸೋಮವಾರ ಮಧ್ಯಾಹ್ನ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು.

'ತಿಥಿ' ಸಿನಿಮಾದಿಂದ ಗಡ್ಡಪ್ಪ ಎಂದೇ ಹೆಸರಾಗಿದ್ದ ಚನ್ನೇಗೌಡ ಅವರು ನ. 12ರಂದು ಮೃತಪಟ್ಟಿದ್ದರು. ಅದರ ಬೆನ್ನಲ್ಲೇ ಸೆಂಚುರಿಗೌಡರು ಮೃತಪಟ್ಟರು ಎಂದು ಗ್ರಾಮಸ್ಥರು ವಿಷಾದಿಸಿದ್ದಾರೆ.

ಶಾಸಕ ಸವದಿ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿ ಜಿಲ್ಲೆಯಲ್ಲಿ ಸೋಮವಾರ ಪರ–ವಿರೋಧ ಪ್ರತಿಭಟನೆ ನಡೆಯಿತು.

'ಪಾರದರ್ಶಕ ತನಿಖೆಗಾಗಿ ವಿಶೇಷ ತನಿಖಾ ತಂಡ ರಚಿಸಬೇಕು. ಲಕ್ಷ್ಮಣ ಸವದಿ ಸೇರಿ ಎಲ್ಲ ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಬೆಳಗಾವಿಯಲ್ಲಿ ಬಿಡಿಸಿಸಿ ಬ್ಯಾಂಕ್ ನೌಕರರ ಸಂಘದ ಪದಾಧಿಕಾರಿಗಳು ಪ್ರತಿಭಟಿಸಿದರು. ಬ್ಯಾಂಕ್‌ನ ಪ್ರಧಾನ ಕಚೇರಿ, ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಯಿತು.

ಅಥಣಿಯಲ್ಲಿ ಲಕ್ಷ್ಮಣ ಸವದಿ ಬೆಂಬಲಿಗರು ಪ್ರತಿಭಟಿಸಿದ್ದು, 'ನಿಂಗಪ್ಪ ಕರೆಣ್ಣವರ ಸುಳ್ಳು ಹೇಳುತ್ತಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು, ಸವದಿಯವರ ವಿರುದ್ಧ ರಾಜಕೀಯ ಪಿತೂರಿ ಮಾಡಲಾಗುತ್ತಿದೆ' ಎಂದು ದೂರಿದರು.

> **ತನಿಖೆಗೆ ಸಹಕರಿಸುತ್ತೇವೆ. ಹಲ್ಲೆಗೆ ಒಳಗಾದವರನ್ನು ಪ್ರಚೋದಿಸಿ, ನಮ್ಮ ಮನೆಗೆ ಯಾರು ಕಳುಹಿಸಿದರು ಎಂಬ ಬಗ್ಗೆ ತನಿಖೆ ಆಗಬೇಕು**
> **ಚಿದಾನಂದ ಸವದಿ**
> ಲಕ್ಷ್ಮಣ ಸವದಿಯವರ ಪುತ್ರ

ಮೈಸೂರು ವಿ.ವಿ 106ನೇ ಘಟಿಕೋತ್ಸವ • ಪದಕ ಪಡೆದವರಿಗೆ ಬೋಧಕರಾಗುವ ಗುರಿ

ರೈತನ ಮಗನಿಗೆ 13 ಚಿನ್ನದ ಪದಕಗಳ ಸುಗ್ಗಿ

• ಮೋಹನ್‌ಕುಮಾರ ಸಿ.

ಮೈಸೂರು: ಕೊಪ್ಪಳ ಜಿಲ್ಲೆ ಕನಕಗಿರಿ ಸಮೀಪದ ಕನ್ನೇರಮಡು ಗ್ರಾಮದ ರೈತ ಕಾರ್ಮಿಕ ದಂಪತಿ ಪುತ್ರ ಚಂದ್ರಶೇಖರ ಎಂ.ಎ ಕನ್ನಡದಲ್ಲಿ 13 ಚಿನ್ನದ ಪದಕ, 4 ನಗದು ಬಹುಮಾನ ಪಡೆದು ಸಾಧನೆ ಮಾಡಿದ್ದಾರೆ.

ಸೋಮವಾರ ಇಲ್ಲಿನ ಕ್ರಾಫರ್ಡ್ ಭವನದಲ್ಲಿ ನಡೆದ ಮೈಸೂರು ವಿಶ್ವವಿದ್ಯಾಲಯದ 106ನೇ ಘಟಿಕೋತ್ಸವದಲ್ಲಿ ಪದಕ ಪಡೆದ ಸಂಭ್ರಮವನ್ನು ಪೋಷಕರಾದ ಸಣ್ಣಪ್ಪ– ಶಾಂತಮ್ಮ ಅವರೊಂದಿಗೆ ಹಂಚಿಕೊಂಡರು. ಮಗನ ಸಾಧನೆ ಕಂಡು ಭಾವುಕರಾದರು.

ಕೊಪ್ಪಳದ ಗವಿಸಿದ್ಧೇಶ್ವರ ಕಾಲೇಜಿನಲ್ಲಿ ಪದವಿ, ಮೈಸೂರಿನಲ್ಲಿ ಬಿ.ಇಡಿ ಪದವಿ ಪಡೆದ ಚಂದ್ರಶೇಖರ್, ಕನ್ನಡ ಸಾಹಿತ್ಯದ ಕುರಿತ ಒಲವಿನಿಂದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಸೇರಿದರು. ಸಹಾಯಕ ಪ್ರಾಧ್ಯಾಪಕರಾಗುವ ಗುರಿ ಹೊಂದಿದ್ದಾರೆ.

ಹರ್ಮೀನ್‌ಗೆ 6 ಚಿನ್ನದ ಪದಕ: ಟಿ.ಹರ್ಮೀನ್ ಅವರು ಬಿಎಸ್‌ಸಿಯಲ್ಲಿ 6 ಚಿನ್ನದ ಪದಕ ಪಡೆದಿದ್ದು, ಕೆಎಸ್‌ಆರ್‌ಟಿಸಿ ಬಸ್ ಕಂಡಕ್ಟರ್ ಆಗಿರುವ ತಾಯಬ್ ಅಹ್ಮದ್ ಅವರ ಪುತ್ರಿ. ತಾಯಿ ರುಕ್ಸಾನಾ ಶಿಕ್ಷಕಿ. ಹೈದರಾಬಾದ್‌ನ ಸೇಂಟ್ ಫ್ರಾನ್ಸಿಸ್ ಕಾಲೇಜಿನಲ್ಲಿ ಎಂ.ಎಸ್‌ಸಿ ಸಸ್ಯವಿಜ್ಞಾನ ಪದವಿ ಓದುತ್ತಿದ್ದು, ನಾಗರಿಕ ಸೇವಾ ಪರೀಕ್ಷೆಗಳಿಗೆ ತಯಾರಿ ನಡೆಸಿದ್ದಾರೆ.

ಎಂ.ಕಾಂನಲ್ಲಿ 7 ಚಿನ್ನದ ಪದಕ ಪಡೆದಿರುವ ಎಂ.ಸುಮಲತಾ, ಮೈಸೂರಿನ ಮಾರಶೆಟ್ಟಿಹಳ್ಳಿಯ ರೈತ ದಂಪತಿ ಮಹೇಶ್– ಮಂಜುಳಾ ಪುತ್ರಿ. ಪ್ರಾಧ್ಯಾಪಕಿ ಆಗಲು ತಯಾರಿ ನಡೆಸಿದ್ದಾರೆ.

ಅದಿತಿಗೆ 24 ಪದಕ: ದಕ್ಷಿಣಕನ್ನಡ ಜಿಲ್ಲೆ ಮೂಲ್ಕಿಯ ಎನ್.ಅದಿತಿ, ಎಂ.ಎಸ್ಸಿ ರಸಾಯನವಿಜ್ಞಾನದಲ್ಲಿ 24 ಚಿನ್ನದ ಪದಕ ಪಡೆದರು. ತಂದೆ ನಿರಂಜನ್ ನಾಯ್ಕ್ ಬೈಕಂಪಾಡಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದರೆ, ತಾಯಿ ಶುಭಲಕ್ಷ್ಮಿ ಸರ್ಕಾರಿ ಪಿಯು ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕಿ. ಪೋಷಕರಂತೆಯೇ ಪಿಎಚ್.ಡಿ ನಂತರ ಅಧ್ಯಾಪಕಿಯಾಗುವ ಆಕಾಂಕ್ಷೆಯನ್ನು ಅದಿತಿ ಹೊಂದಿದ್ದಾರೆ.

ಮಂಡ್ಯದ ಎಸ್.ಎಲ್.ಪ್ರೇರಣಾ ಎಂ.ಟೆಕ್‌ನಲ್ಲಿ 16 ಚಿನ್ನದ ಪದಕ ಪಡೆದಿದ್ದು, ತಂದೆ ಲೋಕಪ್ರಕಾಶ್ ನಾರಾಯಣ್ ಉಪನ್ಯಾಸಕರಾಗಿದ್ದರೆ, ತಾಯಿ ಶಿಲ್ಪಾ ಸರ್ಕಾರಿ ಪ್ರೌಢಶಾಲೆಯಲ್ಲಿ ಮುಖ್ಯ ಶಿಕ್ಷಕಿ. ಅವರಿಗೂ ಬೋಧಕಿಯಾಗುವ ಹಂಬಲ.

ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವರ್ಣಿಕಾ (ಬಿ.ಎ– 5), ಸುಮಲತಾ (ಎಂ.ಕಾಂ –7), ಚಂದ್ರಶೇಖರ್ (ಕನ್ನಡ ಎಂ.ಎ –13), ಎಸ್‌ಎಲ್‌ಪ್ರೇರಣಾ (ಎಂ.ಟೆಕ್– 16) ಹಾಗೂ ಎನ್‌ಅದಿತಿ (ಎಂ.ಎಸ್ಸಿ ರಸಾಯನವಿಜ್ಞಾನ– 24) ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಅರಸು ದಾಖಲೆ ಸರಿಗಟ್ಟಿದ ಸಿದ್ದರಾಮಯ್ಯ

ಅರಸು ನಂತರ ಮುಖ್ಯಮಂತ್ರಿಯಾಗಿ 7 ವರ್ಷ 239 ದಿನ ಆಡಳಿತ

• 17ನೇ ಬಾರಿ ಬಜೆಟ್ ಮಂಡನೆ ಸಿದ್ಧತೆಯಲ್ಲಿ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸುದೀರ್ಘ ಅವಧಿಯ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಹೊಂದಿದ್ದ ದೇವರಾಜ ಅರಸು ಅವರ ದಾಖಲೆಯನ್ನು ಸಿದ್ದರಾಮಯ್ಯ ಮಂಗಳವಾರ (ಜ. 6) ಸರಿಗಟ್ಟಲಿದ್ದಾರೆ. ಆ ಮೂಲಕ, ಅತಿ ಹೆಚ್ಚು ಅವಧಿ ರಾಜ್ಯ ಸರ್ಕಾರದ ಚುಕ್ಕಾಣಿ ಹಿಡಿದ ಮುಖ್ಯಮಂತ್ರಿ ಎಂಬ ಗರಿಮೆಗೆ ಅವರು ಪಾತ್ರರಾಗಲಿದ್ದಾರೆ.

ಈ ಹಿರಿಮೆಯ ಹೊರತಾಗಿ, ಅತಿ ಹೆಚ್ಚು 16 ಬಾರಿ ಬಜೆಟ್ ಮಂಡಿಸಿದ ದಾಖಲೆಯನ್ನೂ ಸಿದ್ದರಾಮಯ್ಯ ಹೊಂದಿದ್ದಾರೆ. ಅಲ್ಲದೆ, 2026-27ನೇ ಸಾಲಿನಲ್ಲಿ ತಮ್ಮ 17ನೇ ಬಜೆಟ್ ಮಂಡಿಸುವ ಉತ್ಸಾಹದಲ್ಲಿದ್ದಾರೆ.

ಈ ಸಂತಸವನ್ನು ಸಂಭ್ರಮಿಸಲು ರಾಜ್ಯದಾದ್ಯಂತ ಇರುವ ಸಿದ್ದರಾಮಯ್ಯ ಅವರ ಅಭಿಮಾನಿಗಳು, ಬೆಂಬಲಿಗರು, ಹಿತೈಷಿಗಳು ಸಾಲು ಸಾಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ನೆಲಮಂಗಲದಲ್ಲಿ ಸುಮಾರು 10 ಸಾವಿರ ಜನರಿಗೆ ನಾಟಿಕೋಳಿಯ ಭೋಜನವನ್ನು ಅವರ ಅಭಿಮಾನಿಗಳು ಮಂಗಳವಾರ ಆಯೋಜಿಸಿದ್ದಾರೆ. ವಿಜಯಪುರ, ಕಲಬುರಗಿ, ಹಾಸನ, ಮೈಸೂರು ಸೇರಿದಂತೆ ಹಲವೆಡೆ ರಕ್ತದಾನ ಶಿಬಿರ, ಸಮಾವೇಶಗಳು ನಡೆಯಲಿವೆ.

'ಸಾಮಾಜಿಕ ನ್ಯಾಯ'ದ ನಾಯಕರಾಗಿ ಗುರುತಿಸಿಕೊಂಡಿದ್ದ ದೇವರಾಜ ಅರಸು 2,789 ದಿನಗಳು, ಅಂದರೆ 7 ವರ್ಷ 239 ದಿನ (ಎರಡು ಅವಧಿಗೆ) ಮುಖ್ಯಮಂತ್ರಿ ಆಗಿದ್ದರು. ಈ ದಾಖಲೆಯನ್ನು ಸಿದ್ದರಾಮಯ್ಯ ಮುರಿಯಲಿದ್ದಾರೆ.

ಅರಸು ಅವರು 1972ರ ಮಾರ್ಚ್ 20ರಿಂದ 1980 ಜನವರಿ 7ರವರೆಗೆ ಸತತ ಏಳೂವರೆ ವರ್ಷ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದರು. ಸಿದ್ದರಾಮಯ್ಯ 2013ರಿಂದ 2018ರ ಅವಧಿಯಲ್ಲಿ ಮೊದಲ ಬಾರಿ 1,829 ದಿನ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿದ್ದರು. 2023ರ ಮೇ 20ರಿಂದ ಎರಡನೇ ಬಾರಿ ಮುಖ್ಯಮಂತ್ರಿ ಆಗಿದ್ದಾರೆ. ಮುಖ್ಯಮಂತ್ರಿಯ ಅಧಿಕಾರಾವಧಿ ಲೆಕ್ಕ ಮಾಡುವಾಗ ಪ್ರಮಾಣವಚನ ಸ್ವೀಕರಿಸಿದ ದಿನದಿಂದ ಪರಿಗಣಿಸಲಾಗುತ್ತದೆ ಎಂದು ವಿಧಾನಸಭೆ ಸಚಿವಾಲಯದ ಮೂಲಗಳು ತಿಳಿಸಿವೆ.

ಅರಸು ಮತ್ತು ಸಿದ್ದರಾಮಯ್ಯ ಇಬ್ಬರೂ ತಮ್ಮ ವರ್ಚಸ್ಸು, ಸಂಘಟನಾ ಚಾತುರ್ಯದಿಂದ ರಾಜ್ಯ ರಾಜಕೀಯದಲ್ಲಿ ಬೆಳೆದವರು. ಅಲ್ಪಸಂಖ್ಯಾತ, ಹಿಂದುಳಿದ, ದಲಿತ (ಅಹಿಂದ) ಸಂಯೋಜನೆಯನ್ನು ಸಮರ್ಥವಾಗಿ ಬಳಸಿಕೊಂಡವರು. ಒಕ್ಕಲಿಗರು ಮತ್ತು ಲಿಂಗಾಯತರ ಪ್ರಾಬಲ್ಯದ ನಡುವೆ, ಅತಿ ಹೆಚ್ಚು ಅವಧಿಗೆ ಮುಖ್ಯಮಂತ್ರಿ ಪಟ್ಟದಲ್ಲಿ ಉಳಿಯಲು ಕೂಡ ಈ ಸಂಯೋಜನೆ ಇಬ್ಬರಿಗೂ ಸಹಾಯ ಮಾಡಿದೆ. ಸಿದ್ದರಾಮಯ್ಯ ಅವರು ಅಹಿಂದ ನಾಯಕರೆಂದೇ ಹೆಸರು ಗಳಿಸಿದ್ದಾರೆ. ತಮ್ಮ ರಾಜಕೀಯ ವಿರೋಧಿಗಳ ಬಲ ಕುಗ್ಗಿಸಲು ಅವರು ಈ 'ಅಸ್ತ್ರ'ವನ್ನು ಸಮರ್ಥ ವಾಗಿ ಬಳಸಿಕೊಂಡಿದ್ದಾರೆ ಎಂಬ ವಿಶ್ಲೇಷಣೆ ರಾಜಕೀಯ ವಲಯದಲ್ಲಿದೆ.

ಸಾಮಾಜಿಕ ನ್ಯಾಯ, ಜಾತ್ಯತೀತತೆ ಹಾಗೂ ಕೋಮುವಾದ ವಿರೋಧಿ ನಿಲುವುಗಳನ್ನು ಬಲವಾಗಿ ಪ್ರತಿಪಾದಿಸುತ್ತಲೇ ಬಂದಿರುವ ಸಿದ್ದರಾಮಯ್ಯ, ಅಹಿಂದ ಗುಂಪುಗಳ ಕಡೆಗೆ ವಿಶೇಷ ಪ್ರೀತಿ ತೋರಿದರು. ತಮ್ಮ ಅಧಿಕಾರಾವಧಿಯಲ್ಲಿ ಅನ್ನಭಾಗ್ಯ, ಕ್ಷೀರ ಭಾಗ್ಯ ಸೇರಿದಂತೆ ಹಲವು 'ಭಾಗ್ಯ'ಗಳ ಜೊತೆಗೆ, ಹಲವು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಈ ಅವಧಿಯಲ್ಲಿ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ 'ಪಂಚ ಗ್ಯಾರಂಟಿ'ಗಳನ್ನು ಅನುಷ್ಠಾನ ಮಾಡಿದೆ. ಸಿದ್ದರಾಮಯ್ಯ ಅವರ ರಾಜಕೀಯ ಜೀವನ ಜನತಾಪಕ್ಷ, ಜನತಾದಳ ಮತ್ತು 2006ರಿಂದ ಕಾಂಗ್ರೆಸ್‌ನಲ್ಲಿ ಮುಂದುವರಿದಿದೆ. ಕರ್ನಾಟಕದ ಇತಿಹಾಸದಲ್ಲಿ ಅತಿ ಹೆಚ್ಚು ಅವಧಿಗೆ ಮುಖ್ಯಮಂತ್ರಿಯಾದವರಲ್ಲಿ ದೇವರಾಜ ಅರಸು ಅವರ ನಂತರ ಎಸ್. ನಿಜಲಿಂಗಪ್ಪ(7 ವರ್ಷ 175 ದಿನ), ರಾಮಕೃಷ್ಣ ಹೆಗಡೆ (5 ವರ್ಷ 216 ದಿನ), ಬಿ.ಎಸ್. ಯಡಿಯೂರಪ್ಪ (5 ವರ್ಷ 82 ದಿನ) ಇದ್ದಾರೆ.

ಅರಸುಗೂ–ನನಗೂ ಹೋಲಿಕೆ ಇಲ್ಲ: ಸಿ.ಎಂ

ಮೈಸೂರು: 'ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರಿಗೂ ನನಗೂ ಹೋಲಿಕೆ ಇಲ್ಲ. ಆದರೆ, ಇಬ್ಬರೂ ಒಂದೇ ಜಿಲ್ಲೆಯಿಂದ ಬಂದವರು. ಅವರು ಮುಖ್ಯಮಂತ್ರಿಯಾಗಿ ಹೆಚ್ಚು ದಿನ ಆಡಳಿತ ನಡೆಸಿದ ದಾಖಲೆಯನ್ನು ನಾನು ಮುರಿಯುತ್ತಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸೋಮವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ನನ್ನ ದಾಖಲೆಯನ್ನು ಮತ್ತೆ ಯಾರೂ ಮುರಿಯುವುದಿಲ್ಲ ಎನ್ನಲಾರೆ. ವಿರಾಟ್ ಕೊಹ್ಲಿ, ಸಚಿನ್ ತೆಂಡೂಲ್ಕರ್ ದಾಖಲೆ ಮುರಿಯಲಿಲ್ಲವೇ? ಎಂದರು.

'ಮುಂದೆ ಯಾರೋ ಬರಬಹುದು, ದಾಖಲೆ ಮುರಿಯಬಹುದು. ನನಗಿಂತ ಹೆಚ್ಚಿನ ಬಜೆಟ್ ಮಂಡಿಸಲೂಬಹುದು. ದಾಖಲೆಗಳು ಇರುವುದೇ ಸರಿಗಟ್ಟುವುದಕ್ಕೆ' ಎಂದು ಅವರು ಹೇಳಿದರು.

'ಅರಸು ಅವರು ಜನಪ್ರಿಯ ಮುಖ್ಯಮಂತ್ರಿ. ಅವರ ಕಾಲದ ರಾಜಕಾರಣವೇ ಬೇರೆ. ಈಗಿನದ್ದೇ ಬೇರೆ. ಅರಸು ಅವರ ಸಮುದಾಯ ಸಂಖ್ಯೆಯಲ್ಲಷ್ಟೇ ಸಣ್ಣದು. ಆದರೆ, ಸಾಮಾಜಿಕವಾಗಿ ಎತ್ತರದಲ್ಲಿದೆ. ನಾನು ಸಾಮಾಜಿಕವಾಗಿ ತಳ ಸಮುದಾಯದಿಂದ ಬಂದವನು' ಎಂದರು.

ಸಿ.ಎಂ ಆಗುತ್ತೇನೆ ಎಂದುಕೊಂಡಿರಲಿಲ್ಲ: 'ದಾಖಲೆ ಮಾಡುವುದು ಬಿಡಿ, ನಾನು ಮಂತ್ರಿ ಅಥವಾ ಮುಖ್ಯಮಂತ್ರಿ ಆಗುತ್ತೇನೆ ಅಂದುಕೊಂಡಿರಲಿಲ್ಲ. ಶಾಸಕ ಆಗಬೇಕೆಂದುಕೊಂಡಿದ್ದೆ. ಆ ಕಾಲದಲ್ಲಿ ಜನರು ದುಡ್ಡು ಹಾಕಿ ಶಾಸಕ ನನ್ನಾಗಿಸಿದ್ದರು. ಅದೇ ಜನರ ಆಶೀರ್ವಾದದಿಂದ ಬೆಳೆದಿದ್ದೇನೆ' ಎಂದರು.

ಇತಿಹಾಸದ ಪುಟಕ್ಕೆ ಮುಖ್ಯಮಂತ್ರಿ: ಡಿ.ಕೆ. ಶಿವಕುಮಾರ್

'ಜೀವನದಲ್ಲಿ ಸಾಧನೆ ಮಾಡಬೇಕೆಂಬ ಬಯಕೆ ಎಲ್ಲರಿಗೂ ಇರುತ್ತದೆ. ನಮ್ಮ ಮುಖ್ಯಮಂತ್ರಿ ಇತಿಹಾಸದ ಪುಟಕ್ಕೆ ಹಿಂದೆಯೂ ಸೇರಿದ್ದಾರೆ, ಮುಂದೆಯೂ ಸೇರುತ್ತಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸಿದ್ದರಾಮಯ್ಯ ದಾಖಲೆ ಬರೆಯುತ್ತಿರುವ ಬಗ್ಗೆ ಸುದ್ದಿಗಾರರು ಗಮನಸೆಳೆದಾಗ ಪ್ರತಿಕ್ರಿಯಿಸಿದ ಅವರು, 'ಇದು ಎಲ್ಲರಿಗೂ ಸಂತಸದ ವಿಚಾರ' ಎಂದರು.

'ಇದರಿಂದ ನಿಮ್ಮ ಹಾದಿ ಸುಗಮ ಆಗುತ್ತದೆಯೇ' ಎಂಬ ಪ್ರಶ್ನೆಗೆ, 'ಹಳ್ಳಿಯಿಂದ ಬಂದ ನಾನು ಇಲ್ಲಿಯವರೆಗೂ ತಲುಪಿದ್ದೇನೆ. ಇದಕ್ಕಿಂತ ಇನ್ನೇನು ಬೇಕು ನನಗೆ. ಯಾವುದನ್ನೂ ಹುಡುಕಿಕೊಂಡು ಹೋಗುವ ಅಗತ್ಯ ಇಲ್ಲ' ಎಂದರು.

'ಶುಭ ದಿನಗಳು ಬರುತ್ತಿವೆ' ಎಂಬ ಡಿ.ಕೆ. ಸುರೇಶ್ ಹೇಳಿಕೆ ಬಗ್ಗೆ ಕೇಳಿದಾಗ, 'ಎಲ್ಲಾ ದಿನಗಳು ನಮಗೆ ಒಳ್ಳೆಯ ದಿನಗಳೇ. ನಿನ್ನೆ ಭೂತಕಾಲ, ನಾಳೆ ಭವಿಷ್ಯಕಾಲ, ಇಂದು ವರ್ತಮಾನ. ನಿಮ್ಮ (ಮಾಧ್ಯಮ) ಜೊತೆ ಮಾತನಾಡುತ್ತಿರುವುದು ಒಳ್ಳೆಯ ದಿನ' ಎಂದರು.

ಅರಸುಗೆ ಹೋಲಿಕೆಯೇ ಅಲ್ಲ: ಎಚ್‌ಡಿಕೆ

ಬೆಂಗಳೂರು: 'ಉತ್ತಮ ಆಡಳಿತಕ್ಕೆ ಸಾಕ್ಷಿಯಾಗಿದ್ದ ಕರ್ನಾಟಕ ಇಂದು ಅದಕ್ಷ, ಕೆಟ್ಟ ಆಡಳಿತಕ್ಕೆ ನಿದರ್ಶನವಾಗಿದೆ. ದೇವರಾಜ ಅರಸು ಎಲ್ಲಿ? ಇವರೆಲ್ಲಿ? ಅರಸು ಅವರ ದಾಖಲೆ ಮುರಿಯುವುದು ಇರಲಿ, ರಾಜ್ಯದಲ್ಲಿ ಅವರೇ ಕಾಂಗ್ರೆಸ್ ಪಕ್ಷದ ಕೊನೆಯ ಮುಖ್ಯಮಂತ್ರಿ ಆಗಲಿದ್ದಾರೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರು ದೇವರಾಜ ಅರಸು ದಾಖಲೆ ಮುರಿಯುತ್ತಾರಂತೆ. ಯಾವ ಭಾಗ್ಯಕ್ಕೆ ಇವೆಲ್ಲಾ' ಎಂದರು. 'ಕರ್ನಾಟಕದಲ್ಲಿ ದೀರ್ಘ ಕಾಲ ಆಡಳಿತ ನಡೆಸಿದ್ದೇನೆ ಎಂಬುದಾಗಿ ಕೊಚ್ಚಿಕೊಳ್ಳುತ್ತಿರುವ ಸಿದ್ದರಾಮಯ್ಯ ಅವರು, ತಮ್ಮ ಆಡಳಿತದ ದಾಖಲೆಗೆ ಮಣ್ಣು ಹೊಯ್ದುಕೊಳ್ಳಬೇಕು' ಎಂದು ಕಿಡಿಕಾರಿದರು.

NIRMALA HIGH SCHOOL
V. V. Mohalla, Mysuru – 570002. Karnataka.
School Code : EE031 Ph : 0821-2513815
Dise Code : 29260703708 Email:nirmalahs1954@gmail.com
No.A1.162.GRA.1/67.68 Dated.15.04.1967

ನೇಮಕಾತಿ ಅರ್ಜಿ ಆಹ್ವಾನ

ಸಂಖ್ಯೆ: 05/25-26 ಅಧಿಸೂಚನೆ ದಿನಾಂಕ : 05-01-2026

ನಿರ್ಮಲ ಪ್ರೌಢಶಾಲೆ (ರಿ), ತಾ|| ಮೈಸೂರು, ಜಿ|| ಮೈಸೂರು ಈ ಸಂಸ್ಥೆಯಿಂದ ನಡೆಯುತ್ತಿರುವ ನಿರ್ಮಲ ಪ್ರೌಢಶಾಲೆ, ವಿ.ವಿ. ಮೊಹಲ್ಲಾ, ಮೈಸೂರು ಈ ಶಾಲೆಯಲ್ಲಿ ಖಾಲಿಯಾಗಿರುವ "ಸಹಶಿಕ್ಷಕರು ಸಿ.ಬಿ.ಝಡ್ ಹುದ್ದೆ ತುಂಬಲು ನಿರ್ದೇಶಕರು (ಪ್ರೌಢ ಶಿಕ್ಷಣ), ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ : ಸಿ8(5)ಶಾಶಿಇ. ಖಾ.ಹು.ಭ ಅನು 1887170/2025-26 ದಿನಾಂಕ : 31-12-2025ರ ಅನ್ವಯ ಈ ಕೆಳಗಿನಂತೆ ಹುದ್ದೆ ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಹುದ್ದೆಯ ವಿವರ ಅರ್ಹತೆ	ಅನುಮತಿ ನೀಡಿದ ವಿಷಯ	ಮೀಸಲಾತಿ
ಸಹ ಶಿಕ್ಷಕರು ಬಿ.ಎಸ್ಸಿ. ಬಿ.ಎಡ್.	ಸಹಶಿಕ್ಷಕರು – ಸಿ.ಬಿ.ಝಡ್	ಮತೀಯ ಅಲ್ಪಸಂಖ್ಯಾತ ಶಾಲೆಯಾಗಿದ್ದು ಮೀಸಲಾತಿ ಅನ್ವಯಿಸುವುದಿಲ್ಲ.

ಈ ಜಾಹೀರಾತು ಪ್ರಕಟಣೆಯಾದ 21 ದಿನದೊಳಗೆ ಅರ್ಹ ಅಭ್ಯರ್ಥಿಗಳು ಕೈಬರಹದ ಅರ್ಜಿಯೊಂದಿಗೆ ಎಸ್.ಎಸ್.ಎಲ್.ಸಿ. ಯಿಂದ ಬಿ.ಎಡ್. ಅಂಕಪಟ್ಟಿಗಳು, ಪಾಸಿಂಗ್ ಸರ್ಟಿಫಿಕೇಟ್ ಹಾಗೂ ಜಾತಿ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಎಲ್ಲಾ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿಯೊಂದಿಗೆ ರೂ. 1000/- ಡಿ.ಡಿ. ಯನ್ನು The Headmistress, Nirmala High School, Mysuru ಇವರ ವಿಳಾಸಕ್ಕೆ ಕಳಿಸತಕ್ಕದ್ದು.

ಸ್ಥಳ : ಮೈಸೂರು.
ದಿನಾಂಕ : 5-01-2026

Sd/- Correspondent
Nirmala. High School
V.V.Mohalla, Mysuru-570002.

ಮರು ಶವಪರೀಕ್ಷೆಗೆ ಶಾಸಕರ ಸಂಬಂಧಿಗಳ ಒತ್ತಡಕ್ಕೆ ಮಣಿದಿದ್ದ ಪೊಲೀಸರು?

2ನೇ ಬಾರಿ ಶವಪರೀಕ್ಷೆಯಲ್ಲಿ ವ್ಯಾಡ್ ಪತ್ತೆ

• ಹರಿಶಂಕರ ಆರ್.

ಬಳ್ಳಾರಿಯ ಸಿರುಗುಪ್ಪ ರಸ್ತೆಯ ಅವ್ವಂಬಾವಿಯ ಘಟನಾ ಸ್ಥಳದಲ್ಲಿ ಸೋಮವಾರ ಪರಿಶೀಲನೆ ನಡೆಸಿದ ಬಾಂಬ್ ನಿಷ್ಕ್ರಿಯ ದಳ

ಬಳ್ಳಾರಿ: 'ಖಾಸಗಿ ಅಂಗರಕ್ಷಕರ ಬಂದೂಕಿನಿಂದ ಗುಂಡು ಸಿಡಿದು ಮೃತಪಟ್ಟಿದ್ದ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ ಅವರ ಮೃತದೇಹದ ಮರಣೋತ್ತರ ಪರೀಕ್ಷೆ ಜ. 2ರಂದು ಎರಡು ಬಾರಿ ನಡೆದಿದ್ದು, ಎರಡನೇ ಬಾರಿ ನಡೆದ ಮರಣೋತ್ತರ ಪರೀಕ್ಷೆ ಸಂದರ್ಭದಲ್ಲಿ 'ವ್ಯಾಡ್' ಪತ್ತೆಯಾಗಿದೆ ಎಂದು ನಿಕಟ ಮೂಲಗಳು ತಿಳಿಸಿವೆ.

ಸಂಬಂಧಿಕರ ಒತ್ತಾಯದ ಮೇರೆಗೆ ಎರಡನೇ ಬಾರಿ ಮರಣೋತ್ತರ ಪರೀಕ್ಷೆ ನಡೆದಿತ್ತು. ಮರಣೋತ್ತರ ಪರೀಕ್ಷೆ ವೇಳೆ ರಾಜಶೇಖರ ಒಡಲಲ್ಲಿ 'ವ್ಯಾಡ್' ಎಂಬ ವಸ್ತು ಪತ್ತೆಯಾಗಿತ್ತು ಎಂದು ಪ್ರಜಾವಾಣಿಯ ಜ. 3ರ ಸಂಚಿಕೆಯಲ್ಲಿ ವರದಿ ಪ್ರಕಟವಾಗಿತ್ತು. ರಾಜಕೀಯ ಮುಖಂಡರೂ ಸೋಮವಾರ ಸುದ್ದಿಗೋಷ್ಠಿ ನಡೆಸಿದ್ದು, ಎರಡನೇ ಬಾರಿ ಪರೀಕ್ಷೆ ವೇಳೆ ಬುಲೆಟ್ ಪತ್ತೆಯಾಗಿದೆ ಎಂದು ಹೇಳಿದ್ದಾರೆ.

ಎರಡೆರಡು ಬಾರಿ ಏಕೆ?: ಜನವರಿ 2ರ ಬೆಳಿಗ್ಗೆ 7ಕ್ಕೆ ಮರಣೋತ್ತರ ಪರೀಕ್ಷೆ ನಡೆಸಿದಾಗ, 9 ರಿಂದ 10 ಪೆಲೆಟ್‌ಗಳು (ಕಬ್ಬಿಣದ ಸಣ್ಣ ಗುಂಡು) ಪತ್ತೆಯಾಗಿದ್ದವು. 9 ಗಂಟೆ ಹೊತ್ತಿಗೆ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಮತ್ತು ಅವರ ಹತ್ತಿರದ ಸಂಬಂಧಿಯೊಬ್ಬರು ವಿಮ್ಸ್‌ಗೆ ಬಂದಿದ್ದು, ಮರಣೋತ್ತರ ಪರೀಕ್ಷೆಯನ್ನು ತಮ್ಮ ಸಮ್ಮುಖದಲ್ಲೇ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದರು ಎನ್ನಲಾಗಿದೆ.

ಇದೇ ವೇಳೆಗೆ ಸೋಕೊ (ಸೀನ್ ಆಫ್ ಕ್ರೈಂ ಆಫೀಸರ್ಸ್) ತಂಡದ ಸದಸ್ಯರು ಇದ್ದರು. ರಾಜಶೇಖರ ಅವರ ದೇಹದ 'ಎಕ್ಸ್ ರೇ'ಯನ್ನು ಲಘು ಬಗೆಯಲ್ಲಿ ಪರಿಶೀಲಿಸುತ್ತಿದ್ದ ಅಧಿಕಾರಿಗಳು ಅನ್ಯ ವಸ್ತು ಬೆನ್ನಿನ ಮೂಳೆಗಳಲ್ಲಿ ಸಿಲುಕಿರುವ ಶಂಕೆ ವ್ಯಕ್ತಪಡಿಸಿ ವೈದ್ಯರಿಗೆ ತಿಳಿಸಿದ್ದರು. ಆಗ ವ್ಯಾಡ್ ಪತ್ತೆಯಾಗಿದ್ದು, ಪ್ರಕರಣಕ್ಕೆ ತಿರುವು ನೀಡಿತು ಎಂದು ಬಲ್ಲ ಮೂಲಗಳು ಹೇಳಿವೆ.

ಮೃತ ರಾಜಶೇಖರ ಕೊಲೆ ಆರೋಪಿ: ಮೃತ ರಾಜಶೇಖರ ಕೊಲೆ ಪ್ರಕರಣದ ಆರೋಪಿಯಾಗಿದ್ದು, ಜೈಲಿಗೆ ಹೋಗಿ ಬಂದಿದ್ದರು. ಪ್ರಕರಣವೊಂದರಲ್ಲಿ ರಾಜಶೇಖರ (ಎ6) ಸೇರಿ 12 ಮಂದಿಯನ್ನು ಆರೋಪಿಗಳನ್ನಾಗಿ ಮಾಡಲಾಗಿತ್ತು. ಮಾರ್ಚ್ 6ರಂದು ರಾಜಶೇಖರನನ್ನು ಬಂಧಿಸಲಾಗಿತ್ತು.

ಶಾಸಕರ ಕಚೇರಿಯಿಂದ ವಿಡಿಯೊ ಬಿಡುಗಡೆ:

ಬಳ್ಳಾರಿಯಲ್ಲಿ ಶಾಸಕ ಜನಾರ್ದನ ರೆಡ್ಡಿ ಅವರ ಮನೆ ಆವರಣದಲ್ಲಿ ರಾಶಿ ದೊಣ್ಣೆಗಳು ಇರುವ ದೃಶ್ಯದ ವಿಡಿಯೊವನ್ನು ನಗರ ಶಾಸಕ ಭರತ್ ರೆಡ್ಡಿ ಅವರ ಕಚೇರಿಯಿಂದ ಸೋಮವಾರ ಬಿಡುಗಡೆ ಮಾಡಲಾಯಿತು. ಇದು ಗಲಭೆಗೆ ಬಳಸಲು ತಂದಿರುವುದಾಗಿ ಆರೋಪಿಸಲಾಯಿತು.

ಈ ಕುರಿತು ಮಾತನಾಡಿದ ಬಿ.ಶ್ರೀರಾಮುಲು 'ಘಟನೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ ನಮ್ಮವರು ಕಟ್ಟಿಗೆ ಕಿತ್ತುಕೊಂಡಿರಬಹುದು, ನಮ್ಮವರೂ ತಂದಿರಬಹುದು. ತಪ್ಪಿದ್ದರೆ ಪೊಲೀಸರು ಕ್ರಮ ಕೈಗೊಳ್ಳಲಿ' ಎಂದಿದ್ದಾರೆ.

ಘಟನಾ ಸ್ಥಳದಲ್ಲಿ ಸಾಕ್ಷ್ಯ ಸಂಗ್ರಹ: ದೊಂಬಿ ನಡೆದ ಸಿರುಗುಪ್ಪ ರಸ್ತೆಯ ಅವ್ವಂಬಾವಿಯ ಜನಾರ್ದನ ರೆಡ್ಡಿ ನಿವಾಸದ ಬಳಿ ಸೋಮವಾರ ತೆರಳಿದ ಬಾಂಬ್ ನಿಷ್ಕ್ರಿಯ ದಳ ಮತ್ತು ವಿಧಿ ವಿಜ್ಞಾನ ತಜ್ಞರು ಎನ್‌ಎಲ್‌ಜೆಡಿ (ನಾನ್ ಲೀನಿಯರ್ ಜಂಕ್ಷನ್ ಡಿಟೆಕ್ಟರ್) ತಂತ್ರಜ್ಞಾನ ಬಳಸಿ ಗುಂಡುಗಳ ಕೇಸ್ ಪತ್ತೆಯಾಗಿದೆ.

ಸಾಕ್ಷ್ಯ ಸಂಗ್ರಹದ ಭಾಗವಾಗಿ ನಡೆದ ಈ ಪ್ರಕ್ರಿಯೆಯಲ್ಲಿ ಒಂದು ಗುಂಡಿನ ಕೇಸ್ ಪತ್ತೆಯಾಗಿದೆ ಎಂದು ಹೇಳಲಾಗಿದೆ. ಆದರೆ, ಇಷ್ಟೇ ಸಂಖ್ಯೆಯ ಕೇಸ್‌ಗಳು ಸಿಕ್ಕಿವೆ ಎಂದು ಹೇಳಲು ಸಾಧ್ಯವಿಲ್ಲ ಪೊಲೀಸ್ ಇಲಾಖೆ ಹೇಳಿದೆ.

ಮರಣೋತ್ತರ ಪರೀಕ್ಷೆ ಎರಡು ಬಾರಿ ನಡೆಸುವ ಅಗತ್ಯವೇನಿತ್ತು. ಭರತ್ ರೆಡ್ಡಿ ಅವರ ತಂದೆ ಕ್ರಿಮಿನಲ್. ಅವರ ಆದೇಶದ ಮೇರೆಗೆ ಹೀಗೆ ಮಾಡಲಾಗಿದೆ. ತನಿಖೆ ಮಾಹಿತಿ ಸರ್ಕಾರ ಹಂಚಿಕೊಳ್ಳಬೇಕು

ಜನಾರ್ದನ ರೆಡ್ಡಿ, ಶಾಸಕ

ಮರಣೋತ್ತರ ಪರೀಕ್ಷೆ ಮೂರು–ನಾಲ್ಕು ಬಾರಿ ನಡೆದಿದೆ. ಗುಂಡು ಮೊದಲ ಬಾರಿಗೆ ಸಿಕ್ಕಿಲ್ಲ. ಹಿರಿಯ ಅಧಿಕಾರಿಗಳು ಸೇರಿ ಮತ್ತೆ ಪರೀಕ್ಷೆ ನಡೆಸಿದಾಗ ಗುಂಡು ಸಿಕ್ಕಿದೆ. ಜನಾರ್ದನ ರೆಡ್ಡಿ ಅವರನ್ನು ಸಿಲುಕಿಸಲು ಪ್ರಯತ್ನಿಸಲಾಗಿತ್ತು.

ಬಿ. ಶ್ರೀರಾಮುಲು, ಮಾಜಿ ಸಚಿವ

ವಿಧಿ ವಿಜ್ಞಾನ ತಂಡದ ತಜ್ಞರೂ ಘಟನಾ ಸ್ಥಳ ಮತ್ತು ಪತ್ತೆಯಾದ ವಸ್ತುಗಳ ಪರಿಶೀಲನೆ ನಡೆಸಿದರು.

26 ಆರೋಪಿಗಳು ಜೈಲಿಗೆ

ಬೆಂಗಳೂರು: ಬಳ್ಳಾರಿಯಲ್ಲಿ ನಡೆದಿದ್ದ ಗಲಭೆ ಪ್ರಕರಣದ ಬಂಧಿತ 26 ಆರೋಪಿಗಳು ಸೋಮವಾರ ಮಧ್ಯಾಹ್ನದ ವೇಳೆಗೆ ಇಲ್ಲಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದರು. ಎಲ್ಲ ಆರೋಪಿಗಳನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಯಿತು.

'ಸ್ವಾದಭರಿತ ಹಾಲಿಗೆ ಶೇ 5ರಷ್ಟು ಜಿಎಸ್‌ಟಿ'

ಒಂದನೇ ಪುಟದಿಂದ...

'ಸುವಾಸನೆಭರಿತ ಹಾಲು ಮೂಲ ಸ್ವರೂಪದಲ್ಲಿಯೂ ಹಾಲಾಗಿಯೇ ಉಳಿದುಕೊಳ್ಳುತ್ತದೆ ಮತ್ತು ಸುಂಕ ಶೀರ್ಷಿಕೆ ವ್ಯಾಪ್ತಿಗೇ ಒಳಪಡುತ್ತದೆ' ಎಂದು ಅಭಿಪ್ರಾಯ ವ್ಯಕ್ತ ಪಡಿಸಿದ ನ್ಯಾಯಪೀಠ, 'ತೆರಿಗೆದಾರರು ಠೇವಣಿ ಮಾಡಿದ ಮೊತ್ತವನ್ನು ಅನ್ವಯವಾಗುವ ಬಡ್ಡಿಯೊಂದಿಗೆ ಮರು ಪಾವತಿಸಬೇಕು' ಎಂದು ತೆರಿಗೆ ಇಲಾಖೆಗೆ ನಿರ್ದೇಶಿಸಿದೆ.

ಪ್ರಕರಣವೇನು?: ಹಾಲು ಮತ್ತು ಹಾಲಿನ ಉತ್ಪನ್ನಗಳ ತಯಾರಕರ ವಿವಾದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ತೆರಿಗೆ ಅಧಿಕಾರಿಗಳು ಡೇರಿ ಉತ್ಪನ್ನಗಳಿಗೆ ಅನ್ವಯವಾಗುವ ಶೇ 5ರ ಜಿಎಸ್‌ಟಿಯನ್ನು ಶೇ 12ರಿಂದ ಶೇ18ಕ್ಕೆ ಹೆಚ್ಚಿಸಿದ್ದರು. ಈ ಸಂಬಂಧ ಸಿಜಿಎಸ್‌ಟಿ ಕಾಯ್ದೆಯ ಕಲಂ 74ರ ಅಡಿಯಲ್ಲಿ ತಯಾರಕರಿಗೆ ಷೋಕಾಸ್ ನೋಟಿಸ್ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಕಂಪನಿಯು 2021ರ ಡಿಸೆಂಬರ್‌ನಲ್ಲಿ ಜಿಎಸ್‌ಟಿಗೆ ₹72.95 ಲಕ್ಷ ಠೇವಣಿ ಮಾಡಿತ್ತು. ನಂತರ ಜಿಎಸ್‌ಟಿ ಆದೇಶವನ್ನು ಪ್ರಶ್ನಿಸಿ ಸಕ್ಷಮ ಪ್ರಾಧಿಕಾರದ ಮೆಟ್ಟಿಲೇರಿತ್ತು. ಇದರ ವಿಚಾರಣೆ ನಡೆಸಿದ ಮೊದಲ ಮೇಲ್ಮನವಿ ಪ್ರಾಧಿಕಾರ ಕಂಪನಿಯ ಅರ್ಜಿಯನ್ನು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಈ ಕೆಳಕಂಡ 'ಷೆಡ್ಯೂಲ್' ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನು ಮುಂದೆ **"ಷೆಡ್ಯೂಲ್ ಸ್ವತ್ತುಗಳು"** ಎಂದು ಕರೆಯಲ್ಪಡುವ, ಸ್ಥಿರಾಸ್ತಿ ಸ್ವತ್ತುಗಳ ಪರಿಶೀಲನೆ ನಡೆಸಲು ಇಚ್ಛಿಸಿರುತ್ತಾರೆ, ಈ ಷೆಡ್ಯೂಲ್ ಸ್ವತ್ತುಗಳ ಪ್ರಸ್ತುತ ಮಾಲೀಕರಾದ **ಶ್ರೀ ವಿವೇಕ್ ಎಂ. ಹಿಂದುಜಾ (ಶ್ರೀ ಮದನ್‌ಲಾಲ್ ಜೆ. ಹಿಂದುಜಾ ಅವರ ಪುತ್ರ), ಶ್ರೀ ಅಶ್ವಿನ್ ಆರ್. ಹಿಂದುಜಾ (ಶ್ರೀ. ರಾಜೇಂದ್ರ ಜೆ. ಹಿಂದುಜಾ ಅವರ ಪುತ್ರ) ಮತ್ತು ಶ್ರೀ ಗೌರವ್ ಡಿ. ಹಿಂದುಜಾ (ಶ್ರೀ. ದಿನೇಶ್ ಜೆ. ಹಿಂದುಜಾ ಅವರ ಪುತ್ರ),** ('ಮಾಲೀಕರು') ನಮ್ಮ ಕಕ್ಷಿದಾರರಿಗೆ ತಾವುಗಳೇ ಷೆಡ್ಯೂಲ್ ಸ್ವತ್ತುಗಳನ್ನು ಮಾರಾಟ ಮಾಡುವ ಮತ್ತು ಪರಭಾರೆ ಮಾಡುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಹೊಣೆಗಾರಿಕೆ, ಕ್ಲೇಮ್‌ಗಳು ಅಥವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಕ್ಲೇಮುಗಳನ್ನು ಅಥವಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಕ್ಲೇಮುಗಳನ್ನು ಅಥವಾ ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷ್ಯಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **15 (ಹದಿನೈದು)** ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ. ತಿಳಿಸಿದ ದಿನಗಳ ಕಾಲಾವಧಿಯ ಒಳಗೆ ಯಾವುದೇ ಕ್ಲೇಮುಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು, ಋಣಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮುಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ಎಲ್ಲಾ ಉದ್ದೇಶಗಳು ಮತ್ತು ಉದ್ದೇಶಗಳಿಗಾಗಿ ಉದ್ದೇಶಪೂರ್ವಕವಾಗಿ ಮನ್ನಾ ಮಾಡಲಾಗಿದೆ/ ನಿರ್ಲಕ್ಷಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ತಿಳಿಸಿದ ಕಾಲಾವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳು ನಮ್ಮ ಕಕ್ಷಿದಾರರು ಬದ್ಧವಾಗಿರುವುದಿಲ್ಲ ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತುಗಳ ವಿವರಗಳು)

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಭೈರತಿ ಗ್ರಾಮದಲ್ಲಿರುವ ಸರ್ವೆ ನಂ. 135 ಮತ್ತು 136 ರಲ್ಲಿರುವ 04 ಎಕರೆ ವಿಸ್ತೀರ್ಣದ ಸ್ಥಿರಾಸ್ತಿ ಸ್ವತ್ತುಗಳನ್ನು ಈ ಕೆಳಕಂಡ ಟೇಬಲ್‌ನಲ್ಲಿ ವಿವರಿಸಲಾಗಿದೆ.

ಕ್ರಮ ಸಂಖ್ಯೆ.	ಸರ್ವೆ ನಂಬರು	ವಿಸ್ತೀರ್ಣ			ಚಕ್ಕುಬಂದಿ			
		ಎಕರೆ	ಗುಂಟೆ	ಖರಾಬು	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	135	02	00	00	ರಸ್ತೆ	ಸರ್ವೆ ನಂ.28	ಸರ್ವೆ ನಂ.136	ಸರ್ವೆ ನಂ.134
2.	136	02	00	00	ರಸ್ತೆ	ಸರ್ವೆ ನಂ.28	ರಸ್ತೆ	ಸರ್ವೆ ನಂ.135

ಸಹಿ/-
ಶ್ರೀ. ಶ್ರೀನಿವಾಸ್ ಬಿ.ಆರ್., ಪಾಲುದಾರರು
ಡಿಎಸ್‌ಕೆ ಲೀಗಲ್, ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ.7/1 & 7/7,
ಬ್ರೂಂಟನ್ ರಸ್ತೆ, ಬೆಂಗಳೂರು – 560025, ದೂ. ಸಂ. 080–69548770.

ಸ್ಥಳ: ಬೆಂಗಳೂರು
ದಿನಾಂಕ: 06.01.2026

'ಇ ಸ್ವತ್ತು' ಇನ್ನಷ್ಟು ಸೌಲಭ್ಯ

11 ಎ ಖಾತೆ, ಬಹುಮಹಡಿ ಕಟ್ಟಡಕ್ಕೆ ಅರ್ಜಿ ಸಲ್ಲಿಕೆಗೆ ಶೀಘ್ರ ಅವಕಾಶ

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಂಗಳೂರು: 'ನಮೂನೆ-11 ಬಿ ಖಾತೆಗಳನ್ನು 'ಇ-ಸ್ವತ್ತು 2.0' ತಂತ್ರಾಂಶದಲ್ಲಿ ಎರಡು ವಾರಗಳ ಅವಧಿಯಲ್ಲಿ ನಮೂನೆ-11ಎ ಖಾತೆಗಳಾಗಿ ಪರಿವರ್ತಿಸಿಕೊಳ್ಳಲು, ಹೊಸ ಬಡಾವಣೆ ಹಾಗೂ ಬಹುಮಹಡಿ (ಅಪಾರ್ಟ್‌ಮೆಂಟ್) ಕಟ್ಟಡಗಳಿಗೆ ಅರ್ಜಿ ಸಲ್ಲಿಸಲು ಮುಂದಿನ ಒಂದು ತಿಂಗಳು ಅವಕಾಶ ನೀಡಲಾಗುವುದು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

'ಇ-ಸ್ವತ್ತು ಪ್ರಕ್ರಿಯೆ ಹಾಗೂ ತಂತ್ರಾಂಶವನ್ನು ಹೆಚ್ಚು ನಾಗರಿಕಸ್ನೇಹಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಆನ್‌ಲೈನ್ ಮೂಲಕ ಈವರೆಗೆ 21,429 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಅನುಮೋದನೆಗಾಗಿ ವಿವಿಧ ಹಂತಗಳಲ್ಲಿ ಬಾಕಿಯಿದೆ' ಎಂದು ಅವರು ಹೇಳಿದ್ದಾರೆ.

'ಅರ್ಜಿ ಸಲ್ಲಿಸುವಾಗ ಎದುರಾಗುತ್ತಿರುವ ತಾಂತ್ರಿಕ ಸಮಸ್ಯೆ ಗಳನ್ನು ಪರಿಹರಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಸಾರ್ವಜನಿಕರಿಗೆ ಅನುಕೂಲವಾಗುವಂತೆ ಇ-ಸ್ವತ್ತು ತಂತ್ರಾಂಶವನ್ನು ಇನ್ನಷ್ಟು ಸರಳೀಕರಿಸಲಾಗುವುದು. ಯಾರೂ ಆತಂಕಪಡುವ ಅಗತ್ಯ ಇಲ್ಲ' ಎಂದಿದ್ದಾರೆ.

'ಸಲ್ಲಿಕೆಯಾಗಿರುವ ಅರ್ಜಿಗಳನ್ನು ಅನುಮೋದನೆ ಮಾಡುವ ಪ್ರಕ್ರಿಯೆ ಜ. 1ರಿಂದ ಆರಂಭವಾಗಿದೆ. ಸಾರ್ವಜನಿಕರು ಇ-ಸ್ವತ್ತು 2.0 ತಂತ್ರಾಂಶದ ಆನ್-ಲೈನ್ ಪೋರ್ಟಲ್ ಮೂಲಕ ತೆರಿಗೆ ಮತ್ತು ದಾಖಲೆ ಮುದ್ರಣದ ಶುಲ್ಕ ಪಾವತಿಸಿ ಇ-ಖಾತಾ ಡೌನ್-ಲೋಡ್ ಮಾಡಿಕೊಳ್ಳಬಹುದು' ಎಂದು ಸಚಿವರು ಹೇಳಿದ್ದಾರೆ.

'ಇ-ಸ್ವತ್ತಿಗೆ ಅರ್ಜಿ ಸಲ್ಲಿಸಲು ಸಮಯ ನಿಗದಿಪಡಿಸಿಲ್ಲ. ಸಾರ್ವಜನಿಕರು ತಮ್ಮ ಆಸ್ತಿಗೆ ಸಂಬಂಧಿಸಿದಂತೆ ನಮೂನೆಗಳನ್ನು ಗ್ರಾಮ ಪಂಚಾಯಿತಿಗೆ ಭೇಟಿ ನೀಡದೆ, ಇ-ಸ್ವತ್ತು ತಂತ್ರಾಂಶದ ಮೂಲಕ ಪಡೆಯಲು ಕೂಡಾ ಅವಕಾಶ ಕಲ್ಪಿಸಲಾಗಿದೆ. ಸಮಸ್ಯೆಗಳು ಎದುರಾದರೆ ಜಿಲ್ಲಾ ಸಹಾಯವಾಣಿಗೆ ಕರೆ ಮಾಡಬಹುದು' ಎಂದು ವಿವರಿಸಿದ್ದಾರೆ.

ಹತ್ತೇ ನಿಮಿಷದಲ್ಲಿ ಫಲಿತಾಂಶ!

ಪ್ರಜಾವಾಣಿ ವಾರ್ತೆ

ಮಂಡ್ಯ: ಇಲ್ಲಿಯ ಮಂಡ್ಯ ವಿಶ್ವವಿದ್ಯಾಲಯವು 2024-25ನೇ ಸಾಲಿನ ಬಿ.ಇಡಿ ಕೋರ್ಸಿನ ದ್ವಿತೀಯ ಹಾಗೂ ನಾಲ್ಕನೇ ಸೆಮಿಸ್ಟರ್ ಪರೀಕ್ಷೆಯ ಮೌಲ್ಯಮಾಪನ ಮುಗಿದ 10 ನಿಮಿಷದಲ್ಲೇ ಫಲಿತಾಂಶ ಪ್ರಕಟಿಸಿದೆ.

ವಿಶ್ವವಿದ್ಯಾಲಯದ 11 ಬಿ.ಇಡಿ ಕಾಲೇಜುಗಳಲ್ಲಿ ಡಿ.22ರಿಂದ 26ರವರೆಗೆ 2ನೇ ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳು ನಡೆದಿದ್ದವು. ವಿಶ್ವವಿದ್ಯಾಲಯ ರಚನೆಯಾದ ಬಳಿಕ ಮೊದಲ ಬ್ಯಾಚ್‌ನ ಪರೀಕ್ಷೆ ಇದು.

ದ್ವಿತೀಯ ಸೆಮಿಸ್ಟರ್‌ನಲ್ಲಿ 736 ಹಾಗೂ 4ನೇ ಸೆಮಿಸ್ಟರ್‌ನಲ್ಲಿ 775 ವಿದ್ಯಾರ್ಥಿಗಳು ಸೇರಿ 1511 ವಿದ್ಯಾರ್ಥಿಗಳು 6 ವಿಷಯಗಳ ಪರೀಕ್ಷೆ ಬರೆದಿದ್ದರು. ಡಿ.31ರಂದು ಆರಂಭಗೊಂಡ ಮೌಲ್ಯಮಾಪನ ಕಾರ್ಯವು ಜ.5ರಂದು ಸಂಜೆ 4.40ವರೆಗೆ ನಡೆಯಿತು.

'4,417 ಉತ್ತರ ಪತ್ರಿಕೆಗಳನ್ನು 48 ಮಂದಿ ಮೌಲ್ಯಮಾಪನ ಮಾಡಿದ್ದರು. ಸಂಜೆ 4.50ಕ್ಕೆ ಫಲಿತಾಂಶವನ್ನು ಪ್ರಕಟಿಸಲಾಯಿತು. 1,497 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ 98ರಷ್ಟು ಫಲಿತಾಂಶ ಬಂದಿದೆ' ಎಂದು ಪರೀಕ್ಷಾ ಅಧ್ಯಯನ ಮಂಡಳಿಯ ಅಧ್ಯಕ್ಷ ಡಾ.ಎಸ್.ಎಲ್.ಸುರೇಶ್ ತಿಳಿಸಿದ್ದಾರೆ

ಮೌಲ್ಯಮಾಪನ ಮುಗಿದ ಹತ್ತೇ ನಿಮಿಷದಲ್ಲಿ ಫಲಿತಾಂಶ ಪ್ರಕಟಿಸುವ ಮೂಲಕ ಮಂಡ್ಯ ವಿವಿ ವಿನೂತನ ಹೆಜ್ಜೆ ಇಟ್ಟಿದೆ. ಮಾರ್ಚ್, ಏಪ್ರಿಲ್‌ನಲ್ಲಿ ಘಟಿಕೋತ್ಸವ ನಡೆಸಿ ಪದವಿ ಪ್ರಮಾಣ ಪತ್ರ ನೀಡಲಾಗುವುದು

ಕೆ.ಶಿವಚಿತ್ತಪ್ಪ ಪ್ರಭಾರ ಕುಲಪತಿ

ಆನೇಕಲ್ ಯೋಜನಾ ಪ್ರಾಧಿಕಾರ
'ಅಣ್ಣ' ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560099
www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/70/2025-26 ದಿನಾಂಕ:03.01.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀಮತಿ ಟಿ.ಎನ್.ಪದ್ಮಮ್ಮ ಕೋಂ. ಟಿ.ಎನ್. ವೆಂಕಟಸುಬ್ಬಾರೆಡ್ಡಿ	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	136/19	1–06.08	ಕೈಗಾರಿಕಾ	ವಸತಿ
2.	ಶ್ರೀಮತಿ ವಿಮಲಮ್ಮ ಕೋಂ. ಕೃಷ್ಣಪ್ಪ	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	136/20	0–03	ಕೈಗಾರಿಕಾ	ವಸತಿ
3.	ಶ್ರೀ ಎ.ಆರ್.ಶಂಕರ್ ರೆಡ್ಡಿ ಬಿನ್ ಲೇ. ಎ.ವಿ.ರಾಮಯ್ಯ ರೆಡ್ಡಿ	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	136/21	0–08	ಕೈಗಾರಿಕಾ	ವಸತಿ
4.	ಶ್ರೀ ಶಂಕರಪ್ಪ ಬಿನ್ ಲೇ ರಾಮಕೃಷ್ಣಪ್ಪ	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	136/22	0–08	ಕೈಗಾರಿಕಾ	ವಸತಿ
5.	ಶ್ರೀ ಕೆ.ಎಲ್.ರಮೇಶ್ ಬಿನ್ ಲೇ. ಲಕ್ಷ್ಮಯ್ಯ	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	136/23	0–08	ಕೈಗಾರಿಕಾ	ವಸತಿ
6.	ಶ್ರೀಮತಿ ಪುಷ್ಪಾವತಿ ಕೋಂ. ನಾರಾಯಣಸ್ವಾಮಿ	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	136/24	0–08	ಕೈಗಾರಿಕಾ	ವಸತಿ
7.	ಶ್ರೀಮತಿ ಪದ್ಮಮ್ಮ, ಶ್ರೀ ಜಯರಾಜು,ಎಂ ಹಾಗೂ ಇತರರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಮೆ: ಬಿಎಸ್‌ಆರ್ ಪ್ರಾಜೆಕ್ಟ್ಸ್ ಪರವಾಗಿ ವ್ಯವಸ್ಥಾಪಕ ಪಾಲುದಾರರಾದ ಶ್ರೀ ಬಿ.ಚಿರಂಜೀವಿ ಮತ್ತು ಶ್ರೀ ಡಿ.ಕಿಶೋರ್ ರೆಡ್ಡಿ	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	136/25	0–37	ಕೈಗಾರಿಕಾ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಹಾಗೂ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ವಸತಿ ರಹಿತ ಸಾರ್ವಜನಿಕರಿಗೆ ಕಾನೂನಿಗೆ ಬದ್ಧವಾದ ನಿವೇಶನ ಒದಗಿಸುತ್ತೇವೆ. ಬಡವರು, ಮಧ್ಯಮ ವರ್ಗದವರಿಗೆ ತುಂಬಾ ಅನುಕೂಲವಾಗುತ್ತದೆ. ನಾಗರೀಕ ಸೌಲಭ್ಯಗಳು ದೊರಕುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

DIPR/CP/VCPL/4857/2025-26

ಹೈಕೋರ್ಟ್‌ಗೆ ಮತ್ತೆ ತಿಮರೋಡಿ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಗೆ 9 ತಿಂಗಳ ಕಾಲ ಗಡಿಪಾರು ಮಾಡಿರುವ ಸರ್ಕಾರದ ಕ್ರಮವನ್ನು ರದ್ದುಪಡಿಸಬೇಕು' ಎಂದು ಕೋರಿ ಸೌಜನ್ಯ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಮತ್ತೆ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದ್ದು, ಗೃಹ ಇಲಾಖೆ ಕಾರ್ಯದರ್ಶಿ, ಪುತ್ತೂರು ಉಪ ವಿಭಾಗಾಧಿಕಾರಿ, ಬಂಟ್ವಾಳ ಉಪ ವಿಭಾಗದ ಡಿವೈಎಸ್ಪಿ, ಬೆಳ್ತಂಗಡಿ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಅವರನ್ನು ಪ್ರತಿವಾದಿಗಳನ್ನಾಗಿ ಕಾಣಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆಗೆ ಧಕ್ಕೆ ತರುತ್ತಿರುವ ಆರೋಪದಡಿ ತಿಮರೋಡಿ ಅವರನ್ನು 2025ರ ಸೆ. 18ರಂದು ಗಡಿಪಾರು ಮಾಡಿ ಆದೇಶಿಸಲಾಗಿತ್ತು. ಆ ಆದೇಶವನ್ನು ಹೈಕೋರ್ಟ್ 2025ರ ನವೆಂಬರ್ 17ರಂದು ರದ್ದುಪಡಿಸಿತ್ತು. ಅಂತೆಯೇ, ಪ್ರಕರಣವನ್ನು ಪುತ್ತೂರು ಉಪ ವಿಭಾಗಾಧಿಕಾರಿಗೆ ಹಿಂದಿರುಗಿಸಿದ್ದ ನ್ಯಾಯಪೀಠ, 'ತಿಮರೋಡಿ ವಿವರಣೆ ಪಡೆದು ಹೊಸದಾಗಿ ಆದೇಶ ಮಾಡಬೇಕು' ಎಂದು ಉಪ ವಿಭಾಗಾಧಿಕಾರಿಗೆ ಆದೇಶಿಸಿತ್ತು. ತಿಮರೋಡಿ ಅಹವಾಲು ಆಲಿಸಿದ ಉಪ ವಿಭಾಗಾಧಿಕಾರಿ, ತಿಮರೋಡಿ ಅವರನ್ನು 2025ರ ಡಿಸೆಂಬರ್ 16ರಿಂದ 2026ರ ಸೆಪ್ಟೆಂಬರ್ 16ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಯ ಮಾನ್ವಿ ಪೊಲೀಸ್ ಠಾಣೆ ಸರಹದ್ದಿಗೆ ಒಳಪಟ್ಟಂತೆ ಗಡಿಪಾರು ಮಾಡಿ ಡಿಸೆಂಬರ್ 16ರಂದು ಆದೇಶಿಸಿದ್ದರು.

ಮೊಬೈಲ್ ಫೋನ್‌ನಲ್ಲೇ ಪಾಠ

ಹೆಚ್ಚುವರಿ ಬೋಧನೆಯ ಅಗತ್ಯವಿರುವ ಮಕ್ಕಳಿಗೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚುವರಿ ಬೋಧನೆಯ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಶಾಲಾ ಅವಧಿಯ ನಂತರ ಮೊಬೈಲ್ ಫೋನ್ ಕರೆಯ ಮೂಲಕ 'ಪರಿಹಾರ ಬೋಧನೆ' ಮಾಡಬೇಕು ಎಂದು ರಾಜ್ಯ ಶಿಕ್ಷಣ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ಸರ್ಕಾರಿ ಶಾಲಾ ಶಿಕ್ಷಕರಿಗೆ ಸೂಚನೆ ನೀಡಿದೆ.

ಹೆಚ್ಚುವರಿ ಬೋಧನೆ ಅಗತ್ಯವಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಬೇಕು. ನಾಲ್ಕು ವಿದ್ಯಾರ್ಥಿಗಳಿಗೆ ಒಂದು ಗುಂಪುಗಳನ್ನು ರಚಿಸಬೇಕು. ಮುಖ್ಯವಾಗಿ 'ಗಣಕ–ಗಣಿತ' ಕಾರ್ಯಕ್ರಮದ ಅಡಿಯಲ್ಲಿ ಗಣಿತ ಕಲಿಕೆಗೆ ವಿದ್ಯಾರ್ಥಿಗಳಿಗೆ ನೆರವು ನೀಡಬೇಕು. 3ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಮೂಲಭೂತ ಗಣಿತ ಕಲಿಸಲು ವಾರಕ್ಕೆ ಕನಿಷ್ಠ ಒಂದು ದಿನ ಮೊಬೈಲ್ ಫೋನ್ ಕರೆಯ ಮೂಲಕ ಪಾಠ ಮಾಡಬೇಕು. ಪ್ರತಿ ಸಂವಾದದ ಅವಧಿ ಕನಿಷ್ಠ 30ರಿಂದ 40 ನಿಮಿಷಗಳಿಗಿಂತ ಕಡಿಮೆ ಇರಬಾರದು ಎಂದು ಡಿಎಸ್‌ಇಆರ್‌ಟಿ ಸುತ್ತೋಲೆ ಹೊರಡಿಸಿದೆ.

ದೂರವಾಣಿ ಮೂಲಕ ನಡೆದ ಪ್ರತಿಯೊಂದು ಪಾಠದ ವಿವರ, ಕರೆ ಅವಧಿ ಸೇರಿದಂತೆ ಎಲ್ಲ ಮಾಹಿತಿಯನ್ನು ಮುಖ್ಯ ಶಿಕ್ಷಕರಿಗೆ ನೀಡಬೇಕು. ಮುಖ್ಯ ಶಿಕ್ಷಕರು 'ವಿದ್ಯಾರ್ಥಿ ಸಾಮರ್ಥ್ಯ ಪತ್ತೆ ವ್ಯವಸ್ಥೆಯಲ್ಲಿ (ಎಸ್‌ಎಟಿಎಸ್)' ಅಪ್‌ಲೋಡ್ ಮಾಡಬೇಕು. ಈ ಪ್ರಕ್ರಿಯೆಯಲ್ಲಿ ಪಾಲಕರನ್ನೂ ಒಳಗೊಳ್ಳುವಂತೆ ಮಾಡಬೇಕು ಎಂದು ನಿರ್ದೇಶನ ನೀಡಲಾಗಿದೆ.

ಮಕ್ಕಳಿಗೆ ತರಗತಿ ಅವಧಿಯ ನಂತರ ಕರೆ ಮಾಡಲು 2025ರ ಜುಲೈನಲ್ಲೇ 75,000 ಶಿಕ್ಷಕರನ್ನು ಆಯ್ಕೆ ಮಾಡಲಾಗಿತ್ತು. ಈಗಾಗಲೇ ಇವರಿಗೆ ವಿಶೇಷ ತರಗತಿ ನೀಡಲಾಗಿದೆ.

ವಿದ್ಯಾರ್ಥಿಗಳಿಗೆ ಪರಿಕಲ್ಪನೆಗಳನ್ನು ವಿವರಿಸಲು, ಗಣಿತದ ಸಮಸ್ಯೆಗಳನ್ನು ಪರಿಹರಿಸಲು ಸ್ವಯಂಸೇವಾ ಸಂಸ್ಥೆಯ ಪ್ರತಿನಿಧಿಗಳು ನೆರವಾಗಿದ್ದಾರೆ. ಈ ಕಾರ್ಯಕ್ಕಾಗಿ ಪ್ರತಿಯೊಬ್ಬ ಶಿಕ್ಷಕರಿಗೂ ₹800 ಭತ್ಯೆ ನಿಗದಿ ಮಾಡಲಾಗಿದೆ.

ಕರ್ನಾಟಕ ಸರ್ಕಾರ
ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಬೀದರ್.
(ಕರ್ನಾಟ ಕಸರ್ಕಾರದ ಸ್ವಾಯತ್ತ ಸಂಸ್ಥೆ)
ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವಾವಿದ್ಯಾಲಯ, ಕರ್ನಾಟಕ ಬೆಂಗಳೂರು ರವರಿಗೆ ಸಂಯೋಜನೆಗೊಂಡಿದ್ದು, ಭಾರತ ಸರ್ಕಾರ ನವದೆಹಲಿ ರವರಿಂದ ಅಂಗೀಕೃತಗೊಂಡಿರುತ್ತದೆ.
ದೂರವಾಣಿ ಸಂಖ್ಯೆ : 08482–228366 & ಫ್ಯಾಕ್ಸ್ : 08482–240322
Website :www.bimsbidar.karnataka.gov.in& E-mail Id : directorbrimsbidar2007@gmail.com

ಸಂಖ್ಯೆ:/:ಬೀವೈವಿಸಂ/ಟೆಂಡರ್/ವಾರ್ತಾಪತ್ರಿಕೆ/ಸಿಆರ್– /2025–26 ದಿನಾಂಕ : 03–01–2026

ಟೆಂಡರ್ ಪ್ರಕಟಣೆ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮತ್ತು ಬೋಧಕ ಆಸ್ಪತ್ರೆ ಬೀದರ್ ಬೇಕಾಗಿರುವ HNS, DIET, CHENICAL & REAGENTS, DISPOSABLES ITEMS ಗಳ ಸರಬರಾಜುವಿಗಾಗಿ ಇ-ಟೆಂಡರ್ ಕರೆಯಲಾಗಿದೆ.ಇಚ್ಛೆಯುಳ್ಳ ಗುತ್ತಿಗೆದಾರರು **ದಿನಾಂಕ:20–01–2026** ರ ವರೆಗೆ ಇ–ಟೆಂಡರ್ ನಲ್ಲಿ ನಮೂದಿಸಿದ ಸಮಯದ ಅನುಗುಣವಾಗಿ ಟೆಂಡರ್ ಭರಿಸಲು ಅವಕಾಶ ವಿರುತ್ತದೆ. ಹಾಗೂ ಇ–ಸಂಗ್ರಹಣೆಯ ಪೊರ್ಟಲ್ ಮೂಲಕ ಸದರಿ ಟೆಂಡರಿನ ವಿವರ ವಿಕ್ಷೀಸಬಹುದು/ಡೌನಲೋಡ್ ಮಾಡಿಕೊಂಡು ಇ–ಪ್ರೋಕ್ಯೂಮೇರ್ಂಟ್ ಮೂಲಕ ಸಲ್ಲಿಸಬಹುದು www.kppp.karnataka.gov.in ಮತ್ತು ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಸ್ಥೆಯ ಅಂತರ್ಜಾಲ ತಾಣವಾದ www.bimsbidar.karnataka.gov.in ನಲ್ಲಿ ಸಹ ನೋಡಬಹುದಾಗಿದೆ.

1) ಇಂಡೆಂಟ್ ಸಂಖ್ಯೆ : **DME/2025-26/IND1973,** ಟೆಂಡರ್ ವಿವರ: TENDER FOR SUPPLY OF HNS, PRINTING & STATIONERY ITEMS FOR THE YEAR 2025-26, ಇ.ಎಂ.ಡಿ: 2,50,000.00
2) ಇಂಡೆಂಟ್ ಸಂಖ್ಯೆ : **DME/2025-26/IND1972,** ಟೆಂಡರ್ ವಿವರ:TENDER FOR SUPPLY OF DIET ITEMS FOR THE YEAR 2025 26, ಇ.ಎಂ.ಡಿ: 2,50,000.00
3) ಇಂಡೆಂಟ್ ಸಂಖ್ಯೆ : **DME/2025-26/IND1976,** ಟೆಂಡರ್ ವಿವರ: TENDER FOR SUPPLY OF CHEMICAL & REAGENTS FOR THE YEAR,2025-26, ಇ.ಎಂ.ಡಿ: 2,50,000.00
4) ಇಂಡೆಂಟ್ ಸಂಖ್ಯೆ : **DME/2025-26/IND1978,** ಟೆಂಡರ್ ವಿವರ: TENDER FOR SUPPLY OF SURGICAL DISPOSABLES FOR THE YEAR 2025-26,ಇ.ಎಂ.ಡಿ: 2,50,000.00

ಗಮನಿಸಿ : 1. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ವಿಳಾಸ: ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಗಳಲ್ಲಿ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಹಣೆ www.kppp.karnataka.gov. ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ನಿರ್ದೇಶಕರು,
ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೀದರ.

ವಾ.ಸಾ.ಸಂ.ಇ/ಬೀದರ/288/ಕೆ.ಎಸ್.ಎಂ.ಸಿ.&ಎ/2025–26

ಅಪಸ್ಮಾರಕ್ಕೆ ಹೆದರಬೇಡಿ

• ಡಾ. ವೀಣಾ ಎನ್. ಸುಳ್ಯ

ಕೆಲವರು ಇದ್ದಕ್ಕಿದಂತೆಯೇ ವಿಚಿತ್ರ ಧ್ವನಿಯನ್ನು ಮಾಡುತ್ತಾ, ಕೆಳಕ್ಕೆ ಬಿದ್ದು, ಕೈ ಕಾಲುಗಳನ್ನು ಬಡಿಯುತ್ತಾ ಎಚ್ಚರ ತಪ್ಪಿ, ಸ್ವಲ್ಪ ಹೊತ್ತಿನ ಬಳಿಕ ಸಹಜ ಸ್ಥಿತಿಗೆ ಮರಳುವುದನ್ನು ನೀವು ನೋಡಿರಬಹುದು. ಗಟ್ಟಿಯಾಗಿ ಮುಷ್ಟಿಯನ್ನು ಬಿಗಿ ಹಿಡಿದಿರುವ ಅಂಥ ವ್ಯಕ್ತಿಯ ಕೈಬೆರಳುಗಳನ್ನು ಆಗ ಯಾರೋ ಒಬ್ಬರು ಬಿಡಿಸಿ, ಅವರ ಕೈಯಲ್ಲಿ ಚೂರಿಯನ್ನೋ, ಬೀಗದ ಕೈಗಳ ಗೊಂಚಲನ್ನೋ ಇಡುವುದನ್ನೂ ನೋಡಿರಬಹುದು. ಹೀಗೆ ಎಚ್ಚರ ತಪ್ಪಿ ಬೀಳುವ ಪರಿಸ್ಥಿತಿಯನ್ನೇ ಅಪಸ್ಮಾರ, ಫಿಟ್ಸ್, ಮೂರ್ಛೆರೋಗವೆಂದು ಕರೆಯಲಾಗುತ್ತದೆ.

ನಮ್ಮ ದೇಹದ ಸಮತೋಲನ, ಕೈ ಕಾಲುಗಳ ಚಲನೆಯ ನಿಯಂತ್ರಣದ ಜೊತೆಗೆ ಮನಸ್ಸು ಎಚ್ಚರವಾಗಿರುವಂತೆ ನೋಡಿಕೊಳ್ಳುವುದು ಮಿದುಳು, ಮಿದುಳಿನಲ್ಲಿರುವ ನರಗಳು. ನರಕೋಶಗಳಲ್ಲಿ ಉತ್ಪತ್ತಿಯಾಗುವ ವಿದ್ಯುತ್ ಮತ್ತು ರಾಸಾಯನಿಕ ಸಂಕೇತಗಳು, ಇತರ ನರಕೋಶಗಳಿಗೆ, ಅಂಗಗಳಿಗೆ ಮತ್ತು ಸ್ನಾಯುಗಳನ್ನು ತಲುಪಿ ನಿರೀಕ್ಷಿತ ಪರಿಣಾಮವನ್ನು ಉಂಟುಮಾಡುತ್ತವೆ. ಹಾಗಾಗಿ ನಮ್ಮ ಪ್ರಜ್ಞೆ, ಮಾತು, ಚಲನೆ ಇವೆಲ್ಲವೂ ಸರಿಯಾಗಿ ಕೆಲಸ ನಿರ್ವಹಿಸಲು ಕಾರಣವಾಗುತ್ತದೆ. ನರಕೋಶಗಳಲ್ಲಿ ಯಾವುದೇ ಕಾರಣಕ್ಕೆ ವಿದ್ಯುತ್ ಅಥವಾ ರಾಸಾಯನಿಕ ಸಂಕೇತಗಳು, ಅಸಹಜವಾಗಿ, ಅನಿಯಂತ್ರಿತವಾಗಿ ಉತ್ಪತ್ತಿಯಾದರೆ ಆಗ ಎಚ್ಚರ ತಪ್ಪುತ್ತೇವೆ; ನಮ್ಮಲ್ಲಿ ಅನೈಚ್ಛಿಕ ಚಲನೆಗಳು, ಸಂವೇದನೆಗಳು ಉಂಟಾಗುತ್ತವೆ; ನಡವಳಿಕೆಗಳಲ್ಲಿ ವ್ಯತ್ಯಾಸಗಳೂ ಉಂಟಾಗುತ್ತವೆ. ಈ ವ್ಯತ್ಯಾಸಗಳು ಕೇವಲ ಕಣ್ಣುಗಳನ್ನು ಮಿಟುಕಿಸುವುದರಿಂದ ಹಿಡಿದು ದೇಹದ ಭಾಗಗಳಲ್ಲಿನ ಅನಿಯಂತ್ರಿತ ಸೆಳೆತಗಳು ಮತ್ತು ಪ್ರಜ್ಞೆ ಕಳೆದುಕೊಂಡು ಬೀಳುವವರೆಗೂ ಆಗಿರಬಹುದು. ಹೀಗೆ ಆದಾಗ ವ್ಯಕ್ತಿ ತಕ್ಷಣವೇ ಸಹಜ ಸ್ಥಿತಿಗೆ ಮರಳಬಹುದು; ಕೆಲವೊಮ್ಮೆ ಕೆಲವು ನಿಮಿಷಗಳು, ಗಂಟೆಗಳು ಹಿಡಿಯಬಹುದು.

ಕಾರಣಗಳು

ಆನುವಂಶೀಯತೆ; ಮಿದುಳಿನ ನರಗಳ ಅಸಹಜ ಬೆಳವಣಿಗೆ; ಮಿದುಳಿನ ಗಡ್ಡೆಗಳು ; ಮಿದುಳಿನ ಸೋಂಕುಗಳು; ಗರ್ಭಾವಸ್ಥೆಯಲ್ಲಿ, ಹೆರಿಗೆಯ ಸಮಯದಲ್ಲಿ, ಶಿಶುವಿಗೆ ಆಮ್ಲಜನಕದ ಕೊರತೆಯಿಂದ ಮಿದುಳಿಗೆ ಉಂಟಾದ ತೊಂದರೆಗಳು; ತಲೆಗೆ ಏಟು ಬಿದ್ದು ಉಂಟಾದ ರಕ್ತಸ್ರಾವ ; ರಕ್ತ ಹೆಪ್ಪುಗಟ್ಟುವುದು, ಅದರ ಪರಿಣಾಮವಾಗಿ ಮಿದುಳಿನ ಮೇಲೆ ಒತ್ತಡ ಬೀಳುವುದು; ಮಿದುಳಿನ ಅಸಹಜ ರಕ್ತನಾಳಗಳು.

ವಿಧಗಳು

ಮಿದುಳಿನ ನರಗಳಲ್ಲಿನ ಅನಿಯಂತ್ರಿತ ವಿದ್ಯುತ್ತು ತರಂಗಗಳು ಎಷ್ಟು ಭಾಗವನ್ನು ವ್ಯಾಪಿಸುತ್ತದೆಯೋ ಅದನ್ನು ಪರಿಗಣಿಸಿ ಅಪಸ್ಮಾರದ ವಿಧಗಳನ್ನು ಪರಿಗಣಿಸಬಹುದು.

- **ಫೋಕಲ್ (ಸಣ್ಣ ಸೆಳೆವು)** : ಮಿದುಳಿನ ಒಂದು ಸಣ್ಣ ಭಾಗದಲ್ಲಿ ಮಾತ್ರ ಅಸಹಜ ವಿದ್ಯುತ್ ತರಂಗಗಳು ಕೇಂದ್ರೀಕೃತವಾಗಿದ್ದಾಗ, ಆ ಭಾಗದ ಮಿದುಳಿನ ಕಾರ್ಯದಲ್ಲಿ ಅಸಹಜತೆಗಳು ಪ್ರಕಟವಾಗುತ್ತವೆ. ಉದಾಹರಣೆಗೆ: ಕಣ್ಣುರೆಪ್ಪೆಗಳು ಒಂದೇ ಸಮನೆ ಪಟಪಟನೆ ಮುಚ್ಚುವುದು, ಮುಖವನ್ನು ಕೈಗಳಿಂದ ಒಂದೇ ಸಮನೆ ತಿಕ್ಕುವುದು, ಇತ್ಯಾದಿ. ಈ ವಿಧದಲ್ಲಿ ವ್ಯಕ್ತಿ ಎಚ್ಚರವನ್ನು ತಪ್ಪಿರುವುದಿಲ್ಲ.
- **ಪೆಟಿಟ್ ಮಾಲ್ (ಅಬ್ಸೆನ್ಸ್ ಸಿಜರ್):** ಈ ವಿಧದಲ್ಲಿ ಎಲ್ಲಾ ರೀತಿಯ ದೈಹಿಕ ಚಟುವಟಿಕೆಗಳು ಸ್ಥಗಿತವಾಗುತ್ತವೆ. ದೇಹದಲ್ಲಿ ಯಾವ ಚಲನೆಯೂ ಇರುವುದಿಲ್ಲ, ಜೊತೆಯಲ್ಲಿ ಎಚ್ಚರವೂ ಇರುವುದಿಲ್ಲ.
- **ಜನರಲೈಜ್ಡ್ (ದೊಡ್ಡ ಸೆಳೆವು) (ಗ್ರಾಂಡ್ ಮಾಲ್ ಎಪಿಲೆಪ್ಸಿ):** ಮಿದುಳಿನ ಒಂದು ಭಾಗದಲ್ಲಿ ಪ್ರಾರಂಭವಾದ ಅಸಹಜ ವಿದ್ಯುತ್ ತರಂಗಗಳು ಮಿದುಳಿನ ಎಲ್ಲಾ ಭಾಗಗಳಿಗೆ ಏಕಕಾಲದಲ್ಲಿ ವ್ಯಾಪಿಸುತ್ತವೆ. ಪರಿಣಾಮವಾಗಿ ದೇಹದ ಎಲ್ಲಾ ಸ್ನಾಯುಗಳು ಸೆಳೆತಕ್ಕೆ ಒಳಗಾಗುತ್ತವೆ.

ಸಾಮಾನ್ಯವಾಗಿ ಅಪಸ್ಮಾರವು ಈ ನಾಲ್ಕು ಹಂತಗಳಲ್ಲಿ ಪ್ರಕಟವಾಗಬಹುದು:

- ಮನಸ್ಸಿನಲ್ಲಿ ಕಿರಿಕಿರಿ, ವಿನಾಕಾರಣ ಭಯ, ಗೊಂದಲ, ತಲೆಭಾರ, ವಾಂತಿ ಬಂದಂತೆ ಅನಿಸಬಹುದು.
- ಕಣ್ಣುಗುಡ್ಡೆಗಳು ಮೇಲಕ್ಕೆ ಹೊರಳುವುದು, ದೃಷ್ಟಿ ಒಂದೇ ಕಡೆಗೆ ಕೇಂದ್ರೀಕೃತವಾದಂತೆ ಕಾಣುವುದು. ದೇಹದ ಸ್ನಾಯುಗಳೆಲ್ಲವೂ ಸೆಟೆದುಕೊಳ್ಳುವುದು, ವಿಚಿತ್ರ ಧ್ವನಿಯೊಂದಿಗೆ ದೇಹ ಸಮತೋಲನವನ್ನು ಕಳೆದುಕೊಂಡು ಕೆಳಗೆ ಬೀಳುವುದು ಈ ಹಂತದಲ್ಲಿ.
- ಹಲ್ಲುಗಳನ್ನು ಕಚ್ಚಿಕೊಳ್ಳುವುದು ಕೈಕಾಲುಗಳು ಬಡಿದುಕೊಳ್ಳುವುದು, ಮೂತ್ರವಿಸರ್ಜನೆ; ಕೆಲವೊಮ್ಮೆ ಮಲವಿಸರ್ಜನೆಯೂ ಆಗಬಹುದು.
- ದೇಹದ ಚಲನೆಗಳು ನಿಂತು, ದೀರ್ಘವಾದ ನಿದ್ದೆಗೆ ಜಾರಬಹುದು. ಈ ಹಂತ 10ರಿಂದ 20 ನಿಮಿಷಗಳ ಕಾಲ ಮುಂದುವರಿಯಬಹುದು.

ಇವು ಸಮಸ್ಯೆಯು ಪ್ರಕಟವಾಗುವ ರೀತಿಗಳು. ನೀವು ಕಬ್ಬಿಣದ ಚೂರಿ, ಕೀಲಿಕೈಯನ್ನು ಆ ವ್ಯಕ್ತಿಗಳಿಗೆ ಕೊಡಬೇಕಾಗಿಲ್ಲ. ಕೈಕಾಲುಗಳ ಚಲನೆ ತನ್ನಷ್ಟಕ್ಕೆ ತಾನೇ ನಿಲ್ಲುತ್ತದೆ.

ಏನು ಮಾಡಬೇಕು?

ಆ ಸಂದರ್ಭದಲ್ಲಿ ಆ ವ್ಯಕ್ತಿಗೆ ಪ್ರಜ್ಞೆ ಇಲ್ಲದಿರುವುದರಿಂದ ಅವನಿಗೆ/ಅವಳಿಗೆ ತೊಂದರೆ ಆಗದಂತೆ ಮಾತ್ರ ನಾವು ಸಹಾಯ ಮಾಡಬಹುದು. ಅವರು ನೆಲಕ್ಕೆ ಬಿದ್ದ ತಕ್ಷಣ ಪರಿಸರ ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವುದು; ಎಡಭಾಗಕ್ಕೆ ತಿರುಗಿ ಮಲಗಿಸುವುದು; ನಾಲಗೆ ಕಚ್ಚಿಕೊಳ್ಳದಂತೆ ಬಾಯಿಗೆ ಮೃದುವಾದ ಬಟ್ಟೆಯನ್ನು ಇಡಬಹುದು.ಪರಿಸರದಲ್ಲಿ ಹೆಚ್ಚಿನ ಸದ್ದು ಗದ್ದಲ–ಗಲಾಟೆಯಾಗದಂತೆ ಗಡಿಬಿಡಿಯಾಗದಂತೆ ನೋಡಿಕೊಳ್ಳಬೇಕು. ಆ ವ್ಯಕ್ತಿಗೆ ಘಟನೆ ನಡೆದಿದ್ದರ ಬಗ್ಗೆ ಯಾವ ನೆನಪೂ ಇರುವುದಿಲ್ಲ. ಆದರೆ ಎಚ್ಚರವಾದಾಗ ತಾನು ಬಿದ್ದಿರುವ ಸ್ಥಿತಿ ನೋಡಿ, ತನಗೇನು ಆಗಿದೆ ಎಂದು ಅರಿವಿಗೆ ಬರಬಹುದು.

ಮೂರ್ಛೆರೋಗ ಯಾವ ವಯಸ್ಸಿನಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡಿತೋ, ಅದನ್ನು ಆಧರಿಸಿ ಚಿಕಿತ್ಸೆಯನ್ನು ನಿರ್ಧರಿಸಬೇಕಾಗುತ್ತದೆ.ಕಾಯಿಲೆ ಇದೆ ಎಂದು ತಿಳಿದು ಬಂದಾಗ ಧೃತಿಗೆಡಬಾರದು. ಇಂದು ಉತ್ತಮ ಔಷಧಗಳು ಲಭ್ಯವಿವೆ. ನಿಯಮಿತವಾಗಿ ಔಷಧವನ್ನು ಸೇವಿಸುತ್ತ, ಮುಂಜಾಗ್ರತಾ ಕ್ರಮಗಳನ್ನು ನಿತ್ಯವೂ ಪಾಲಿಸಿದರೆ ಸಮಸ್ಯೆಯನ್ನು ತಡೆಗಟ್ಟಬಹುದು.

ಮುಂಜಾಗ್ರತಾ ಕ್ರಮಗಳು

ಸಮಸ್ಯೆಯಿಂದ ಬಳಲುತ್ತಿರುವವರು ಈ ಕ್ರಮಗಳನ್ನು ಪಾಲಿಸಬೇಕು:

- ವೈದ್ಯರ ಸಲಹೆಯಂತೆ ಔಷಧವನ್ನು ನಿಯಮಿತವಾಗಿ ತೆಗೆದುಕೊಳ್ಳಿ.
- ನಿದ್ರೆ ಕೆಡದಂತೆ ಜಾಗ್ರತೆಯನ್ನು ವಹಿಸಿ.
- ಮಿನುಗುವ ಬೆಳಕನ್ನು ನೋಡಬೇಡಿ .
- ಸಮಸ್ಯೆ ಇರುವವರು ಒಬ್ಬಂಟಿಯಾಗಿ ನೀರು, ಬೆಂಕಿಯ ಬಳಿ ಕಾರ್ಯಗಳನ್ನು ನಿರ್ವಹಿಸಬೇಡಿ.
- ವಾಹನವನ್ನು ಚಾಲನೆ ಮಾಡದಿರುವುದು ಒಳಿತು
- ದಕ್ಷಿಣ ಭಾರತದಲ್ಲಿ ಕಂಡುಬರುವ ಇನ್ನೊಂದು ವಿಶೇಷ ಅಪಸ್ಮಾರ, ‘ಬಿಸಿನೀರಿನ ಅಪಸ್ಮಾರ’ (ಹಾಟ್ ವಾಟರ್ ಎಪಿಲೆಪ್ಸಿ); ಬಿಸಿನೀರು ತಲೆಗೆ ಬಿದ್ದಾಗ ಮೂರ್ಛೆ ತಪ್ಪುವುದು.

ಮಾತ್ರೆಗಳನ್ನು ನಿರಂತರವಾಗಿ ಸೇವಿಸುತ್ತಿದ್ದರೆ ಖಂಡಿತವಾಗಿಯೂ ಸಹಜವಾದ ಬದುಕನ್ನು ಬಾಳಬಹುದು.

ಫೋಮೋ ನಮ್ಮ ಕಾಲದ ಹೊಸ ಭಯ

• ಡಾ. ಕೆ.ಎಸ್. ಪವಿತ್ರ

‘ಫೋಮೋ’ ಎಂಬುದು ‘ಫಿಯರ್ ಆಫ್ ಮಿಸ್ಸಿಂಗ್ ಔಟ್’ ಎಂಬುದರ ಹ್ರಸ್ವರೂಪ. ನಮಗೆ ಸೋಶಿಯಲ್ ಮೀಡಿಯಾದ ಇಂತಿಂತಹ ಸುದ್ದಿ ತಪ್ಪಿ ಹೋದರೆ ಅಥವಾ ನಾವು ಯಾವುದಾದರೂ ಒಂದು ಸುದ್ದಿಯನ್ನು ಹಾಕಲು ಮರೆತು ಆ ಸುದ್ದಿ ಇತರರನ್ನು ತಲುಪದೆ ಹೋದರೆ ಎಂಬ ಭಯವೇ ‘ಫೋಮೋ’. ಆಹಾರ, ನೀರು, ನಿದ್ರೆಗಳಂತೆ ಇತರರೊಡನೆ ಬೆರೆಯುವುದೂ ಮನುಷ್ಯನಿಗೊಂದು ಆವಶ್ಯಕತೆ. ಇತರರು ತನ್ನನ್ನು ಗುರುತಿಸಬೇಕು, ಹೊಗಳಬೇಕು, ತಾನು ಮಾಡುವುದನ್ನು ಗಮನಿಸಬೇಕು ಎನ್ನುವುದು ಈ ಅವಶ್ಯಕತೆಯ ವಿವಿಧ ಮುಖಗಳು. ಅದರೊಂದಿಗೆ ಇದರ ಜೊತೆ ಹೊಂದಿಕೊಂಡಿರುವ ಮತ್ತೊಂದು ಅಗತ್ಯವೆಂದರೆ ಇತರರ ಜೀವನದ ಬಗ್ಗೆ ಕುತೂಹಲ. ಮನುಷ್ಯನ ಈ ಪ್ರವೃತ್ತಿಗಳಿಂದ ಹುಟ್ಟಿಕೊಂಡದ್ದು ಪತ್ರಿಕೆ, ರೇಡಿಯೊ, ಟಿ.ವಿ., ಈಗ ಸಾಮಾಜಿಕ ಮಾಧ್ಯಮಗಳೆಂಬ ವ್ಯಾಪಕವಾಗಿ ಬಿತ್ತರಿಸುವ ಮಾಧ್ಯಮಗಳು. ಎಲೆಕ್ಟ್ರಾನಿಕ್ ಮಾಧ್ಯಮಗಳಿಂದ ಹೊಸ ಹಂತವನ್ನೇ ಈ ಸಹಜ ಹಂಬಲ ತಲುಪಿದೆ.

ಹಿಂದೆಲ್ಲಾ ದಿನಪತ್ರಿಕೆಗಳನ್ನು ಓದುವುದರಿಂದಲೇ ನಮ್ಮ ದಿನ ಆರಂಭವಾಗುತ್ತಿತ್ತು. ಆದರೆ ಪತ್ರಿಕೆಗಳಲ್ಲಿ ದೇಶದ, ರಾಜ್ಯದ, ನಮ್ಮ ಊರಿನ ಸುದ್ದಿಗಳು ಬರುತ್ತಿದ್ದವೇ ವಿನಾ ನಮ್ಮದೇ ಸುದ್ದಿ ಬರುವ ಸಾಧ್ಯತೆಯೇನೂ ಇರುತ್ತಿರಲಿಲ್ಲ. ಈಗ ಹಾಗಲ್ಲ. ಎಫ್‌ಬಿ, ಇನ್ಸ್ಟಾ, ಟ್ವಿಟ್ಟರ್, ಎಕ್ಸ್ ಮೊದಲಾದ ಮಾಧ್ಯಮಗಳ ಮೂಲಕ ಇತರರು ಬರೆದದ್ದನ್ನು ಓದುವುದು, ನಮ್ಮ ಸುದ್ದಿ–ಫೋಟೊಗಳನ್ನು ಅವುಗಳ ಮೂಲಕ ಹಂಚಿಕೊಳ್ಳುವುದು ನಮ್ಮ ದಿನಚರಿಯ ಮುಖ್ಯ ಭಾಗವೇ ಆಗಿಬಿಟ್ಟಿದೆ. ಇದರ ಪರಿಣಾಮವೇ ‘ಫೋಮೋ’ ಎಂಬ ಸಮಸ್ಯೆ ಗಂಭೀರವಾಗಿ ನಮಗೆ ಎದುರಾದದ್ದು. ಮತ್ತೆ ಮತ್ತೆ ನಮ್ಮ ಫೋನ್‌ಗಳನ್ನು ಚೆಕ್ ಮಾಡುತ್ತಾ, ನೋಡುತ್ತಾ ಇದ್ದಂತೆ ನಮ್ಮನ್ನು ಬಿಟ್ಟು ಉಳಿದವರೆಲ್ಲ ನಮ್ಮ ತಮ್ಮ ಸುದ್ದಿಗಳನ್ನು ಹಂಚುತ್ತಿದ್ದಾರೆ; ಅವರು ಮಾತ್ರ ಸಂತಸ ಪಡುತ್ತಿದ್ದಾರೆ; ನಮಗೇನೋ ಮಿಸ್ಸಾಗುತ್ತಿದೆ ಎಂಬ ಭಾವನೆ ಕಾಡತೊಡಗಿತು ಎಂದರೆ ಅದೇ ಫೋಮೋದ ಆರಂಭ.

ಸಾಮಾಜಿಕ ಮಾಧ್ಯಮಗಳು ಬರುವ ಮೊದಲೇ ಈ ಭಾವನೆಯನ್ನು ನಾವು ಅನುಭವಿಸಿದ್ದೆವಲ್ಲ! ಎಲ್ಲಿ? ಜಾಹೀರಾತುಗಳನ್ನು ನೋಡುವಾಗ! ಒಮ್ಮೆ ನೆನಪಿಸಿಕೊಳ್ಳಿ, ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ/ ಕೆಲವೇ ಸೀಟುಗಳು ಉಳಿದಿವೆ /ಇನ್ನೆರಡೇ ದಿನ ಇಂತಹ ಸಿನಿಮಾ ಇರುತ್ತದೆ/ ಲಿಮಿಟೆಡ್ ಸ್ಟಾಕ್ ಮಾತ್ರ - ಇಂತಹ ಎಲ್ಲಾ ಜಾಹೀರಾತು ಹೇಳಿಕೆಗಳು ನೋಡುಗರಲ್ಲಿ ನಾವು ಏನನ್ನು ತಪ್ಪಿಸಿಕೊಳ್ಳಲಿದ್ದೇವೆ ಎಂಬ ಭಯವನ್ನು ಮೂಡಿಸಿಯೇ ತಕ್ಷಣ ಅವರು ಜಾಹೀರಾತನ್ನು ಅನುಸರಿಸಿ, ಕೊಳ್ಳುವಂತೆ ಮಾಡುತ್ತಿದ್ದದ್ದು.

ಸುಮಾರು 30 ವರ್ಷಗಳ ಹಿಂದೆ, ಆರ್ಥಿಕ ವ್ಯವಹಾರಗಳ ತಜ್ಞ ಡ್ಯಾನ್ ಹರ್ಮನ್ ಈ ಭಯವನ್ನು ಮೊಟ್ಟಮೊದಲು ತನ್ನ ಸಂಶೋಧನಾ ಪ್ರಬಂಧ ಒಂದರಲ್ಲಿ ಉಲ್ಲೇಖಿಸಿ ಅದಕ್ಕೆ ‘ಫೋಮೋ’ ಎಂಬ ಹೆಸರನ್ನು ಕೊಟ್ಟ. ಇಂದಿನ ಸಾಮಾಜಿಕ ಮಾಧ್ಯಮಗಳಲ್ಲಿ ಇದು ಹೊಸ ರೂಪವನ್ನೇ ಪಡೆದುಕೊಂಡಿದೆ. ಜಾಹೀರಾತುಗಳಲ್ಲಿ ಇದ್ದ ನಾವು ‘ಕೊಳ್ಳಬೇಕು’ ಎಂಬ ಹಂಬಲ ಇದೀಗ ಇತರರೊಂದಿಗೆ ‘ಸ್ಪರ್ಧೆ’ಯಾಗಿ ಬದಲಾಗಿದೆ. ‘ಕೊಳ್ಳುವುದು’ ಎಂಬ ಪ್ರಕ್ರಿಯೆ ನೀಡುತ್ತಿದ್ದ ‘ವಸ್ತು’ ಮತ್ತು ‘ಸಮಾಧಾನ’ ಈಗ ಕ್ಷಣಮಾತ್ರದ ‘ಉದ್ವೇಗ’, ಇತರರ ‘ಪ್ರತಿಕ್ರಿಯೆ’ಯ ನಿರೀಕ್ಷೆಗಳಾಗಿ ಮುಂದುವರಿಯುತ್ತಿದೆ. ನಿರಂತರವಾಗಿ ಇತರರೊಂದಿಗೆ ಹೋಲಿಕೆ-ಸ್ಪರ್ಧೆಗಳೇ ಇಲ್ಲಿ ಮುಖ್ಯವಾಗುವ ಅಪಾಯವಿದೆ.

ಸಾಮಾಜಿಕ ಮಾಧ್ಯಮಗಳ ಸಾಮಾನ್ಯ ಪ್ರವೃತ್ತಿಯನ್ನು ಸಾದಾ ಭಾಷೆಯಲ್ಲಿ ಹೇಳಬೇಕೆಂದರೆ, ನಮ್ಮ ತುತ್ತೂರಿಯನ್ನು ನಾವೇ ಊದುವುದು! ಫೋಟೊ ಎಡಿಟ್ ಮಾಡಿ, ‘ಸುಂದರ’ ‘ಪರಿಪೂರ್ಣ’ ಫೋಟೊವನ್ನು ಹಾಕುವುದು, ಸಂತಸ-ಸಂಗತಿ-ಘಟನೆ ಎಲ್ಲವನ್ನು ಸ್ಪರ್ಧೆಯ ಮೇಲೆ ಹಂಚಿಕೊಳ್ಳುವುದು, ಕೊನೆಗೆ ನಾವು ಪ್ರವಾಸ ಮಾಡುತ್ತಿರುವಾಗಲೂ ಫೋಟೊ ತೆಗೆದು ಶೇರ್ ಮಾಡಲಿಲ್ಲವೆಂದರೆ ಆ ಪ್ರವಾಸ ವ್ಯರ್ಥವೆಂದೇ ಭಾವಿಸುವುದು! ಇವುಗಳನ್ನು ನೋಡುತ್ತಾ ಇತರರು ನಮಗಾಗಲಿ, ನಾವು ಬೇರೆಯವರಿಗಾಗಲಿ ಹೆಬ್ಬೆಟ್ಟು ಹಾರ್ಟು ಸ್ಮೈಲಿಗಳನ್ನು ಒತ್ತಿದರೂ, ಅವುಗಳ ಹಿಂದೆ ಬೇರೆ ಭಾವನೆಗಳ ಜೊತೆಗೆ ಕಿಂಚಿತ್ ಅಸೂಯೆಯೂ, ನಾವೂ ಹೀಗೆ ಮಾಡಬೇಕಾಗಿತ್ತು ಎಂಬ ಕಾತುರವೂ ತಪ್ಪುವುದಿಲ್ಲ.

ಫೋಮೋ ಹಿಂದೆ ತಂಗಿ–ತಮ್ಮಂದಿರಾಗಿ ಫೋಬೋ, ಮೋಮೋ, ರೋಮೋ, ಫೋಜಿ, ಜೋಮೋಗಳು ಬಂದುಬಿಟ್ಟಿವೆ! ಇನ್ನೂ ಅತ್ಯುತ್ತಮವಾದದನ್ನು ಕಳೆದುಕೊಳ್ಳುವ ಭಯ (ಫಿಯರ್ ಆಫ್ ಬೆಟರ್ ಆಪ್ಷನ್), ನಾವೇನನ್ನೋ ತಪ್ಪಿಸಿಕೊಳ್ಳುತ್ತಿದ್ದೇವೆ, ಆದರೆ ಅದೇನೆಂದು ನಮಗೆ ಗೊತ್ತಿಲ್ಲ ಎಂಬ ಭಾವನೆ (ಮಿಸ್ಟರಿ ಆಫ್ ಮಿಸ್ಸಿಂಗ್ ಔಟ್), ನಿಜವಾಗಿ ನಾವೇನನ್ನೂ ತಪ್ಪಿಸಿಕೊಂಡಿಲ್ಲ ಎಂಬ ಅರಿವು (ರಿಯಾಲಿಟಿ ಆಫ್ ಮಿಸ್ಸಿಂಗ್ ಔಟ್), ಯಾವ ಪ್ರತಿಕ್ರಿಯೆಯನ್ನು ಗಳಿಸದಿರುವ ಭಯದಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವ ಆಸೆಯಿದ್ದರೂ ಹಿಂಜರಿಕೆ (ಫಿಯರ್ ಆಫ್ ಜಾಯ್ನಿಂಗ್ ಇನ್) ಇತ್ಯಾದಿ. ಅದೇ ಫೋಮೋದ ವಿರುದ್ಧ ಭಾವನೆ (ಜಾಯ್ ಆಫ್ ಮಿಸ್ಸಿಂಗ್ ಔಟ್), ಅಂದರೆ ಸಾಮಾಜಿಕ ಮಾಧ್ಯಮದಿಂದ ಹೊರಬಂದಾಗ ‘ಮಿಸ್ ಮಾಡಿಕೊಳ್ಳುತ್ತಿದ್ದೇವೆ’ ಅನ್ನಿಸದ ನಿರಾಳ ಭಾವ.

ನಾವಂದುಕೊಂಡದ್ದಕಿಂತ ಫೋಮೋದ ಪ್ರಮಾಣ ತುಂಬಾ ಹೆಚ್ಚಾಗಿದೆ. ಜಗತ್ತಿನ ಅರ್ಧಕ್ಕಿಂತ ಹೆಚ್ಚು ಹದಿಹರೆಯದ ಮಕ್ಕಳು ಇನ್ಸ್ಟಾ, ಎಕ್ಸ್, ಟಿಕ್ ಟಾಕ್‌ಗಳನ್ನು ಉಪಯೋಗಿಸುತ್ತಾರೆ. ಇದೇ ಮಕ್ಕಳು ತಮ್ಮ ಜೊತೆಯವರೊಂದಿಗೆ ಹೋಲಿಸಿಕೊಳ್ಳುವ ಸಾಧ್ಯತೆಯೂ ಹೆಚ್ಚು. ದಿನಕ್ಕೆ ಕನಿಷ್ಠ ನಾಲ್ಕು ಗಂಟೆಗಳಷ್ಟು ಸಮಯವನ್ನು ಅವರು ಕಳೆಯುವುದು ಇದೇ ವೇದಿಕೆಗಳಲ್ಲಿಯೇ. ಫೋಮೋ ಇವರನ್ನು ತನ್ನ ಹಿಡಿತದಲ್ಲಿ ಗಟ್ಟಿಯಾಗಿ ಇರಿಸಿಕೊಳ್ಳುತ್ತದೆ.

ಫೋಮೋ ಹಿಡಿತದಲ್ಲಿ ನಾವು ಯಾರೂ ಸಿಲುಕಬಹುದು , ಸಿಲುಕಿರಬಹುದು ಎಂಬ ಅರಿವೇ ಫೋಮೋದಿಂದ ಹೊರಬರುವ ಮೊದಲ ಹಂತ. ಸಾಮಾಜಿಕ ಮಾಧ್ಯಮ, ಸ್ಮಾರ್ಟ್‌ಫೋನ್‌ಗಳಿಂದ ವಾರಕ್ಕೆ ಒಂದು ದಿನ, ದಿನದಲ್ಲಿ ಕೆಲವು ಗಂಟೆಗಳಾದರೂ ದೂರವಿರುವ ಪ್ರಯತ್ನ ‘ಡಿಜಿಟಲ್ ಡಿಟಾಕ್ಸ್’ ಅನ್ನು ಪಾಲಿಸುವುದು ಮತ್ತೊಂದು ಉಪಾಯ. ಬೇರೆಯವರಿಗೆ ನಿಮ್ಮ ಪ್ರಶಂಸೆ ಸೂಚಿಸುವಾಗ ನೇರವಾಗಿ ಕರೆ ಮಾಡುವುದು,ಹೀಗೆ ಮಾಡುವ ಮೂಲಕ ಅವರು ನಿಮಗೆ ಕರೆ ಮಾಡುವಂತೆ ಪ್ರಚೋದಿಸುವುದು ಇನ್ನೊಂದು ವಿಧಾನ. ನಮಗೆ ಏನಿದೆ ಎನ್ನುವ ಬಗ್ಗೆ ತೃಪ್ತಿ, ಯಾವಾಗಲೂ ಹಾಕುವ ಫೋಟೋ ಪರಿಪೂರ್ಣವೇ ಆಗಿರಬೇಕೆಂದಿಲ್ಲ ಎಂಬ ಧೈರ್ಯ, ಇತರರು ಸಂತೋಷವಾಗಿದ್ದಾರೆಂದರೆ ಅದರ ಅರ್ಥ ‘ನಾನು ಸಂತೋಷವಾಗಿಲ್ಲ’ ಎಂದೇನಲ್ಲ ಎಂಬ ಅರಿವು, ಇವು ನಮ್ಮನ್ನು ಫೋಮೋಗೆ ತುತ್ತಾಗದಂತೆ ಕಾಪಾಡುವ ಕೌಶಲಗಳು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) 64 cm^3 ಘನಫಲವನ್ನು ಹೊಂದಿರುವ 2 ವರ್ಗ ಘನ ಮುಖಗಳನ್ನು ಸೇರಿಸಿ ಒಂದು ಆಯತ ಘನಾಕೃತಿಯನ್ನು ತಯಾರಿಸಿದೆ. ಆಯುತ ಘನಾಕೃತಿಯ ಅತ್ಯಂತ ಉದ್ದದ ಅಂಚಿನ ಅಳತೆಯು

ಎ) 4 ಸೆಂ. .ಮೀ ಬಿ) 8 ಸೆಂ. .ಮೀ
ಸಿ) 16 ಸೆಂ. .ಮೀ ಡಿ) 128 ಸೆಂ. .ಮೀ

ಉತ್ತರ:– (ಬಿ) 8 ಸೆಂ. .ಮೀ

2) ಒಂದು ಘನಬಹುಪದೋಕ್ತಿಯ ಮಹತ್ತಮ ಘಾತ ಅಥವಾ ಡಿಗ್ರಿಯು

(A) 1 (B) 2
(C) 3 (D) 4

ಉತ್ತರ:– (ಸಿ)3

3) ಚಿತ್ರದಲ್ಲಿ, y = p(x) ಬಹುಪದೋಕ್ತಿಯ ಶೂನ್ಯತೆಗಳ ಸಂಖ್ಯೆಯು,



(A) 3 (B) 5
(C) 4 (D) 1

ಉತ್ತರ:– (ಸಿ) 4

4) *ಈ ಕೆಳಗಿನವುಗಳಲ್ಲಿ ಯಾವುದು ಸಮಾಂತರ ಶ್ರೇಢಿಯಾಗಿದೆ?*

(A) 1, – 1, – 2, ... (B) 1, 5, 9, ...
(C) 2, – 2, 2, – 2, ... (D) 1, 2, 4, 8, ...

ಉತ್ತರ:– (ಬಿ) 1, 5, 9 1)

5) $2x^2 + ax + 6 = 0$ ವರ್ಗ ಸಮೀಕರಣದ ಒಂದು ಮೂಲವು 2 ಆದಾಗ a ಯ ಬೆಲೆ

(A) 7 (B) 2 7
(C) – 7 (D) 2

ಉತ್ತರ:– (ಸಿ) – 7

6) $a_1x + b_1y+C_1=0$ ಹಾಗೂ $a_2x + b_2y+C_2=0$ ರೂಪದ ರೇಖಾತ್ಮಕ ಸಮೀಕರಣಗಳಿಗೆ ಎಳೆದ ರೇಖೆಗಳು ಪರಸ್ಪರ ಐಕ್ಯಗೊಂಡರೆ ಕೆಳಗಿನವುಗಳಲ್ಲಿ ಸರಿಯಾದ ಸಂಬಂಧವು

(A) $\frac{a_1}{a_2} = \frac{b_1}{b_2} = \frac{c_1}{c_2}$ (B) $\frac{a_1}{a_2} \neq \frac{b_1}{b_2} \neq \frac{c_1}{c_2}$

(C) $\frac{a_1}{a_2} = \frac{b_1}{b_2} \neq \frac{c_1}{c_2}$ (D) $\frac{a_1}{a_2} \neq \frac{b_1}{b_2} = \frac{c_1}{c_2}$

ಉತ್ತರ:–

(A) $\frac{a_1}{a_2} = \frac{b_1}{b_2} = \frac{c_1}{c_2}$

7) ಘನ ಬಹುಪದೋಕ್ತಿಯ ಮಹತ್ತಮ ಘಾತವು (ಡಿಗ್ರಿ)

ಎ) 4 ಬಿ) 1
ಸಿ) 3 ಡಿ) 2

ಉತ್ತರ:– (ಸಿ)3 (ಮಾದರಿ ಪ್ರಶ್ನೆ ಪತ್ರಿಕೆ–2025–26)

8) **(sec^2 A – 1) ಕ್ಕೆ ಸಮನಾಗಿರುವುದು**

(A) tan^2 A (B) cot^2.A
(C) sin^2 A (D) $cosec^2$ A

ಉತ್ತರ:–
(A) tan^2 A

9) 3, 8, 13, 18...ಈ ಸಮಾಂತರ ಶ್ರೇಢಿಯ ಎಷ್ಟನೇ ಪದ 78?

(A) 20 (B) 2 7
(C) 16 (D) 28

ಉತ್ತರ:– (ಸಿ) 16

ಪರಿಹಾರ:– ನೀಡಿರುವ ಸಮಾಂತರ ಶ್ರೇಢಿ 3, 8, 13, 18......

ಇಲ್ಲಿ a=3 d=8-3=5 nth ಪದ = 78

Then
$$a_n = a + (n-1)d$$
$$78 = 3 + (n-1)(5)$$
$$5(n-1) = 78 - 3$$
$$5(n-1) = 75$$
$$n - 1 = \frac{75}{5}$$
$$n - 1 = 15$$
$$n = 15 + 1 \Rightarrow n = 16$$

ಹೀಗಾಗಿ 78 ಸಮಾಂತರ ಶ್ರೇಢಿಯ 16ನೇ ಪದವಾಗಿದೆ

10) ವರ್ಗಾಂತರದ ಮಧ್ಯಬಿಂದುವನ್ನು ಕಂಡುಹಿಡಿಯುವ ಸೂತ್ರವು

(A) $\frac{\text{ಮೇಲ್ಮಿತಿ – ಕೆಳಮಿತಿ}}{3}$ (B) $\frac{\text{ಮೇಲ್ಮಿತಿ + ಕೆಳಮಿತಿ}}{2}$

(C) $\frac{\text{ಮೇಲ್ಮಿತಿ – ಕೆಳಮಿತಿ}}{2}$ (D) $\frac{\text{ಮೇಲ್ಮಿತಿ + ಕೆಳಮಿತಿ}}{3}$

ಉತ್ತರ:– (ಬಿ)

(B) $\frac{\text{ಮೇಲ್ಮಿತಿ + ಕೆಳಮಿತಿ}}{2}$

11) ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು 306 ಆಗಿದೆ. ನಾವು ಆ ಪೂರ್ಣಾಂಕಗಳನ್ನು ಕಂಡುಹಿಡಿಯಬೇಕಾಗಿದೆ. *ಈ ಸನ್ನಿವೇಶದ ವರ್ಗ ಸಮೀಕರಣಗಳ ರೂಪ ಯಾವುದು?*

(A) $3x^2 + 2x – 306 = 0$
(B) $6x^2 + 9x – 706 = 0$
(C) $2x^2 + x – 360 = 0$
(D) $x^2 + x – 306 = 0$

ಉತ್ತರ:– (D) $x^2 + x – 306 = 0$

ಪರಿಹಾರ:– ಎರಡು ಅನುಕ್ರಮ ಧನ ಪೂರ್ಣಾಂಕಗಳು x ಮತ್ತು $x+1$ ಆಗಿರಲಿ

ಎರಡು ಅನುಕ್ರಮ ಧನಪೂರ್ಣಾಂಕಗಳ ಗುಣಲಬ್ಧವು = $x(x+1)$ ಆಗಿರಲಿ

ನೀಡಿರುವ ಸಮಸ್ಯೆಯ ಪ್ರಕಾರ

$(x + 1) = 306$
$x^2 + x – 306 = 0$

ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು 306 ಆಗಿದೆ.

ನಾವು ಆ ಪೂರ್ಣಾಂಕಗಳನ್ನು ಕಂಡು ಹಿಡಿಯಬೇಕಾದಾಗ ಬಳಸಬಹುದಾದ ವರ್ಗ ಸಮೀಕರಣ $x^2 + x – 306 = 0$

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

REVISION : MODEL QUESTIONS

Multiple choice Questions

1) Consider the following equivalence relation R on Z , the set of integers R ={(a,b |2 divides a -b) } . If [x] represents the equivalence class of x, then [0] is the set

A) $\{0, \pm2, \pm4, \pm6, \pm8, ...\}$ B) $\{\pm1, \pm3, \pm5, \pm7, \pm9, ...\}$
C) $\{0, \pm1, \pm2, \pm3, \pm4, ...\}$ D) $\{........ -4, -1, 2, 5, 8 ....\}$

Ans:-
A) $\{0, \pm2, \pm4, \pm6, \pm8, ...\}$

2) Let the relation R in the set A = { x ∈ Z: 0 ≤ x ≤ 12}, given by R={(a, b):|a-b| is multiple of 4}, then [3], the equivalence class containing 3 is

A) {1,5,9} B) ϕ
C) A D) {3, 7,11}

Ans:- (D) {3, 7,11}

3) If a relation R on the set {1, 2, 3} is defined by R = {(1, 1)}, then R is

(A) symmetric but not transitive
(B) transitive but not symmetric
(C) symmetric and transitive.
(D) neither symmetric nor transitive.

Ans:- (C) symmetric and transitive.

4) If $y = |\cos x| + |\sin x|$, then $\frac{dy}{dx}$ at $x = \frac{2\pi}{3}$ is

(A) $\frac{1-\sqrt{3}}{2}$ (B) 0
(C) $\frac{1}{2}(\sqrt{3}-1)$ (D) None of these

Ans : (C) $\frac{1}{2}(\sqrt{3}-1)$

$$\frac{dy}{dx} = \sin x + \cos x \quad \therefore \left(\frac{dy}{dx}\right)_{x=\frac{2\pi}{3}} = \sin 120^0 + \cos 120^0 = \frac{\sqrt{3}}{2} - \frac{1}{2} = \frac{\sqrt{3}-1}{2}.$$

5) $\int e^x \left(\frac{1+\sin x}{1+\cos x}\right) dx$ is

(A) $\tan\left(\frac{x}{2}\right) + C$ (B) $e^x \sin x + C$
(C) $e^x \tan\left(\frac{x}{2}\right) + C$ (D) $e^x + C$

Ans : (C) $e^x \tan\left(\frac{x}{2}\right) + C$

$$\frac{1+\sin x}{1+\cos x} = \frac{1 + 2\sin\frac{x}{2}\cos\frac{x}{2}}{2\cos^2\frac{x}{2}} = \frac{1}{2}\sec^2\frac{x}{2} + \tan\frac{x}{2}$$

Let $f(x) = \tan\frac{x}{2}$. Then $f'(x) = \frac{1}{2}\sec^2\frac{x}{2}$.

$$\therefore \int e^x \left(\frac{1+\sin x}{1+\cos x}\right) dx = \int e^x [f(x) + f'(x)] \text{ form.}$$
$$= e^x f(x) = e^x . \tan\frac{x}{2} + C.$$

6). Choose the statement that is not true from the options given below:

A) Every polynomial function is continuous.
B) Every rational function is continuous.
C) Every differentiable function is continuous.
D) Every continuous function is differentiable

Ans:-(D) Every continuous function is differentiable

7) The product of matrices A and B is equal to a diagonal matrix. If the order of the matrix B is 2x3, then order of the matrix A is

A) 3x3 B) 2x2
C) 3x2 D) 2x3

Ans:-.(**C) 3x2**

8) If 1, w, w^2 are three cube roots of unity, then $(1 – w + w^2)(1 + w – w^2)$ is........................

(A) 2 (B) 4
(C) 1 (D) 3

Ans: (B) 4

Expln:- We know $1 + w + w^2 = 0$. ∴ $1 + w = -w^2$ and $1 + w^2 = -w$.

∴ $(1 – w + w^2)(1 + w – w^2)$
$= (-2w)(-2w^2) = 4w^3 = 4.$

9) If $\cot^{-1} x = y$, then

(A) $0 \le y \le \pi$ **(B) $0 < y < \pi$**
(C) $-\frac{\pi}{2} \le y \le \frac{\pi}{2}$ **(D) $-\frac{\pi}{2} < y < \frac{\pi}{2}$.**

Ans:- (B) $0 < y < \pi$

10) $\sin(\tan^{-1} x)$, |x| < 1 is equal to

(A) $\frac{\sqrt{1-x^2}}{x}$ (B) $\frac{x}{\sqrt{1-x^2}}$
(C) $\frac{1}{1+x^2}$ (D) $\frac{x}{\sqrt{1+x^2}}$.

Ans:-
(D) $\frac{x}{\sqrt{1+x^2}}$.

11) Solve for x

$$\tan^{-1}\left(\frac{1-x}{1+x}\right) = \frac{1}{2}\tan^{-1} x, \; x > 0$$

(A) 1 (B) $\frac{1}{\sqrt{3}}$ (C) $\sqrt{3}$ (D) −1

Ans : (B) $\frac{1}{\sqrt{3}}$

Exp ln : − $\tan^{-1}\left(\frac{1-x}{1+x}\right) = \frac{1}{2}\tan^{-1} x$

$\therefore 2\tan^{-1}\left(\frac{1-x}{1+x}\right) = \tan^{-1} x, \; x > 0$

Put $x = \tan\theta$. Then $\frac{1-x}{1+x} = \frac{1-\tan\theta}{1+\tan\theta} = \tan\left(\frac{\pi}{4}-\theta\right)$

$\therefore 2\tan^{-1}\tan\left(\frac{\pi}{4}-\theta\right) = \theta$

i.e., $2\left(\frac{\pi}{4}-\theta\right) = \theta \; \therefore \frac{\pi}{2} = 3\theta$ or $\theta = \frac{\pi}{6}$

$x = \tan\frac{\pi}{6} = \frac{1}{\sqrt{3}}$.

12)
Statement 1: Left hand derivative of $f(x) = |x|$ at x = 0 is -1.
Statement 2: Left hand derivative of f(x) at x = a is $\lim_{h\to0} f(a-h)$

A) Statement 1 is true, and Statement 2 is false.
B) Statement 1 is true, and Statement 2 is true, Statement 2 is correct Explanation for Statement 1
C) Statement 1 is true, and Statement 2 is true, Statement 2 is not a correct Explanation for Statement 1
D) Statement 1 is false, and Statement 2 is false.

Ans:-B

(Contd……)

ಚಿನ್ನದ ಭಗವದ್ಗೀತೆ 8ಕ್ಕೆ ಲೋಕಾರ್ಪಣೆ

ಉಡುಪಿ: ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಶ್ರೀಪಾದರ ಚತುರ್ಥ ಪರ್ಯಾಯದ ಅಂಗವಾಗಿ ದೆಹಲಿಯ ಶ್ರೀಕೃಷ್ಣ ಭಕ್ತರೊಬ್ಬರು ಸುಮಾರು ₹2 ಕೋಟಿ ವೆಚ್ಚದಲ್ಲಿ ಸಿದ್ಧಪಡಿಸಿರುವ ಚಿನ್ನದ ಭಗವದ್ಗೀತಾ ಹೊತ್ತಗೆಯ ಲೋಕಾರ್ಪಣೆ ಇದೇ 8ರಂದು ಸಂಜೆ 5 ಗಂಟೆಗೆ ಶ್ರೀಕೃಷ್ಣನ ಸನ್ನಿಧಿಯಲ್ಲಿ ನಡೆಯಲಿದೆ.

ಭಗವದ್ಗೀತೆಯ 18 ಅಧ್ಯಾಯಗಳ 700 ಶ್ಲೋಕಗಳನ್ನು ಚಿನ್ನದ ಹಾಳೆಯಲ್ಲಿ ಮುದ್ರಿಸಲಾಗಿದೆ.

'ಹೊತ್ತಗೆಯನ್ನು ಚಿನ್ನದ ರಥದಲ್ಲಿ ಮೆರವಣಿಗೆ ಮೂಲಕ ಕೃಷ್ಣ ಸನ್ನಿಧಿಗೆ ತಂದು, ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಶ್ರೀಪಾದರು ಮತ್ತು ಕಿರಿಯ ಶ್ರೀ ಸುಶ್ರೀಂದ್ರತೀರ್ಥ ಶ್ರೀಪಾದರ ಉಪಸ್ಥಿತಿಯಲ್ಲಿ ಲೋಕಾರ್ಪಣೆಗೊಳಿಸಲಾಗುವುದು' ಎಂದು ಪರ್ಯಾಯ ಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶಾಸಕರ ಬಹಿರಂಗ ಕಚ್ಚಾಟವು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿರುವುದರ ಸಂಕೇತವೇ?

ಹೌದು ಅಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಬೀದರ್: ಕೈ ಕೈ ಮಿಲಾಯಿಸಿದ ಶಾಸಕರು

ಕೆಡಿಪಿ ಸಭೆ: ಕಾವೇರಿದ ರಾಜಕಾರಣ ಪರಸ್ಪರ ಅವಾಚ್ಯವಾಗಿ ನಿಂದನೆ

ಪ್ರಜಾವಾಣಿ ವಾರ್ತೆ

ಬೀದರ್: ಜಿಲ್ಲಾ ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಸೋಮವಾರ ಇಲ್ಲಿ ಶಾಸಕರ ಬಲ ಪ್ರದರ್ಶನ, ಕೈ ಕೈ ಮಿಲಾಯಿಸಿದ ಘಟನೆಗೆ ವೇದಿಕೆಯಾಯಿತು. ಹುಮನಾಬಾದ್ ಕ್ಷೇತ್ರದ ಬಿಜೆಪಿ ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ್ ಹಾಗೂ ಕಾಂಗ್ರೆಸ್‌ನ ಮೇಲ್ಮನೆ ಸದಸ್ಯ ಭೀಮರಾವ್ ಪಾಟೀಲ್ ಪರಸ್ಪರ ಅವಾಚ್ಯವಾಗಿ ನಿಂದಿಸಿದರು.

'ಬೀದರ್‌ನ ಗುರುದ್ವಾರದ ಸಮೀಪದ ಸರ್ಕಾರಿ ಜಮೀನನ್ನು ಕೆಲವರು ಒತ್ತುವರಿ ಮಾಡಿ, ನಿವೇಶನಗಳನ್ನು ಸೃಷ್ಟಿಸಿ ಮಾರಾಟ ಮಾಡುತ್ತಿದ್ದಾರೆ. ಇದರ ವಿರುದ್ಧ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು' ಎಂದು ಸಭೆಯಲ್ಲಿ ಡಾ.ಸಿದ್ದಲಿಂಗಪ್ಪ ಪಾಟೀಲ್ ಒತ್ತಾಯಿಸಿದರು.

ಈ ಮಾತಿನ ಹಿಂದೆಯೇ ಸಿಟ್ಟಿಗೆದ್ದ ಭೀಮರಾವ್ ಪಾಟೀಲ್, ಅದಕ್ಕೆ ವಿರೋಧ ವ್ಯಕ್ತಪಡಿಸಿದರು. ತಮ್ಮ ಆಸನದಿಂದ ಎದ್ದು ಸಿದ್ದಲಿಂಗಪ್ಪ ಬಳಿಗೆ ತೆರಳಿ, ಜಗಳಕ್ಕಿಳಿದರು. ಈ ವೇಳೆ ಇಬ್ಬರೂ ಪರಸ್ಪರ ನಿಂದಿಸುತ್ತ ಕೈ ಕೈ ಮಿಲಾಯಿಸಲು ಮುಂದಾದರು. ಪರಿಸ್ಥಿತಿ ಕೈಮೀರುತ್ತಿದ್ದಾಗ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ ಪೂಜಾರಿ ಮಧ್ಯಪ್ರವೇಶಿಸಿ ಇಬ್ಬರನ್ನು ದೂರ ಮಾಡಿ, ಜಗಳ ಬಿಡಿಸಿದರು. ಸಹೋದರ ಎಂಎಲ್‌ಸಿ ಡಾ.ಚಂದ್ರಶೇಖರ ಪಾಟೀಲ್ ಅವರು ಭೀಮರಾವ್ ಪಾಟೀಲ್ ಅವರ ಬೆಂಬಲಕ್ಕೆ ಹೋಗಿ, ಅವರೂ ಸಿದ್ದಲಿಂಗಪ್ಪ ಪಾಟೀಲ್ ಅವರತ್ತ ಧಾವಿಸಲು ಯತ್ನಿಸಿದರು. ಈ ಹಂತದಲ್ಲಿ ಸಭೆ ಗೊಂದಲದ ಗೂಡಾಯಿತು.

ಸಚಿವರಾದ ಈಶ್ವರ ಬಿ. ಖಂಡ್ರೆ, ರಹೀಂ ಖಾನ್, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರು ವೇದಿಕೆಯಿಂದ ಕೆಳಗಿಳಿದು ಎರಡೂ ಕಡೆಯವರನ್ನು ಸಮಾಧಾನಗೊಳಿಸಿ, ವಾತಾವರಣ ತಿಳಿಗೊಳಿಸಿದರು. ಆನಂತರ ಅನಿರ್ದಿಷ್ಟ ಅವಧಿಗೆ ಸಭೆ ಮುಂದೂಡಲಾಗಿದೆ ಎಂದು ಸಚಿವ ಈಶ್ವರ ಬಿ. ಖಂಡ್ರೆ ಘೋಷಿಸಿದರು.

ಭೀಮರಾವ್ ಪಾಟೀಲ್ ಹಾಗೂ ಡಾ.ಸಿದ್ದಲಿಂಗಪ್ಪ ಪಾಟೀಲ್ ಹುಮನಾಬಾದ್ ಮತ ಕ್ಷೇತ್ರದವರು. ವಿಷಯ ತಿಳಿಯುತ್ತಿದ್ದಂತೆ ಉಭಯತ್ರರ ಬೆಂಬಲಿಗರು ಅವರ ಮನೆ, ಕಚೇರಿ ಎದುರು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದರು.

ನಿಷೇಧಾಜ್ಞೆ ಜಾರಿ

ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಸೋಮವಾರದಿಂದ (ಜ.5) ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಹುಮನಾಬಾದ್ ಪಟ್ಟಣದಲ್ಲಿ ಭಾರತೀಯ ನಾಗರಿಕ ಸಂಹಿತೆ–2023ರ ಕಲಂ 163(1) ಅನ್ವಯ ನಿಷೇಧಾಜ್ಞೆ ಜಾರಿಗೊಳಿಸಿ ತಹಶೀಲ್ದಾರ್ ಅಂಜುಮ್ ತಬಸ್ಸುಮ್ ಆದೇಶ ಹೊರಡಿಸಿದ್ದಾರೆ.

ಬೀದರ್‌ನಲ್ಲಿ ಸೋಮವಾರ ನಡೆದ ಜಿಲ್ಲಾಮಟ್ಟದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಪರಸ್ಪರ ಕೈಕೈ ಮಿಲಾಯಿಸಿದ ಶಾಸಕರಾದ ಭೀಮರಾವ್ ಪಾಟೀಲ್ ಹಾಗೂ ಡಾ.ಸಿದ್ದಲಿಂಗಪ್ಪ ಪಾಟೀಲ್ ಅವರ ಜಗಳ ಬಿಡಿಸಲು ಹರಸಾಹಸ ಪಡುತ್ತಿರುವ ಹೆಚ್ಚುವರಿ ಎಸ್‌ಪಿ ಚಂದ್ರಕಾಂತ ಪೂಜಾರಿ —ಚಿತ್ರ: ಲೋಕೇಶ ವಿ. ಬಿರಾದಾರ

> ಸಭೆಯಲ್ಲಿ ಜಮೀನಿನ ವಿಷಯ ಪ್ರಸ್ತಾಪಿಸಿದಾಗ ಎಲ್ಲರೆದುರೇ ನನ್ನ ಮೇಲೆ ಹಲ್ಲೆಗೆ ಯತ್ನಿಸಿದ್ದಾರೆ. ಇದು ಗೂಂಡಾ ವರ್ತನೆ
> **ಡಾ.ಸಿದ್ದಲಿಂಗಪ್ಪ ಪಾಟೀಲ್,** ಶಾಸಕ

> ಜಮೀನೊಂದರ ವಿಷಯದ ಕುರಿತು ಚರ್ಚೆ ಮಾಡುತ್ತಿರುವ ವೇಳೆ ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ್ ನಿಂದಿಸಿದ್ದಾರೆ. ಅವರ ನಡೆ ಖಂಡನಾರ್ಹ
> **ಭೀಮರಾವ್ ಪಾಟೀಲ್,** ವಿಧಾನ ಪರಿಷತ್ ಸದಸ್ಯ

ಹುಮನಾಬಾದ್‌ನಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಎಸ್‌ಪಿ ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದಾರೆ.

ಹುಮನಾಬಾದ್‌ನಲ್ಲಿ ಅಕ್ರಮ ಆರ್‌ಟಿಒ ಚೆಕ್‌ಪೋಸ್ಟ್: ಲೋಕಾಯುಕ್ತ ನ್ಯಾಯಮೂರ್ತಿ

ಕಲಬುರಗಿ: 'ಬೀದರ್ ಜಿಲ್ಲೆಯ ಹುಮನಾಬಾದ್‌ನಲ್ಲಿ ಅನಧಿಕೃತವಾಗಿ ಆರ್‌ಟಿಒ ಚೆಕ್ ಪೋಸ್ಟ್ ಕಾರ್ಯನಿರ್ವಹಿಸುತ್ತಿತ್ತು. ವಾಹನಗಳಿಂದ ಗಂಟೆಗೆ ₹8 ಸಾವಿರ ಸಂಗ್ರಹಿಸಲಾಗುತ್ತಿತ್ತು ಎಂಬ ಮಾಹಿತಿ ಇದೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದೇವೆ' ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಹೇಳಿದರು.

ಸೋಮವಾರ ಅಧಿಕಾರಿಗಳ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಅವರು, 'ಈ ಅಕ್ರಮ ಚೆಕ್‌ಪೋಸ್ಟ್ ಇರುವ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಮಗೆ ಗೊತ್ತೇ ಇರಲಿಲ್ಲ ಎಂದು ಹೇಳಿಕೆ ನೀಡಿದ್ದಾರೆ' ಎಂದು ಹೇಳಿದರು.

'ಈ ಚೆಕ್‌ಪೋಸ್ಟ್‌ನಲ್ಲಿ ಏಜೆಂಟರೇ ತುಂಬಿರುವ ಬಗ್ಗೆ ನಮ್ಮ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ಸಹಾಯಕ ಆರ್‌ಟಿಒ ಹೆಸರಿನ ಸ್ಟಿಕ್ಕರ್ ಇದ್ದ ವಾಹನ ನಿಂತಿರುತ್ತಿತ್ತು. ಆದರೆ, ಅಲ್ಲಿ ಅಧಿಕಾರಿಗಳು ಇರುತ್ತಿರಲಿಲ್ಲ. ನಮ್ಮ ಅಧಿಕಾರಿಗಳು ಚೆಕ್‌ಪೋಸ್ಟ್ ಫೋಟೊ ತೆಗೆದು ತನಿಖೆ ಶುರು ಮಾಡಿದಾಗ ತೆರವುಗೊಳಿಸಲಾಗಿದೆ. ಈ ಬಗ್ಗೆ ಸಾರಿಗೆ ಇಲಾಖೆಯ ಜಂಟಿ ಆಯುಕ್ತರನ್ನು ಕರೆಸಿಕೊಂಡು ಮಾಹಿತಿ ಪಡೆಯುತ್ತೇವೆ' ಎಂದರು.

ಸಿಂಧನೂರಿನಲ್ಲೂ ಶಾಸಕರ ವಾಕ್ಸಮರ

ಪ್ರಜಾವಾಣಿ ವಾರ್ತೆ

ಸಿಂಧನೂರು(ರಾಯಚೂರು): ಶಾಸಕ ಹಂಪನಗೌಡ ಬಾದರ್ಲಿ ಹಾಗೂ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ನಡುವಿನ ರಾಜಕೀಯ ತಿಕ್ಕಾಟ ಮುಂದುವರಿದಿದೆ. ಸೋಮವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಂಬಲಿಗರು ನಡೆಸಿದ ಪ್ರತಿಭಟನೆ 'ಕೈ' ಶಾಸಕರ ನಡುವಿನ ಭಿನ್ನಾಭಿಪ್ರಾಯಕ್ಕೆ ಸಾಕ್ಷಿಯಾಯಿತು.

'ವಿದ್ಯಾರ್ಥಿ ರಥ' ವಿಶೇಷ ಬಸ್ ಸೌಕರ್ಯ ಒದಗಿಸಿದ್ದಕ್ಕಾಗಿ ವಿದ್ಯಾರ್ಥಿಗಳೊಂದಿಗೆ ಶಾಸಕರ ಸಂವಾದ ಮತ್ತು ನೂತನ ಬಸ್‌ಗಳಿಗೆ ಚಾಲನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಹಂಪನಗೌಡ ಬಾದರ್ಲಿ ತಮ್ಮ ಮಾತು ಮುಗಿಸಿ, 'ಟೈಮ್ ಆಗಿದೆ, ಎಲ್ಲರೂ ಬನ್ನಿ ಬಸ್‌ಗಳಿಗೆ ಚಾಲನೆ ಕೊಡೋಣ' ಎಂದು ಎದ್ದು ಹೋಗಿ ಬಸ್‌ಗಳಿಗೆ ಪೂಜೆ ಮಾಡಿ ಚಾಲನೆ ಕೊಟ್ಟರು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರ ಬೆಂಬಲಿಗರು, 'ಎಂಎಲ್‌ಸಿ ಸಾಹೇಬರಿಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ. ಅಧಿಕಾರಿಗಳು ಶಿಷ್ಟಾಚಾರ ಉಲ್ಲಂಘಿಸಿದ್ದಾರೆ. ಅವಮಾನ ಮಾಡಿದ್ದಾರೆ' ಎಂದು ಆರೋಪಿಸಿ ಡಿಪೊ ಕಚೇರಿಗೆ ನುಗ್ಗಲು ಯತ್ನಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಬಂದ ಡಿವೈಎಸ್‌ಪಿ ಚಂದ್ರಶೇಖರ ಅವರು, ಬಸ್‌ಗಳ ಸಂಚಾರಕ್ಕೆ ಅಡ್ಡಪಡಿಸಿ ಪ್ರಯಾಣಿಕರಿಗೆ ತೊಂದರೆ ನೀಡಿದ ಎಂಎಲ್‌ಸಿ ಬೆಂಬಲಿಗರನ್ನು ವಶಕ್ಕೆ ಪಡೆದು, ಪೊಲೀಸ್ ವಾಹನಗಳಲ್ಲಿ ಠಾಣೆಗೆ ಕರೆದೊಯ್ದರು. ಕೆಲ ಕಾಲದ ನಂತರ ಬಿಡುಗಡೆಗೊಳಿಸಲಾಯಿತು.

'ಸೇಡಿನ ರಾಜಕಾರಣ': 'ನಾನು ವಿಧಾನ ಪರಿಷತ್ ಸದಸ್ಯ ಆಗಿರುವುದನ್ನು ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಸೇಡಿನ ರಾಜಕಾರಣದ ಮೂಲಕ ನನ್ನನ್ನು ಮುಗಿಸುವ ಕುತಂತ್ರ ರೂಪಿಸಿದ್ದಾರೆ' ಎಂದು ಬಸನಗೌಡ ಬಾದರ್ಲಿ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

'ಕಾರ್ಯಕ್ರಮಕ್ಕೆ ಡಿಪೊ ವ್ಯವಸ್ಥಾಪಕರು ಆಹ್ವಾನಿಸಿದ್ದರು. ಶಿಷ್ಟಾಚಾರದಂತೆ ಈ ಕಾರ್ಯಕ್ರಮ ನಡೆದಿಲ್ಲ. ಹಂಪನಗೌಡ ಬಾದರ್ಲಿ ಅವರು ನನಗೆ ಭಾಷಣ ಮಾಡಲು ಅವಕಾಶ ಕೊಡದೆ ಅವಮಾನ ಮಾಡಿರುವುದು ಎಷ್ಟು ಸರಿ' ಎಂದು ಪ್ರಶ್ನಿಸಿದರು. ಇದು, ಶಾಸಕರ ಘನತೆಗೆ ಶೋಭೆ ತರುವುದಿಲ್ಲ' ಎಂದು ದೂರಿದರು.

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಿಸಿ 90083 66666
support@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ https://bit.ly/40dPCqy

ಕೇರಳ: ಎಲ್‌ಡಿಎಫ್‌ನ ಶಾಸಕ ಅನರ್ಹ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಆಡಳಿತಾರೂಢ ಎಲ್‌ಡಿಎಫ್‌ನ ಶಾಸಕ, ಮಾಜಿ ಸಚಿವ ಆ್ಯಂಟನಿ ರಾಜು ಅವರು ಪ್ರಕರಣವೊಂದರಲ್ಲಿ ಶಿಕ್ಷೆ ಗುರಿಯಾಗಿರುವುದರಿಂದ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಲಾಗಿದೆ.

ಆಸ್ಟ್ರೇಲಿಯಾ ಪ್ರಜೆಯೊಬ್ಬ ಭಾಗಿಯಾಗಿದ್ದ ಮಾದಕ ವಸ್ತು ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯಗಳನ್ನು ತಿರುಚಿರುವ ಅಪರಾಧ ಸಾಬೀತಾಗಿದ್ದರಿಂದ ಅವರಿಗೆ 3 ವರ್ಷ ಶಿಕ್ಷೆ ವಿಧಿಸಿರುವುದಾಗಿ ನೆಡುಮಂಗಾಡ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಜನವರಿ 3ರಂದು ತೀರ್ಮಾನ ಪ್ರಕಟಿಸಿತ್ತು. ಈ ಪ್ರಕರಣವು ಮೂರು ದಶಕಗಳಷ್ಟು ಹಳೆಯದ್ದು.

ಪ್ರಜಾಪ್ರಾತಿನಿಧ್ಯ ಕಾಯ್ದೆ ಮತ್ತು ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಆ್ಯಂಟನಿ ಅವರನ್ನು ಅನರ್ಹಗೊಳಿಸಿರುವುದಾಗಿ ಕೇರಳ ವಿಧಾನ ಸಭೆಯ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ. ಅವರ ಅನರ್ಹತೆಯು ತೀರ್ಪು ಪ್ರಕಟವಾದ ದಿನದಿಂದಲೇ ಜಾರಿ ಆಗಿದೆ.

ಪ್ರಾದೇಶಿಕ ಪಕ್ಷ ಜನಾಧಿಪತ್ಯ ಕೇರಳ ಕಾಂಗ್ರೆಸ್‌ನ ಏಕೈಕ ಶಾಸಕರಾಗಿದ್ದ ಆ್ಯಂಟನಿ ಅವರು ವೃತ್ತಿಯಲ್ಲಿ ವಕೀಲರಾಗಿದ್ದರು. ಮಾದಕವಸ್ತುಗಳ ಕಳ್ಳ ಸಾಗಣೆ ಪ್ರಕರಣದಲ್ಲಿ ಆಸ್ಟ್ರೇಲಿಯಾ ಪ್ರಜೆಯೊಬ್ಬನನ್ನು 1990ರಲ್ಲಿ ಬಂಧಿಸಲಾಗಿತ್ತು. ಆತನ ಪರ ವಕೀಲರಾಗಿದ್ದ ಆ್ಯಂಟನಿ, ಆರೋಪಿಯು ಮಾದಕವಸ್ತುಗಳ ಕಳ್ಳಸಾಗಾಣೆಗೆ ಬಳಸಿದ್ದ ಒಳ ಉಡುಪನ್ನು ಸಹೋದ್ಯೋಗಿಯೊಬ್ಬನ ಸಹಾಯದಿಂದ ಬದಲಾಯಿಸಿ, ಬೇರೆ ಬಟ್ಟೆಯನ್ನು ನ್ಯಾಯಾಲಯಕ್ಕೆ ನೀಡಿದ್ದರು. ಆ ಉಡುಪು ಆರೋಪಿಗೆ ಹೊಂದಿಕೆಯಾಗದ ಕಾರಣ ಆತನನ್ನು ಪ್ರಕರಣದಿಂದ ಖುಲಾಸೆಗೊಳಿಸಲಾಗಿತ್ತು. ಆದರೆ ಸಾಕ್ಷ್ಯಗಳನ್ನು ತಿರುಚಿರುವುದು ನಂತರ ನಡೆದ ತನಿಖೆಯಲ್ಲಿ ಪತ್ತೆಯಾಗಿತ್ತು.

ಉಮರ್, ಶರ್ಜೀಲ್‌ಗೆ 'ಸುಪ್ರೀಂ' ಜಾಮೀನು ಇಲ್ಲ

ಒಂದನೇ ಪುಟದಿಂದ...

ಜಾಮೀನು ಪಡೆದವರು: ಗುಲ್‌ಫಿಶಾ ಫಾತಿಮಾ, ಮೀರನ್ ಹೈದರ್, ಶಿಫಾ ಉರ್ ರೆಹಮಾನ್, ಮೊಹಮದ್ ಸಲೀಂ ಖಾನ್ ಮತ್ತು ಶಾದಾಬ್ ಅಹ್ಮದ್ ಅವರಿಗೆ ಪೀಠ ಜಾಮೀನು ಮಂಜೂರು ಮಾಡಿದೆ. 'ಇವರಿಗೆ ಜಾಮೀನು ನೀಡಿದ ಮಾತ್ರಕ್ಕೆ, ಅಪರಾಧದ ಗಂಭೀರತೆ ದುರ್ಬಲ ಆಗುವುದಿಲ್ಲ' ಎಂದ ಪೀಠವು, ಕೃತ್ಯದಲ್ಲಿ ಅವರ ಪಾತ್ರದ ಪ್ರಮಾಣದ ಆಧಾರದಲ್ಲಿ ಪ್ರತ್ಯೇಕವಾಗಿ ಅರ್ಜಿಗಳನ್ನು ಪರಿಗಣಿಸಲಾಗುವುದು ಎಂದು ಹೇಳಿದೆ.

ಈ ಪ್ರಕರಣದಲ್ಲಿ ಸಾಕ್ಷಿದಾರರ ವಿಚಾರಣೆ ನಂತರ ಅಥವಾ ಇಂದಿನಿಂದ ವರ್ಷದ ಬಳಿಕ ಖಾಲಿದ್ ಮತ್ತು ಇಮಾಮ್ ಅವರು ಜಾಮೀನು ಕೋರಿ ಹೊಸದಾಗಿ ಅರ್ಜಿ ಸಲ್ಲಿಸಬಹುದು. ಇತರ ಆರೋಪಿಗಳಿಗೆ ಹೋಲಿಸಿದರೆ ಇಬ್ಬರೂ ವಿಭಿನ್ನ ನೆಲೆಯಲ್ಲಿ ನಿಲ್ಲುತ್ತಾರೆ ಎಂದು ಪೀಠ ತಿಳಿಸಿದೆ.

2020ರ ಫೆಬ್ರುವರಿಯಲ್ಲಿ ಈಶಾನ್ಯ ದೆಹಲಿಯಲ್ಲಿ ನಡೆದ ಗಲಭೆಯಲ್ಲಿ 53 ಮಂದಿ ಮೃತಪಟ್ಟಿದ್ದರೆ, 700ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಸಿಎಎ ವಿರೋಧಿ ಹೋರಾಟದ ವೇಳೆ ನೀಡಿದ ಹೇಳಿಕೆಗಳ ಕಾರಣದಿಂದ 2020ರ ಜನವರಿ 28ರಂದು ಇಮಾಮ್ ಅವರನ್ನು ಬಂಧಿಸಲಾಯಿತು. ನಂತರ ದೊಡ್ಡ ಪಿತೂರಿ ಪ್ರಕರಣದಲ್ಲಿ ಅವರನ್ನು 2020ರ ಆಗಸ್ಟ್‌ನಲ್ಲಿ ಬಂಧಿಸಲಾಯಿತು. ಖಾಲಿದ್ ಅವರ ಬಂಧನ 2020ರ ಸೆಪ್ಟೆಂಬರ್ 13ರಂದು ಆಗಿತ್ತು.

ದೆಹಲಿ ಪೊಲೀಸರ ವಾದ: ಖಾಲಿದ್, ಇಮಾಮ್ ಮತ್ತು ಇತರರು ಶಾಂತಿಯುತ ಪ್ರತಿಭಟನೆ ಸೋಗಿನಲ್ಲಿ ಆಡಳಿತ ಬದಲಾವಣೆ ಕಾರ್ಯಾಚರಣೆ ಮೂಲಕ ದೇಶದ ಸಾರ್ವಭೌಮತೆ ಮತ್ತು ಸಮಗ್ರತೆಯ ಮೇಲೆ ದಾಳಿ ಮಾಡಲು ಸಂಚು ರೂಪಿಸಿದ್ದರು ಎಂದು ದೆಹಲಿ ಪೊಲೀಸರು ಪೀಠಕ್ಕೆ ತಿಳಿಸಿದ್ದರು. ಗಲಭೆಗಳು ಸ್ವಯಂ ಪ್ರೇರಿತವಾಗಿರಲಿಲ್ಲ, ಬದಲಿಗೆ ಪೂರ್ವಯೋಜಿತ ಪಿತೂರಿಯ ಭಾಗವಾಗಿದ್ದವು ಎಂದು ಪೊಲೀಸರು ಪ್ರತಿಪಾದಿಸಿದ್ದರು.

ದೆಹಲಿ ಪೊಲೀಸರ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ವಾದ ಮಾಡಿದ್ದರು. ಆರೋಪಿಗಳ ಪರವಾಗಿ ಹಿರಿಯ ವಕೀಲರಾದ ಕಪಿಲ್ ಸಿಬಲ್, ಅಭಿಷೇಕ್ ಸಿಂಘ್ವಿ, ಸಿದ್ಧಾರ್ಥ ದವೆ, ಸಲ್ಮಾನ್ ಖುರ್ಷಿದ್, ಸಿದ್ಧಾರ್ಥ ಲೂತ್ರಾ ವಾದಿಸಿದ್ದರು. ಸುದೀರ್ಘ ವಾದ, ಪ್ರತಿವಾದ ಆಲಿಸಿದ್ದ ಪೀಠ ಡಿಸೆಂಬರ್ 10ರಂದು ತೀರ್ಪನ್ನು ಕಾಯ್ದಿರಿಸಿತ್ತು.

ಇದು ದುರದೃಷ್ಟಕರ: ಖಾಲಿದ್ ತಂದೆ

'ಸುಪ್ರೀಂ ಕೋರ್ಟ್ ನನ್ನ ಮಗನಿಗೆ ಜಾಮೀನು ನಿರಾಕರಿಸಿರುವುದು ದುರದೃಷ್ಟಕರ ಸಂಗತಿ' ಎಂದು ಉಮರ್ ಖಾಲಿದ್ ಅವರ ತಂದೆ ಎಸ್.ಕ್ಯೂ. ಆರ್. ಇಲ್ಯಾಸ್ ಹೇಳಿದ್ದಾರೆ.

'ನಾನು ಏನನ್ನೂ ಹೇಳಲು ಬಯಸುವುದಿಲ್ಲ. ಆದೇಶ ಬಂದಿದೆ. ಇದು ದುರದೃಷ್ಟಕರ' ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ಕಾಂಗ್ರೆಸ್ ಕ್ಷಮೆ ಕೋರಲಿ: ಬಿಜೆಪಿ

'ತುಕ್ಡೆ, ತುಕ್ಡೆ ಗ್ಯಾಂಗ್ ಅನ್ನು ಬೆಂಬಲಿಸಿದ್ದಕ್ಕಾಗಿ ಕಾಂಗ್ರೆಸ್ ಕ್ಷಮೆಯಾಚಿಸಬೇಕು' ಎಂದು ಬಿಜೆಪಿ ಆಗ್ರಹಿಸಿದೆ.

ದೆಹಲಿ ಗಲಭೆ ಪ್ರಕರಣದ ಆರೋಪಿಗಳಾದ ಉಮರ್ ಖಾಲಿದ್, ಶಾರ್ಜೀಲ್ ಇಮಾಮ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನಿರಾಕರಿಸಿದ ಬೆನ್ನಲ್ಲೇ ಬಿಜೆಪಿ ಈ ಕುರಿತು ಒತ್ತಾಯ ಮಾಡಿದೆ.

ಖಾಲಿದ್ ಮತ್ತು ಇಮಾಮ್ ಅವರನ್ನು ದೇಶ ವಿಭಜಕ ಶಕ್ತಿಗಳ 'ಪೋಸ್ಟರ್ ಬಾಯ್ಸ್' ಎಂದು ಬಿಜೆಪಿ ಕರೆದಿದೆ. ಅಲ್ಲದೆ ಈ ಆರೋಪಿಗಳನ್ನು ರಕ್ಷಿಸಲು ಕಾಂಗ್ರೆಸ್ ಅವರನ್ನು 'ಮುಗ್ಧ ಬಲಿಪಶುಗಳು' ಎಂಬಂತೆ ಬಿಂಬಿಸುತ್ತಿದೆ ಎಂದಿದೆ.

'ಈ ಇಬ್ಬರ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ನಿಜವಾಗಿವೆ ಎಂದು ಸುಪ್ರೀಂ ಕೋರ್ಟ್ ಅವರಿಗೆ ಜಾಮೀನು ನಿರಾಕರಿಸಿದೆ. ಇದು ಸತ್ಯಕ್ಕೆ ಸಂದ ಜಯ, ಸತ್ಯಮೇವ ಜಯತೇ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಚಾಮರಾಜಪೇಟೆ ವಿಭಾಗ, ನಂಜಾಂಬ ಅಗ್ರಹಾರ, 2ನೇ ಮುಖ್ಯ, ಟಿ.ಆರ್. ಮಿಲ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 18
ಸಂಖ್ಯೆ: ಕಾಪಾಅ/ಚಾ.ಪೇ/ಪಿಆರ್/484/2025–26 ದಿನಾಂಕ: 05–01–2026
ತಿದ್ದುಪಡಿ
ಉಲ್ಲೇಖ: 1. ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಚಾ.ಪೇ/ಟೆಂಡರ್/ಇ–ಪ್ರೊಕ್/17/2025–26 ದಿನಾಂಕ: 22–12–2025
ಮೇಲ್ಕಂಡ ಉಲ್ಲೇಖದಂತೆ, ಟೆಂಡರ್ ಪ್ರಕಟಣೆ ಸಂಖ್ಯೆ. ಕಾಪಾಅ/ಚಾ.ಪೇ/ಟೆಂಡರ್/ಇ–ಪ್ರೊಕ್/17/2025–26ರ ಕಾಮಗಾರಿ ಕ್ರಮ ಸಂಖ್ಯೆ ಕೇವಲ 6ಕ್ಕೆ ಮಾತ್ರ (ಕಾಮಗಾರಿಯ ಹೆಸರು ವಾರ್ಡ್ ಸಂಖ್ಯೆ–159 ಆಜಾದ್‌ನಗರದ ಕಸ್ತೂರಬನಗರ, ರುದ್ರಪ್ಪ ಗಾರ್ಡನ್, ವಿಠ್ಠಲನಗರ, ಆಜಾದ್‌ನಗರ ಸುತ್ತಮುತ್ತಲ ಪ್ರದೇಶಗಳು ಮತ್ತು ವಾರ್ಡ್ ವ್ಯಾಪ್ತಿಗಳಲ್ಲಿ ಕಾಂಕ್ರೀಟ್ ರಸ್ತೆಗಳು, ಚರಂಡಿಗಳು ಮತ್ತು ಹದಗೆಟ್ಟ ರೀಚಸ್‌ಗಳಲ್ಲಿ ಪಾದಚಾರಿ ಮಾರ್ಗಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು) ತಾಂತ್ರಿಕ ಕಾರಣಗಳಿಂದಾಗಿ ಸದರಿ ಕಾಮಗಾರಿಯನ್ನು ಹಿಂಪಡೆಯಲಾಗಿದೆ ಹಾಗೂ ಮುಂದಿನ ಟೆಂಡರ್ ವೇಳಾಪಟ್ಟಿಯನ್ನು ಪ್ರಕಟಿಸಲಾಗುವುದು/ತಿಳಿಸಲಾಗುವುದು. ಉಳಿದ ಎಲ್ಲಾ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ

ಜಿಲ್ಲಾ ಪಂಚಾಯತ್, ಕೋಲಾರ
ಇ–ಮೇಲ್: ceozpkol@gmail.com, ದೂರವಾಣಿ ಸಂಖ್ಯೆ: 08152–240 649
ಸಂಖ್ಯೆ: ಜಿಪಂಕೋ/ಸಿಬ್ಬಂದಿ(1)/ಸಿಆರ್.07/2025–26 ದಿನಾಂಕ :24.12.2025
ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ (ಕೆಟಿಪಿಪಿ) ಪ್ಲಾಟ್‌ಫಾರಂ ಮೂಲಕ)
ಜಿಲ್ಲಾ ಪಂಚಾಯತ್, ಕೋಲಾರ ಕಛೇರಿಗೆ ಕಾರ್ಯಾದೇಶ ನೀಡಿದ ಮಾಹೆಯಿಂದ ಒಂದು ವರ್ಷದ ಅವಧಿಗೆ ಕಾರ್ಯನಿರ್ವಹಿಸಲು ನೊಂದಾಯಿತ ಮಾನವ ಸಂಪನ್ಮೂಲ ಸಂಸ್ಥೆಯವರಿಂದ ಹೊರಗುತ್ತಿಗೆ ಆಧಾರದ ಮೇಲೆ 08 ಜನ ಡಿಇಒ, 02 ವಾಹನ ಚಾಲಕರು ಮತ್ತು 10 ಜನ ಗ್ರೂಪ್ ಡಿ ರವರ ಸೇವೆಯನ್ನು ಪಡೆಯಲು ಇ–ಟೆಂಡರ್‌ನ್ನು ಈ ಕಛೇರಿ ಪತ್ರ ಸಂಖ್ಯೆ: ಜಿಪಂಕೋ/ಸಿಬ್ಬಂದಿ(1)/ಸಿಆರ್.07/2025–26 ದಿನಾಂಕ: 24.12.2025 ರಂತೆ ಕರೆಯಲಾಗಿರುತ್ತದೆ. ಟೆಂಡರ್ ಅಂದಾಜು ಮೌಲ್ಯ ರೂ.59.54 ಲಕ್ಷಗಳು ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 30.01.2026 ಸಂಜೆ 5.00 ಗಂಟೆ** ಹೆಚ್ಚಿನ ವಿವರಗಳಿಗಾಗಿ 08152–240659/9916588015ಗೆ ಸಂಪರ್ಕಿಸಬಹುದು.
ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:430/ಕೆಎಸ್‌ಎಂಸಿಎ/2025–26

ಜಿಲ್ಲಾ ಪಂಚಾಯತ್, ಮೈಸೂರು
ಸಹಾಯಕ ನಿರ್ದೇಶಕರ ಕಛೇರಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಮೈಸೂರು
Phone: 0821:2564179, E-mail: adyssmysore@gmail.com & advesdmysuru@gmail.com
ಸಂ.: DYESS/2025-26/SE0255 ದಿನಾಂಕ: 02.01.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಕ್ರೀಡಾಂಗಣ, ಒಳಾಂಗಣ ಕ್ರೀಡಾಂಗಣ ಮತ್ತು ತಾಲ್ಲೂಕು ಕ್ರೀಡಾಂಗಣಗಳಲ್ಲಿ ಕರ್ತವ್ಯ ನಿರ್ವಹಿಸಲು ಕಾವಲುಗಾರರು, ವಾಚ್‌ಮೆನ್, ಸ್ವಚ್ಛತಾಗಾರರು ಮತ್ತು ಕಛೇರಿಗೆ ಹಾಗೂ ಕ್ರೀಡಾ ವಸತಿ ನಿಲಯದಲ್ಲಿ ಕರ್ತವ್ಯ ನಿರ್ವಹಿಸಲು ಅಗತ್ಯವಿರುವ ಸಿಬ್ಬಂದಿಗಳ ಸೇವೆಯು (ಒಟ್ಟು 16 ಮಂದಿ) ಅವಶ್ಯಕತೆ ಇದ್ದು, ಇವರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಇ–ಟೆಂಡರ್ ಮೂಲಕ ಆಹ್ವಾನಿಸಲಾಗಿರುತ್ತದೆ.
ಟೆಂಡರ್ ಫಾರಂಗಳನ್ನು ಅಗತ್ಯ ಲಗತ್ತುಗಳೊಂದಿಗೆ ದಿನಾಂಕ: **16.01.2026 ರ 5:00** ಗಂಟೆಯೊಳಗಾಗಿ ಇ–ಪೋರ್ಟಲ್‌ನಲ್ಲಿ ಸಲ್ಲಿಸುವುದು. ದಿನಾಂಕ: **19.01.2026 ರ ಬೆಳಿಗ್ಗೆ 11:00 ಗಂಟೆಗೆ** ಸಲ್ಲಿಸಲಾದ ಟೆಂಡರ್‌ಗಳನ್ನು ಹಾಜರಿದ್ದ ಟೆಂಡರುದಾರರ ಸಮ್ಮುಖದಲ್ಲಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಾಮುಂಡಿ ವಿಹಾರ ಕ್ರೀಡಾಂಗಣ ಮೈಸೂರು ಇಲ್ಲಿ ತೆರೆಯಲಾಗುವುದು. (ಸ್ಥಳ ಮತ್ತು ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) ಟೆಂಡರ್ ಫಾರಂಗಳನ್ನು ಮತ್ತು ಇತರೆ ವಿವರಗಳನ್ನು **https://kppp.karnataka.gov.in** ಇ–ಪೋರ್ಟಲ್‌ನಲ್ಲಿ ದಿನಾಂಕ: 02.01.2026 ರಿಂದ ಪಡೆಯಬಹುದಾಗಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಾಮುಂಡಿ ವಿಹಾರ ಕ್ರೀಡಾಂಗಣ ಮೈಸೂರು ಇಲ್ಲಿನ ದೂರವಾಣಿ ಸಂಖ್ಯೆ 0821–2654179 ರ ಮೂಲಕ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/– ಸಹಾಯಕ ನಿರ್ದೇಶಕರು
DIPR/MYS/1471/SA/2025-26 ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831) 2463850/ಫ್ಯಾಕ್ಸ್ ಸಂ:(0831) 2423008
No.EE /MI&GWDDD/BGM/TND/AE/2025-26/4617 Date:03-01-2026
ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲೂ–1,2,3&4)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಕೆಪಿಪಿಪಿ" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆವ್ಹಾನಿಸಲಾಗಿದೆ. ಬೆಳಗಾವಿ/ಗೋಕಾಕ/ಅಥಣಿ ಉಪ ವಿಭಾಗಗಳಡಿಯ ಒಟ್ಟು 24 ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ.382.00 ಲಕ್ಷಗಳು ಹಾಗೂ ಕನಿಷ್ಠ ರೂ.3.50 ಲಕ್ಷಗಳು. 1. ಕೆ.ಡಬ್ಲ್ಯೂ–4 ಕಾಮಗಾರಿಗಾಗಿ ಪೂರ್ವ ಟೆಂಡರ ಸಭೆಯು ದಿನಾಂಕ:12–01–2026 ಮುಂ 11.00 ಘಂಟೆಗೆ, 2. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:13–01–2026 ಸಾಯಂಕಾಲ 4.00 ಗಂಟೆಯವರೆಗೆ, 3. ಟೆಂಡರ ತೆರೆಯುವ ದಿನಾಂಕ:14–01–2026 ಸಂಜೆ 4.30 ಘಂಟೆಗೆ ಮುಂದುವರೆದು (ಸಾಧ್ಯವಾದಲ್ಲಿ), 4.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ & www.kppp.gov.in
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-1588/KSMCA/2025-26

CHIKKABALLAPURA DISTRICT CO-OPERATIVE MILK PRODUCER'S SOCIETIES UNION LIMITED., CHIKKABALLAPURA
Admns off: Yaluvahalli, Nandi Cross, Doddamarali Post, NH-44, Chikkaballapura – 562 103. GST:: 29AAFAC7468L2Z1
Email ID:chimulpurchase@gmail.com
IFT No. CHIMUL/ PUR/ E-PROCUREMENT/ 3441 /2025-26 Date: 05.01.2026
E-PROCUREMENT TENDER NOTIFICATION
The Chikkaballapura Milk Union Limited, Chikkaballapura invites tenders from eligible Tenderers for the supply of the following materials.

Sl. No.	Description of Material	Qty
01	Issue of Shoes & Socks / Chappals for Employees of CHIMUL	160 pairs

Access to E-tender Documents : 06.01.2026 to 21.01.2026 5.30 PM
Last date for submission : on or before 21.01.2026, 5.30 PM
Date of opening of Tech. Tender : 23.01.2026, 11.00 AM onwards
Tender documents may be downloaded from e-procurement website https://kppp.karnataka.gov.in/.
Chikkaballapura Milk Union Ltd., Chikkaballapura.
Sd/- Managing Director.

ನಗರಸಭಾ ಕಾರ್ಯಾಲಯ, ತಿಪಟೂರು
ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ, ದೂ: 08134–250785, E-mail:itstaff_ulb_tiptur@yahoo.co.in, www.tipturcity.mrc.gov.in
ನಂ.ನ.ಸ.ತಿ/ತಾಂ.ಶಾ/ಸಿ.ಆರ್/ /2025–26 ದಿನಾಂಕ: 31.12.2025
ಟೆಂಡರ್/ಕೊಟೇಷನ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅದ್ಯಾದೇಶ 1999 – 2000ರ ನಿಯಮಗಳಂತೆ ನಗರಸಭೆಯ ವಿವಿದ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆಯ ಗುತ್ತಿಗೆದಾರರು/ಸರಬರಾಜುದಾರರಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು KPPP Portal ವೆಬ್‌ಸೈಟ್‌ನಲ್ಲಿ (https://kppp.karnataka.gov.in) ಟೆಂಡರ್‌ಗಳನ್ನು ಸಲ್ಲಿಸಬಹುದು. (ಹೆಚ್ಚಿನ ಮಾಹಿತಿಗಳನ್ನು ಕಛೇರಿಯ ಸಮಯದಲ್ಲಿ ಪಡೆಯಬಹುದು). ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಅಥವಾ ತಿದ್ದುಪಡಿ ಇದಲ್ಲಿ KPPP Portal ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು.

ಕ್ರ. ಸಂ	ಇಂಡಂಟ್ ನಂಬರ್	ಅಂದಾಜು ಮೊತ್ತ ರೂ.	ಇ.ಎಂ.ಡಿ ರೂಗಳಲ್ಲಿ	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ	ಟೆಂಡರ್ ತೆರೆಯುವ ಕಡೆಯ ದಿನಾಂಕ
1	DMA/2025-26/OW/WORK_INDENT52639/CALL-3	13.00	32,500/-	06.01.2026	07.01.2026
2	DMA/2025-26/OW/WORK_INDENT52764/CALL-2	21.00	50,000/-	16.01.2026	17.01.2026
3	DMA/2025-26/OW/WORK_INDENT52753/CALL-2	50.00	1,00,000/-	06.01.2026	07.01.2026
4	DMA/2025-26/OW/WORK_INDENT52762/CALL-2	30.00	60,000/-	06.01.2026	07.01.2026
5	DMA/2025-26/IND5803	22.53	45,060/-	06.01.2026	07.01.2026
6	DMA/2025-26/SE6861/CALL-2	49.90	98,000/-	16.01.2026	17.01.2026
7	DMA/2025-26/IND5832	9.32	23,300/-	09.01.2026	12.01.2026

ಕರ್ನಾಟಕ ಪುರಸಭೆ ಕಾಯ್ದೆ 1964 ನಿಯಮ 347 ರಂತೆ ಕೆಲಸ ನಿರ್ವಹಿಸಲು ಕೊಟೇಷನ್ ಆಹ್ವಾನಿಸಲಾಗಿದೆ
1. ಕೆ.ಎ–44–ಎಂ–4846 ಬೆಮೆಲ್ ಫ್ರಂಟ್ ಎಂಡ್ ಲೋಡರ್ ಬ್ಯಾಕ್ ಹೋ ವಾಹನದ ಪಿನ್‌ಗಳು ಮತ್ತು ಬುಷ್‌ಗಳನ್ನು ಅಳವಡಿಸಿ ದುರಸ್ಥಿ (ವೆಲ್ಡಿಂಗ್) ಮಾಡಿಕೊಡಲು ಕೋಟೇಷನ್ ಸಲ್ಲಿಸುವುದು.
2. ಕೆ.ಎ–44–7846/7847 ಟ್ರ್ಯಾಕ್ಟರ್ ವಾಹನದ ಎರಡು ಬಟನ್ ಟೈರ್‌ಗಳು ಹಾಳಾಗಿದ್ದು, 12.4–28, 12 PR ಅಳತೆಯ ಎರಡು ಬಟನ್ ಟೈರ್‌ಗಳು ಹಾಗೂ ಟ್ಯೂಬ್‌ಗಳನ್ನು ಖರೀದಿಸಿ ಅಳವಡಿಸಿಕೊಡಲು ಕೋಟೇಷನ್ ಸಲ್ಲಿಸುವುದು.
3. KA-44-A-1159 ಟಾಟಾ 610(407) ವಾಹನದ ಹಿಂಭಾಗದ 7.50–16 PR ಅಳತೆಯ ನಾಲ್ಕು ಟೈರ್‌ಗಳು ಮತ್ತು ಟ್ಯೂಬ್‌ಗಳು ಹಾಗೂ ಫ್ಲಾಫ್‌ಗಳನ್ನು ಒದಗಿಸಿ ಅಳವಡಿಸಿಕೊಡಲು ಕೊಟೇಷನ್ ಸಲ್ಲಿಸುವುದು.
4. ತಿಪಟೂರು ನಗರಸಭೆಯ KA-44-6799 ಬೊಲೆರೋ ವಾಹನದ ಹಿಂಭಾಗದ ತೊಟ್ಟಿಯ ಪ್ಲಾಟ್ ಫಾಮ್ ಮತ್ತು ಹೈಡ್ರಾಲಿಕ್ ಜಾಕ್ ಸಿಸ್ಟಂ ದುರಸ್ಥಿ ಮಾಡಲು ಕೊಟೇಷನ್ ಸಲ್ಲಿಸುವುದು.
ಸೂಚನೆ: ಕೊಟೇಷನ್ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಣೆ ಆದ 7 ದಿನಗಳ ಒಳಗೆ ಸಂಜೆ 5.30 ರ ಒಳಗೆ ಹಾಗೂ ಕೊನೆಯ ದಿನ ಸರ್ಕಾರಿ ರಜೆ ಬಂದಲ್ಲಿ ಮುಂದಿನ ದಿನ ಕಚೇರಿಗೆ ಕೊಟೇಷನ್ ಸಲ್ಲಿಸುವುದು.
ಸಹಿ/–ವಿಶ್ವೇಶ್ವರ್ ಬದರಗಡೆ, ಪೌರಾಯುಕ್ತರು, ನಗರಸಭೆ, ತಿಪಟೂರು.
DIPR/TUM/396/KSMCA/2025-26

ಜಿಲ್ಲಾ ಪಂಚಾಯತ್, ತುಮಕೂರು
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,; ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ
ಕೆ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ :15/2025–26 ದಿನಾಂಕ:29–12–2025
ಕರ್ನಾಟಕ ರಾಜ್ಯಪಾಲರ ಪರವಾಗಿ **ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ** ಕಾಮಗಾರಿಗಳಿಗೆ ಕೆ.ಪಿ.ಪಿ ಪೋರ್ಟಲ್ ಟೆಂಡರ್ ಅನ್ನು ಕರೆಯಲಾಗಿದ್ದು, ಕೆ.ಪಿ.ಪಿ ಪೋರ್ಟಲ್ ಟೆಂಡರ್‌ಗಾಗಿ ಅರ್ಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿಸಲ್ಲಿಸಲು ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು **ದಿನಾಂಕ:29–12–2025 ರಿಂದ 12–01–2026** ರಂದು ಕೊನೆಯ ದಿನಾಂಕವಾಗಿರುತ್ತದೆ. ಕಾಮಗಾರಿಗಳ ಗರಿಷ್ಠ ಅಂದಾಜುಮೊತ್ತ **ರೂ.100.00 ಲಕ್ಷಗಳು, ಇಂಡೆಟ್ ಸಂಖ್ಯೆ: 21905, 21907, 21910, 21912, 21914, 21921, 21922, 21923, 21924, 21925, 21926, 21927, 21928, 21929, 21930, 21931, 21933, 21937, 21940, 22120, 21817, 21821, 21822, 21824, 21825, 21826, 21827, 21828, 22058, 22059, 22070, 22064, 22070, 22064, 22075, 22080, 22086, 22093, 22100, 22097, 22101, 22258, 22126, 22123, 22096, 21837, 21862** ಹೆಚ್ಚಿನ ವಿವರಗಳಿಗೆ **ದೂರವಾಣಿ ಸಂಖ್ಯೆ: 080–25501216, 080–25501227** ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಮಧುಗಿರಿ.
DIPR/TUM/RO-213/25-26/Oysters

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
#59, ರಿಚ್‌ಮಂಡ್ ರಸ್ತೆ (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ), ಬೆಂಗಳೂರು–25. ದೂ: 080–25584102 / 25594893
ಇಮೇಲ್ : eecontractksphc@gmail.com ವೆಬ್‌ಸೈಟ್: www.ksphc.org
ಸಂಖ್ಯೆ: ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಸಿಎನ್‌ಟಿ/ಟೆಂಡರ್/04/2025–26/334 ದಿನಾಂಕ: 05.01.2026
ಅಲ್ಪಾವಧಿ ಟೆಂಡರ್ ಅಧಿಸೂಚನೆ ಪ್ರಕಟಣೆ
ಕೆಎಸ್‌ಪಿಹೆಚ್ & ಐಡಿಸಿಎಲ್ ರವರು ಕೆಳಕಂಡ ಕಾಮಗಾರಿಗಾಗಿ ಕೆಟಿಪಿಪಿ 2000 ಕಾಯಿದೆ & ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ರಂತೆ ಕೆಪಿಪಿಪಿ **https://kppp.karnataka.gov.in** ಮೂಲಕ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
01 ಕಲ್ಯಾಣ ಕರ್ನಾಟಕ ಪ್ರದೇಶದ ಕೊಪ್ಪಳ, ಬಳ್ಳಾರಿ, ಬೀದರ್, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಸಹಯೋಗದಿಂದ ವಿವಿಧ ಸ್ಥಳಗಳಲ್ಲಿ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರಿಗಾಗಿ ವಸತಿ ಕಟ್ಟಡ ನಿರ್ಮಾಣ ಕಾಮಗಾರಿಗಳು – ಹಂತ–2 (ದ್ವಿ ಟೆಂಡರ್ ದಸ್ತಾವೇಜು ಪದ್ಧತಿ).
ಆಸಕ್ತ ಅರ್ಹ ಗುತ್ತಿಗೆದಾರರು ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇಎಂಡಿ, ಟೆಂಡರ್ ದಾಖಲೆಗಳ ಇತರೆ ಮಾಹಿತಿಗಳು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 07.01.2026ರ ನಂತರದಿಂದ ಲಭ್ಯವಿರುತ್ತದೆ.
"ಕೆಎಸ್‌ಪಿಹೆಚ್ & ಐಡಿಸಿಎಲ್ ರವರು ಯಾವುದೇ ಕಾರಣ ನೀಡದೇ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ."
ಸೂಚನೆ: ಉಳಿದಂತೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ / ಮಾರ್ಪಾಡುಗಳಿದ್ದಲ್ಲಿ ಕೇವಲ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.
DIPR/CP/YC/4861/2025-26 ಸಹಿ/– ಕಾರ್ಯಪಾಲಕ ಇಂಜಿನಿಯರ್ – ಗುತ್ತಿಗೆಗಳು

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಯಾವ ಆದರ್ಶ ಮನುಷ್ಯನ ಹಿತವನ್ನು ಕಾಯುವುದೋ ಅದೇ ಧರ್ಮ.

-ಡಾ. ಸರ್ವಪಲ್ಲಿ ರಾಧಾಕೃಷ್ಣನ್

ಸಂಪಾದಕೀಯ

ವೆನೆಜುವೆಲಾ ಮೇಲಿನ ದಾಳಿ ಅಮೆರಿಕದ ನಾಚಿಕೆಗೇಡು ಕೃತ್ಯ

ದಕ್ಷಿಣ ಅಮೆರಿಕದ ತೈಲ ಸಂಪದ್ಭರಿತ ರಾಷ್ಟ್ರ ವೆನೆಜುವೆಲಾ ಮೇಲೆ ದಾಳಿ ನಡೆಸಿರುವ ಅಮೆರಿಕ, ಅಲ್ಲಿನ ಅಧ್ಯಕ್ಷ ನಿಕೊಲಸ್ ಮಡೂರೊ ಮತ್ತು ಅವರ ಪತ್ನಿ ಸಿಲಿಯಾ ಫ್ಲೋರ್ಸ್ ಅವರನ್ನು ಬಂಧಿಸಿದೆ. ಅಮೆರಿಕದ ಈ ಕೃತ್ಯವು ಅಂತರರಾಷ್ಟ್ರೀಯ ಕಾನೂನುಗಳು ಹಾಗೂ ಅಮೆರಿಕದ ಸಂವಿಧಾನದ ಉಲ್ಲಂಘನೆ. ಇದು, ಸದಸ್ಯ ರಾಷ್ಟ್ರಗಳ ಸಾರ್ವಭೌಮತ್ವವನ್ನು ಗೌರವದಿಂದ ಕಾಣುವ ವಿಶ್ವಸಂಸ್ಥೆಯ ಸನ್ನದಿನ ಎರಡನೆಯ ವಿಧಿಯ ಉಲ್ಲಂಘನೆಯೂ ಹೌದು. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 200 ವರ್ಷಗಳಷ್ಟು ಹಳೆಯದಾದ ‘ಮನ್ರೊ ತತ್ತ್ವ’ವನ್ನು ಪುನಃ ಆಶ್ರಯಿಸಿರುವುದು ಅಸಂಬದ್ಧ ನಡೆ; ಈ ತತ್ತ್ವವು ಕಾನೂನು ಅಲ್ಲ, ಅದಕ್ಕೆ ಅಂತರರಾಷ್ಟ್ರೀಯ ಮಾನ್ಯತೆಯೂ ಇಲ್ಲ. ಇದು ಕಳೆದುಹೋದ ಕಾಲಘಟ್ಟದ ವಿಕೃತ ವಿದೇಶಾಂಗ ನೀತಿ. ಇದು ಯುರೋಪಿನ ವಸಾಹತುಶಾಹಿ ಶಕ್ತಿಗಳನ್ನು ಉತ್ತರ ಮತ್ತು ದಕ್ಷಿಣ ಅಮೆರಿಕ ಖಂಡಗಳಿಂದ ದೂರ ಇರಿಸುವ, ಅಲ್ಲಿಂದ ದೂರ ಇರುವುದಕ್ಕೆ ಪ್ರತಿಯಾಗಿ ಅಮೆರಿಕವು ಯುರೋಪಿನಲ್ಲಿ ಹಸ್ತಕ್ಷೇಪ ನಡೆಸುವುದಿಲ್ಲ ಎಂಬುದನ್ನು ಹೇಳುವ ಒಪ್ಪಂದ. ಮಾದಕವಸ್ತು ಕಳ್ಳಸಾಗಣೆ ಹಾಗೂ ಭಯೋತ್ಪಾದಕ ಕೃತ್ಯಗಳ ಆಧಾರರಹಿತ ಆರೋಪ ಹೊರಿಸಿ ಮಡೂರೊ ಅವರನ್ನು ಅಪಹರಿಸಿದ ಕೃತ್ಯವು, ಅಮೆರಿಕದ ಕಾನೂನಿನ ವ್ಯಾಪ್ತಿಯಲ್ಲಿ ನಡೆದ ಬಂಧನ ಎಂದು ತೋರಿಸುವ ಪ್ರಯತ್ನವಾಗಿದೆ. ಈಗ ಅಮೆರಿಕದಲ್ಲಿ ಮಡೂರೊ ಅವರನ್ನು ವಿಚಾರಣೆಗೆ ಒಳಪಡಿಸುವ ಪ್ರಹಸನ ನಡೆಯಬಹುದು. ಈ ವಿದ್ಯಮಾನದ ವಿಚಾರವಾಗಿ ಟ್ರಂಪ್ ಅವರು ಆಡಿರುವ ಮಾತುಗಳನ್ನು ಅವರ ಬೆಂಬಲಿಗರು ಹಾಗೂ ಯುರೋಪಿನ ಕೆಲವು ಮೈತ್ರಿ ದೇಶಗಳು ಮಾತ್ರ ನಂಬಬಹುದು.



ವೆನೆಜುವೆಲಾದ ಮೇಲಿನ ಅಮೆರಿಕದ ದಾಳಿ ಭಯೋತ್ಪಾದಕ ಚಟುವಟಿಕೆ. ಅಮೆರಿಕದ ಹಿತಾಸಕ್ತಿಗೆ ಪೂರಕವಾಗಿರುವ ದಾಳಿ, ಆ ದೇಶದ ಸಂವಿಧಾನದ ಉಲ್ಲಂಘನೆಯೂ ಹೌದು.

ಟ್ರಂಪ್ ಅವರು ವೆನೆಜುವೆಲಾದಲ್ಲಿ ನಡೆಸಿರುವುದು ಭಯೋತ್ಪಾದಕ ದಾಳಿ. ಅಮೆರಿಕದ ಹಿತಾಸಕ್ತಿಗಳು ಈ ದಾಳಿಗೆ ಕಾರಣ. ಅಮೆರಿಕವು ಈಚೆಗೆ ಬಿಡುಗಡೆ ಮಾಡಿರುವ ಭದ್ರತೆಗೆ ಸಂಬಂಧಿಸಿದ ಕಾರ್ಯತಂತ್ರಕ್ಕೆ ಅನುಗುಣವಾಗಿ ಈ ದಾಳಿ ನಡೆದಿದೆ. ದಕ್ಷಿಣ ಮತ್ತು ಉತ್ತರ ಅಮೆರಿಕ ಖಂಡದಲ್ಲಿ ಚೀನಾ ಹಾಗೂ ರಷ್ಯಾದ ಇರುವಿಕೆಗೆ ಅಡ್ಡಿ ಉಂಟು ಮಾಡುವ ಗುರಿಯನ್ನು ಇದು ಹೊಂದಿದೆ. ವೆನೆಜುವೆಲಾದಲ್ಲಿ ಅಧಿಕಾರದ ಚುಕ್ಕಾಣಿಯನ್ನು ಹಿಡಿಯುವ ಹೊಸ ಸರ್ಕಾರವು ಅಲ್ಲಿನ ತೈಲ, ಖನಿಜ ಮತ್ತು ಚಿನ್ನದ ನಿಕ್ಷೇಪವನ್ನು ಮುಕ್ತವಾಗಿಸಲಿ ಎಂಬ ಬಯಕೆಯೂ ಇಲ್ಲಿದೆ. ವಿಶ್ವದ ವ್ಯವಸ್ಥೆಯು ಈಗಾಗಲೇ ಅಸ್ಥಿರಗೊಂಡಿದೆ. ಹೀಗಿರುವಾಗ ಯಾವ ನಾಚಿಕೆಯೂ ಇಲ್ಲದೆ ಅಮೆರಿಕ ನಡೆಸಿರುವ ಈ ಕೃತ್ಯವು ಜಗತ್ತನ್ನು ಇನ್ನಷ್ಟು ಅಸ್ಥಿರಗೊಳಿಸುವ ಭೀತಿ ಉಂಟುಮಾಡಿದೆ. ಮಹತ್ವದ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸಲು ಕೊಲಂಬಿಯಾ, ಕ್ಯೂಬಾ, ಗ್ರೀನ್‌ಲ್ಯಾಂಡ್ ಮತ್ತು ಇರಾನ್ ಮೇಲೆಯೂ ಇದೇ ಬಗೆಯಲ್ಲಿ ದಾಳಿ ನಡೆಯಬಹುದು ಎಂಬ ಸೂಚನೆಯನ್ನು ಟ್ರಂಪ್ ನೀಡಿದ್ದಾರೆ. ಇಂತಹ ದಾಳಿಯ ಪರಿಣಾಮಗಳು ಹೇಗಿರುತ್ತವೆ ಎಂಬುದನ್ನು ಊಹಿಸುವುದು ಕಷ್ಟ. ಲಿಬಿಯಾದಲ್ಲಿ ಅಮೆರಿಕ ಎಡವಟ್ಟುಗಳನ್ನು ಸೃಷ್ಟಿಸಿದ್ದನ್ನು, ಇರಾಕ್‌ನಲ್ಲಿ ವರ್ಷಗಳ ಕಾಲ ಕಾಲೂರಿ ನಿಂತರೂ ಆರೋಪಿಸಿದ್ದ ಯಾವುದನ್ನೂ ಸಾಬೀತು ಮಾಡಲು ಆಗದಿದ್ದುದನ್ನು, ಅಫ್ಗಾನಿಸ್ತಾನದಲ್ಲಿ 20 ವರ್ಷ ಇದ್ದು ಸ್ವಯಂಕೃತ ಸಮಸ್ಯೆಗಳನ್ನು ನಿಭಾಯಿಸಲಾಗದೆ ವಾಪಸ್ಸಾಗಿದ್ದನ್ನು ಜಗತ್ತು ಕಂಡಿದೆ. ವಿದೇಶಾಂಗ ನೀತಿ ಹಾಗೂ ಮಿಲಿಟರಿ ಕಾರ್ಯಾಚರಣೆಗಳ ಈ ಅನುಭವಗಳು ಅಮೆರಿಕಕ್ಕೆ ಒಳ್ಳೆಯ ಪಾಠವನ್ನು ಕಲಿಸಿಲ್ಲ ಎಂಬುದು ಕೂಡ ಸ್ಪಷ್ಟ.

ಮಡೂರೊ ಅವರು ಇದ್ದ ಸ್ಥಳದ ಮೇಲೆ ಬಾಂಬ್ ದಾಳಿ ನಡೆಸಿ, ಅವರನ್ನು ಅಪಹರಿಸಿದ ಕೃತ್ಯವು, ಮಡೂರೊ ಅವರ ಸರ್ವಾಧಿಕಾರಿ ಧೋರಣೆಗಳನ್ನು ಒಪ್ಪದವರೂ ಅಮೆರಿಕದ ವಿರುದ್ಧ ನಿಲ್ಲಲು ಕಾರಣವಾಗಬಹುದು. ಆಕ್ರಮಣಕಾರಿ ವಿದೇಶಿ ಶಕ್ತಿಗಳನ್ನು ಜನರು ಒಪ್ಪುವುದಿಲ್ಲ ಎಂಬುದನ್ನು ಮರೆಯಬಾರದು. ಅಮೆರಿಕದ ಕೃತ್ಯದ ವಿರುದ್ಧವಾಗಿ ನಿಲ್ಲುವ ಜನರ ಪ್ರತಿಭಟನೆಗೆ ನೆರವಾಗಲು ಆ ದೇಶದಲ್ಲಿ ಹಲವು ಸಶಸ್ತ್ರ ಗುಂಪುಗಳಿವೆ ಎನ್ನಲಾಗಿದೆ. ವಿಶ್ವದ ಇತರ ರಾಷ್ಟ್ರಗಳು ಅಮೆರಿಕದ ಕೃತ್ಯಕ್ಕೆ ಯಾವ ಬಗೆಯಲ್ಲಿ ಪ್ರತಿಕ್ರಿಯೆ ನೀಡುತ್ತವೆ ಎಂಬುದು ಇಲ್ಲಿ ಮಹತ್ವ ಪಡೆದುಕೊಳ್ಳುತ್ತದೆ. ರಷ್ಯಾ, ಚೀನಾ, ಬ್ರೆಜಿಲ್, ದಕ್ಷಿಣ ಆಫ್ರಿಕಾ ಮತ್ತು ಜಿ20 ಗುಂಪಿನ ಹಲವು ದೇಶಗಳು ಅಮೆರಿಕದ ಕ್ರಮವನ್ನು ಸ್ಪಷ್ಟವಾಗಿ ಖಂಡಿಸಿವೆ. 2026ರ ಬ್ರಿಕ್ಸ್ ಶೃಂಗದ ಅಧ್ಯಕ್ಷತೆಯನ್ನು ಭಾರತ ವಹಿಸಿದೆ. ಜಿ20 ಗುಂಪಿನಲ್ಲಿ ತನಗೆ ನಾಯಕನ ಸ್ಥಾನ ಇದೆ ಎಂದೂ ಭಾರತ ಹೇಳಿಕೊಂಡಿದೆ. ಭಾರತವು ಅಮೆರಿಕದ ಹದ್ದುಮೀರಿದ ವರ್ತನೆಗಳ ವಿಚಾರದಲ್ಲಿ ಜಾಗರೂಕವಾಗಿ ಪ್ರತಿಕ್ರಿಯೆ ನೀಡುತ್ತ ಬಂದಿದೆ. ಆದರೆ, ಈಗಿನ ಸಂದರ್ಭದಲ್ಲಿ ಭಾರತವು ಸರಿಯಾದ ಬಗೆಯಲ್ಲಿ ಪ್ರತಿಕ್ರಿಯೆ ನೀಡುವುದನ್ನು ಆಯ್ಕೆ ಮಾಡಿಕೊಳ್ಳುತ್ತದೆ ಎಂಬ ನಿರೀಕ್ಷೆಗಳಿವೆ.

ಜಾಲತಾಣ

ಎಲ್ಲರಿಗೂ ಅಲ್ಲ...

‘ಅಮೆರಿಕ ಸರ್ಕಾರ’ ಅಮೆರಿಕಕ್ಕೇ ಹೊರತು ಜಗತ್ತಿಗಲ್ಲ. ಟ್ರಂಪ್ ಜಾಗತಿಕ ಸರ್ಕಾರದ ಅಧ್ಯಕ್ಷರಲ್ಲ.

ಬಿ. ಪೀರ್ ಬಾಷ, ಸಾಮಾಜಿಕ ಕಾರ್ಯಕರ್ತ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ಕೋಗಿಲು ಬಡಾವಣೆಯಲ್ಲಿ ಬಾಂಗ್ಲಾದೇಶದವರು ನೆಲೆಸಿದ್ದರೆಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಅಕ್ರಮ ವಲಸಿಗರು ದೇಶಕ್ಕೆ ಬಾರದಂತೆ ತಡೆಯುವುದು ಕೇಂದ್ರ ಗೃಹ ಸಚಿವಾಲಯದ ಕರ್ತವ್ಯ. ಅವರು ಬರುವವರೆಗೂ ಕೇಂದ್ರ ಗುಪ್ತಚರ ಇಲಾಖೆಯು ನಿದ್ದೆ ಮಾಡುತ್ತಿತ್ತೇ?

ಕೃಷ್ಣ ಬೈರೇಗೌಡ, ಕಂದಾಯ ಸಚಿವ

25 ವರ್ಷಗಳ ಹಿಂದೆ

ಶನಿವಾರ, 6-1-2001

• ಹೊಸ ಮೀಸಲಾತಿಗೆ ಆರು ವಾರ

ಬೆಂಗಳೂರು, ಜ. 5– ಈ ತಿಂಗಳು 28ರಂದು ನಡೆಯಬೇಕಿದ್ದ ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಇನ್ನು ಆರು ವಾರಗಳ ಒಳಗಾಗಿ, ಸಂವಿಧಾನದ ಪ್ರಕಾರ ವಾರ್ಡ್‌ಗಳ ಸರದಿ ಮೀಸಲಾತಿಯನ್ನು ನಿರ್ಧರಿಸುವ ಮಾನದಂಡಗಳನ್ನು ಗೊತ್ತುಪಡಿಸಿ, ಹೊಸ ಮೀಸಲಾತಿ ಅಧಿಸೂಚನೆ ಹೊರಡಿಸಬೇಕು ಎಂದು ರಾಜ್ಯ ಹೈಕೋರ್ಟ್ ಇಂದು ಮಹತ್ವದ ತೀರ್ಪು ನೀಡಿದೆ.

ರಾಜ್ಯದ ಎಲ್ಲ 147 ಸ್ಥಳೀಯ ಸಂಸ್ಥೆಗಳಿಗೆ ಈಗಾಗಲೇ ವಾರ್ಡ್‌ಗಳ ಮೀಸಲಾತಿ ನಿಗದಿಪಡಿಸಿ ಹೊರಡಿಸಿರುವ ಅಧಿಸೂಚನೆಯನ್ನು ವಾಪಸು ಪಡೆಯಲಾಗುವುದು ಎಂದು ಅಡ್ವೋಕೇಟ್ ಜನರಲ್ ಕೋರ್ಟ್‌ಗೆ ಭರವಸೆ ನೀಡಿದ ನಂತರ ನ್ಯಾಯಮೂರ್ತಿಗಳಿಂದ ಈ ಆದೇಶ ಬಂತು.

• ವಿಲೀನಕ್ಕೆ ಹೆಗಡೆ ಹಸಿರು ನಿಶಾನೆ

ಬೆಂಗಳೂರು, ಜ. 5– ಜನತಾದಳ ಉಭಯ ಬಣಗಳ ವಿಲೀನಕ್ಕೆ ಪ್ರಮುಖ ಅಡ್ಡಿಯಾಗಿದ್ದ ಕೇಂದ್ರದ ಮಾಜಿ ಸಚಿವ ರಾಮಕೃಷ್ಣ ಹೆಗಡೆ ಅವರೇ ಇಂದು ನಡೆದ ದಳ (ಯು) ಗುಂಪಿನ ಮುಖಂಡರ ಸಭೆಯಲ್ಲಿ ವಿಲೀನಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ವಿಲೀನ ಪ್ರಕ್ರಿಯೆಯನ್ನು ಸುಗಮಗೊಳಿಸಿದ್ದಾರೆ.

ಇದರಿಂದ ಜನತಾದಳದ ಎರಡು ಬಣಗಳ ನಡುವೆ ಕೆಲವು ತಿಂಗಳಿಂದ ನಡೆಯುತ್ತಿದ್ದ ವಿಲೀನ ಪ್ರಕ್ರಿಯೆಯ ಮಾತುಕತೆಗೆ ಮಹತ್ವದ ಚಾಲನೆ ದೊರೆತಂತಾಗಿದೆ. ಇದೇ ನಿರ್ಧಾರವನ್ನು ಹೆಗಡೆಯವರು ನಾಳೆ ನಗರದಲ್ಲಿ ನಡೆಯಲಿರುವ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಎತ್ತಿ ಹಿಡಿದರೆ ಮಾತ್ರ ವಿಲೀನ ಪ್ರಕ್ರಿಯೆಗೆ ಅಧಿಕೃತ ಚಾಲನೆ ದೊರಕುತ್ತದೆ.

75 ವರ್ಷಗಳ ಹಿಂದೆ

ಶನಿವಾರ, 6-1-1951

• ಕಮ್ಯುನಿಸ್ಟ್ ಪಕ್ಷದ ನಿಷೇಧ ಅಕ್ರಮ: ಪಶ್ಚಿಮ ಬಂಗಾಳ ಹೈಕೋರ್ಟ್ ತೀರ್ಪು

ಕಲಕತ್ತೆ, ಜ. 5– ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಪಕ್ಷದ ಮೇಲೆ 1948ನೇ ಮಾರ್ಚಿ ತಿಂಗಳಿನಲ್ಲಿ ಹಾಕಿದ್ದ ಪ್ರತಿಬಂಧಕಾಜ್ಞೆಯು ಇಂದು ಕಲ್ಕತ್ತಾ ಶ್ರೇಷ್ಠ ನ್ಯಾಯಾಸ್ಥಾನದ ತೀರ್ಪಿನ ರೀತ್ಯಾ ಅಕ್ರಮವೆಂದು ತೀರ್ಮಾನವಾಯಿತು.

ಜಸ್ಟೀಸ್ ಸೇನ್ ಮತ್ತು ಜಸ್ಟೀಸ್ ಚಂದರ್‌ರವರು ಕಮ್ಯುನಿಸ್ಟ್ ಸ್ಥಾನಬದ್ಧರ ಅರ್ಜಿಗೆ ತೀರ್ಪನ್ನು ಕೊಟ್ಟು, ಪಕ್ಷವನ್ನು ಅಕ್ರಮವೆಂದು ಸಾರಿದ ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಶಾಸನ ಭಾರತ ರಾಜ್ಯಾಂಗದ ರೀತ್ಯಾ ನ್ಯಾಯಬಾಹಿರವೆಂದು ಘೋಷಿಸಿದರು.

ಎಸ್‌ಐಆರ್ ಲೋಪ: ಸಾಕ್ಷ್ಯ ಲಭ್ಯ

ವಿಶ್ಲೇಷಣೆ

ಯೋಗೇಂದ್ರ ಯಾದವ್
ರಾಹುಲ್ ಶಾಸ್ತ್ರಿ

ಯಾವುದೋ ಸಂಗತಿಯು ಯೋಜಿತವಲ್ಲದೆ ತನ್ನಿಂತಾನಾಗಿ ನಡೆದರೆ ಮತ್ತು ಎರಡು ಸಂಗತಿಗಳನ್ನು ನಮಗೆ ಹೋಲಿಸಲು ಅವಕಾಶ ಒದಗಿಸಿದರೆ ಅದನ್ನು ‘ಸಹಜ ಪ್ರಯೋಗ’ ಎಂದು ವಿಜ್ಞಾನಿಗಳು ಕರೆಯುತ್ತಾರೆ. ದಿಢೀರ್ ಲಾಕ್‌ಡೌನ್ ಅನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು– ಕಾರ್ಖಾನೆಗಳು ಮತ್ತು ವಾಹನಗಳು ನಿಂತುಬಿಟ್ಟಾಗ ನಮ್ಮ ಆಕಾಶ ಎಷ್ಟೊಂದು ನೀಲಿಯಾಗುತ್ತದೆ ಎಂಬುದನ್ನು ನೋಡುವ ಅವಕಾಶ ನಮಗೆ ಸಿಕ್ಕಿತು. ಈ ರೀತಿಯದ್ದೊಂದು ತುಲನಾತ್ಮಕ ಅಧ್ಯಯನಕ್ಕಾಗಿ ನಾವು ಕೈಗಾರಿಕೆಗಳನ್ನು ನಿಲ್ಲಿಸಲಿಲ್ಲ. ಅದು ಅದಾಗಿಯೇ ಆಗಿಹೋಯಿತು.

ಇದೇ ರೀತಿಯ ಸಂಗತಿಯೊಂದು ಕೆಲ ದಿನಗಳ ಹಿಂದೆ ನಡೆಯಿತು. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಎರಡನೇ ಹಂತದಲ್ಲಿ ಎರಡು ಸಹಜ ಪ್ರಯೋಗಗಳು ಕಾಣಿಸಿಕೊಂಡವು. ಅವುಗಳಲ್ಲಿ ಒಂದನ್ನು ನಾವು ನಿರೀಕ್ಷಿಸಿದ್ದೆವು– ಅದು ಅಸ್ಸಾಂನಲ್ಲಿ ನಡೆದ ಅಸಹಜ ಪರಿಷ್ಕರಣೆ. ಅಸ್ಸಾಂನ ಮುಖ್ಯ ಚುನಾವಣಾಧಿಕಾರಿಯು ಮತದಾರರ ಕರಡು ಪಟ್ಟಿಯನ್ನು ಪ್ರಕಟಿಸುತ್ತಿದ್ದಂತೆಯೇ ‘ನೋಡಿ, ನಾವು ಅಂದುಕೊಂಡ ಹಾಗೆಯೇ ಆಗಿದೆ’ ಎಂಬುದು ನಮ್ಮ ನಡುವೆ ವಿನಿಮಯವಾದ ವಾಟ್ಸ್‌ಆ್ಯಪ್ ಸಂದೇಶವಾಗಿತ್ತು. ಎರಡನೆಯದು, ಯಾದೃಚ್ಛಿಕವಾಗಿ ಕಣ್ಣಿಗೆ ಬಿದ್ದದ್ದು– ಉತ್ತರ ಪ್ರದೇಶದಲ್ಲಿ ಪಂಚಾಯಿತಿ ಚುನಾವಣೆಗೆ ಸಂಬಂಧಿಸಿದ ಸುದ್ದಿ. ಎಸ್‌ಐಆರ್‌ನ ವಿಧಾನದಲ್ಲಿಯೇ ಗಂಭೀರವಾದ ಲೋಪಗಳು ಇವೆ ಎಂಬುದರ ಕುರಿತು ಗಟ್ಟಿಯಾದ ವೈಜ್ಞಾನಿಕ ಪುರಾವೆಗಳನ್ನು ಈ ಎರಡು ಪ್ರಯೋಗಗಳು ನಮಗೆ ನೀಡುತ್ತವೆ ಅಥವಾ ವಾಸ್ತವದಲ್ಲಿ ಈ ಪುರಾವೆಯ ಸಮೀಪಕ್ಕೆ ಹೋಗಲು ಅವಕಾಶ ಒದಗಿಸುತ್ತವೆ. ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆಯ ಯೋಚನೆಯಲ್ಲಿ ಸಮಸ್ಯೆ ಇಲ್ಲ ಎಂದು ನಾವು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇವೆ. ಸಮಸ್ಯೆ ಏನೆಂದರೆ, ಎಸ್‌ಐಆರ್‌ನಲ್ಲಿ ಇರುವ ಹಿಂದೆಂದೂ ಕಂಡಿಲ್ಲದ ಮತ್ತು ಅನಗತ್ಯವಾದ ಎರಡು ಅಂಶಗಳು– ಕಡ್ಡಾಯವಾದ ಗಣತಿ ನಮೂನೆ ಭರ್ತಿ ಮತ್ತು ಪೌರತ್ವಕ್ಕೆ ಪುರಾವೆ ಸಲ್ಲಿಸಬೇಕಾದ ಅಗತ್ಯ. ಈ ಎರಡು ಅಂಶಗಳನ್ನು ಕೈಬಿಟ್ಟರೆ ಮತದಾರರ ಹೆಸರುಗಳ ಸಾಮೂಹಿಕ ಕೈಬಿಡುವಿಕೆ ಇಲ್ಲದೆಯೇ ಮತದಾರರ ಪಟ್ಟಿ ಪರಿಷ್ಕರಣೆ ನಡೆಯುತ್ತದೆ ಎಂಬುದನ್ನು ಈ ಎರಡು ಪ್ರಯೋಗಗಳು ತೋರಿಸುತ್ತವೆ.

ಎಸ್‌ಐಆರ್ ಆರಂಭವಾದ ಬಿಹಾರದಿಂದಲೇ ನಮ್ಮ ಕಥೆ ಆರಂಭಿಸೋಣ. 65 ಲಕ್ಷ ಮತದಾರರ ಹೆಸರು ಕೈಬಿಟ್ಟು ಮತದಾರರ ಕರಡು ಪಟ್ಟಿ ಪ್ರಕಟವಾದಾಗಲೇ ಪ್ರತಿಯೊಬ್ಬರೂ ದಂಗಾಗಿದ್ದರು. ಕ್ರಮೇಣ, ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದಾಗಿ ಹಾನಿಯ ಪ್ರಮಾಣ ಕಡಿಮೆಯಾಯಿತು ಮತ್ತು ಕೈಬಿಟ್ಟ ಮತದಾರರ ಸಂಖ್ಯೆ 44 ಲಕ್ಷಕ್ಕೆ ಇಳಿಯಿತು. ಪ್ರತಿಯೊಬ್ಬರಲ್ಲಿಯೂ ಅವರದ್ದೇ ಆದ ಸಿದ್ಧಾಂತಗಳು ಇವೆ. ಬಿಹಾರದಲ್ಲಿ, ಒಂದಕ್ಕಿಂತ ಹೆಚ್ಚು ಮತಗಳಿರುವ ವಲಸಿಗರ ಸಂಖ್ಯೆ ದೊಡ್ಡದೇ ಇದೆ. ಬಹುಶಃ, ಬಿಹಾರದಲ್ಲಿನ ಆಡಳಿತಾತ್ಮಕ ಅದಕ್ಷತೆಯಿಂದಾದ ಅಸಡ್ಡೆಯಿಂದ ಹಲವು ಹೆಸರುಗಳು ಹೆಚ್ಚುವರಿಯಾಗಿ ಮೂಲ ಪಟ್ಟಿಗೆ ಸೇರಿರಬಹುದು. ಅಥವಾ ಹೊಸ ಎಸ್‌ಐಆರ್ ವಿಧಾನದ ಆರಂಭಿಕ ಸಮಸ್ಯೆಗಳು ಬಿಹಾರದಲ್ಲಿ ಕಾಣಿಸಿಕೊಂಡಿರಬಹುದು. ಎಚ್ಚರಿಕೆಯ ವಿಶ್ಲೇಷಣೆಯು ಈ ಪ್ರತಿಯೊಂದು ಸಿದ್ಧಾಂತವನ್ನೂ ಒಡೆದು ಹಾಕಬಹುದಿತ್ತು. ಆದರೆ, ಎಚ್ಚರಿಕೆಯಿಂದ ಪರಿಶೀಲಿಸುವ ಸಂಯಮವನ್ನು ಯಾರೂ ತೋರಲಿಲ್ಲ, ವಿಶೇಷವಾಗಿ ಬಿಹಾರ ಚುನಾವಣಾ ಫಲಿತಾಂಶದ ಬಳಿಕ ಅದು ಯಾರಿಗೂ ಬೇಡವಾಯಿತು.

ಮತದಾರರ ಪಟ್ಟಿಯಿಂದ ಹೆಸರು ಕೈಬಿಡುವಿಕೆಯು ಬಿಹಾರಕ್ಕೆ ಸೀಮಿತವಲ್ಲ ಎಂಬುದು ಎರಡನೇ ಹಂತದಲ್ಲಿ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆದ ಎಸ್‌ಐಆರ್‌ನಲ್ಲಿ ದೃಢಪಟ್ಟಿತು. ಈಗ ಈ ಪ್ರಕ್ರಿಯೆ ದೇಶದ ಅರ್ಧ ಭಾಗದಷ್ಟಕ್ಕೆ ವ್ಯಾಪಿಸಿದೆ. 6.56 ಕೋಟಿ ಮತದಾರರು ತಮ್ಮ ಹಕ್ಕು ಕಳೆದುಕೊಳ್ಳುವ ಅಪಾಯ ಎದುರಿಸುತ್ತಿದ್ದಾರೆ. ಇದು ನಮ್ಮ ತಾತ್ಕಾಲಿಕ ಅಂದಾಜಾದ 6.28 ಕೋಟಿಗಿಂತ ಸ್ವಲ್ಪ ಹೆಚ್ಚೇ ಇದೆ. ಇನ್ನೂ 5.3 ಕೋಟಿ ಮತದಾರರ ಮೇಲೆಯೂ ಹಕ್ಕು ರದ್ದತಿಯ ಕತ್ತಿ ನೇತಾಡುತ್ತಿದ್ದು, (ಭಾರಿ ‘ಹೊಂದಾಣಿಕೆ’ ಬಳಿಕ ಉತ್ತರ ಪ್ರದೇಶದಲ್ಲಿ ಸುಮಾರು 3 ಕೋಟಿ ಮತದಾರರು) ಅವರೆಲ್ಲರೂ ನೋಟಿಸ್ ಪಡೆಯಲಿದ್ದಾರೆ.

> ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಎರಡನೇ ಹಂತದ ಪ್ರಕ್ರಿಯೆ ಗಾಬರಿ ಹುಟ್ಟಿಸುವ ಸಂಗತಿಗಳನ್ನು ತೆರೆದಿಡುತ್ತಿದೆ. ವಲಸೆಯ ಸಂಕಥನದ ಪೊಳ್ಳುತನವನ್ನು ಬಯಲುಮಾಡಿದೆ. ದೇಶದ ಮತದಾರರ ಹಕ್ಕು ಕಸಿಯುವ ರಕ್ಕಸನ ರೂಪದಲ್ಲಿ ‘ಎಸ್‌ಐಆರ್’ ಪ್ರಕ್ರಿಯೆ ಕಾಣಿಸುತ್ತಿದೆ.

ಎರಡನೇ ಹಂತದ ಪ್ರಕ್ರಿಯೆಯಲ್ಲಿ ತಲ್ಲಣಗೊಳಿಸುವಂತಹ ಹಲವು ಅಂಶಗಳು ಕಾಣಿಸಿವೆ. ಎಸ್‌ಐಆರ್‌ನಿಂದಾಗಿ ರದ್ದಾದ ಮತದಾರರ ಹೆಸರುಗಳಿಗೆ ವಲಸೆಯೊಂದಿಗೆ ಯಾವ ಸಂಬಂಧವೂ ಇಲ್ಲ ಎಂಬುದು ದೃಢಪಟ್ಟಿದೆ. ಒಳ ವಲಸೆಯ ರಾಜ್ಯಗಳಾದ ಗುಜರಾತ್ ಮತ್ತು ಗೋವಾದಂತಹ ರಾಜ್ಯಗಳಲ್ಲಿ ಮತ್ತು ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶದಂತಹ ಹೊರ ವಲಸೆಯ ರಾಜ್ಯಗಳಲ್ಲಿಯೂ ಮತದಾರರ ಪಟ್ಟಿ ದೊಡ್ಡ ಪ್ರಮಾಣದಲ್ಲಿ ಕುಗ್ಗಿದೆ. ಗುಜರಾತ್ ಮತ್ತು ಉತ್ತರ ಪ್ರದೇಶದಂತಹ ರಾಜ್ಯಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹೆಸರು ಕೈಬಿಡುವಿಕೆಯಿಂದಾಗಿ ಮತದಾರರ ಪಟ್ಟಿಯು ಕುಗ್ಗಿದೆ (ವಯಸ್ಕರ ಸಂಖ್ಯೆಗೆ ಹೋಲಿಸಿದರೆ ಮತದಾರರ ಸಂಖ್ಯೆ ಕಡಿಮೆ). ಹಾಗೆಯೇ ತಮಿಳುನಾಡಿನಂತಹ ಕೆಲವು ರಾಜ್ಯಗಳಲ್ಲಿ ಮತದಾರರ ಪಟ್ಟಿಯು ಹಿಗ್ಗಿದೆ. ಎಸ್‌ಐಆರ್‌ನಿಂದಾಗಿ ಹೆಸರು ಕೈಬಿಡುವಿಕೆಯ ದೊಡ್ಡ ಹೊಡೆತ ಮಹಿಳೆಯರ ಮೇಲೆ ಬಿದ್ದಿದೆ. ಎಸ್‌ಐಆರ್ ನಡೆದ ಪ್ರತಿ ರಾಜ್ಯದಲ್ಲಿಯೂ ಲಿಂಗ ಅನುಪಾತ ಕುಸಿದಿದೆ.

ಇಲ್ಲೊಂದು ಪ್ರಶ್ನೆ ಉಂಟಾಗುತ್ತದೆ: ಭಿನ್ನ ವಿಧಾನವೊಂದನ್ನು ಅನುಸರಿಸಿದ್ದರೆ ಮತದಾರರ ಹೆಸರು ರದ್ದಾಗುತ್ತಿರಲಿಲ್ಲ ಎಂದು ಹೇಳಲು ಹೇಗೆ ಸಾಧ್ಯ? ಈ ಪ್ರಶ್ನೆಗೆ ಈತನಕ ನಮ್ಮಲ್ಲಿ ಉತ್ತರ ಇರಲಿಲ್ಲ. ಆದರೆ, ಅಸ್ಸಾಂನ ಸಹಜ ಪ್ರಯೋಗದಿಂದಾಗಿ ನಮಗೆ ಈಗ ಉತ್ತರ ಸಿಕ್ಕಿದೆ.

ದೇಶದಾದ್ಯಂತ ಬಳಸಿದ ಎಸ್‌ಐಆರ್ ವಿಧಾನವನ್ನು ಕೈಬಿಟ್ಟ ಏಕೈಕ ರಾಜ್ಯ ಇದು ಮಾತ್ರ. ಇತರೆಡೆಯಲ್ಲಿ ನಡೆಸಿದ ಸಂದರ್ಭದಲ್ಲಿಯೇ ಇಲ್ಲಿಯೂ ಮತದಾರರ ಪಟ್ಟಿಯನ್ನು ಪರಿಷ್ಕರಿಸಲಾಗಿದೆ. ಸರಳ ಮತ್ತು ತ್ರಾಸದಾಯಕವಾದ ಮನೆ ಮನೆ ಭೇಟಿ ಮೂಲಕ ಪರಿಶೀಲನೆ ನಡೆಸಲಾಗಿದೆ. ಇಲ್ಲಿ ಗಣತಿ ನಮೂನೆಗಳನ್ನು ಬಳಸಲಾಗಿಲ್ಲ ಮತ್ತು ಪೌರತ್ವವನ್ನು ಸಾಬೀತುಪಡಿಸಿ ಎಂದು ಕೇಳಲಾಗಿಲ್ಲ (ಪೌರತ್ವಕ್ಕೆ ಸಂಬಂಧಿಸಿ ಗಂಭೀರವಾದ ಸಮಸ್ಯೆ ಇರುವ ರಾಜ್ಯದಲ್ಲಿ ಈ ವಿಧಾನ ಅನುಸರಿಸಿರುವುದು ಅಚ್ಚರಿದಾಯಕವೇ). ಈ ರೀತಿಯಲ್ಲಿ ಪ್ರಕ್ರಿಯೆ ನಡೆಸಲು ಚುನಾವಣಾ ಆಯೋಗವು ಖಚಿತವಾದ ನಿರ್ದೇಶನಗಳನ್ನು ನೀಡಿತ್ತು.

ಫಲಿತಾಂಶ ಇಲ್ಲಿದೆ: 2.52 ಕೋಟಿ ಮತದಾರರ ಹೆಸರಿದ್ದ ಪಟ್ಟಿಯ ಪರಿಷ್ಕರಣೆಯನ್ನು ನಡೆಸಲಾಯಿತು. 10.56 ಲಕ್ಷ ಮತದಾರರ ಹೆಸರು ಕೈಬಿಡಲಾಯಿತು ಮತ್ತು 10.55 ಲಕ್ಷ ಮತದಾರರ ಹೆಸರು ಸೇರಿಸಲಾಗಿದೆ. ಹೀಗಾಗಿ, ಇತ್ತೀಚೆಗೆ ಪ್ರಕಟಿಸಲಾದ ಮತದಾರರ ಕರಡು ಪಟ್ಟಿಯಲ್ಲಿರುವ ಮತದಾರರ ಸಂಖ್ಯೆ ನಿಖರವಾಗಿ 2.52 ಕೋಟಿ. ಶೇಕಡ ಸೊನ್ನೆಯಷ್ಟು ಹೆಸರು ಕೈಬಿಡುವಿಕೆ ದಾಖಲಾದ ಏಕೈಕ ರಾಜ್ಯ ಅಸ್ಸಾಂ ಮಾತ್ರ. ಇತರ ದೊಡ್ಡ ರಾಜ್ಯಗಳೊಂದಿಗೆ ಇದನ್ನು ಹೋಲಿಸಿ ನೋಡಿ– ಶೇ 8ರಿಂದ ಶೇ 19ರಷ್ಟು ಹೆಸರುಗಳನ್ನು ಕೈಬಿಡಲಾಗಿದೆ. ಹೊಣೆಗಾರಿಕೆಯನ್ನು ಮತದಾರರ ಮೇಲೆ ಹೇರದಿರುವುದು ಮತ್ತು ಪೌರತ್ವ ಸಾಬೀತುಪಡಿಸುವಂತೆ ಒತ್ತಾಯ ಇಲ್ಲದಿರುವುದರಿಂದ ಮತದಾರರು ಹಕ್ಕು ಕಳೆದುಕೊಂಡಿಲ್ಲ ಎಂಬುದು ಸ್ಪಷ್ಟ.

ಇದು ಈಗಲೂ ಸಂದೇಹಕ್ಕೆ ಎಡೆ ಮಾಡಿ ಕೊಡುತ್ತದೆ: ನಾವು ಅಸಂಬದ್ಧ ಹೋಲಿಕೆಗಳನ್ನು ಮಾಡುತ್ತಿದ್ದೇವೆಯೇ? ಇದೇ ರಾಜ್ಯದಲ್ಲಿ ಒಂದೇ ಸಂದರ್ಭದಲ್ಲಿ ಎರಡು ವಿಧಾನ ಬಳಸಿದರೆ ಯಾವ ಫಲಿತಾಂಶ ಬರಬಹುದು?

ಈ ವಿಲಕ್ಷಣ ಸಹಜ ಪ್ರಯೋಗ ನಡೆದಿರುವುದು ಉತ್ತರ ಪ್ರದೇಶದಲ್ಲಿ. ಚುನಾವಣಾ ಆಯೋಗವು ಉತ್ತರ ಪ್ರದೇಶದಲ್ಲಿ ಎಸ್‌ಐಆರ್ ನಡೆಸುತ್ತಿದ್ದ ಸಂದರ್ಭದಲ್ಲಿಯೇ ರಾಜ್ಯ ಚುನಾವಣಾ ಆಯೋಗವು ಪಂಚಾಯಿತಿ ಚುನಾವಣೆಗಳಿಗಾಗಿ ಮತದಾರರ ಪಟ್ಟಿಯ ಪರಿಷ್ಕರಣೆ ನಡೆಸಿದೆ. ಎರಡು ಸಾಂವಿಧಾನಿಕ ಸಂಸ್ಥೆಗಳು ಉತ್ತರ ಪ್ರದೇಶದ ಅರ್ಹ ಮತದಾರರ ಪಟ್ಟಿಯನ್ನು ಏಕಕಾಲದಲ್ಲಿ ಪರಿಶೀಲನೆಗೆ ಒಳಪಡಿಸಿವೆ. ಒಂದೇ ವ್ಯತ್ಯಾಸ ಏನೆಂದರೆ, ರಾಜ್ಯ ಚುನಾವಣಾ ಆಯೋಗದ ಪರಿಷ್ಕರಣೆಗೆ ಗಣತಿ ನಮೂನೆ ಅಥವಾ ಪೌರತ್ವ ದಾಖಲೆ ಸಲ್ಲಿಕೆ ಅಗತ್ಯ ಇರಲಿಲ್ಲ. ರಾಜ್ಯ ಆಯೋಗವು ಡಿ. 5ರಂದು ಮತದಾರರ ಕರಡು ಪಟ್ಟಿಯನ್ನು ಪ್ರಕಟಿಸಿದೆ.

ಈಗ ಈ ವ್ಯತ್ಯಾಸವನ್ನು ಗಮನಿಸಿ. 2025ರ ಡಿಸೆಂಬರ್ ಹೊತ್ತಿಗೆ ಉತ್ತರ ಪ್ರದೇಶದ ವಯಸ್ಕರ ಜನಸಂಖ್ಯೆ 16.1 ಕೋಟಿ. ಎಸ್‌ಐಆರ್‌ಗೆ ಮುಂಚೆ ಮತದಾರರ ಪಟ್ಟಿಯಲ್ಲಿದ್ದ ಹೆಸರುಗಳ ಸಂಖ್ಯೆ 15.4 ಕೋಟಿ. ಎಸ್‌ಐಆರ್ ನಂತರದಲ್ಲಿ ಅದು 12.6 ಕೋಟಿಗೆ ಕುಸಿದಿದೆ. ವಿಚಿತ್ರವೆಂದರೆ, ರಾಜ್ಯ ಆಯೋಗವು ನಡೆಸಿದ ಪರಿಷ್ಕರಣೆ ನಂತರದಲ್ಲಿ ಗ್ರಾಮೀಣ ಪ್ರದೇಶದ ಮತದಾರರ ಪಟ್ಟಿಯಲ್ಲಿರುವ ಹೆಸರುಗಳ ಸಂಖ್ಯೆ 12.7 ಕೋಟಿ. ಚುನಾವಣಾ ಆಯೋಗ ಪರಿಷ್ಕರಿಸಿದ ಮತದಾರರ ಪೂರ್ಣ ಪಟ್ಟಿಯಲ್ಲಿರುವ ಹೆಸರುಗಳಿಗಿಂತ ಹೆಚ್ಚು. ಗ್ರಾಮೀಣ ಮತದಾರರ ಪಟ್ಟಿಗೆ 3.4 ಕೋಟಿ ನಗರ ಮತದಾರರನ್ನು ಸೇರಿಸಿದರೆ (ರಾಜ್ಯ ಆಯೋಗವು 2003ರಲ್ಲಿ ಪ್ರಕಟಿಸಿದ ಸಂಖ್ಯೆ) ಉತ್ತರ ಪ್ರದೇಶದ ಮತದಾರರ ಸಂಖ್ಯೆ 16.1 ಕೋಟಿಗೆ ಏರಿಕೆಯಾಗುತ್ತದೆ. ನಾವು ಇಲ್ಲಿ ಎರಡು ಭಿನ್ನ ವಿಧಾನಗಳನ್ನು ಅನುಸರಿಸಿದ್ದೇವೆ, ಮತದಾರರ ಸಂಖ್ಯೆಯಲ್ಲಿ ಬಹಳ ವ್ಯತ್ಯಾಸ ಕಂಡು ಬಂದಿದೆ. ಮತದಾರರ ಸಂಖ್ಯೆ ಎಸ್‌ಐಆರ್ ಪ್ರಕಾರ 12.6 ಕೋಟಿ ಆಗಿದ್ದರೆ, ಎಸ್‌ಐಆರ್‌ಯೇತರ ಪರಿಷ್ಕರಣೆ ಪ್ರಕಾರ 16.1 ಕೋಟಿ. ಇದು ಉತ್ತರ ಪ್ರದೇಶದ ಅಂದಾಜು ಜನಸಂಖ್ಯೆಯ ಸಂಖ್ಯೆಗೆ ಸಮಾನವಾಗಿದೆ.

ಇಲ್ಲಿ ನಾವು ಕಂಡುಕೊಳ್ಳಬಹುದಾದ ಒಂದೇ ಅಂಶ ಏನೆಂದರೆ, ಸಮಸ್ಯೆಗೆ ಎಸ್‌ಐಆರ್ ಕಾರಣ. ಈ ಸಹಜ ಪ್ರಯೋಗದ ಕುರಿತು ಸಮಾಜ ವಿಜ್ಞಾನಿಗಳು ಎಚ್ಚರಿಕೆಯಿಂದ ಪರಿಶೀಲನೆ ನಡೆಸಬೇಕು ಎಂದು ನಾವು ಕಾಯುತ್ತಿರಬೇಕಾದರೆ, ಎಸ್‌ಐಆರ್‌ನ ಕುರಿತು ನಮ್ಮ ಮೂಲಭೂತ ತೀರ್ಮಾನವು ನಮ್ಮನ್ನು ದಿಟ್ಟಿಸಿ ನೋಡುತ್ತಿದೆ: ಎಸ್‌ಐಆರ್ ಭಾರತದ ಮತದಾರರ ಮೇಲೆ ಛೂ ಬಿಡಲಾಗಿರುವ ಹಕ್ಕು ಕಬಳಿಸುವ ರಕ್ಕಸ.

ವಾಚಕರ ವಾಣಿ

ಬಳ್ಳಾರಿ ಬಿಸಿಲು, ರಾಜಕೀಯ ವೈಷಮ್ಯವೂ

ಬಳ್ಳಾರಿಯಲ್ಲಿ ಎರಡೇ ಕಾಲ: ಒಂದು ಬೇಸಿಗೆ, ಮತ್ತೊಂದು ಬಿರುಬೇಸಿಗೆ ಎಂದು ಬೀಚಿ ಹೇಳಿದ್ದರು. ಬಾಚಿಗೊಂಡನಹಳ್ಳಿ ಚನ್ನಬಸವನಗೌಡ, ಎಂ.ವೈ. ಘೋರ್ಪಡೆ, ಎಂ.ಪಿ. ಪ್ರಕಾಶ್ ಅವರಂಥ ರಾಜಕಾರಣಿಗಳ ಹೆಸರು ಬಳ್ಳಾರಿಯ ನೆನಪುಗಳೊಂದಿಗೆ ಮರುಕಳಿಸುವ ಬಿಂಬಗಳು. ಘೋರ್ಪಡೆಯವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ತರುವ ಉದ್ದೇಶದಿಂದ ಮಸೂದೆ ತರಲು ಬಯಸಿದ್ದರು. ಅಂದಿನ ಸಂಪುಟ ಸಭೆಯು ಅದಕ್ಕೆ ಒಪ್ಪಿಗೆ ಸೂಚಿಸದ ಕಾರಣ ಅಲ್ಲಿಯೇ ರಾಜೀನಾಮೆ ಕೊಟ್ಟು ಸ್ವಂತ ಕಾರಿನಲ್ಲಿ ಸಂಡೂರಿಗೆ ಹಿಂದಿರುಗಿದ್ದರು.

ಎಂ.ಪಿ. ಪ್ರಕಾಶ್ ಗೃಹ ಸಚಿವರಾಗಿದ್ದಾಗ ಅವರ ಪುತ್ರನ ಹೆಸರು ಅಕ್ರಮ ಗಣಿಗಾರಿಕೆಯಲ್ಲಿ ತಳಕು ಹಾಕಿಕೊಂಡಿದೆ ಎನ್ನುವ ಸಣ್ಣ ಆರೋಪವನ್ನು ಕನ್ನಡದ ಪ್ರಮುಖ ದಿನಪತ್ರಿಕೆಯಲ್ಲಿ ಪತ್ರಕರ್ತರೊಬ್ಬರು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದರು. ಅದರಿಂದ ಮೂರು ದಿನದವರೆಗೆ ಸರ್ಕಾರಿ ವಸತಿಗೃಹದಿಂದ ಪ್ರಕಾಶ್ ಅವರು ಹೊರಬಂದಿರಲಿಲ್ಲ. ಇಂಥ ಬಳ್ಳಾರಿ ಇಂದು ರಾಜಕೀಯ ವೈಷಮ್ಯದ ನೆಲೆವೀಡಾಗುತ್ತಿರುವುದು ದುರದೃಷ್ಟಕರ.

ಸಿರಿಗೇರಿ ಯರಿಸ್ವಾಮಿ, ಸಿರುಗುಪ್ಪ

ಅತಿಥಿ ಉಪನ್ಯಾಸಕರಿಗೆ ಇಡುಗಂಟು ಲಭ್ಯ

ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ 49 ಅತಿಥಿ ಉಪನ್ಯಾಸಕರಿಗೆ ಕಳೆದ ವಾರ ₹5 ಲಕ್ಷ ಇಡುಗಂಟು ಬಿಡುಗಡೆಯಾಗಿದೆ. ಆ ಮೂಲಕ ಸರ್ಕಾರ ಬಡವರ ಪರವಾದ ತನ್ನ ಬದ್ಧತೆ ಪ್ರದರ್ಶಿಸಿದೆ. ಅಕಾಲಿಕ ಮರಣ ಹೊಂದಿದ ಉಪನ್ಯಾಸಕರ ಕುಟುಂಬಕ್ಕೆ ಹಾಗೂ ನಿವೃತ್ತಿಯಾದವರಿಗೆ ಇದು ದೊಡ್ಡಮಟ್ಟದ ಆಸರೆಯಾಗಲಿದೆ.

ಮತ್ತೊಂದೆಡೆ, ಕಳೆದ ಎರಡು ದಶಕಗಳಿಂದ ಕಡಿಮೆ ವೇತನಕ್ಕೆ ದುಡಿದ ಅತಿಥಿ ಉಪನ್ಯಾಸಕರನ್ನು ಯುಜಿಸಿ ಅರ್ಹತೆ ಇಲ್ಲವೆಂಬ ಕಾರಣಕ್ಕೆ ಕೈಬಿಟ್ಟಿರುವುದು ನೋವಿನ ಸಂಗತಿ. ಮಾನವೀಯತೆ ದೃಷ್ಟಿಯಿಂದ ಅವರಿಗೆ ಬೋಧಿಸಲು ಮತ್ತೆ ಅವಕಾಶ ಕಲ್ಪಿಸಿದರೆ, ಬಡವರು ಮತ್ತು ಹಸಿದವರ ಪರವಾದ ಸರ್ಕಾರದ ನಿಲುವಿಗೆ ಮತ್ತಷ್ಟು ಮೆರುಗು ಬರುತ್ತದೆ.

ಹೊನ್ನಪ್ಪ ಹೊನ್ನಪ್ಪನವರ, ಹಾವೇರಿ

ಸಕ್ಕರೆ ಮಿಶ್ರಿತ ಬೆಲ್ಲದ ಹಾವಳಿ ಉಲ್ಬಣ

ಸಂಕ್ರಾಂತಿ ಹಬ್ಬ ಸಮೀಪಿಸುತ್ತಿದೆ. ಎಲ್ಲೆಡೆ ಬೆಲ್ಲ, ಎಳ್ಳು ಖರೀದಿಸುತ್ತಿರುವ ಬಹುತೇಕ ಗ್ರಾಹಕರಿಗೆ ಬೆಲ್ಲವನ್ನು ತಯಾರಿಸಲು ಕಬ್ಬಿನ ಹಾಲಿನ ಜೊತೆಗೆ ಬಹುಪಾಲು ಸಕ್ಕರೆಯನ್ನೇ ಬಳಸುತ್ತಿರುವುದು ತಿಳಿದಿಲ್ಲ. ಬಹುತೇಕ ಆಲೆಮನೆಗಳಲ್ಲಿ ಸಕ್ಕರೆ ಬೆರೆತ ಬೆಲ್ಲ ತಯಾರಿಸುವ ದಂಧೆ ಬಹಳ ವರ್ಷಗಳಿಂದ ನಡೆಯುತ್ತಿದೆ.

ಆದರೆ, ಸರ್ಕಾರ ತನಗೆ ಸಂಬಂಧವಿಲ್ಲವೇನೋ ಎಂಬಂತೆ ನಡೆದುಕೊಳ್ಳುತ್ತಿದೆ. ಈ ಬೆಲ್ಲ ಆರೋಗ್ಯದ ಮೇಲೆ ಯಾವ ರೀತಿಯ ದುಷ್ಪರಿಣಾಮ ಬೀರುವುದೋ ತಿಳಿಯದು. ಆರೋಗ್ಯ ಇಲಾಖೆ ಈ ಬಗ್ಗೆ ಪರಿಶೀಲಿಸಬೇಕಿದೆ.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಗ್ರಾಮ ಸ್ವರಾಜ್ಯದ ಕನಸಿಗೆ ಕೊಡಲಿ ಪೆಟ್ಟು

ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿಯೇ ತೇಲುತ್ತಿದೆ. ಆ ಮೂಲಕ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿಯನ್ನು ಮರೆತಂತಿದೆ. ಪ್ರಸಕ್ತ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ 15ನೆಯ ಹಣಕಾಸಿನ ಆಯೋಗ ನೀಡಬೇಕಿದ್ದ ಹಣವು ಪಂಚಾಯಿತಿಗಳಿಗೆ ಇನ್ನೂ ಬಿಡುಗಡೆಯಾಗಿಲ್ಲ. ಇದರಿಂದ ಅಭಿವೃದ್ಧಿ ಚಟುವಟಿಕೆಗಳಿಗೆ ಹಿನ್ನಡೆಯಾಗಲಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸಿಗೆ ಕೊಡಲಿ ಪೆಟ್ಟು ಬೀಳಲಿದೆ.

ಪ್ರಭು ವಂದಾಲಿ, ರಾಯಚೂರು

ಸಂಗೀತ, ನೃತ್ಯ ಪರೀಕ್ಷೆ: ಸುಧಾರಣೆ ಅಗತ್ಯ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಿಂದ ಮೂರನೇ ವರ್ಷದ ಸಂಗೀತ ಮತ್ತು ನೃತ್ಯ ಪರೀಕ್ಷೆಗಳಿಗೆ ಸಿದ್ಧತೆ ನಡೆಯುತ್ತಿದೆ. ಮುಂದಿನ ಪರೀಕ್ಷೆಗಳನ್ನು ನಡೆಸುವಾಗ ಎರಡು ವಿಷಯಗಳನ್ನು ಅಗತ್ಯವಾಗಿ ಪರಾಮರ್ಶಿಸಬೇಕಿದೆ. ಸಿಲಬಸ್ ನೀಡಿರುವುದಕ್ಕೆ ಸರಿಯಾದ ಪಠ್ಯಪುಸ್ತಕ ಒದಗಿಸುವುದು ಅಥವಾ ಪರಾಮರ್ಶನ ಪುಸ್ತಕಗಳನ್ನಾದರೂ ಸೂಚಿಸಿದರೆ ಅನುಕೂಲವಾದೀತು. ಪರೀಕ್ಷೆಗಳನ್ನು ಒಂದೇ ದಿನಕ್ಕೆ ಸೀಮಿತಗೊಳಿಸದೆ ಮೂರು ದಿನಗಳಿಗಾದರೂ ವಿಸ್ತರಿಸಬೇಕು. ಹಲವಾರು ವಿದ್ಯಾರ್ಥಿಗಳನ್ನು ಪರೀಕ್ಷೆ ಕಟ್ಟಿಸುವ ನೃತ್ಯಗುರುಗಳಿಗೆ ಸಮಯ ಹೊಂದಿಸಿಕೊಂಡು ನಟುವಾಂಗ ಮಾಡುವುದು ತುಂಬ ಕಷ್ಟಕರ.

ನಟುವಾಂಗದವರನ್ನು ತಯಾರಿಗೊಳಿಸಿ ಅನ್ನುವ ವಿಶ್ವವಿದ್ಯಾಲಯದ ಹೇಳಿಕೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸುವುದು ಸಾಧ್ಯವೇ? ನೃತ್ಯ ಪರೀಕ್ಷಕರನ್ನು ಒಂದು ಬೋರ್ಡ್‌ಗೆ ಇಬ್ಬರನ್ನು ನೇಮಿಸಬೇಕು. ಪರೀಕ್ಷಾಂಗ ವಿಭಾಗದವರು ಈ ಬಗ್ಗೆ ಗಮನಹರಿಸಬೇಕಿದೆ. ಪರೀಕ್ಷೆಯನ್ನು ಸುಧಾರಿಸಿದರೆ ನೃತ್ಯ, ಸಂಗೀತ ಕಲಿಯುವವರು ಇನ್ನಷ್ಟು ಹೆಚ್ಚಾಗಲಿದ್ದಾರೆ.

ಮಂಜುಳಾ ಸುಬ್ರಹ್ಮಣ್ಯ, ಪುತ್ತೂರು

ಹಂಪಿ ಸೌಂದರ್ಯ, ಪರಂಪರೆ ಉಳಿಸೋಣ

ಹಂಪಿಯ ಸೌಂದರ್ಯ ಅದರ ನೈಸರ್ಗಿಕ ಪರಿಸರದಲ್ಲಿ ಅಡಗಿದೆ. ಆದರೆ, ಪ್ರವಾಸಿಗರ ಸಂಖ್ಯೆ ಹೆಚ್ಚಿದಂತೆ ಶಿಲ್ಪಗಳಿಗೆ ಮತ್ತು ಪರಿಸರಕ್ಕೆ ಹಾನಿಯಾಗುವ ಆತಂಕ ಹೆಚ್ಚುತ್ತಿದೆ. ಇಲ್ಲಿ ಸುಸ್ಥಿರ ಪ್ರವಾಸೋದ್ಯಮದ ಅವಶ್ಯಕತೆ ಹೆಚ್ಚಿದೆ. ಡಿಜಿಟಲ್ ಟಿಕೆಟ್ ವ್ಯವಸ್ಥೆ, ಪ್ರವಾಸಿಗರ ಸಂಖ್ಯೆ ನಿಯಂತ್ರಿಸುವ ತಂತ್ರಜ್ಞಾನ, ಮತ್ತು ನಿರಂತರ ನಿಗಾ ವ್ಯವಸ್ಥೆಯು ಹಂಪಿಯ ಸಂರಕ್ಷಣೆಗೆ ನೆರವಾಗಲಿದೆ. ಅಭಿವೃದ್ಧಿ ಮತ್ತು ಸಂರಕ್ಷಣೆ ಒಂದೇ ನಾಣ್ಯದ ಎರಡು ಮುಖಗಳು. ಸರ್ಕಾರ ಈ ಸತ್ಯವನ್ನು ಅರಿತರಷ್ಟೇ ಹಂಪಿಯ ಸೌಂದರ್ಯ ಹಾಗೂ ಪರಂಪರೆಯ ಉಳಿವು ಸಾಧ್ಯ.

ವಿ. ಅರ್ಜುನ್, ವಿಜಯನಗರ

ಚುರುಮುರಿ

ಕೋಗಿಲು ಹಾಡಿದೆ

• ಲಿಂಗರಾಜು ಡಿ.ಎಸ್.

‘ಕೋಗಿಲು ಕಾಡಿದೆ ಕೇಳಿದೆಯಾ, ಹೊಸ ಫ್ಲಾಟನು ಕೇಳಿದೆ ನೋಡಿದೆಯಾ?’ ತಿಪ್ಪಣ್ಣ ಹಾಡಿಕ್ಯಂದು ನನ್ನ ಮೂತಿಗೆ ತಿವೀತಿದ್ದ.

‘ಸುಮ್ಮಗಿರ್ಲಾ ಅಣ್ತಮ್ಮ, ಯಾವುದನ್ನ ದೊಂಬಿಯಾಟದ ಹಾಡು ಹೇಳದು ಬುಟ್ಟು ಇದೇನಿದು’ ಅಂತಂದೆ.

‘ಕಂಗ್ರಾಜುಲೇಸನ್ ಡಾನು, ಇದೇ ನೋಡು ನನ್ನ ಪ್ಲಾನು. ಬ್ಯಾನರು ಬಳ್ಳಾರಿ ಬ್ಯಾನರು ಬಳ್ಳಾರಿ’ ಅಂತ ಹಾಡಿಕ್ಯಂದು ಮಗ್ಗುಲಗೆ ಕೂಕಂದ.

‘ಜಮೀರಣ್ಣ ಏನೋ ಮಾಡ್ತೀನಿ ಅಂತ ಕಡೆದೋಗಿದ್ನಲ್ಲಾ ಏನಾತ್ರೋ?’ ಯಂಟಪ್ಪಣ್ಣ ವಿಚಾರಿಸಿತು.

‘ಜಮೀರಣ್ಣ ಸ್ಯಾನೆ ದಿಲ್ದಾರ್ ಕನಣ್ಯ. ಕೋಗಿಲುಗಳಿಗೂ ಗೂಡು ಮಾಡಿಕೊಡ್ತೀವಿ ಅಂದದೆ. ಬಳ್ಳಾರಿ ಉಸ್ತುವಾರಿ ಜಮೀರಣ್ಣನೇ ಅಲ್ಲುವೇ? ದೊಂಬೀಲಿ ಜೀವ ಬುಟ್ಟ ಪಾಪದ ಕಾರ್ಯಕರ್ತನಿಗೆ ಇಸ್ಲಾಂ ಬೋರ್ಡಿಂದ ಮನೆ ಕಟ್ಟಿಸಿಕೊಡ್ತೀನಿ ಅಂದವ್ನೆ’ ತಿಪ್ಪಣ್ಣ ಸುದ್ದಿ ಕೊಟ್ಟ.

‘ತಿಪ್ಪಣ್ಣ ವಸಿ ಸುಮ್ಮಗಿರು. ನೀನು ಯಾವ್ಯಾವುದನ್ನೋ ಎಲ್ಲೆಲ್ಲಿಗೋ ಸಿಗೇ ಹಾಕಬ್ಯಾಡ. ಅದು ಇಸ್ಲಾಂ ಬೋರ್ಡಲ್ಲ. ಸ್ಲಂ ಬೋರ್ಡು’ ತುರೇಮಣೆ ತಿದ್ದಿದರು.

‘ಏನೋ ಆಗದು ಅಗೋತು. ಈಗ ದಿಟವಾದ ಕೋಗಿಲೆಗಳು ಯಾರು? ಬಳ್ಳಾರೀಲಿ ಸತ್ತೋನಿಗೆ ಗುಂಡಾಕಿದ್ದು ಯಾರು? ಯಾರಿಗೆ ಯಾರು ಗುರಿ ಇಟ್ಟವರೆ ಅಂತ ತಿಳಕಣದು ಹ್ಯಂಗೆ?’ ನನ್ನ ಪ್ರಶ್ನೆ ಮುಂದಿಟ್ಟೆ.

‘ದುಡ್ಡಸ್ತರು ಏನೇನೋ ಹುನ್ನಾರು ಮಾಡಿಕ್ಯತ್ತರೆ ನಮಗ್ಯಾಕೆ ಬುಡ್ಲಾ. ಏನಾತಿ ಪಾರಿನ್ ಕುಳಗಳು ಬೆಂಗಳೂರಿಗೆ ಬಂದು ಪೆಡ್ಲು ಹೊಡಕಂದು ಡ್ರಗ್ ಹಂಚ್ತಾ ನಮ್ಮ ಹುಡುಗ್ಲೆಲ್ಲಾ ಡ್ರಗ್ಗು ಪಾಟಾಗಿಸಿ ಬಾಳಗೆಡಸ್ತಾವೆ. ಈ ಡ್ರಗ್ಗಿಸ್ಟುಗಳುನ್ನೆಲ್ಲಾ ಯಂಗೆ ಬಲಿ ಹಾಕದು?’ ತುರೇಮಣೆ ವಿಚಾರ ಮಂಡಿಸಿದರು.

‘ಜಂಬರ ಇಲ್ದಿರೋ ಇಂತೇ ಮನಿಯಾಳರನ್ನೆಲ್ಲಾ ವಾಪಸ್ ಅವರ ದೇಸಕ್ಕೆ ಕಳುಗಿಸಕ್ಕೆ ಮುಂಚೆ ಜೈಲಗಿಟ್ರೆ ಕಾಣದಂಗೆ ಕದ್ದು ಹೋತವಂತೆ. ಇವುಕ್ಕೆ ಕುತ್ತಿಗೆ ಮ್ಯಾಲೆ ಮಿದ್ದು ವಾಪಾಸ್ ಗದುಮಬೇಕು’ ನಾನು ಸಿಟ್ಟಲ್ಲಿ ಹೇಳಿದೆ.

ಸಂಗತ

ಜಿಡಿಪಿ–ಸಂತೃಪ್ತಿ: ಎತ್ತಣ ಸಂಬಂಧವಯ್ಯ?

ದೇಶದ ಅಭಿವೃದ್ಧಿ ಹಾಗೂ ಜನರ ಸಂತೃಪ್ತಿ ‘ಜಿಡಿಪಿ’ಯಿಂದ ನಿರ್ಣಯವಾಗದು. ಸಂತುಷ್ಟಿಯ ಹೊಸ ಮಾನದಂಡಗಳನ್ನು ವಸ್ತುಸ್ಥಿತಿ ಆಧಾರದಲ್ಲಿ ರೂಪಿಸಬೇಕಾಗಿದೆ.

• ನಡಹಳ್ಳಿ ವಸಂತ್

ಭಾರತದ ‘ಒಟ್ಟು ಆಂತರಿಕ ಉತ್ಪನ್ನ’ದ ಗಾತ್ರ (ಜಿಡಿಪಿ) ಜಪಾನ್‌ಗಿಂತ ಹೆಚ್ಚಾಗಿದ್ದು, ನಾವು ವಿಶ್ವದ ನಾಲ್ಕನೆಯ ಅತಿ ದೊಡ್ಡ ಆರ್ಥಿಕ ವ್ಯವಸ್ಥೆಯಾಗಿ ಬೆಳೆದಿದ್ದೇವೆ ಮತ್ತು 2030ರ ವೇಳೆಗೆ ಭಾರತದ ಆರ್ಥಿಕ ವ್ಯವಸ್ಥೆ ಜರ್ಮನಿಯನ್ನೂ ಹಿಂದಿಕ್ಕಿ ಜಗತ್ತಿನ ಮೂರನೆಯ ಅತಿದೊಡ್ಡ ಆರ್ಥಿಕತೆಯಾಗಿ ಬೆಳೆಯಲಿದೆ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ. ಜಿಡಿಪಿ ಎನ್ನುವುದು ಬಂಡವಾಳಶಾಹಿ ಆರ್ಥಿಕತಜ್ಞರು ರೂಪಿಸಿರುವ ಮೋಸದಾಟ ಎನ್ನುವುದನ್ನು ನಾವು ತಿಳಿಯದಿದ್ದರೆ, ಸರ್ಕಾರಗಳು ಸೃಷ್ಟಿಸುವ ಭ್ರಮೆಯಲ್ಲಿ ಸಮಾಧಾನಪಡಬೇಕಾಗುತ್ತದೆ.

ಜಿಡಿಪಿ ಎಷ್ಟು ಅಸಂಗತ ಕಲ್ಪನೆ ಎನ್ನುವುದನ್ನು ಕುರಿತು ಮಲೇಷ್ಯಾದ ಅರ್ಥಶಾಸ್ತ್ರಜ್ಞ ಜೊಮೊ ಕ್ವಾಮೆ ಸುಂದರಮ್ ಹೇಳುವ ಒಂದು ತಮಾಷೆಯ ಕಥೆಯನ್ನು ಹಿರಿಯ ಪತ್ರಕರ್ತ ಪಿ. ಸಾಯಿನಾಥ್ ಉಲ್ಲೇಖಿಸುತ್ತಾರೆ. ಇಬ್ಬರು ಅರ್ಥಶಾಸ್ತ್ರಜ್ಞರು ರಸ್ತೆಯೊಂದರಲ್ಲಿ ಹೋಗುತ್ತಿದ್ದಾಗ, ಸತ್ತು ಬಿದ್ದಿರುವ ಇಲಿಯೊಂದನ್ನು ನೋಡುತ್ತಾರೆ. ಹಿರಿಯ ಅರ್ಥಶಾಸ್ತ್ರಜ್ಞ ‘ಈ ಸತ್ತ ಇಲಿಯನ್ನು ತಿಂದರೆ ನಿನಗೆ ಒಂದು ಲಕ್ಷ ರೂಪಾಯಿ ಕೊಡುತ್ತೇನೆ’ ಎಂದು ಛೇಡಿಸುತ್ತಾನೆ. ಕಿರಿಯ ಅರ್ಥಶಾಸ್ತ್ರಜ್ಞ ಸತ್ತ ಇಲಿಯನ್ನು ತಿಂದು ಒಂದು ಲಕ್ಷ ರೂಪಾಯಿ ವಸೂಲಿ ಮಾಡಿಕೊಂಡು ಹೋಗುತ್ತಾನೆ. ಸತ್ತ ಇಲಿಯನ್ನು ತಿಂದಿರುವುದಕ್ಕೆ ಕಿರಿಯನಿಗೆ, ಹಣ ಕಳೆದುಕೊಂಡದ್ದಕ್ಕೆ ಹಿರಿಯನಿಗೆ ಬೇಸರವಾಗುತ್ತದೆ. ಮರುದಿನ ಇಬ್ಬರೂ ಹೋಗುತ್ತಿರುವಾಗ ಮತ್ತೊಂದು ಸತ್ತ ಇಲಿ ಕಾಣಿಸುತ್ತದೆ. ಆಗ ಹಿರಿಯ ಅರ್ಥಶಾಸ್ತ್ರಜ್ಞ ಕಿರಿಯನಿಗೆ, ‘ನಾನು ಇದನ್ನು ತಿಂದರೆ ನೀನು ಒಂದು ಲಕ್ಷ ರೂಪಾಯಿ ಕೊಡುವೆಯಾ?’ ಎಂದು ಕೇಳುತ್ತಾನೆ. ಕಿರಿಯ ಒಪ್ಪಿಕೊಂಡ ಕೂಡಲೇ ಹಿರಿಯ ಸತ್ತ ಇಲಿಯನ್ನು ತಿಂದು ತಾನು ಕಳೆದುಕೊಂಡಿದ್ದ ಒಂದು ಲಕ್ಷ ರೂಪಾಯಿ ಹಿಂಪಡೆಯುತ್ತಾನೆ. ಆಗ ಕಿರಿಯ ಅರ್ಥಶಾಸ್ತ್ರಜ್ಞ, ‘ನಾವಿಬ್ಬರೂ ಎಂತಹ ಮೂರ್ಖರಲ್ಲವೇ?’ ಎಂದು ಹಿರಿಯನಿಗೆ ಕೇಳಿದಾಗ ಅವನು, ‘ಅದೇನೋ ಸರಿ, ಆದರೆ ನಾವಿಬ್ಬರೂ ಸೇರಿ ದೇಶದ ಜಿಡಿಪಿಯನ್ನು ₹2 ಲಕ್ಷಗಳಷ್ಟು ಹೆಚ್ಚಿಸಿದ್ದೇವೆ. ಅದಕ್ಕಾದರೂ ಹೆಮ್ಮೆಪಡೋಣ’ ಎಂದು ಉತ್ತರಿಸುತ್ತಾನೆ! ಹೇಗಿದೆ ಜಿಡಿಪಿ ಹೆಚ್ಚುಮಾಡುವ ತಂತ್ರಗಾರಿಕೆ?

ಜಿಡಿಪಿ ಎನ್ನುವ ಮಾನದಂಡವನ್ನು ಸೃಷ್ಟಿಸಿದ ಸೈಮನ್ ಕುಜ್ನೆಟ್ಸ್ ಎನ್ನುವ ರಷ್ಯಾ ಮೂಲದ ಅಮೆರಿಕದ ಅರ್ಥಶಾಸ್ತ್ರಜ್ಞ ಕೂಡ ಇದರ ಬಳಕೆಯ ಕುರಿತು ಎಚ್ಚರಿಕೆ ನೀಡಿದ್ದ. ಆತನ ಪ್ರಕಾರ, ರಾಷ್ಟ್ರವೊಂದರ ಒಟ್ಟು ಆದಾಯದ ಆಧಾರದ ಮೇಲೆ ಅಲ್ಲಿನ ಜನರ ಸಂತೃಪ್ತಿ, ಸಮಾಧಾನಗಳ ಮಟ್ಟವನ್ನು ಅಳೆಯಲು ಸಾಧ್ಯವಿಲ್ಲ. ಆದರೆ, ಪ್ರಸ್ತುತ ಪ್ರಪಂಚದ ಎಲ್ಲಾ ದೇಶಗಳು ತಮ್ಮ ಅಭಿವೃದ್ಧಿಯ ಹೆಚ್ಚುಗಾರಿಕೆ ಮೆರೆಸಲು ಬಳಸುವ ಏಕೈಕ ಮಾನದಂಡ ಜಿಡಿಪಿ. ಇದು ಬಂಡವಾಳಶಾಹಿ ಆರ್ಥಿಕತೆ ಸೃಷ್ಟಿಸಿದ ಭ್ರಮಾಲೋಕ. ದೇಶದಲ್ಲಿ ಸಂಪತ್ತು ಹೇಗೆ ಸೃಷ್ಟಿಯಾಗುತ್ತಿದೆ ಮತ್ತು ಹಾಗೆ ಸೃಷ್ಟಿಯಾಗುವ ಸಂಪತ್ತಿನ ಹಂಚಿಕೆ ಮತ್ತು ಬಳಕೆ ಹೇಗೆ ಆಗುತ್ತಿದೆ ಎನ್ನುವುದನ್ನು ಗಮನಿಸಿದರೆ ಮಾತ್ರ, ಆಯಾ ದೇಶಗಳ ಜನಸಾಮಾನ್ಯರ ನಿಜವಾದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಹುದು.

ಭಾರತದಂತಹ ಅಗಾಧ ಪ್ರಾಕೃತಿಕ ಸಂಪತ್ತನ್ನು ಹೊಂದಿರುವ ದೇಶದಲ್ಲಿ ಈ ಸಂಪನ್ಮೂಲಗಳನ್ನು ಬಂಡವಾಳಶಾಹಿಗಳಿಗೆ ಚಿಕ್ಕಾಸಿಗೆ ಮಾರಿದಾಗ, ಅವರು ಅದರಿಂದ ಅಪಾರ ಆದಾಯ ಗಳಿಸಿ ದೇಶದ ಜಿಡಿಪಿ ಹೆಚ್ಚಿಸುತ್ತಾರೆ. ಮದ್ಯ ಉತ್ಪಾದನಾ ಕಂಪನಿಗಳು, ಐಪಿಎಲ್ ಫ್ರಾಂಚೈಸಿಗಳು, ಆನ್‌ಲೈನ್ ಗೇಮಿಂಗ್ ಕಂಪನಿಗಳ ಆದಾಯವೂ ಜಿಡಿಪಿಯ ಭಾಗವಾಗಿರುತ್ತದೆ. ಅಶ್ಲೀಲ ಚಿತ್ರಗಳನ್ನು ಸಿದ್ಧಪಡಿಸಿ ಮಾರುವುದನ್ನು ಸಾಕಷ್ಟು ದೇಶಗಳಲ್ಲಿ ಕಾನೂನುಬದ್ಧವಾಗಿ ‘ಪೋರ್ನ್ ಇಂಡಸ್ಟ್ರಿ’ ಎಂದು ಕರೆಯಲಾಗುತ್ತದೆ ಮತ್ತು ಆ ಕಂಪನಿಗಳಿಂದ ಬರುವ ಆದಾಯ ಕೂಡ ಜಿಡಿಪಿಯನ್ನು ಹೆಚ್ಚಿಸುತ್ತದೆ!

ಜಿಡಿಪಿ ಹಂಚಿಕೆಯ ವಿಚಾರದಲ್ಲಂತೂ ವಿಶ್ವದ ಎಲ್ಲಾ ದೇಶಗಳ ಅಂಕಿಅಂಶಗಳು ಭಯಹುಟ್ಟಿಸುವಂತಿವೆ. ಸೃಷ್ಟಿ ಆಗುತ್ತಿರುವ ಸಂಪತ್ತಿನ ಹೆಚ್ಚು ಭಾಗ ಕಾರ್ಪೊರೇಟ್ ಖಜಾನೆಗಳನ್ನು ಸೇರುತ್ತಾ, ಬಡವರ ಮತ್ತು ಶ್ರೀಮಂತರ ನಡುವಿನ ಅಂತರ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ನಮ್ಮ ದೇಶದ ಶೇ 57ರಷ್ಟು ಸಂಪತ್ತು ದೇಶದ ಶೇ 7ರಷ್ಟು ಜನರ ಹಿಡಿತದಲ್ಲಿದೆ. ದೇಶದಲ್ಲಿ ಪ್ರತಿವರ್ಷ ಶತ ಕೋಟ್ಯಧಿಪತಿಗಳ ಸಂಖ್ಯೆ ಹೆಚ್ಚುತ್ತಿದ್ದರೂ, ಶೇ 80ರಷ್ಟು ಜನರಿಗೆ ರಿಯಾಯಿತಿ ದರದ ಆಹಾರ ಸಾಮಗ್ರಿಗಳ ಅಗತ್ಯವಿದೆ. ಸಂಪತ್ತಿನ ಹಂಚಿಕೆಯ ಅಸಮಾನತೆ ಪ್ರತಿವರ್ಷವೂ ಕುಸಿಯುತ್ತಿದ್ದು, ಸದ್ಯಕ್ಕೆ 1921ರಲ್ಲಿದ್ದ ಅಸಮಾನತೆಯ ಮಟ್ಟ ತಲಪಿದ್ದೇವೆ ಎನ್ನಲಾಗುತ್ತಿದೆ.

ಸಂತೃಪ್ತಿಯ ಸೂಚ್ಯಂಕದಲ್ಲಿ ಭಾರತ 147 ದೇಶಗಳಲ್ಲಿ 118ನೇ ಸ್ಥಾನದಲ್ಲಿದೆ. ಭ್ರಷ್ಟಾಚಾರದಲ್ಲಿ 180 ದೇಶಗಳಲ್ಲಿ 96ನೇ ಸ್ಥಾನದಲ್ಲಿದೆ. ಹಸಿವಿನ ಸೂಚ್ಯಂಕದಲ್ಲಿ 123 ದೇಶಗಳಲ್ಲಿ 102ನೇ ಸ್ಥಾನದಲ್ಲಿದೆ. ಮಕ್ಕಳು, ಮಹಿಳೆಯರ ಅಪೌಷ್ಟಿಕತೆಯ ವಿಚಾರದಲ್ಲಿ ನಮ್ಮ ದೇಶದ ಪರಿಸ್ಥಿತಿ ನಿರಾಶಾದಾಯಕವಾಗಿದೆ.

ಸರ್ಕಾರಕ್ಕೆ ಈ ಎಲ್ಲಾ ಅಂಕಿಅಂಶಗಳ ಕುರಿತು ತಗಾದೆ ಇರಬಹುದಾದರೂ, ಜಿಡಿಪಿಯನ್ನು ಅಭಿವೃದ್ಧಿಯ ಮಾನದಂಡವಾಗಿ ಬಳಸುವುದನ್ನಂತೂ ಒಪ್ಪಲಾಗದು. ನಮ್ಮ ದೇಶದ ಜನಸಂಖ್ಯೆ, ಸಂಪನ್ಮೂಲಗಳು, ಜನರ ಅಗತ್ಯಗಳು, ನಮಗೆ ಸೂಕ್ತವಾದ ಅಭಿವೃದ್ಧಿಯ ಮಾದರಿ, ಮುಂತಾದ ಮಾನದಂಡಗಳ ಆಧಾರದ ಮೇಲೆ ಹೊಸದಾದ ಅಭಿವೃದ್ಧಿ ಸೂಚ್ಯಂಕವನ್ನು ಅರ್ಥಶಾಸ್ತ್ರಜ್ಞರು ಆವಿಷ್ಕರಿಸುವ ತುರ್ತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯದಲ್ಲೇ ಡ್ರಗ್ಸ್ ತಯಾರಿಕೆ; ಕೋಟ್ಯಂತರ ರೂಪಾಯಿಯ ದಂಧೆ

ಮಾದಕ ಪದಾರ್ಥ ಸಾಗಾಟ, ಮಾರಾಟ, ಬಳಕೆ ಅವ್ಯಾಹತ

ಪ್ರಜಾವಾಣಿ ವಾರ್ತೆ

ದೇಶದ ಈಶಾನ್ಯ ರಾಜ್ಯಗಳು ಮತ್ತು ಉತ್ತರದ ಕೆಲವು ರಾಜ್ಯಗಳಂತೆ ಕರ್ನಾಟಕದಲ್ಲಿಯೂ ಮಾದಕ ವಸ್ತುಗಳ ಬಳಕೆ, ಸಂಗ್ರಹ ಮತ್ತು ಕಳ್ಳಸಾಗಣೆ ವ್ಯಾಪಕವಾಗಿದೆ. ರಾಜ್ಯದಲ್ಲಿ ಮಾದಕ ದ್ರವ್ಯಗಳ ತಯಾರಿಕೆ, ಕೃಷಿ, ಸಂಗ್ರಹ, ಮಾರಾಟ, ವ್ಯಾಪಾರ, ಸಾಗಣೆ, ರಫ್ತು, ಆಮದು ಮತ್ತು ಬಳಕೆ ಸಂಬಂಧದ 'ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ' (ಎನ್‌ಡಿಪಿಎಸ್) ಅಡಿ ದಾಖಲಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಇವುಗಳಲ್ಲಿ ಡ್ರಗ್ಸ್ ಸೇವನೆ ಮತ್ತು ಸಂಗ್ರಹಕ್ಕೆ ಸಂಬಂಧಿಸಿದ ಪ್ರಕರಣಗಳೇ ಅಧಿಕವಾಗಿವೆ.

ಮಾದಕ ವಸ್ತುಗಳ ಬಳಕೆಯು ಯುವಕ, ಯುವತಿಯರಲ್ಲಿ ಹೆಚ್ಚಾಗುತ್ತಿದೆ. 'ಥ್ರಿಲ್'ನ ಬಯಕೆ, ಮೋಜು ಮಾಡುವ ಸಂಸ್ಕೃತಿ, ಒತ್ತಡ ಮುಂತಾದ ಕಾರಣಗಳಿಂದ ಮಾದಕ ವಸ್ತುಗಳನ್ನು ಬಳಸುವವರು ಹೆಚ್ಚಾಗುತ್ತಿದ್ದಾರೆ. ಶ್ರೀಮಂತರ ಮಕ್ಕಳು, ಸಿನಿಮಾ ಮಂದಿ, ಸೆಲೆಬ್ರಿಟಿಗಳು ಮಾದಕ ಪದಾರ್ಥ ಬಳಕೆದಾರರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಗಾಂಜಾ ಸೇದುವ ಪ್ರವೃತ್ತಿಯು ಯುವಕರಲ್ಲಿ ಕಂಡುಬಂದಿದೆ. ವ್ಯಸನಕ್ಕೆ ಸಿಲುಕಿ ಕೆಲವು ಯುವಕ, ಯುವತಿಯರ ಭವಿಷ್ಯವೇ ಮುರುಟಿಹೋಗಿದೆ. ಡ್ರಗ್ಸ್ ದಂಧೆಯಲ್ಲಿ ಕೋಟ್ಯಂತರ ರೂಪಾಯಿ ಹಣದ ವಹಿವಾಟು ನಡೆಯುತ್ತಿದೆ. ಅನಕ್ಷರಸ್ಥರು, ಬಡ ಯುವಕರಿಗೆ ಹಣದ ಆಮಿಷ ಒಡ್ಡಿ ಡ್ರಗ್ಸ್ ದಂಧೆಗೆ ಎಳೆಯಲಾಗುತ್ತಿದೆ.

ರಾಜ್ಯದಲ್ಲಿ ಬೆಂಗಳೂರು ಮಾದಕ ವಸ್ತುಗಳ ಬಳಕೆಯಲ್ಲಿ ಮೊದಲ ಸ್ಥಾನದಲ್ಲಿದ್ದರೆ, ಮಂಗಳೂರು ಎರಡನೇ ಸ್ಥಾನದಲ್ಲಿದೆ. ಮೈಸೂರು ಮತ್ತಿತರ ನಗರಗಳಲ್ಲಿಯೂ ಡ್ರಗ್ಸ್ ಸಂಸ್ಕೃತಿ ಗಮನಾರ್ಹ ಪ್ರಮಾಣದಲ್ಲಿದೆ.

ರಾಜ್ಯದಲ್ಲೇ ಡ್ರಗ್ಸ್ ಫ್ಯಾಕ್ಟರಿ: ರಾಜ್ಯಕ್ಕೆ ದೇಶ-ವಿದೇಶಗಳಿಂದ ಮಾದಕ ವಸ್ತುಗಳು ಕಳ್ಳಸಾಗಣೆ ಆಗುತ್ತಿವೆ. ಇದರ ಜತೆಗೆ, ರಾಜ್ಯದಲ್ಲಿಯೂ ಡ್ರಗ್ಸ್ ತಯಾರಿಕೆ ಮಾಡುತ್ತಿದ್ದ ಪ್ರಕರಣಗಳು ಪತ್ತೆಯಾಗಿವೆ. ಮೆಫಡ್ರೋನ್ ತಯಾರಿಕಾ ಜಾಲವು ಮೈಸೂರಿನಲ್ಲಿ ಕಳೆದ ಜುಲೈನಲ್ಲಿ ಪತ್ತೆಯಾಗಿತ್ತು. ಜಾಲವನ್ನು ಭೇದಿಸಿದ್ದ ಮಹಾರಾಷ್ಟ್ರದ ಮಾದಕವಸ್ತು ನಿಗ್ರಹ ಪಡೆಯು (ಎಎನ್‌ಸಿ) ₹382 ಕೋಟಿ ಮೌಲ್ಯದ ನಿಷೇಧಿತ ಪದಾರ್ಥಗಳನ್ನು ವಶಪಡಿಸಿಕೊಂಡಿತ್ತು. ಎಎನ್‌ಸಿಯು ಇತ್ತೀಚೆಗೆ ಬೆಂಗಳೂರಿನಲ್ಲಿ ಮಾದಕ ವಸ್ತುಗಳನ್ನು ತಯಾರಿಸುವ ಎರಡು ಫ್ಯಾಕ್ಟರಿಗಳನ್ನು ಪತ್ತೆ ಹಚ್ಚಿ, 55.58 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿತ್ತು.

ಯುವಜನರೇ ಗ್ರಾಹಕರು: ಯುವಸಮುದಾಯ ಅದರಲ್ಲೂ ವಿದ್ಯಾರ್ಥಿಗಳನ್ನೇ ಗುರಿಯಾಗಿಸಿಕೊಂಡು ದಂಧೆ ನಡೆಯುತ್ತಿದೆ. ಪೆಡ್ಲರ್‌ಗಳು ವಿದ್ಯಾರ್ಥಿಗಳನ್ನೇ ಮಧ್ಯವರ್ತಿಗಳನ್ನಾಗಿ ಮಾಡಿಕೊಂಡು ತಮ್ಮ ಜಾಲವನ್ನು ವಿಸ್ತರಿಸಿಕೊಳ್ಳುತ್ತಿದ್ದಾರೆ. ಹುಬ್ಬಳ್ಳಿ-ಧಾರವಾಡದ ಪೊಲೀಸರು 2025ರಲ್ಲಿ 3,800ಕ್ಕೂ ಹೆಚ್ಚು ಶಂಕಿತರನ್ನು ವಶಕ್ಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದರು. ಈ ಪೈಕಿ 1,419 ಮಂದಿ ಡ್ರಗ್ಸ್ ಸೇವನೆ ಮಾಡಿದ್ದು ದೃಢಪಟ್ಟಿತ್ತು. ಇವರಲ್ಲಿ ಶೇ 80ರಷ್ಟು ಮಂದಿ ಯುವಜನರೇ ಆಗಿದ್ದರು. ಮೈಸೂರಿನಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಸುಲಭವಾಗಿ ಗಾಂಜಾ ಸೇರಿದಂತೆ ಇನ್ನಿತರ ಡ್ರಗ್ಸ್ ಸಿಗುತ್ತಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಉಡುಪಿ ಜಿಲ್ಲೆಯ ವಿವಿಧ ಉನ್ನತ ಹಾಗೂ ವೃತ್ತಿ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳು ಬಹಳ ಸುಲಭವಾಗಿ ಸಿಗುತ್ತಿವೆ. ಇತ್ತೀಚೆಗೆ ಮಂಗಳೂರಿನಲ್ಲಿ ನಡೆದ ಡ್ರಗ್ಸ್ ವಿರೋಧಿ ಆಂದೋಲನದಲ್ಲಿ ಮಾತನಾಡಿದ್ದ ಮಂಗಳೂರು ಪೊಲೀಸ್ ಕಮಿಷನರ್ ಸುಧೀರ್‌ಕುಮಾರ್ ರೆಡ್ಡಿ, ನಾವು ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕೋರ್ಸ್‌ಗಳ ಹಲವು ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಒಳಪಡಿಸಿದಾಗ, ಅವರು ಡ್ರಗ್ಸ್ ತೆಗೆದುಕೊಂಡಿದ್ದು ದೃಢಪಟ್ಟಿತ್ತು ಎಂದು ಹೇಳಿದ್ದರು.

ಕೊಡಗು ಜಿಲ್ಲೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಮಾತ್ರವಲ್ಲ; ಶಾಲಾ ವಿದ್ಯಾರ್ಥಿಗಳು ಸಹ ಈಗ ಈ ಚಟಕ್ಕೆ ಒಳಗಾಗಿದ್ದಾರೆ ಎಂಬ ಆತಂಕವನ್ನು ಜನಸಾಮಾನ್ಯರು ವ್ಯಕ್ತಪಡಿಸುತ್ತಿದ್ದಾರೆ. ಇವುಗಳಿಗೆ 'ನಶೆಪುಡಿ' ಎಂಬ ಕೋಡ್ ವರ್ಡ್ ವಿದ್ಯಾರ್ಥಿಗಳೇ ಸೃಷ್ಟಿಸಿಕೊಂಡಿದ್ದು ವರದಿಯಾಗಿದೆ.

ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳು ಹೆಚ್ಚಿರುವ ತುಮಕೂರಿನಲ್ಲಿ ಡ್ರಗ್ಸ್ ಪೆಡ್ಲರ್‌ಗಳು ವಿದ್ಯಾರ್ಥಿಗಳನ್ನು ಗುರಿಯಾಗಿಸಿ ಕೊಂಡು ಮಾದಕ ವಸ್ತು ಮಾರಾಟದಲ್ಲಿ ತೊಡಗಿಸಿಕೊಂಡಿದ್ದಾರೆ.

ಪ್ರವಾಸಿಗರಿಗೂ ಪೂರೈಕೆ: ಕೊಪ್ಪಳ ಜಿಲ್ಲೆಯ ತುಂಗಭದ್ರಾ ನದಿಯ ಅಂಚಿನಲ್ಲಿರುವ ರೆಸಾರ್ಟ್ ಹಾಗೂ ಹೋಂ ಸ್ಟೇಗಳಲ್ಲಿ ಡ್ರಗ್ಸ್ ಪೂರೈಕೆ, ಸೇವನೆ ನಡೆಯುತ್ತಿದೆ.

ವಿದೇಶಿ ಪೆಡ್ಲರ್‌ಗಳು ಸಕ್ರಿಯ: ರಾಜಧಾನಿ ಸೇರಿ ರಾಜ್ಯದ ಪ್ರಮುಖ ನಗರಗಳಲ್ಲಿ ಸ್ಥಳೀಯರೊಂದಿಗೆ ವಿದೇಶಿಯರು ಕೂಡ ಡ್ರಗ್ಸ್ ಮಾರಾಟ ದಂಧೆಯಲ್ಲಿ ತೊಡಗಿದ್ದಾರೆ. ಬೆಂಗಳೂರಿನಲ್ಲಿ 62 ವಿದೇಶಿ ಪ್ರಜೆಗಳನ್ನು 2025ರಲ್ಲಿ ಬಂಧಿಸಲಾಗಿದೆ. 2023ರಲ್ಲಿ 101, 2024ರಲ್ಲಿ 61 ವಿದೇಶಿ ಪ್ರಜೆಗಳನ್ನು ಬಂಧಿಸಲಾಗಿತ್ತು. ಶಿಕ್ಷಣ ಹಾಗೂ ಪ್ರವಾಸಿ ವೀಸಾದ ಮೇಲೆ ನಗರಕ್ಕೆ ಬಂದು, ಅವಧಿ ಮುಕ್ತಾಯವಾದ ಮೇಲೂ ನಗರದಲ್ಲಿಯೇ ನೆಲಸಿ ಅಕ್ರಮ ಚಟುವಟಿಕೆಯಲ್ಲಿ ತೊಡಗುತ್ತಿದ್ದಾರೆ ಎಂದು ಹೇಳುತ್ತಾರೆ ಪೊಲೀಸರು.

ದಾಖಲಾದ ಪ್ರಕರಣಗಳು

(ಎನ್‌ಡಿಪಿಎಸ್ ಕಾಯ್ದೆ)



ಬೆಂಗಳೂರಿನಲ್ಲಿ ಡ್ರಗ್ಸ್ ವಿರುದ್ಧ ಕಾರ್ಯಾಚರಣೆ



*ಡಿಸೆಂಬರ್ 15ರವರೆಗೆ

ಯಾವುದೆಲ್ಲ?

- ನೈಸರ್ಗಿಕ ಮಾದಕ ವಸ್ತು: ಅಫೀಮು, ಗಾಂಜಾ
- ಅರೆ ಸಿಂಥೆಟಿಕ್ ಡ್ರಗ್ಸ್: ಮಾರ್ಫಿನ್, ಹೆರಾಯಿನ್
- ಸಿಂಥೆಟಿಕ್ ಡ್ರಗ್ಸ್: ಎಂಡಿಎಂಎ, ಎಲ್‌ಎಸ್‌ಡಿ, ಕೊಕೇನ್

ರಾಜ್ಯದಲ್ಲಿ ನಾಶಪಡಿಸಿದ ಡ್ರಗ್ಸ್

(ಕೆ.ಜಿಗಳಲ್ಲಿ, ಮೌಲ್ಯ ಕೋಟಿಗಳಲ್ಲಿ)



ಬೆಂಗಳೂರಿನಲ್ಲಿ ಮಾಡಲಾದ ಜಪ್ತಿ

(ಕೆ.ಜಿಗಳಲ್ಲಿ, ಮೌಲ್ಯ ಕೋಟಿಗಳಲ್ಲಿ)

*ಡಿಸೆಂಬರ್ 15ರವರೆಗೆ

ಆಧಾರ: ಗೃಹ ಇಲಾಖೆ

ಮಂಗಳೂರು: ಡ್ರಗ್ಸ್ ಕಳ್ಳಸಾಗಣೆ, ಮಾರಾಟ ಪ್ರಕರಣಗಳು



ಗ್ರಾಮೀಣ ಭಾಗಗಳಲ್ಲಿ ಗಾಂಜಾ 'ಘಾಟು'

ನಗರಗಳಿಗೆ ಹೋಲಿಸಿದರೆ ನೈಸರ್ಗಿಕವಾಗಿ ದೊರೆಯುವ ಗಾಂಜಾದ ಬಳಕೆ ಪಟ್ಟಣ, ತಾಲ್ಲೂಕು ಕೇಂದ್ರ ಹಾಗೂ ಗ್ರಾಮೀಣ ಭಾಗಗಳಲ್ಲಿ ಹೆಚ್ಚಿದೆ. ರಾಜ್ಯದ ಉತ್ತರ ಕನ್ನಡ, ಚಾಮರಾಜನಗರ, ದಕ್ಷಿಣ ಕನ್ನಡ ಜಿಲ್ಲೆಗಳ ದಟ್ಟ ಅರಣ್ಯ ಪ್ರದೇಶಗಳಲ್ಲಿ ಅರಣ್ಯ ಇಲಾಖೆಯ ಕಣ್ತಪ್ಪಿಸಿ ಗಾಂಜಾ ಬೆಳೆಯಲಾಗುತ್ತಿದೆ. ಸ್ಥಳೀಯರೇ ಇವುಗಳನ್ನು ಬೆಳೆದು ಏಜೆಂಟರ ಮೂಲಕ ಹೊರಗಡೆಗೆ ಪೂರೈಸುತ್ತಾರೆ. ಹೊರ ರಾಜ್ಯಗಳಿಂದಲೂ ಗಾಂಜಾ ರಾಜ್ಯಕ್ಕೆ ಬರುತ್ತಿದೆ. ಮಹಾನಗರಗಳು ಹಾಗೂ ವಾಣಿಜ್ಯ ಚಟುವಟಿಕೆ ಜಾಸ್ತಿ ನಡೆಯು ನಗರ, ಪಟ್ಟಣಗಳಲ್ಲಿ ಗಾಂಜಾದ ಹಾವಳಿ ಸ್ವಲ್ಪ ಕಡಿಮೆ ಇದ್ದು, ಸಿಂಥೆಟಿಕ್, ಅರೆಸಿಂಥೆಟಿಕ್ ಡ್ರಗ್ಸ್ ಬಳಕೆ ವ್ಯಾಪಕವಾಗಿದೆ.

ಮಾದಕ ದ್ರವ್ಯ ವಿರೋಧಿ ಕಾರ್ಯಪಡೆಗೆ (ಎಎನ್‌ಟಿಎಫ್) ಮುಖ್ಯಸ್ಥರ ನೇಮಕ ಆಗಿರಲಿಲ್ಲ. ಡಿ.31ರಂದು ಮುಖ್ಯಸ್ಥರನ್ನು ನೇಮಿಸಲಾಗಿದೆ. ಈ ವರ್ಷ ಡ್ರಗ್ಸ್ ವಿರುದ್ಧ ಸಮರ ಸಾರಿದ್ದೇವೆ. ಡ್ರಗ್ಸ್ ಪೆಡ್ಲರ್‌ಗಳ ವಿರುದ್ಧ ತ್ವರಿತವಾಗಿ ಕ್ರಮ ತೆಗೆದುಕೊಳ್ಳವಂತೆಯೂ ಎಲ್ಲ ಪೊಲೀಸ್ ಅಧಿಕಾರಿಗಳಿಗೂ ಸೂಚಿಸಲಾಗಿದೆ

ಡಾ.ಎಂ.ಎ.ಸಲೀಂ, ರಾಜ್ಯ ಪೊಲೀಸ್ ಮಹಾನಿರ್ದೇಶಕ

ರಾಜ್ಯದ ಬಟ್ಟೆ ಅಂಗಡಿಗಳಲ್ಲಿ ಕೆಲಸ ಮಾಡುವ ಹೊರ ರಾಜ್ಯದ ಆರೋಪಿಗಳು, ಸ್ಥಳೀಯರಿಗೆ ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಾರೆ. ಬೇರೆ ರಾಜ್ಯಗಳಿಗೆ ವ್ಯಾಪಾರಕ್ಕೆ ತೆರಳುವವರು ಬರುವಾಗ ಮಾದಕ ವಸ್ತು ತಂದು, ಒಂದೆಡೆ ಸಂಗ್ರಹಿಸುತ್ತಾರೆ. ಹುಬ್ಬಳ್ಳಿಯಿಂದ ಕರಾವಳಿ, ಶಿವಮೊಗ್ಗ ಭಾಗಕ್ಕೆ ಬಸ್‌ಗಳಲ್ಲಿ ಔಷಧ ಹಾಗೂ ಇತರ ವಸ್ತುಗಳ ಪಾರ್ಸೆಲ್ ನೆಪದಲ್ಲಿ ಸಾಗಾಟ ಮಾಡುತ್ತಾರೆ. ವಿದ್ಯಾರ್ಥಿಗಳೇ ಇವರ ಗುರಿ

ಎನ್.ಶಶಿಕುಮಾರ್, ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರ್

ಇತ್ತೀಚೆಗೆ ಎಂಡಿಎಂಎನಂತಹ ಕೃತಕ ಡ್ರಗ್ ಹಾವಳಿ ಜಾಸ್ತಿ ಆಗುತ್ತಿದೆ. ಕರಾವಳಿಯಲ್ಲಿ ಇದುವರೆಗೆ ಕೃತಕ ಡ್ರಗ್ ತಯಾರಿಸಿದ ಪ್ರಕರಣ ವರದಿಯಾಗಿಲ್ಲ. ಇಂತಹ ಡ್ರಗ್ ಹೆಚ್ಚಾಗಿ ಮುಂಬೈ ಹಾಗೂ ಬೆಂಗಳೂರಿನಿಂದ ಇಲ್ಲಿಗೆ ಪೂರೈಕೆ ಆಗುತ್ತಿದೆ. ಕೇರಳದ ಗಡಿ ಭಾಗದ ಮೂಲಕವೂ ಮಾದಕ ಪದಾರ್ಥ ಕಳ್ಳಸಾಗಣೆಯಾಗುತ್ತಿದೆ. ಡ್ರಗ್ ಕಳ್ಳಸಾಗಣೆ ಮತ್ತು ಮಾರಾಟಕ್ಕೆ ಸಂಬಂಧಿಸಿ ಎರಡು ದಿನಕ್ಕೆ ಒಂದು ಪ್ರಕರಣವನ್ನಾದರೂ ಭೇದಿಸುತ್ತಿದ್ದೇವೆ.

ಸುಧೀರ್ ಕುಮಾರ್ ರೆಡ್ಡಿ ಸಿ.ಎಚ್., ಮಂಗಳೂರು ಪೊಲೀಸ್ ಕಮಿಷನರ್

ಹೊರರಾಜ್ಯಗಳಿಂದ ಪೂರೈಕೆ

ರಾಜ್ಯದ ಹಲವು ಕಡೆಗಳಿಗೆ ಮಾದಕ ವಸ್ತುಗಳು ಹೊರ ರಾಜ್ಯಗಳಿಂದ ಪೂರೈಕೆಯಾಗುತ್ತಿವೆ. ರಾಜ್ಯದ ಗಡಿ ಭಾಗಗಳಲ್ಲಿ ಕಳ್ಳದಾರಿಯ ಮೂಲಕ, ರೈಲುಗಳ ಮೂಲಕ ಪೊಲೀಸರ ಕಣ್ಣು ತಪ್ಪಿಸಿ ಡ್ರಗ್ಸ್ ರಾಜ್ಯವನ್ನು ಸೇರುತ್ತಿವೆ. ಗೋವಾ, ಮಹಾರಾಷ್ಟ್ರ, ರಾಜಸ್ಥಾನ, ಗುಜರಾತ್, ಕೇರಳ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಒಡಿಶಾ, ಛತ್ತೀಸಗಢ, ಅಸ್ಸಾಂ ಸೇರಿದಂತೆ ವಿವಿಧ ರಾಜ್ಯಗಳಿಂದ ಬರುವ ಕಾರ್ಮಿಕರು, ಪೆಡ್ಲರ್‌ಗಳು ರಾಜ್ಯದಲ್ಲಿ ಡ್ರಗ್ಸ್ ಮಾರಾಟದಲ್ಲಿ ತೊಡಗಿರುವುದು ಹಲವು ಪ್ರಕರಣಗಳ ತನಿಖೆಯಿಂದ ದೃಢಪಟ್ಟಿದೆ. ಗಡಿ ಜಿಲ್ಲೆ ಕೋಲಾರದ ಕೈಗಾರಿಕಾ ಪ್ರದೇಶಗಳಿಗೆ ಉತ್ತರ ಭಾರತದ ವಿವಿಧ ರಾಜ್ಯಗಳಿಂದ ಡ್ರಗ್ಸ್ ಪೂರೈಕೆಯಾಗುತ್ತಿದೆ. ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳೊಂದಿಗೆ ಗಡಿ ಹಂಚಿಕೊಂಡ ಬೆಳಗಾವಿ ಜಿಲ್ಲೆಗೆ ಈ ಎರಡೂ ರಾಜ್ಯಗಳಿಂದ ಡ್ರಗ್ಸ್ ಪೂರೈಕೆಯಾಗುತ್ತವೆ.

ಸರ್ಕಾರದ ವೈಫಲ್ಯ

ಅನೇಕ ಯುವಕ, ಯುವತಿಯರು ಮಾದಕ ವ್ಯಸನದ ಸುಳಿಗೆ ಸಿಲುಕಿ ತಮ್ಮ ಜೀವನ ಹಾಳು ಮಾಡಿಕೊಳ್ಳುತ್ತಿದ್ದರೂ ಸರ್ಕಾರವು ಡ್ರಗ್ ಮಾಫಿಯಾವನ್ನು ತಡೆಗಟ್ಟಲು ಸೂಕ್ತ ರೀತಿಯಲ್ಲಿ ಕ್ರಮ ವಹಿಸುತ್ತಿಲ್ಲ ಎನ್ನುವ ಅಸಮಾಧಾನ ಕೆಲವು ಪೋಷಕರಲ್ಲಿದೆ. 2024ರಲ್ಲಿ ವಿಶೇಷ ಕಾರ್ಯಪಡೆ ರಚಿಸಲಾಗಿದೆ. ಡ್ರಗ್ಸ್ ವಿರುದ್ಧ ಯುದ್ಧ ಮಾಡುತ್ತೇವೆ ಎಂದು ಸರ್ಕಾರ ಹೇಳಿದೆ. ಆದರೂ ಹೆಚ್ಚಿನ ಫಲಶ್ರುತಿ ಸಿಕ್ಕಂತೆ ಕಾಣುತ್ತಿಲ್ಲ. ಡ್ರಗ್ಸ್ ಮಾಫಿಯಾ ವಿರುದ್ಧ ಕ್ರಮ ಜರುಗಿಸುವಲ್ಲಿ ವಿಫಲರಾದ ಪೊಲೀಸರು ಅಮಾನತ್ತಾಗಿರುವ ಹಲವು ಉದಾಹರಣೆಗಳು ಇವೆ. ದಂಧೆಯಲ್ಲಿ ದೊಡ್ಡ ಮಟ್ಟದ ಹಣ ಚಲಾವಣೆಯಾಗುತ್ತಿದ್ದು ಕೆಲವು ಪೊಲೀಸರು ಹಾಗೂ ರಾಜಕಾರಣಿಗಳ ಅಭಯವೂ ದಂಧೆಕೋರರಿಗೆ ಇದೆ ಎನ್ನುವ ಆರೋಪಗಳಿವೆ. ಗೃಹ ಸಚಿವ ಪರಮೇಶ್ವರ ಅವರು ಡ್ರಗ್ಸ್ ಮಾಫಿಯಾ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಪದೇ ಪದೇ ಹೇಳುತ್ತಿದ್ದಾರೆ. ಆದರೆ, ಅದು ಹೇಳಿಕೆಗಷ್ಟೇ ಸೀಮಿತವಾಗಿದೆ.

ರೈಲಲ್ಲಿ ಸಾಗಾಟ

ರೈಲುಗಳಲ್ಲೂ ಮಾದಕ ವಸ್ತುಗಳ ಕಳ್ಳಸಾಗಣೆ ಅವ್ಯಾಹತವಾಗಿ ನಡೆಯುತ್ತಿದೆ. ನೈರುತ್ಯ ರೈಲ್ವೆ ವಲಯದ ವ್ಯಾಪ್ತಿಗೆ ಬರುವ ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿ ವಿಭಾಗದ ಅಧಿಕಾರಿಗಳು 2025ರಲ್ಲಿ ನವೆಂಬರ್ ಅಂತ್ಯದವರೆಗೆ ₹6.70 ಕೋಟಿ ಮೌಲ್ಯದ 914 ಕೆ.ಜಿ. ಗಾಂಜಾ ವಶಪಡಿಸಿಕೊಂಡಿದ್ದಾರೆ. ಇದರಲ್ಲಿ ₹4.88 ಕೋಟಿ ಮೌಲ್ಯದ ಗಾಂಜಾವನ್ನು ರಾಜಧಾನಿ ಬೆಂಗಳೂರು ಹಾಗೂ ಸುತ್ತಮುತ್ತ ಜಪ್ತಿ ಮಾಡಲಾಗಿದೆ. ಮೂರು ವರ್ಷಗಳಲ್ಲಿ ನೈರುತ್ಯ ರೈಲ್ವೆ ಇಲಾಖೆ ಒಟ್ಟು ₹34 ಕೋಟಿ ಮೌಲ್ಯದ 3.82 ಟನ್ ಗಾಂಜಾ ವಶಪಡಿಸಿಕೊಂಡಿದೆ.

ದಂಧೆ ಹರಡಲು ಕಾರಣ

- ನಶೆಯ ಮೇಲೆ ಹೆಚ್ಚಿದ ಯುವಜನರ ಆಸಕ್ತಿ
- ಡ್ರಗ್ಸ್ ವ್ಯವಹಾರದಲ್ಲಿ ದೊಡ್ಡ ಮಟ್ಟದಲ್ಲಿ ಹಣದ ಹರಿವು
- ನಿರುದ್ಯೋಗ, ಬಡತನ, ಮೋಜು-ಮಸ್ತಿಯ ಗೀಳು ಇರುವ ಯುವಕರು ಹಣಕ್ಕಾಗಿ ಈ ದಂಧೆಗೆ ಬೇರೆಯವರನ್ನು ಸುಲಭವಾಗಿ ಸೆಳೆಯುತ್ತಿರುವುದು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತೀಯ ಸೇನೆಯನ್ನು ಸಂಪೂರ್ಣವಾಗಿ ಕೇಸರೀಕರಣ ಮಾಡಬೇಕು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೇಳಿದ್ದಾರೆ ಎಂದು ಪ್ರತಿಪಾದಿಸುತ್ತಾ, ಭಾಗವತ್ ಅವರು ಮಾತನಾಡುತ್ತಿರುವ 39 ಸೆಕೆಂಡುಗಳ ವಿಡಿಯೊ ತುಣುಕೊಂದನ್ನು ದಿ ವಿಶಲ್ ಬ್ಲೋವರ್ ಎಂಬ 'ಎಕ್ಸ್' ಖಾತೆಯಲ್ಲಿ (@InsiderWB) ಪೋಸ್ಟ್ ಮಾಡಲಾಗಿದೆ. ಆದರೆ, ಇದು ಸುಳ್ಳು.

ಮೂಲ ವಿಡಿಯೊಗಾಗಿ ಇಂಟರ್‌ನೆಟ್‌ನಲ್ಲಿ ಹುಡುಕಿದಾಗ ಸಿಎನ್‌ಎನ್-ನ್ಯೂಸ್18ನ ಯೂಟ್ಯೂಬ್ ಖಾತೆಯಲ್ಲಿ 2025ರ ಡಿಸೆಂಬರ್ 21ರಂದು ಅಪ್‌ಲೋಡ್ ಮಾಡಲಾದ ವಿಡಿಯೊ ಸಿಕ್ಕಿತು. ಈಗ 'ಎಕ್ಸ್'ನಲ್ಲಿ ಹಂಚಲಾದ ವಿಡಿಯೊವನ್ನೇ ಅದು ಹೋಲುತ್ತಿತ್ತು. ಮೂಲ ವಿಡಿಯೊದಲ್ಲಿ ಭಾಗವತ್ ಅವರೆಲ್ಲೂ ಸೇನೆಯ ಕೇಸರೀಕರಣದ ಬಗ್ಗೆ ಮಾತನಾಡುವುದಿಲ್ಲ. ಮುಂದುವರಿದ ಭಾಗವಾಗಿ ವಿಡಿಯೊವನ್ನು ಹಿಯಾ ಡೀಪ್‌ಫೇಕ್ ವಾಯ್ಸ್ ಡಿಟೆಕ್ಟರ್ ಟೂಲ್ ಬಳಸಿಕೊಂಡು ಪರಿಶೀಲಿಸಿದಾಗ, ಅದರಲ್ಲಿರುವ ಧ್ವನಿಯು ಡೀಪ್‌ಫೇಕ್ ಎಂಬುದು ದೃಢಪಟ್ಟಿತು. ಮೂಲ ವಿಡಿಯೊದಲ್ಲಿನ ಧ್ವನಿಯನ್ನು ಎಐ ತಂತ್ರಜ್ಞಾನದಲ್ಲಿ ತಿರುಚಿ, ಭಾಗವತ್ ಅವರು ಸೇನೆಯ ಕೇಸರೀಕರಣ ಮಾಡುವಂತೆ ಹೇಳಿದ್ದಾರೆ ಎಂದು ತಪ್ಪಾಗಿ ಬಿಂಬಿಸಲಾಗಿದೆ. ಈ ಹಿಂದೆಯೂ ಇದೇ ಖಾತೆಯಲ್ಲಿ ಭಾರತೀಯ ಸೇನೆಗೆ ಸಂಬಂಧಿಸಿದಂತೆ ಡೀಪ್‌ಫೇಕ್ ವಿಡಿಯೊ ಪೋಸ್ಟ್ ಮಾಡಲಾಗಿತ್ತು ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಪದಬಂಧ 6276

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮರದಲ್ಲಿ ಮಾಡಿದ ಹೆಬ್ಬಾಗಿಲು (4)
3.ಅತಿಯಲ್ಲಿ ದುರ್ಗತಿ! (4)
5.ಅದೇ ತಾನೆ ಲಗ್ನವಾದ ಗಂಡ ಹೆಂಡಿರು (5)
7.ನರಿಯೊಳಗೆ ಉತ್ತಮ ಜಾತಿಯ ಜೇನುತುಪ್ಪ ಸಿಕ್ಕೀತೇ? (3)
9.ರತಿಪತಿಯಿಂದ ಮೂಡಿದ ಆಸೆ (3)
11.ಕದಕ್ಕೆ ಒರಗಿಸಿರುವ ಕೆನ್ನೆ (3)
13.ಸಾಯುವ ಸಮಯವಿದು (5)
15.ಸೆರೆಮನೆ ಇಲ್ಲಿದೆ (4)
16.ಕತ್ತು ಕೊನೆಗಿರಿಸಿ ಮಾಡಿದ ಜೋಡಣೆ! (4)

ಮೇಲಿಂದ ಕೆಳಕ್ಕೆ

1.ಓಟನ್ನು ನೀಡುವಿಕೆ (4)
2.ರಸ ಒಸರುವ ನಾಲಿಗೆ (3)
4.ಗರ ಬಡಿದಂತಿರುವ ಪತಿವ್ರತೆ (3)
6.ದಂಡ ನೀಡಿ ಶಿಕ್ಷಿಸುವುದು (3)
8.ತಿರುಳು ಇಲ್ಲಿದೆ (2)
9.ಕಾಣದಂತೆ ಇರುವ ಉದ್ದೇಶ! (3)
10.ಕಂದಕದಲ್ಲಿರುವ ಮಗು! (2)
12.ಬಿಡುವು ಈ ರೀತಿ ಬಂದಿದೆ (4)
13.ಬಿಡದಿ ಹತ್ತಿರವಿರುವ ಪತ್ನಿ (3)
14.ಜನಪದರ ಮಾತಲ್ಲಿನ ಸಿರಿದೇವತೆ (3)



6275ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಅವಲೋಕನ 5.ಅಜ್ಜ 6.ಕಡ 7.ಧಮನಿ 8.ಹರವಿ 10.ರೀತಿ 11.ರಮಣಿ 12.ರೆನೀ 13.ಹಂತಕ 15.ಕಲ್ಯಾಣ 16.ಮಾಸ 17.ವಾರ 19.ವ್ಯವಕಲನ

ಮೇಲಿಂದ ಕೆಳಕ್ಕೆ:

1.ವರಕವಿ 3.ಕರು 4.ವಿರಹ 5.ಅನಿರೀಕ್ಷಿತ 7.ಧರಣಿ 9.ರಜನೀಕರ 11.ರಮಣ 13.ಹಂಸತೂಲ 14.ಕಗ್ಗೊಲೆ 18.ರವ

ಸುಡೊಕು 6660

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			3		1		6
4		9						
	1		7	6	2		5	4
		3	5		6	4		
	4			2			6	7
		5	1		7	3		
	8		6			2		3
2		6			3			
	3	4		7		6		

6659 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಪ್ರತಿಭೆಗೆ ಪರಿಶ್ರಮ ಬೆರೆತಾಗ

ನುಡಿ ಬೆಳಗು

ದೀಪಾ ಹಿರೇಗುತ್ತಿ

ಚೆನ್ನೈನ ಪುಟ್ಟ ಓಣಿಯ ಹುಡುಗಿಯವಳು. ಮೂಟೆ ಹೊರುವ ಕೆಲಸ ಮಾಡುತ್ತಿದ್ದ ಅಪ್ಪನಿಗೆ ಕೇರಂ ಇಷ್ಟ. ಮೂರು ವರ್ಷದ ಹುಡುಗಿಗೆ ತಂದೆ ಕೇರಂ ಆಡಲು ಹೇಳಿಕೊಟ್ಟರು. ಈಕೆಯೂ ಕಲಿತಳು. ಆದರೆ ಹನ್ನೆರಡರ ವಯಸ್ಸಿಗೆ ಬರುತ್ತಿದ್ದಂತೆ ತಂದೆ ಇಲ್ಲವಾದರು. ಮನೆಯಲ್ಲಿ ಬಡತನ ಎಷ್ಟಿತ್ತೆಂದರೆ ಶಾಲೆ ಬಿಟ್ಟು ಈ ಹುಡುಗಿ ಸ್ಟೀಲ್ ವರ್ಕ್‌ಶಾಪ್‌ನಲ್ಲಿ ಕೆಲಸ ಶುರು ಮಾಡಬೇಕಾಯಿತು. ಸ್ನೇಹಿತರು ಶಾಲೆಗೆ ಹೋದರೆ ಈಕೆ ಕೆಲಸಕ್ಕೆ ಹೋಗಬೇಕಿತ್ತು. ಆದರೆ ಆಕೆ ಕೇರಂ ಆಡುವುದನ್ನು ಬಿಡಲಿಲ್ಲ. ಕೇರಂ ಅವಳ ಸೋತ ದೇಹ ಮತ್ತು ಮನಸ್ಸುಗಳಿಗೆ ಸಮಾಧಾನ ತರುತ್ತಿತ್ತು. ಈ ಆಟವನ್ನು ಅವಳು ಹೃದಯಕ್ಕೆ ಹಚ್ಚಿಕೊಂಡು ಆಡುತ್ತಿದ್ದಳು. ಕೆಲಸದ ಅವಧಿ ದೀರ್ಘವಾಗಿತ್ತು. ಆದರೂ ಸಮಯ ಮಾಡಿಕೊಂಡು ಸಣ್ಣಪುಟ್ಟ ಕೇರಂ ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿದ್ದಳು. ಅವುಗಳಲ್ಲಿ ಗೆದ್ದಾಗ ಸಿಗುವ ಹಣ ಕುಟುಂಬದ ಖರ್ಚಿಗಾಗುತ್ತಿತ್ತು. ಈ ಗೆಲುವು ಕೇರಂ ಆಟದ ಬಗೆಗಿನ ಅವಳ ಕನಸುಗಳು ವಿಸ್ತಾರವಾಗುತ್ತಲೇ ಹೋಗಲು ಸಹ ಕಾರಣವಾಯಿತು. ನಿತ್ಯರಾಜನ್ ಎನ್ನುವವರು ತಮ್ಮ ಮಗನ ಜತೆ ಆಡಿದ ಕೀರ್ತನಾಳ ಪ್ರತಿಭೆಯನ್ನು ಗುರುತಿಸಿ ಅವಳಿಗೆ ಸಹಾಯ ಮಾಡಿದರು. ಕೀರ್ತನಾಳಿಗೆ ಆಡುವ ಅವಕಾಶ ಸಿಕ್ಕು ಅವಳು ತನ್ನ ಬದುಕೇ ಕೇರಂ ಮೇಲೆ ನಿಂತಿದೆಯೇನೋ ಎಂಬಂತೆ ಆಡತೊಡಗಿದಳು.

ಅಬ್ದುಲ್ ಕಲಾಂ ಹೇಳಿದಂತೆ ಆಕೆ ದೊಡ್ಡ ಕನಸನ್ನೇ ಕಂಡಿದ್ದಳು. ಒಂದೆಡೆ ಹೊಟ್ಟೆ ತುಂಬಿಸಿಕೊಳ್ಳಲು ದುಡಿಯುತ್ತಲೇ ತನ್ನ ಕನಸಿಗಾಗಿಯೂ ಕಷ್ಟಪಟ್ಟಳು. ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಎರಡು ಚಿನ್ನ ಗೆದ್ದಳು. ಅವಳ ಕನಸು ಬೆಳೆಯುತ್ತಿತ್ತು. ಕೇರಂ ಆಟದ ಅವಧಿ ರಾತ್ರಿಯನ್ನು ಹಿಗ್ಗಿಸುತ್ತಿತ್ತು. ಬೆಳಿಗ್ಗೆ ನಾಲ್ಕು ಗಂಟೆಗೆ ಮತ್ತೆ ಅಭ್ಯಾಸ ಮಾಡಲು ಕೂರುತ್ತಿದ್ದಳು. ಆ ಪ್ರಯತ್ನ ಆಕೆಯನ್ನು 2025ರ ಡಿಸೆಂಬರ್ ಮೊದಲ ವಾರದಲ್ಲಿ ಮಾಲ್ಡೀವ್ಸ್‌ನಲ್ಲಿ ನಡೆದ ಏಳನೇ ಕೇರಂ ವಿಶ್ವ ಚಾಂಪಿಯನ್‌ಶಿಪ್‌ವರೆಗೆ ಕರೆದುಕೊಂಡು ಹೋಯಿತು. ಮಾತ್ರವಲ್ಲ, ಮಹಿಳಾ ಸಿಂಗಲ್ಸ್‌ನಲ್ಲಿ, ಡಬಲ್ಸ್‌ನಲ್ಲಿ, ಮಹಿಳಾ ತಂಡ ಸ್ಪರ್ಧೆಯಲ್ಲಿ ಗೆಲುವು ತಂದುಕೊಟ್ಟಿತು. ಎಲ್ಲ ವಿಭಾಗಗಳಲ್ಲೂ ಗೆದ್ದು ಮೂರು ಚಿನ್ನದ ಪದಕ ಗಳಿಸಿದ ಈ ಅಪ್ರತಿಮ ಸಾಧಕಿಗೆ ವಿಶ್ವ ಚಾಂಪಿಯನ್ ಗೌರವ ಲಭಿಸಿತು. ತಮಿಳುನಾಡಿನ ಮುಖ್ಯಮಂತ್ರಿ ಈಕೆಗೆ ಒಂದು ಕೋಟಿ ಬಹುಮಾನವನ್ನು ನೀಡಿ ಪ್ರೋತ್ಸಾಹಿಸಿದರು ಕೂಡ.

ಎಲ್.ಕೀರ್ತನಾ ಎಂಬ ಹೆಸರಿನ ಇಪ್ಪತ್ತೊಂದು ವರ್ಷದ ಈ ಯುವತಿ ಈಗ ವಿಶ್ವ ಚಾಂಪಿಯನ್ ಟ್ರೋಫಿಯ ಮೂಲಕ ಕೇವಲ ತನ್ನ ಕನಸುಗಳನ್ನು ಮಾತ್ರ ನನಸಾಗಿಸಿಕೊಂಡಿಲ್ಲ. ಕನಸು ಕಾಣುವ ಅನೇಕ ಮಕ್ಕಳಿಗೆ ಅದರಲ್ಲೂ ತುತ್ತಿನ ಚೀಲ ತುಂಬಿಸಿಕೊಳ್ಳುವ ಕಾಯಕದಲ್ಲಿ ಬಿದ್ದು ಕನಸುಗಳನ್ನು ಕಾಣದ ಅಥವಾ ಕಂಡರೂ ಅವನ್ನು ಮರೆತುಬಿಡುವ ಪರಿಸ್ಥಿತಿಯಲ್ಲಿರುವವರಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಅಷ್ಟೇ ಅಲ್ಲ, ಬೇರೆಯವರೂ ಈ ಸಾಧನೆ ಮಾಡಲು ಸಹಾಯ ಮಾಡುವುದಾಗಿ ಹೇಳಿರುವ ಕೀರ್ತನಾ ತಮ್ಮಂತಹ ಆಟಗಾರರು ಬಹಳಷ್ಟು ಮಂದಿ ಇದ್ದಾರೆ, ಅವರೂ ಗೆಲ್ಲಬೇಕು ಎಂದಿದ್ದಾರೆ.

ಸಾಧನೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಮನಸ್ಸಿದ್ದಲ್ಲಿ ಮಾರ್ಗವಿದ್ದೇ ಇದೆ. ಪ್ರತಿಭೆಗೆ ಪೂರಕವಾಗಿ ಪರಿಶ್ರಮವೂ ಸೇರಿದರೆ ಅದ್ಭುತಗಳು ಸಾಧ್ಯ. ಕೀರ್ತನಾರಂತಹ ಸಾಧಕಿಯರು ಈ ಮಾತಿಗೆ ಉದಾಹರಣೆಯಾಗುತ್ತಾರೆ. ಮತ್ತು ಕತ್ತಲಲ್ಲಿರುವ ಅದೆಷ್ಟೋ ಮಂದಿಗೆ ಮೋಡದಂಚಿನ ಬೆಳ್ಳಿರೇಖೆಯೂ ಆಗುತ್ತಾರೆ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

06 ಜನವರಿ 2026 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ತೃತೀಯ ಗಂ 8-02 ನಕ್ಷತ್ರ: ಆಶ್ಲೇಷ ಗಂ 12-18 ಯೋಗ: ಪ್ರೀತಿ ಗಂ. 20-22 ಕರಣ: ವಿಷ್ಠಿ ಗಂ. 8-02 ನಂತರ, ಬವ ಗಂ 19-22 ಧನು ಮಾಸದ 22 ನೇ ದಿನ. ಮಳೆ ನಕ್ಷತ್ರ : ಪೂರ್ವಾಷಾಢ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 ಸೂರ್ಯೋದಯ : 06-59 ಸೂರ್ಯಾಸ್ತ : 06-13, ಮುಸ್ಲಿಂ ದಿನಾಂಕ : 16 ರಜಬ್, ದಿನ ವಿಶೇಷ : ಸಂಕಷ್ಟಹರ ಚತುರ್ಥಿ, ಅದೃಷ್ಟ ಸಂಖ್ಯೆ : 7, 8

ಮೇಷ: ದೇಹದಲ್ಲಾಗುವ ಚಿಕ್ಕ ಪುಟ್ಟ ಬದಲಾವಣೆಗಳು ತೊಂದರೆಯನ್ನು ಉಂಟು ಮಾಡಬಹುದು. ದೇಹಕ್ಕೆ ಬೇಕಾದ ವಿಶ್ರಾಂತಿಯನ್ನು ಕೊಡಲು ಯೋಚಿಸಿ. ಸಂತುಷ್ಟರಾಗುವಿರಿ.

ವೃಷಭ: ಅನಾರೋಗ್ಯಕ್ಕೆ ತುತ್ತಾದರೆ ಚೇತರಿಸಿಕೊಳ್ಳುವಿರಿ. ಯುವಕರು ಸಮಾಜ ಸೇವೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುವಿರಿ. ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಜೀವದಾನ ಮಾಡುವಿರಿ.

ಮಿಥುನ: ವಾತಾವರಣದ ಬದಲಾವಣೆಯಿಂದ ಉಂಟಾದ ವ್ಯಾಧಿಗಳಿಗೆ ಆದಷ್ಟು ಬೇಗ ಔಷಧಿಯನ್ನು ಮಾಡಿಕೊಳ್ಳಿ. ಮನೆಯ ವ್ಯಕ್ತಿಗಳೊಂದಿಗೆ ಮುನಿಸಿಕೊಳ್ಳಬೇಡಿ. ಕೈ ತಪ್ಪಿದ ಅವಕಾಶಗಳು ದೊರೆಯಲಿವೆ.

ಕರ್ಕಾಟಕ: ರಾಜಕೀಯ ವ್ಯಕ್ತಿಗಳಿಗೆ ಜನರ ಬೆಂಬಲದ ಮತ್ತು ಆರ್ಥಿಕತೆಯ ಕೊರತೆ ಕಾಡಲಿದೆ. ಅವಿವಾಹಿತರಿಗೆ ಕುಟುಂಬದವರು ನೋಡುವ ಯಾವ ಸಂಬಂಧಗಳು ಸಹ ಸರಿ ಹೋಗದೆ ಇರಬಹುದು.

ಸಿಂಹ: ಪ್ರಮುಖ ವಿಚಾರಗಳಲ್ಲಿ ಎಲ್ಲರ ಅಭಿಪ್ರಾಯವನ್ನೂ ಕೇಳಿ ತೀರ್ಮಾನಿಸುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ. ಕೆಲಸಮಾಡುವ ಸ್ಥಳದಲ್ಲಿ ಕೆಲವು ಬದಲಾವಣೆ ಮಾಡುವುದು ಉತ್ತಮ.

ಕನ್ಯಾ: ಅನಿರೀಕ್ಷಿತವಾಗಿ ಹಾಗೂ ಅನಿವಾರ್ಯವಾಗಿ ಸಂಘ-ಸಂಸ್ಥೆಗಳ ಜವಾಬ್ದಾರಿಯ ಅಧಿಕಾರ ವಹಿಸಬೇಕಾಗುವುದು. ಘಟನಾವಳಿಗಳು ಶಕುನಗಳಂತೆ ಕಂಡು ದುರ್ಘಟನೆಗಳಿಂದ ಪಾರಾಗುವಿರಿ.

ತುಲಾ: ಮನೆಯಲ್ಲಿ ನೆಮ್ಮದಿಯನ್ನು ಕಾಪಾಡುವ ಕಾರಣಕ್ಕಾಗಿ ಹಿರಿಯರನ್ನು ಸುಮ್ಮನಿರಿಸುವಂಥ ಕೆಲಸವನ್ನು ಮಾಡುವಿರಿ. ಜಾಗ ಖರೀದಿಸಲು ಅಥವಾ ಒಪ್ಪಂದಕ್ಕೆ ಸಹಿ ಹಾಕಲು ಸುದಿನ. ಆತ್ಮವಿಶ್ವಾಸ ವೃದ್ಧಿಯಾಗುವುದು.

ವೃಶ್ಚಿಕ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಬಂದಿರುವ ಸಲಹೆ ಸರಿಯಾದದ್ದಾಗಿರುತ್ತದೆ. ಗುಪ್ತಚರ ದಳ ಮಂದಿಗೆ ಕಾರ್ಯಭಾರಗಳು ಹೆಚ್ಚಲಿವೆ.

ಧನು: ಕಷ್ಟವಾಗಿದ್ದರೂ ವೈಯಕ್ತಿಕ ಕಾರ್ಯಗಳನ್ನು ಸಾಧಿಸಿಕೊಳ್ಳುವ ಸಲುವಾಗಿ ಯಾವುದೇ ತರಹದ ವಾಮಮಾರ್ಗವನ್ನು ಹಿಡಿಯಬೇಡಿ. ಉನ್ನತ ಪೊಲೀಸ್ ಅಧಿಕಾರಿಗಳಿಗೆ ಸಂತಸದ ಸುದ್ದಿ ಕೇಳುವಂತಾಗಲಿದೆ.

ಮಕರ: ವ್ಯವಹಾರದಲ್ಲಿ ಸಂಭವಿಸುವ ಲಾಭನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಮನಸ್ಸು ಬರಲಿದೆ. ನಿರೀಕ್ಷಿತ ಯಶಸ್ಸು ಪಡೆಯುವಲ್ಲಿ ತೊಡಕು ಇರಲಿದೆ. ಮನೆಯೇ ಸೌಖ್ಯವೆಂದು ಅನಿಸಲಿದೆ.

ಕುಂಭ: ಅಧಿಕವಾಗಿ ಎಣ್ಣೆಯಲ್ಲಿ ಕರಿದ ಪದಾರ್ಥ ದೇಹಪ್ರಕೃತಿಗೆ ಸರಿ ಹೊಂದುವುದಿಲ್ಲ. ಹಾಗಾಗಿ ಸಮಾರಂಭದ ಊಟದಲ್ಲಿ ಜಾಗ್ರತೆ ವಹಿಸಿ. ಸಾಂಸಾರಿಕವಾಗಿ ಸುಖ ಹಾಗೂ ನೆಮ್ಮದಿ ಇರಲಿದೆ.

ಮೀನ: ಕಾರಣವು ನಿಮಗೆ ತಿಳಿಯದೇ ಹೋದರೂ ತಂದೆ ತಾಯಿಯರ ಮುನಿಸು ಸಮಂಜಸವಾಗಿಯೇ ಇರುತ್ತದೆ. ಹೂವು ಹಣ್ಣಿನ ವ್ಯಾಪಾರಿಗಳಿಗೆ ಲಾಭದ ದಿನ. ಯೋಗಾಭ್ಯಾಸ ಮನೋಲ್ಲಾಸ ಹೆಚ್ಚಿಸುತ್ತದೆ.

ಈಟ್‌ರೈಟ್ ಸೌಲಭ್ಯ ಆರಂಭಿಸಿದ ಸ್ವಿಗ್ಗಿ

ನವದೆಹಲಿ (ಪಿಟಿಐ): ಆರೋಗ್ಯದ ಮೇಲೆ ಹೆಚ್ಚಿನ ಗಮನ ನೀಡುವ ಗ್ರಾಹಕರನ್ನು ಗಮನದಲ್ಲಿ ಇರಿಸಿಕೊಂಡು 'ಈಟ್‌ರೈಟ್' ಹೆಸರಿನ ಸೇವೆಯನ್ನು ಐವತ್ತು ನಗರಗಳಲ್ಲಿ ಆರಂಭಿಸಿರುವುದಾಗಿ ಸ್ವಿಗ್ಗಿ ಸೋಮವಾರ ಹೇಳಿದೆ.

ಈ ಸೌಲಭ್ಯದ ಅಡಿಯಲ್ಲಿ ಗ್ರಾಹಕರಿಗೆ ಹೆಚ್ಚು ಪ್ರೊಟೀನ್ ಇರುವ, ಕಡಿಮೆ ಕ್ಯಾಲರಿಯ, ಹೆಚ್ಚುವರಿಯಾಗಿ ಸಕ್ಕರೆಯನ್ನು ಸೇರಿಸಿಲ್ಲದ ಖಾದ್ಯಗಳನ್ನು ಒದಗಿಸಲಾಗುತ್ತದೆ ಎಂದು ತಿಳಿಸಿದೆ.

ಆರೋಗ್ಯಕ್ಕೆ ಪೂರಕವಾದ ಆಹಾರವನ್ನು ಮನೆಬಾಗಿಲಿಗೆ ತರಿಸಿಕೊಳ್ಳುವಲ್ಲಿ ಎರಡನೆಯ ಹಂತದ ನಗರಗಳು ಒಂದು ವರ್ಷದಲ್ಲಿ ಎರಡು ಪಟ್ಟು ಹೆಚ್ಚು ಬೆಳವಣಿಗೆ ದಾಖಲಿಸಿವೆ. ಚಂಡೀಗಢ, ಗುವಾಹಟಿ, ಲೂಧಿಯಾನಾ ಮತ್ತು ಭುವನೇಶ್ವರ ಇದರಲ್ಲಿ ಮುಂದಿವೆ ಎಂದು ಸ್ವಿಗ್ಗಿ ಪ್ರಕಟಣೆ ತಿಳಿಸಿದೆ. 'ಈಟ್‌ರೈಟ್' ಸೌಲಭ್ಯದ ಅಡಿಯಲ್ಲಿ ಎರಡು ಲಕ್ಷಕ್ಕೂ ಹೆಚ್ಚಿನ ರೆಸ್ಟೊರೆಂಟ್‌ಗಳಿಂದ 18 ಲಕ್ಷಕ್ಕೂ ಹೆಚ್ಚಿನ ಖಾದ್ಯಗಳನ್ನು ತರಿಸಿಕೊಳ್ಳಬಹುದು.



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	26,328
ಇಂದಿನ ಅಂತ್ಯ	26,250
ದಿನದ ಕನಿಷ್ಠ	26,210
	78

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100ಕ್ಕೆ	₹665
	12ಕ್ಕೆ	₹94
ಮೈಸೂರು	100ಕ್ಕೆ	₹670

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)	
ಆರ್‌ಎಸ್‌ಎಸ್-4	₹181.50
ಆರ್‌ಎಸ್‌ಎಸ್-5	₹176.50
ಗುಡ್ ಲಾಟ್	₹164.50

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಕೆ.ಜಿ)	₹405-760
ದ್ವಿತಳಿ (ಕೆ.ಜಿ)	₹301-893

ಮುದ್ರಮನೆ ಕಾಫಿ	
ಎಪಿ	₹26750
ಎಸಿ	₹14560
ಆರ್‌ಪಿ	₹17100
ಆರ್‌ಸಿ	₹9750

ಕಾಡಂಚಿನ ಉತ್ಪನ್ನಕ್ಕೆ ಬ್ರ್ಯಾಂಡ್ ಮೌಲ್ಯ

'ಆನೆಕಾಡು' ಹೆಸರಿನಲ್ಲಿ ಬರಲಿವೆ ಕೃಷಿ ಉತ್ಪನ್ನ • ರೈತರ ಬೆಂಬಲಕ್ಕೆ ನಿಂತ ಅರಣ್ಯ ಇಲಾಖೆ ಅಧಿಕಾರಿಗಳು

• ಓದೇಶ ಸಕಲೇಶಪುರ

ರಾಮನಗರ: ಕಾಡಂಚಿನ ರೈತರ ಕೃಷಿ ಉತ್ಪನ್ನಗಳಿಗೆ ಬ್ರ್ಯಾಂಡ್ ಮೌಲ್ಯ ಒದಗಿಸುವ ವಿಶೇಷ ಪ್ರಯತ್ನಕ್ಕೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಅರಣ್ಯ ಇಲಾಖೆ ಅಧಿಕಾರಿಗಳು ಮುಂದಾಗಿದ್ದಾರೆ.

ಅದಕ್ಕಾಗಿ ಇಲ್ಲಿನ ಪರಿಸರ ಸೂಕ್ಷ್ಮ ವಲಯದ ಗ್ರಾಮಗಳ ಕೃಷಿ ಉತ್ಪನ್ನಗಳನ್ನು 'ಆನೆಕಾಡು' ಎಂಬ ಬ್ರ್ಯಾಂಡ್ ಹೆಸರಿನಲ್ಲಿ ಮಾರುಕಟ್ಟೆಗೆ ಪರಿಚಯಿಸುವ ಯೋಜನೆ ರೂಪಿಸಲಾಗಿದೆ.

ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ವನ್ಯಜೀವಿ ವಲಯದ ಆರ್‌ಎಫ್‌ಒ ಕಚೇರಿಯಲ್ಲಿ ಜ.6ರಂದು 'ಆನೆಕಾಡು' ಉತ್ಪನ್ನಗಳ ಮಾರಾಟಕ್ಕೆ ಚಾಲನೆ ಸಿಗಲಿದೆ. ಪರಿಸರ ಸೂಕ್ಷ್ಮ ವಲಯದ ಕೃಷಿ ಉತ್ಪನ್ನಗಳಿಗೆ ಬ್ರ್ಯಾಂಡ್ ಮೌಲ್ಯ ಒದಗಿಸುವ ಈ ಪ್ರಯತ್ನ ದೇಶದಲ್ಲಿ ಮೊದಲು ಎನ್ನಲಾಗಿದೆ.

ಕಾಡಂಚಿನ ರೈತರನ್ನು ಒಳಗೊಂಡ ಆನೆಕಾಡು ಫಾರ್ಮರ್ಸ್ ಗ್ರೂಪ್ (ಎಎಫ್‌ಜಿ) ರಚಿಸಿ ಗ್ರಾಹಕರು ಮತ್ತು ಎಎಫ್‌ಜಿ ನಡುವೆ ನೇರ ಸಂಪರ್ಕ ಬೆಸೆಯಲಾಗುತ್ತಿದೆ. ಸ್ವಚ್ಛ ಪರಿಸರದಲ್ಲಿ ಬೆಳೆಯುವ ಸಾವಯವ ಮತ್ತು ನೈಸರ್ಗಿಕ ಕೃಷಿ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸಿ ಉತ್ತಮ ಬೆಲೆ ಒದಗಿಸಲು ಹೆಜ್ಜೆ ಇಡಲಾಗಿದೆ.



ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯ ಕೃಷಿ ಭೂಮಿಯಲ್ಲಿ ರಾಗಿ ಬೆಳೆದಿರುವ ರೈತರಿಗೆ 'ಆನೆಕಾಡು' ಉತ್ಪನ್ನದ ಕುರಿತು ತಿಳುವಳಿಕೆ ನೀಡಿದ ಕೋಡಿಹಳ್ಳಿ ವನ್ಯಜೀವಿ ವಲಯದ ಡಿಆರ್‌ಎಫ್‌ಒ. ನಾಗರಾಜು ಜೆ.ಎಂ

ಜೊತೆಗೂಡಿದ ಕಂಪನಿ: 'ಆನೆಕಾಡು' ಉತ್ಪನ್ನಗಳನ್ನು ಆರಂಭದಲ್ಲಿ ಕನಕಪುರ ಆರ್ಗ್ಯಾನಿಕ್ ಪ್ರೊಡ್ಯೂಸ್ ಕಂಪನಿ ಮೂಲಕ ಗ್ರಾಹಕರಿಗೆ ತಲುಪಿಸಲು ನಿರ್ಧರಿಸಲಾಗಿದೆ. ಮಾರುಕಟ್ಟೆ ದರಕ್ಕಿಂತ ಸ್ವಲ್ಪ ಹೆಚ್ಚಿನ ದರ ನೀಡಿ ಕಂಪನಿಯು ರೈತರಿಂದ ನೇರವಾಗಿ ಉತ್ಪನ್ನಗಳನ್ನು ಖರೀದಿಸಲಿದೆ.

Anekadu
'ಆನೆಕಾಡು' ಉತ್ಪನ್ನಗಳ ಚಿಹ್ನೆ

'ಬೆಂಗಳೂರು ಸೇರಿ ವಿವಿಧೆಡೆ ನಡೆಯುವ ರೈತರ ಸಂತೆಗಳಲ್ಲಿ ಈ ಉತ್ಪನ್ನಗಳನ್ನು ಮಾರಲಾಗುವುದು. ಜಂಗಲ್ ರೆಸಾರ್ಟ್‌ಗಳು ಹಾಗೂ ಅರಣ್ಯ ಪ್ರದೇಶದಲ್ಲಿರುವ ಪ್ರವಾಸಿ ತಾಣಗಳಲ್ಲೂ 'ಆನೆಕಾಡು' ಉತ್ಪನ್ನಗಳ ಮಾರಾಟಕ್ಕೆ ಮಳಿಗೆ ಆರಂಭಿಸುವ ಕುರಿತು ಇಲಾಖೆ ಅಧಿಕಾರಿಗಳ ಜೊತೆ ಮಾತುಕತೆ ನಡೆಯುತ್ತಿದೆ' ಎಂದು ಕನಕಪುರ ಆರ್ಗ್ಯಾನಿಕ್ ಪ್ರೊಡ್ಯೂಸರ್ ಕಂಪನಿಯ ಸುಜಯ್ 'ಪ್ರಜಾವಾಣಿ'ಗೆ ತಿಳಿಸಿದರು.

'ಆನೆಕಾಡು' ಯೋಜನೆಯಿಂದ ಅರಣ್ಯದ ಅಂಚಿನ ಕೃಷಿ ಉತ್ಪನ್ನಗಳಿಗೆ ಬ್ರ್ಯಾಂಡ್ ಮೌಲ್ಯದ ಜೊತೆಗೆ, ಉತ್ಪನ್ನಗಳಿಗೆ ಮಾರುಕಟ್ಟೆ ದರಕ್ಕಿಂತಲೂ ಹೆಚ್ಚಿನ ಲಾಭ ಸಿಗಲಿದೆ ಎನ್ನುತ್ತಾರೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಕೋಡಿಹಳ್ಳಿ ವನ್ಯಜೀವಿ ವಲಯದ ಆರ್‌ಎಫ್‌ಒ ಅಂಥೋನಿ ರೇಗೊ.

77 ಗ್ರಾಮ, 16 ಹಾಡಿ ವ್ಯಾಪ್ತಿ

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಆವರಣದ ಗರಿಷ್ಠ ಒಂದು ಕಿ.ಮೀ. ಪರಿಧಿಯ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ (ಇಎಸ್‌ಝಡ್) ಎಂದು ಘೋಷಿಸಲಾಗಿದೆ. ಆನೇಕಲ್, ಹಾರೋಹಳ್ಳಿ, ಕನಕಪುರ ತಾಲ್ಲೂಕಿನ ಅರಣ್ಯ ಪ್ರದೇಶಗಳು ಇದರ ವ್ಯಾಪ್ತಿಗೆ ಬರಲಿವೆ.

'ಇಲ್ಲಿ 77 ಗ್ರಾಮ, 16 ಹಾಡಿಗಳಿವೆ. ಈ ಪ್ರದೇಶದಲ್ಲಿ ಕೃಷಿ ಹೊರತುಪಡಿಸಿ ಪರಿಸರಕ್ಕೆ ಮಾರಕವಾಗುವ ಯಾವುದೇ ಚಟುವಟಿಕೆ ನಡೆಸುವಂತಿಲ್ಲ. ಇಲ್ಲಿನ ಕೃಷಿ ಉತ್ಪನ್ನಗಳನ್ನು 'ಆನೆಕಾಡು' ಬ್ರ್ಯಾಂಡ್ ಹೆಸರಿನಲ್ಲಿ ಗ್ರಾಹಕರಿಗೆ ತಲುಪಿಸಲು ಯೋಜನೆ ರೂಪಿಸಲಾಗಿದೆ.

ರೈತರು ಮತ್ತು ಗ್ರಾಹಕರ ಸ್ನೇಹದ ಆಧಾರಿತ ಯೋಜನೆಯನ್ನು ಮತ್ತಷ್ಟು ವಿಸ್ತರಿಸುವ ಆಲೋಚನೆ ಇದೆ' ಎಂದು ಉದ್ಯಾನವನದ ಕೋಡಿಹಳ್ಳಿ ವನ್ಯಜೀವಿ ವಲಯದ ಡಿಆರ್‌ಎಫ್‌ಒ. ನಾಗರಾಜು ಜೆ.ಎಂ 'ಪ್ರಜಾವಾಣಿ'ಗೆ ತಿಳಿಸಿದರು.

ಅರಣ್ಯದ ಅಂಚಿನ ಕೃಷಿ ಉತ್ಪನ್ನಗಳಿಗೆ ಬ್ರ್ಯಾಂಡ್ ಮೌಲ್ಯದ ಜೊತೆಗೆ ಉತ್ತಮ ಬೆಲೆ ಸಿಕ್ಕರೆ ರೈತರ ಬದುಕು ಹಸನಾಗಲಿದೆ
ಮಂಗೇಶ್, ಅಧ್ಯಕ್ಷ, ಆನೆಕಾಡು ಫಾರ್ಮರ್ಸ್ ಗ್ರೂಪ್

ಸದ್ಯ ಅಲಸಂದೆ, ರಾಗಿ, ಅವರೆಕಾಳು, ಹುರುಳಿಕಾಳು, ಎಳ್ಳು, ಜೇನು, ಬೆಟ್ಟದ ನೆಲ್ಲಿಕಾಯಿ ಉತ್ಪನ್ನಗಳನ್ನು 'ಆನೆಕಾಡು' ಬ್ರ್ಯಾಂಡ್ ಹೆಸರಿನಲ್ಲಿ ಮಾರುಕಟ್ಟೆಗೆ ಪರಿಚಯಿಸಲಾಗುತ್ತಿದೆ
ಸುಜಯ್, ಕನಕಪುರ ಆರ್ಗ್ಯಾನಿಕ್ ಪ್ರೊಡ್ಯೂಸ್ ಕಂಪನಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮುಂಬೈ ಧಾರಣೆ (ಶೇಂಗಾ) 05-01-2026	
ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1595)
ಒಂದು ವಾರದ ಡೆಲಿವರಿ	1595 (1590)
ಪಾಮ್ ವಾರದ ಡೆಲಿವರಿ	1248 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1435 (1430)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,35,500 (1,33,700)
ಬೆಳ್ಳಿ ಕೆ.ಜಿಗೆ	2,37,000 (2,32,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1590 (1585)
ಸೋಯಾ (ರಿಫೈನ್ಡ್)	₹1290 (1290)
ಸೂರ್ಯಕಾಂತಿ (ರಿಫೈನ್ಡ್)	₹1495 (1495)
ಪಾಮೋಲಿನ್	₹1250 (1255)

ಶಿವಗಣರಾಧನೆ

ಲಿಂಗೈಕ್ಯ ಆರ್. ಹಾಲಾವತಿ
ನಿಧನ: 20-12-2025
ಇವರ ಆತ್ಮಕ್ಕೆ ಶಾಂತಿಯನ್ನು ಕೋರುವ:
ಪತಿ ಶ್ರೀ ಸಿ. ರಾಜಶೇಖರ್ ||ನಿ|| ಇಂಜಿನಿಯರ್ ಮತ್ತು ||ಸಂ||ಅ||ತಾ|| ಸುಬ್ರಾಯಿಗೌಡರ ವಂಶಸ್ಥರು ಶ್ರೀಮತಿ ಲತಾ ಗಂಗಾಧರ್ ಇವರ ಮಗಳು ಮತ್ತು ಡಾ|| ಗಂಗಾಧರ್‌ರವರ ವಂಶಸ್ಥರು

ಜನವರಿ 9ರಿಂದ ಬಿಸಿಸಿಎಲ್ ಐಪಿಒ

ನವದೆಹಲಿ (ಪಿಟಿಐ): ಸಾರ್ವಜನಿಕರಿಗೆ ಷೇರು ಮಾರಾಟ (ಐಪಿಒ) ಮಾಡುವ ಮೂಲಕ ₹1,071 ಕೋಟಿ ಬಂಡವಾಳ ಸಂಗ್ರಹಿಸಲು ಭಾರತೀಯ ಕಲ್ಲಿದ್ದಲು ನಿಗಮದ ಅಂಗಸಂಸ್ಥೆ 'ಭಾರತ್ ಕೋಕಿಂಗ್ ಕೋಲ್ ಲಿಮಿಟೆಡ್' (ಬಿಸಿಸಿಎಲ್) ಮುಂದಾಗಿದೆ.

ಪ್ರತಿ ಷೇರಿನ ಬೆಲೆಯನ್ನು ₹21–₹23ಕ್ಕೆ ನಿಗದಿಪಡಿಸಿದೆ. ಜನವರಿ 9ರಿಂದ 13ರವರೆಗೆ ಷೇರುಗಳಿಗೆ ಬಿಡ್ ಸಲ್ಲಿಕೆಗೆ ಅವಕಾಶ ಇರಲಿದೆ ಎಂದು ಕಂಪನಿ ಸೋಮವಾರ ತಿಳಿಸಿದೆ. ಆರಂಭಿಕ ಹೂಡಿಕೆದಾರರು (ಆ್ಯಂಕರ್ ಇನ್‌ವೆಸ್ಟರ್ಸ್) ಜನವರಿ 8ರಂದು ಐಪಿಒಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದೆ.

ಆಫರ್ ಫಾರ್ ಸೇಲ್ ಮೂಲಕ 46.57 ಕೋಟಿ ಷೇರುಗಳನ್ನು ಮಾರಾಟ ಮಾಡಲಿದೆ. ಇದು ಈ ವರ್ಷದ ಮೊದಲ ಐಪಿಒ ಆಗಿದೆ.

ಒಟ್ಟು ಷೇರುಗಳ ಪೈಕಿ ಶೇ 50ರಷ್ಟು ಷೇರುಗಳನ್ನು ಅರ್ಹ ಸಾಂಸ್ಥಿಕ ಹೂಡಿಕೆದಾರರಿಗೆ (ಕ್ಯುಐಬಿ) ಮೀಸಲಿರಿಸಲಾಗಿದೆ. ಶೇ 35ರಷ್ಟು ಷೇರುಗಳನ್ನು ಸಾಂಸ್ಥಿಕೇತರ ಹೂಡಿಕೆದಾರರು ಮತ್ತು ಶೇ 15ರಷ್ಟು ಷೇರುಗಳನ್ನು ರಿಟೇಲ್ ಹೂಡಿಕೆದಾರರಿಗೆ ಮೀಸಲಾಗಿ ಇಡಲಾಗಿದೆ ಎಂದು ತಿಳಿಸಿದೆ.



B.R. VISWANATH SETTY
(April 2, 1952 - January 4, 2026)

We are deeply saddened by the untimely demise of Sri. B R Viswanath Setty, President of Vasavi Educational Trust. He was an illustrious and visionary leader, noble and kind hearted soul, selfless and Philanthropic personality who forever lives in the hearts of all us. On behalf of the Governing Council, Trustees, Faculty and Students, we extend our heartfelt condolences to the bereaved family.

The loss is irreparable, and words are inadequate to express the grief felt at this moment. We pray that the Almighty grants eternal peace to the departed soul and gives us the strength and courage to bear this profound loss.

Homage could be paid to the departed soul
06/01/2026 Tuesday, between 8.00 am and 12.00 noon
VET School - 14th Main, J P Nagar, Bengaluru 560078

Hon Secretary - Manandi N. Suresh
and Governing Council Members

ಕಾಸ್ಮೋಸ್ ಬ್ಯಾಂಕ್‌ನಲ್ಲಿ ನ್ಯಾಷನಲ್ ಬ್ಯಾಂಕ್ ವಿಲೀನಕ್ಕೆ ವರ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಸ್ಮೋಸ್ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ಬೆಂಗಳೂರಿನ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ವಿಲೀನವಾಗಿ ಒಂದು ವರ್ಷ ಪೂರ್ಣಗೊಂಡಿದೆ' ಎಂದು ಕಾಸ್ಮೋಸ್ ಬ್ಯಾಂಕ್‌ನ ಅಧ್ಯಕ್ಷ ಪ್ರಹ್ಲಾದ್ ಕೋಕರೆ ಹೇಳಿದ್ದಾರೆ.

ಎಲ್ಲ ಸದಸ್ಯರು, ಠೇವಣಿದಾರರು ಮತ್ತು ಖಾತೆದಾರರು ಕಾಸ್ಮೋಸ್ ಬ್ಯಾಂಕ್‌ನಲ್ಲಿ ಸಂಪೂರ್ಣ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಬ್ಯಾಂಕ್‌ನ ಠೇವಣಿ ಯೋಜನೆಗಳು ಮತ್ತು ಬಂಡವಾಳದಲ್ಲಿ ಚೇತರಿಕೆ ಕಂಡು ಬರುತ್ತಿದೆ ಎಂದು ಹೇಳಿದ್ದಾರೆ.

120 ವರ್ಷಗಳ ಇತಿಹಾಸ ಹೊಂದಿರುವ ಕಾಸ್ಮೋಸ್ ಬ್ಯಾಂಕ್, ಏಳು ರಾಜ್ಯಗಳಲ್ಲಿ 183 ಶಾಖೆಗಳನ್ನು ನಿರ್ವಹಣೆ ಮಾಡುತ್ತಿದೆ. 2025ರ ಡಿಸೆಂಬರ್ ಅಂತ್ಯಕ್ಕೆ ಬ್ಯಾಂಕ್‌ನ ಒಟ್ಟು ವ್ಯವಹಾರ ₹39,900 ಕೋಟಿ ದಾಟಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಕಳೆದ ವರ್ಷ 3,575 ಹೊಸ ಚಾಲ್ತಿ ಮತ್ತು ಉಳಿತಾಯ ಖಾತೆ ಹಾಗೂ 4,372 ಹೊಸ ಆರ್.ಡಿ ಖಾತೆ ತೆರೆಯಲಾಗಿದೆ' ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕಿ ಅಪೇಕ್ಷಿತಾ ತಿಪ್ಸೆ ಹೇಳಿದ್ದಾರೆ.

ಅಡಿಕೆ ಧಾರಣೆ

ಕುಮಟಾ	
ಚಾಲಿ	44059-49999
ಚಿಪ್ಪು	27899-35099
ಕೋಕ	12569-29999
ಫ್ಯಾಕ್ಟರಿ	9089-24840
ಹೊಸಚಾಲಿ	37869-43863
ಪುತ್ತೂರು	
ಕೋಕ	20000-35500
ಹೊಸತು	26000-44000
ಹಳತು	45000-53500
ಸಾಗರ	
ಬಿಳಿಗೋಟು	18999-37599
ಚಾಲಿ	23129-45170
ಕೋಕ	10666-34499
ಕೆಂಪುಗೋಟು	10139-43499
ರಾಶಿ	53019-61110

ಸಿಪ್ಪೆಗೋಟು	8299-24399
ಶಿವಮೊಗ್ಗ	
ಬೆಟ್ಟೆ	50399-66339
ಗೊರಬಲು	19001-42501
ರಾಶಿ	48199-59286
ಸರಕು	58099-95396
ಸಿದ್ದಾಪುರ	
ಬಿಳಿಗೋಟು	30109-36689
ಚಾಲಿ	41719-48944
ಕೋಕ	20899-31119
ಹೊಸಚಾಲಿ	36019-42819
ಕೆಂಪುಗೋಟು	21899-34469
ರಾಶಿ	51199-57089
ತಟ್ಟಿಬೆಟ್ಟೆ	36089-45149

ಶಿರಸಿ	
ಬೆಟ್ಟೆ	45299-52409
ಬಿಳಿಗೋಟು	28309-40699
ಚಾಲಿ	44399-50699
ಕೆಂಪುಗೋಟು	23601-36299
ರಾಶಿ	52119-58889
ಯಲ್ಲಾಪುರ	
ಆಪಿ	66415-75299
ಬಿಳಿಗೋಟು	16690-36440
ಕೋಕ	15900-26899
ಹಳೆಚಾಲಿ	39121-49725
ಹೊಸಚಾಲಿ	37609-42099
ಕೆಂಪುಗೋಟು	16009-37399
ರಾಶಿ	52119-62965
ತಟ್ಟಿಬೆಟ್ಟೆ	42904-52200

27ಕ್ಕೆ ಬ್ಯಾಂಕ್ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ನೌಕರರಿಗೆ ವಾರದಲ್ಲಿ ಐದು ದಿನ ಮಾತ್ರ ಕೆಲಸ ನಿಗದಿ ಮಾಡಬೇಕು ಎಂಬ ಆಗ್ರಹದೊಂದಿಗೆ ಬ್ಯಾಂಕ್ ನೌಕರರು ಜನವರಿ 27ರಂದು ದೇಶದಾದ್ಯಂತ ಒಂದು ದಿನದ ಮುಷ್ಕರ ನಡೆಸಲಿದ್ದಾರೆ ಎಂದು ಭಾರತೀಯ ರಾಷ್ಟ್ರೀಯ ಬ್ಯಾಂಕ್ ಉದ್ಯೋಗಿಗಳ ಒಕ್ಕೂಟದ (ಐಎನ್‌ಬಿಇಎಫ್) ಉಪ ಪ್ರಧಾನ ಕಾರ್ಯದರ್ಶಿ ಎಂ.ಕೆ. ನರಸಿಂಹ ಮೂರ್ತಿ ತಿಳಿಸಿದ್ದಾರೆ.

ಈ ಮುಷ್ಕರವು ಪೂರ್ಣ ಪ್ರಮಾಣದಲ್ಲಿ ನಡೆದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಗ್ರಾಹಕರಿಗೆ ಸತತ ನಾಲ್ಕು ದಿನಗಳ ಕಾಲ (ಜನವರಿ 24ರಿಂದ 27ರವರೆಗೆ) ಶಾಖೆಯ ಮೂಲಕ ಸಿಗುವ ಸೇವೆಗಳು ಲಭ್ಯವಾಗುವುದಿಲ್ಲ.

ಈಗಿನ ನಿಯಮಗಳ ಪ್ರಕಾರ ಬ್ಯಾಂಕ್ ನೌಕರರಿಗೆ ಪ್ರತಿ ತಿಂಗಳ ಎರಡನೆಯ, ನಾಲ್ಕನೆಯ ಶನಿವಾರ, ಭಾನುವಾರ ರಜಾ ದಿನಗಳಾಗಿವೆ. ಆರ್‌ಬಿಐ, ಎಲ್‌ಐಸಿ ನೌಕರರಿಗೆ ವಾರದಲ್ಲಿ 5 ದಿನ ಮಾತ್ರ ಕೆಲಸದ ದಿನಗಳಾಗಿವೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹18000-18200
ದಾವಣಗೆರೆ	₹11000-11000
ತಿಪಟೂರು	₹27300-28800
ತುರುವೇಕೆರೆ	₹27300-28300
ವಿಜಯಪುರ	₹8400-8400

ಮತ್ತೆ ಸುಂಕ ಏರಿಕೆ: ಟ್ರಂಪ್ ಎಚ್ಚರಿಕೆ

ಒಂದನೇ ಪುಟದಿಂದ...

ಭಾರತವು ತನ್ನ ತೈಲ ಅಗತ್ಯದ ಶೇ 88ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. 2021ವರೆಗೆ ಇದರಲ್ಲಿ ರಷ್ಯಾದ ಪಾಲು ಶೇ 0.2ರಷ್ಟೂ ಇರಲಿಲ್ಲ. ಆದರೆ, ಉಕ್ರೇನ್ ಮೇಲೆ ದಾಳಿ ಮಾಡಿದ ಕಾರಣಕ್ಕೆ ರಷ್ಯಾ ಮೇಲೆ ಅಮೆರಿಕ ಮತ್ತು ಪಶ್ಚಿಮದ ದೇಶಗಳು ನಿರ್ಬಂಧ ಹೇರಿದವು. ಹಾಗಾಗಿ ರಷ್ಯಾ ರಿಯಾಯಿತಿ ದರದಲ್ಲಿ ತೈಲ ಮಾರಾಟ ಮಾಡಲು ಆರಂಭಿಸಿದ ಬಳಿಕ ಭಾರತದ ಖರೀದಿ ಪ್ರಮಾಣವು ಗಣನೀಯವಾಗಿ ಹೆಚ್ಚಳವಾಗಿದೆ.

'ಸುಂಕ ಕಡಿತಕ್ಕೆ ರಾಯಭಾರಿ ಬೇಡಿಕೆ'

ಒಂದನೇ ಪುಟದಿಂದ...

'ಈ ವಿಧಾನ ಪರಿಣಾಮಕಾರಿಯಾಗಿದೆ... ರಷ್ಯಾದಿಂದ ಕಚ್ಚಾ ತೈಲ ಖರೀದಿ ಮಾಡಿ, ಪುಟಿನ್ ಅವರ ಯುದ್ಧ ಯಂತ್ರವು ಮುನ್ನಡೆಯಲು ನೆರವಾದರೆ, ಆ ಆಯ್ಕೆಯು ಕಠಿಣ ಎನಿಸುವಂತೆ ಅಧ್ಯಕ್ಷರು ಸುಂಕದ ಮೂಲಕ ಮಾಡುತ್ತಾರೆ. ರಷ್ಯಾದಿಂದ ತೈಲ ಖರೀದಿಯನ್ನು ಭಾರತವು ಕಡಿತಗೊಳಿಸಲು ಮುಖ್ಯ ಕಾರಣ ಅವರು (ಅಧ್ಯಕ್ಷ) ಹೇರಿದ ಸುಂಕ ಎಂದು ನಾನು ಬಲವಾಗಿ ನಂಬಿದ್ದೇನೆ' ಎಂದು ಗ್ರಹಾಂ ವಿವರಿಸಿದ್ದಾರೆ.

ಕ್ವಾತ್ರಾ ಅವರು ಅಮೆರಿಕದ ಕೆಲವು ಸೆನೆಟರ್‌ಗಳಿಗೆ ಔತಣಕೂಟ ಏರ್ಪಡಿಸಿದ್ದರು. ಭಾರತದ ರಾಯಭಾರಿ ಅಧಿಕೃತ ನಿವಾಸದಲ್ಲಿ ನಡೆದ ಔತಣಕೂಟದಲ್ಲಿ ಗ್ರಹಾಂ ಸೇರಿ ಹಲವು ಸೆನೆಟರ್‌ಗಳು ಭಾಗಿಯಾಗಿದ್ದರು.

'ಇಂಧನ, ರಕ್ಷಣಾ ಸಹಕಾರ, ವ್ಯಾಪಾರ ಮತ್ತು ಜಾಗತಿಕ ವಿದ್ಯಮಾನಗಳ ಕುರಿತು ಫಲಪ್ರದ ಮಾತುಕತೆ ನಡೆಯಿತು. ಭಾರತ–ಅಮೆರಿಕ ಸಂಬಂಧ ಬಲಪಡಿಸಲು ಸಹಕಾರ ನೀಡಿದ್ದಕ್ಕೆ ಅವರಿಗೆ ಆಭಾರಿ' ಎಂದು ಕ್ವಾತ್ರಾ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು.

ಷೇರುಪೇಟೆ ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಭಾರತವು ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ಮುಂದುವರಿಸಿದರೆ ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಸರಕುಗಳ ಮೇಲೆ ಸುಂಕ ಹೆಚ್ಚಿಸುವ ಬಗ್ಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಳಿವು ನೀಡಿದ್ದರಿಂದಾಗಿ, ಹೂಡಿಕೆದಾರರು ಲಾಭ ಗಳಿಕೆಗಾಗಿ ಷೇರುಗಳ ಮಾರಾಟಕ್ಕೆ ಮುಂದಾದಗಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ.

ಸೆನ್ಸೆಕ್ಸ್ 322 ಅಂಶ ಇಳಿಕೆಯಾಗಿದೆ. ನಿಫ್ಟಿ 78 ಅಂಶ ಕಡಿಮೆಯಾಗಿದೆ.

ಬಾಂಗ್ಲಾ: ಮತ್ತೊಬ್ಬ ಹಿಂದೂ ಹತ್ಯೆ

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ಮತ್ತೊಬ್ಬ ಹಿಂದೂ ವ್ಯಕ್ತಿಯನ್ನು ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಕಾರ್ಖಾನೆಯೊಂದರ ಮಾಲೀಕ ಮತ್ತು ಪತ್ರಕರ್ತರೂ ಆದ ರಾಣಾ ಪ್ರತಾಪ್ ಬೈರಾಗಿ (38) ಕೊಲೆಯಾದ ದುರ್ದೈವಿ.

ಬಾಂಗ್ಲಾದ ಜೆಸ್ಸೋರ್ ಜಿಲ್ಲೆಯಲ್ಲಿ ಈ ಘಟನೆ ನಡೆದಿದೆ. ಕೆಲ ಪುರುಷರ ಗುಂಪು ರಾಣಾ ಅವರ ತಲೆಗೆ ಗುಂಡುಗಳನ್ನು ಹಾರಿಸಿ ಹತ್ಯೆ ಮಾಡಿದೆ. ಮಂಜುಗಡ್ಡೆ ತಯಾರಿಸುವ ಕಾರ್ಖಾನೆ ಹೊಂದಿದ್ದ ರಾಣಾ, ನರೈಲ್‌ನಿಂದ ಪ್ರಕಟವಾಗುವ 'ದೈನಿಕ್ ಬಿಡಿ ಖಬರ್' ಪತ್ರಿಕೆಯ ಹಂಗಾಮಿ ಸಂಪಾದಕರಾಗಿದ್ದರು.

ಸೋಮವಾರ ಸಂಜೆ 5.45 ಗಂಟೆಗೆ ಈ ಘಟನೆ ನಡೆದಿದೆ. ಮೋಟಾರ್ ಸೈಕಲ್‌ನಲ್ಲಿ ಬಂದ ಮೂವರು ದುಷ್ಕರ್ಮಿಗಳು, ಕಾರ್ಖಾನೆಯಿಂದ ರಾಣಾ ಅವರನ್ನು ಹೊರ ಕರೆದು ತಲೆಗೆ ಮೂರು ಬಾರಿ ಗುಂಡುಗಳನ್ನು ಹಾರಿಸಿದ್ದಾರೆ, ಕತ್ತನ್ನು ಸೀಳಿದ್ದಾರೆ ಎಂದು ಸ್ಥಳೀಯ ಪೊಲೀಸರು ಮಾಹಿತಿ ನೀಡಿದ್ದಾರೆ.

ಕೊಲೆಗೆ ಕಾರಣ ಗೊತ್ತಾಗಿಲ್ಲ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಾವು, ಮಾಲೀಕರ ಷೆಡ್ಯೂಲ್ ಸ್ವತ್ತಿನ ಹಿತಾಸಕ್ತಿ ಮತ್ತು ಮಾಲೀಕತ್ವದ ಹಕ್ಕುದಾರಿಕೆಯನ್ನು ಪರಿಶೀಲಿಸುತ್ತಿದ್ದು, ಈ ಸಂಬಂಧ ಸದರಿ ಸ್ವತ್ತಿನ ಮಾಲೀಕರು ಪ್ರತಿನಿಧಿಸಿದಂತೆ ಷೆಡ್ಯೂಲ್ ಸ್ವತ್ತಿನ ಮೇಲೆ ಅವರು ಸಂಪೂರ್ಣ ಹಕ್ಕು, ಸ್ವಾಧೀನ ಮತ್ತು ಮಾಲೀಕತ್ವ ಹೊಂದಿರುವುದಾಗಿ ಮತ್ತು ಸ್ವತ್ತಿನ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ರೀತಿಯ ವ್ಯಾಜ್ಯ ಇರುವುದಿಲ್ಲ ಹಾಗೂ ಅವರು ಸ್ವತ್ತನ್ನು ಮಾರಾಟ, ಅಡಮಾನ, ಭೋಗ್ಯ, ಸ್ವಾಧೀನ, ವಿಭಜನೆ, ತಿಳುವಳಿಕೆ ಒಪ್ಪಂದ ಪತ್ರ, ಅದಲು–ಬದಲು ಪತ್ರ, ಋಣಭಾರ ಮತ್ತು ಕರಾರು ವಗೈರೆ ಮಾಡಿರುವುದಿಲ್ಲ ಎಂದು ಹೇಳಿಕೆ ಕೊಟ್ಟಿರುತ್ತಾರೆ. ಈ ಸಂಬಂಧ ಯಾವುದೇ ವ್ಯಕ್ತಿ/ವ್ಯಕ್ತಿಗಳು ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾದ್ಯತೆ, ಹಿತಾಸಕ್ತಿ, ತಕರಾರು ಮತ್ತು ಬಾಕಿ ವ್ಯಾಜ್ಯ ಇದ್ದಲ್ಲಿ ಅದಕ್ಕೆ ಪೂರಕವಾದ ಅಗತ್ಯ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಈ ಪ್ರಕಟಣೆಯ ದಿನಾಂಕದಿಂದ **ಹದಿನೈದು (15) ದಿನಗಳ** ಒಳಗಾಗಿ ಕೆಳಕಂಡವರಲ್ಲಿ ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಸದರಿ ಸ್ವತ್ತಿನ ಸಂಬಂಧ ಬೇರೆ ಯಾರಿಗೂ ಯಾವುದೇ ಹಕ್ಕುಗಳು ಇರುವುದಿಲ್ಲ ಅಥವಾ ಇದ್ದರು ಅವುಗಳನ್ನು ತ್ಯಜಿಸಲಾಗಿದೆ ಎಂದು ಭಾವಿಸಿ ಉದ್ದೇಶಿತ ವ್ಯವಹಾರವನ್ನು ನನ್ನ ಕಕ್ಷಿದಾರರು ಮುಂದುವರೆಸುತ್ತಾರೆ ಮತ್ತು ನನ್ನ ಕಕ್ಷಿದಾರರು ಬೇರೆ ಯಾವುದೇ ರೀತಿಯ ಹಕ್ಕುಗಳಿಗೆ ಬಾಧ್ಯಸ್ಥರಾಗಿರುವುದಿಲ್ಲವೆಂದು ಈ ಮೂಲಕ ತಿಳಿಸುತ್ತಿದ್ದೇವೆ.

ಷೆಡ್ಯೂಲ್ ಸ್ವತ್ತು

ಮೈಸೂರು ಜಿಲ್ಲೆ, ಹೆಗಡ ದೇವನಕೋಟೆ ತಾಲೂಕು, ಅಂತರಸಂತೆ ಹೋಬಳಿ, ಹೊನ್ನೂರುಕುಪ್ಪೆ ಗ್ರಾಮದ ಬಾಬ್ತು:

ಕ್ರ.ಸಂ.	ಮಾಲೀಕರ ಹೆಸರು	ಸ್ವತ್ತಿನ ವಿವರ ಖಾತಾ ಸಂ.	ವಿಸ್ತೀರ್ಣ (ಎಕರೆ ಮತ್ತು ಗುಂಟೆಗಳಲ್ಲಿ)	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	ಮೆ|| ಕಬಿನಿ ಹಾಸ್ಪಿಟಲಿಟಿ ಪ್ರೈವೆಟ್ ಲಿಮಿಟೆಡ್	152200102824020035 (ಈ ಹಿಂದೆ ಸರ್ವೆ ನಂ. 6/3, 6/4 ಮತ್ತು 6/5)	04-20½	ಸರ್ವೆ ನಂ. 18/2	ಕಬಿನಿ ಅಣೆಕಟ್ಟಿನ ಹಿನ್ನೀರು.	ಸರ್ವೆ ನಂ. 6/4	ಸರ್ವೆ ನಂ. 5
2.	ಶ್ರೀ ವಿಜಯ್ ಕುಮಾರ್ ಎನ್., ಬಿನ್. ದಿವಂಗತ ನೀಲಕಂಠನ್	152200102824020024 (ಈ ಹಿಂದೆ ಸರ್ವೆ ನಂ. 18/2)	04-00	ಸರ್ವೆ ನಂ. 18/1	ಸರ್ವೆ ನಂ. 18/6	ಸರ್ವೆ ನಂ. 6 ಮತ್ತು 7	ಸರ್ವೆ ನಂ. 5 ಮತ್ತು 19.

ವಿನಯ್ ಕೆ. ಎಸ್.,
ವಕೀಲರು,
307, 3ನೇ ಮಹಡಿ, ಪ್ರೆಸ್ಟೀಜ್ ಸೆಂಟರ್ ಪಾಯಿಂಟ್,
ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560 001.
ಇ–ಮೇಲ್: vinay@vinaykademane.in, Ph: 080 22863885 / 49763233

ದಿನಾಂಕ: 06–01–2026
ಸ್ಥಳ: ಬೆಂಗಳೂರು

ವ್ಯಾಪಾರ

Business to Business

Finance

ಶ್ರೀ ಶಕ್ತಿ ಫೈನಾನ್ಸ್ ವ್ಯಾಪಾರ ಮಾಡುವವರು, ಸ್ಯಾಲರಿ ಇದ್ದವರು, ಸ್ವಂತ ಮನೆ ಇದ್ದವರಿಗೆ 10, 20, 30, 40, 50 ಸಾವಿರದವರೆಗೆ ಸಾಲ ಕೊಡಲಾಗುವುದು. ಸಂಪರ್ಕಿಸಿ ಶೇಷಾದ್ರಿಪುರಂ ಬೆಂಗಳೂರು 9036316959.

ಉದ್ಯೋಗಾವಕಾಶ

Part-Time Jobs

ಮನೆಯಿಂದಲೇ ಕೆಲಸಗಳಿಗೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಕರ್ನಾಟಕದಾದ್ಯಂತ ಕಂಪನಿಗಳಿಗೆ ಆದ್ಯತೆ. 20,000/- 35,000/- ಸಂಪಾದಿಸಿ, ಕೋರಿಯರ್ ಸೌಲಭ್ಯವಿದೆ. 9964311522, 9742133993

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION
To Place your Classified Ads Contact:
9845114560

'ಮಾತು ಕೇಳದಿದ್ದರೆ ಬೆಲೆ ತೆರಬೇಕು'

ಒಂದನೇ ಪುಟದಿಂದ...

'ಪರಸ್ಪರ ಸಹಕಾರಕ್ಕಾಗಿ ಕಾರ್ಯಸೂಚಿ ಸಿದ್ಧಪಡಿಸಲು ಒಟ್ಟಾಗಿ ಕೆಲಸ ಮಾಡಲು ನಾವು ಅಮೆರಿಕ ಸರ್ಕಾರಕ್ಕೆ ಆಹ್ವಾನ ನೀಡುತ್ತೇವೆ' ಎಂದು ಡೆಲ್ಸಿ ಭಾನುವಾರ ರಾತ್ರಿ ಹೇಳಿದ್ದಾರೆ. ಇದು ವೆನೆಜುವೆಲಾದಲ್ಲಿ ಆಡಳಿತದ ಸುಗಮ ವರ್ಗಾವಣೆ ಬಯಸಿರುವ ಅಮೆರಿಕಕ್ಕೆ ದೊರೆತ 'ಆರಂಭಿಕ ಗೆಲುವು' ಎಂದೇ ವಿಶ್ಲೇಷಿಸಲಾಗಿದೆ.

ಅಮೆರಿಕದ ಸೇನಾ ಕಾರ್ಯಾಚರಣೆಯನ್ನು ಶನಿವಾರ ಖಂಡಿಸಿದ್ದ ಡೆಲ್ಸಿ, 'ಮಡೂರೊ ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದ್ದರು.

ರಾಡ್ರಿಗಸ್ ಅವರಿಂದ ನೀವು ಏನು ಬಯಸುವಿರಿ ಎಂಬ ಪ್ರಶ್ನೆಗೆ ಟ್ರಂಪ್, 'ವೆನೆಜುವೆಲಾದ ಎಲ್ಲ ಕಡೆಗೂ ನಮಗೆ ಮುಕ್ತ ಪ್ರವೇಶ ಸಿಗಬೇಕು. ಅವರ ದೇಶವನ್ನು ಪುನರ್‌ನಿರ್ಮಿಸಲು ಅವಕಾಶವಾಗುವಂತೆ ತೈಲ ನಿಕ್ಷೇಪ ಮತ್ತು ಇತರ ಸಂಪನ್ಮೂಲಗಳ ಮೇಲಿನ ಹಿಡಿತ ನಮ್ಮದಾಗಬೇಕು' ಎಂದು ಪ್ರತಿಕ್ರಿಯಿಸಿದ್ದಾರೆ.

ನ್ಯಾಯಾಲಯಕ್ಕೆ ಹಾಜರು: ಮಡೂರೊ ಹಾಗೂ ಪತ್ನಿ ಸಿಲಿಯಾ ಫ್ಲೋರ್ಸ್ ಅವರನ್ನು ಪೊಲೀಸರ ಬಿಗಿ ಬಂದೋಬಸ್ತ್‌ನಲ್ಲಿ ನ್ಯೂಯಾರ್ಕ್‌ನ ನ್ಯಾಯಾಲಯಕ್ಕೆ ಸೋಮವಾರ ಹಾಜರುಪಡಿಸಲಾಯಿತು.

ಅಮೆರಿಕ ಸೇನೆ ಶುಕ್ರವಾರ ತಡರಾತ್ರಿ ವೆನೆಜುವೆಲಾದ ರಾಜಧಾನಿ ಕರಾಕಸ್ ಮೇಲೆ ವಾಯುದಾಳಿ ನಡೆಸಿ ಮಡೂರೊ ಹಾಗೂ ಪತ್ನಿಯನ್ನು ಹಿಡಿದು ತನ್ನ ದೇಶಕ್ಕೆ ಒಯ್ದಿತ್ತು. ಇಬ್ಬರನ್ನೂ ನ್ಯೂಯಾರ್ಕ್‌ನ ಬ್ರೂಕ್ಲಿನ್ ಜೈಲಿನಲ್ಲಿಡಲಾಗಿದೆ. ಮಾದಕದ್ರವ್ಯ ಭಯೋತ್ಪಾದನೆ ಸೇರಿದಂತೆ ಹಲವು ಆರೋಪಗಳನ್ನು ಮಡೂರೊ ವಿರುದ್ಧ ಹೊರಿಸಲಾಗಿದೆ.

ಡೆಲ್ಸಿ ರಾಡ್ರಿಗಸ್ ಅವರಿಗೆ ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸುವಂತೆ ವೆನಿಜುವೆಲಾದ ಸುಪ್ರೀಂ ಕೋರ್ಟ್ ಶನಿವಾರ ರಾತ್ರಿ ಆದೇಶಿಸಿತ್ತು. ಅಲ್ಲಿನ ಸೇನೆಯು ಅದಕ್ಕೆ ಅನುಮೋದನೆ ನೀಡುವುದಾಗಿ ಹೇಳಿತ್ತು.

ಕ್ಯೂಬಾದ 32 ಅಧಿಕಾರಿಗಳು ಸಾವು

ಹವಾನಾ: ಅಮೆರಿಕವು ವೆನೆಜುವೆಲಾದ ರಾಜಧಾನಿ ಕರಾಕಸ್ ಮೇಲೆ ನಡೆಸಿದ ವಾಯುದಾಳಿಯಲ್ಲಿ ತನ್ನ ದೇಶದ 32 ಅಧಿಕಾರಿಗಳು ಮೃತಪಟ್ಟಿದ್ದಾರೆ ಎಂದು ಕ್ಯೂಬಾ ಸರ್ಕಾರ ಹೇಳಿದೆ. ಅಮೆರಿಕದ ದಾಳಿಯಿಂದ ಸಾವು ಸಂಭವಿಸಿರುವುದರ ಬಗ್ಗೆ ಅಧಿಕೃತ ಮಾಹಿತಿ ಹೊರಬಿದ್ದಿರುವುದು ಇದೇ ಮೊದಲು.

ವೆನೆಜುವೆಲಾ ಸರ್ಕಾರದ ಕೋರಿಕೆಯ ಮೇರೆಗೆ ಕಾರ್ಯಾಚರಣೆಯೊಂದರಲ್ಲಿ ಪಾಲ್ಗೊಳ್ಳಲು ಕ್ಯೂಬಾದ ಪೊಲೀಸ್ ಮತ್ತು ಸೇನೆಯ ಅಧಿಕಾರಿಗಳು ಕರಾಕಸ್‌ಗೆ ಬಂದಿದ್ದರು ಎಂದು ಕ್ಯೂಬಾದ ಸರ್ಕಾರಿ ವಾಹಿನಿ ಭಾನುವಾರ ರಾತ್ರಿ ವರದಿ ಮಾಡಿದೆ.

ದಕ್ಷಿಣ ಅಮೆರಿಕದ ರಾಷ್ಟ್ರದಲ್ಲಿ ಕ್ಯೂಬಾದ ಅಧಿಕಾರಿಗಳು ಯಾವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು ಎಂಬುದು ಸ್ಪಷ್ಟವಾಗಿಲ್ಲ.

'ಕ್ಯೂಬಾ ಪತನ ಸನ್ನಿಹಿತ'

'ಕ್ಯೂಬಾ ಪತನಗೊಳ್ಳಲು ಸಿದ್ಧವಾಗಿ ರುವಂತೆ ಕಾಣುತ್ತಿದೆ' ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಆ ಮೂಲಕ ತನ್ನ ಆಡಳಿತವು ಕಮ್ಯುನಿಸ್ಟ್ ಆಡಳಿತವಿರುವ ದ್ವೀಪದತ್ತ ಚಿತ್ತ ಹರಿಸಲಿದೆ ಎಂಬ ಸೂಚನೆ ನೀಡಿದ್ದಾರೆ.

'ಕ್ಯೂಬಾಕ್ಕೆ ಈಗ ಯಾವುದೇ ಆದಾಯ ಇಲ್ಲ. ಅವರು ಎಲ್ಲ ಆದಾಯವನ್ನು ವೆನೆಜುವೆಲಾದ ತೈಲದಿಂದ ಪಡೆಯುತ್ತಿದ್ದರು. ಇದೀಗ ವೆನೆಜುವೆಲಾಕ್ಕೆ ಎದುರಾಗಿರುವ ಪರಿಸ್ಥಿತಿ ಕ್ಯೂಬಾವನ್ನು ಸಂಕಷ್ಟಕ್ಕೆ ತಳ್ಳಲಿದೆ. ಆ ದೇಶದವರು ಈ ಆಘಾತವನ್ನು ಹೇಗೆ ತಾಳಿಕೊಳ್ಳುವರೋ... ನನಗೆ ತಿಳಿಯುತ್ತಿಲ್ಲ' ಎಂದಿದ್ದಾರೆ.

ಕ್ಯೂಬಾದಲ್ಲಿ ಅಮೆರಿಕವು ಸೇನಾ ಕಾರ್ಯಾಚರಣೆ ನಡೆಸಲಿದೆಯೇ ಎಂಬ ಪ್ರಶ್ನೆಗೆ, 'ಅದರ ಅಗತ್ಯವಿದೆ ಎಂದು ಭಾವಿಸುವುದಿಲ್ಲ. ಏಕೆಂದರೆ, ಆ ದೇಶ ತಾನಾಗಿಯೇ ಪತನಗೊಳ್ಳಲಿದೆ' ಎಂದಿದ್ದಾರೆ.

ಗ್ರೀನ್‌ಲ್ಯಾಂಡ್ ವಶಕ್ಕೆ: ಟ್ರಂಪ್ ಪುನರುಚ್ಚಾರ

ಕೋಪನ್‌ಹೇಗನ್: 'ಗ್ರೀನ್‌ಲ್ಯಾಂಡ್ ತನ್ನ ಭಾಗವಾಗಬೇಕು' ಎಂಬ ಹೇಳಿಕೆಯನ್ನು ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದ್ದಾರೆ. ವೆನೆಜುವೆಲಾದಲ್ಲಿ ಸೇನಾ ಕಾರ್ಯಾಚರಣೆ ನಡೆಸಿದ ಬೆನ್ನಲ್ಲೇ ಇದೀಗ ಗ್ರೀನ್‌ಲ್ಯಾಂಡ್ ವಶಪಡಿಸುವ ಕುರಿತ ಟ್ರಂಪ್ ಹೇಳಿಕೆಯನ್ನು ವಿವಿಧ ದೇಶಗಳು ಖಂಡಿಸಿವೆ.

'ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಗ್ರೀನ್‌ಲ್ಯಾಂಡ್ ನಮಗೆ ಸೇರುವ ಅಗತ್ಯವಿದೆ. ಗ್ರೀನ್‌ಲ್ಯಾಂಡ್ ಅನ್ನು ರಕ್ಷಿಸಲು ಡೆನ್ಮಾರ್ಕ್ ಸಾಕಷ್ಟು ಕೆಲಸ ಮಾಡುತ್ತಿಲ್ಲ' ಎಂದು ಟ್ರಂಪ್ ಅವರು ಭಾನುವಾರ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ. 'ಗ್ರೀನ್‌ಲ್ಯಾಂಡ್ ವಶಪಡಿಸಿಕೊಳ್ಳುವ ವಿಚಾರದಲ್ಲಿ ಇನ್ನೆರಡು ತಿಂಗಳಲ್ಲಿ ಚಿಂತಿಸುತ್ತೇವೆ' ಎಂದೂ ಹೇಳಿದ್ದಾರೆ. ಗ್ರೀನ್‌ಲ್ಯಾಂಡ್, ಡೆನ್ಮಾರ್ಕ್ ದೇಶದ ಗಡಿಯೊಳಗಿರುವ ಸ್ವಾಯತ್ತ ದ್ವೀಪ ಪ್ರದೇಶವಾಗಿದೆ.

ಖಂಡನೆ: ಗ್ರೀನ್‌ಲ್ಯಾಂಡ್ ಪ್ರಧಾನಿ ಯೆನ್ಸ್ ಫ್ರೆಡೆರಿಕ್ ನೀಲ್ಸೆನ್ ಮತ್ತು ಡೆನ್ಮಾರ್ಕ್ ಪ್ರಧಾನಿ ಮೆಟೆ ಫ್ರೆಡ್ರಿಕ್ಸನ್ ಅವರು ಟ್ರಂಪ್ ಹೇಳಿಕೆಯನ್ನು ಖಂಡಿಸಿದ್ದಾರೆ.

'ಇದು ಅತಿಯಾಯಿತು. ಪದೇ ಪದೇ ವಶಪಡಿಸಿಕೊಳ್ಳುವ ಮಾತನ್ನಾಡಿ ಒತ್ತಡ ಹೇರುವುದನ್ನು ಅಮೆರಿಕ ನಿಲ್ಲಿಸಲಿ' ಎಂದು ನೀಲ್ಸೆನ್ ಅವರು ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. 'ನಾವು ಮಾತುಕತೆ, ಸಂವಾದಕ್ಕೆ ಮುಕ್ತರಾಗಿದ್ದೇವೆ. ಆದರೆ, ಮಾತುಕತೆಯು ಸರಿಯಾದ ಮಾರ್ಗದಲ್ಲಿ, ಅಂತರ-ರಾಷ್ಟ್ರೀಯ ಕಾನೂನಿನ ಪ್ರಕಾರವೇ ನಡೆಯಲಿ' ಎಂದಿದ್ದಾರೆ.

ಅಮೆರಿಕವು ಗ್ರೀನ್‌ಲ್ಯಾಂಡ್‌ಗೆ 'ಬೆದರಿಕೆ' ಹಾಕುವುದನ್ನು ನಿಲ್ಲಿಸಬೇಕು ಎಂದು ಮೆಟೆ ಫ್ರೆಡ್ರಿಕ್ಸನ್ ಹೇಳಿದ್ದಾರೆ. 'ನಾನು ಒಂದು ವಿಷಯವನ್ನು ಅಮೆರಿಕಕ್ಕೆ ಸ್ಪಷ್ಟಪಡಿಸಲು ಬಯಸುತ್ತೇನೆ. ಗ್ರೀನ್‌ಲ್ಯಾಂಡ್‌ನ ಮೇಲೆ ಹಿಡಿತ ಸಾಧಿಸಬೇಕು ಎಂದು ಅಮೆರಿಕವು ಹೇಳುವುದು ಸಂಪೂರ್ಣವಾಗಿ ಅಸಂಬದ್ಧ' ಎಂದು ಭಾನುವಾರ ತಡರಾತ್ರಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಫ್ರೆಡ್ರಿಕ್ಸನ್ ಹೇಳಿಕೆಯನ್ನು ಬೆಂಬಲಿಸಿದ್ದಾರೆ. 'ಗ್ರೀನ್‌ಲ್ಯಾಂಡ್‌ನ ಭವಿಷ್ಯವನ್ನು ಗ್ರೀನ್‌ಲ್ಯಾಂಡ್ ಮತ್ತು ಡೆನ್ಮಾರ್ಕ್ ಮಾತ್ರ ನಿರ್ಧರಿಸಬೇಕು' ಎಂದಿದ್ದಾರೆ.

ಪ್ರಮುಖ ಅಂಶಗಳು

- ನಿಕೊಲಸ್ ಮಡೂರೊ ಅವರನ್ನು ಸೋಮವಾರ ನ್ಯೂಯಾರ್ಕ್‌ನ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು
- ವೆನೆಜುವೆಲಾ ಮನವಿಯಂತೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸೋಮವಾರ ತುರ್ತು ಸಭೆ ನಡೆಸಿದೆ
- ಮಡೂರೊ ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಚೀನಾ ಒತ್ತಾಯಿಸಿದೆ
- ಕರಾಕಸ್‌ನಲ್ಲಿ ಮಡೂರೊ ಅವರ ಸುಮಾರು 2000 ಬೆಂಬಲಿಗರು ಬಂದೂಕು ಹಿಡಿದು ದ್ವಿಚಕ್ರ ವಾಹನಗಳಲ್ಲಿ ರ‍್ಯಾಲಿ ನಡೆಸಿದರು

ಸತ್ಯ ಸಾಯಿಬಾಬಾ ಭಕ್ತ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಮತ್ತು ಅವರ ಪತ್ನಿ ಸಿಲಿಯಾ ಫ್ಲೋರೆಸ್ ಅವರು ಆಂಧ್ರಪ್ರದೇಶದ ಪುಟ್ಟಪರ್ತಿಯ ಸತ್ಯ ಸಾಯಿಬಾಬಾ ಅವರ ಪರಮ ಭಕ್ತರು.

ಮಡೂರೊ ದಂಪತಿ 2005ರಲ್ಲಿ ಪುಟ್ಟಪರ್ತಿಯಲ್ಲಿರುವ ಸಾಯಿಬಾಬಾ ಅವರ ಆಶ್ರಮ 'ಪ್ರಶಾಂತಿ ನಿಲಯಂ'ಗೆ ಭೇಟಿ ನೀಡಿ ಸಾಯಿಬಾಬಾ ಅವರ ಆಶೀರ್ವಾದ ಪಡೆದಿದ್ದರು.

ಆ ಸಂದರ್ಭದಲ್ಲಿ ಮಡೂರೊ ವೆನೆಜುವೆಲಾದ ವಿದೇಶಾಂಗ ವ್ಯವಹಾರಗಳ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರೆ, ಫ್ಲೋರೆಸ್ ಅವರು ಶಾಸಕಾಂಗ ಪಕ್ಷದ ಅಧ್ಯಕ್ಷರಾಗಿದ್ದರು. ಕಳೆದ ವರ್ಷ ನವೆಂಬರ್‌ನಲ್ಲಿ ನಡೆದ ಸತ್ಯ ಸಾಯಿಬಾಬಾ ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಮಡೂರೊ ಅವರು ವೈಯಕ್ತಿಕ ಸಂದೇಶವನ್ನು ಕಳುಹಿಸಿದ್ದರು ಎಂದು ತಿಳಿದುಬಂದಿದೆ.

'2005ರಲ್ಲಿ ಮಡೂರೊ ಅವರು ಪತ್ನಿ ಜತೆ ಪ್ರಶಾಂತಿ ನಿಲಯಂಗೆ ಭೇಟಿ ನೀಡಿದ್ದರು. ಮಡೂರೊ ತಮ್ಮ ಕಚೇರಿಯಲ್ಲಿ ಬಾಬಾ ಅವರ ಫೋಟೊ ಇಟ್ಟುಕೊಂಡಿದ್ದಾರೆ' ಎಂದು 2013ರಲ್ಲಿ ಮಡೂರೊ ಅವರು ವೆನೆಜುವೆಲಾದ ಹಂಗಾಮಿ ಅಧ್ಯಕ್ಷರಾದ ಸಂದರ್ಭದಲ್ಲಿ ಸತ್ಯಸಾಯಿ ಸೆಂಟ್ರಲ್ ಟ್ರಸ್ಟ್ ಹೇಳಿಕೆಯಲ್ಲಿ ತಿಳಿಸಿತ್ತು.

ಮಡೂರೊ ದಂಪತಿ ಸತ್ಯ ಸಾಯಿಬಾಬಾ ಅವರನ್ನು ಭೇಟಿಯಾಗಿದ್ದ ಕ್ಷಣ

ಹೆಗ್ಗಣ ಮುದ್ದು ಎಂದ ಪೂರ್ಣ

ಅದಿತಿ, ಪೂರ್ಣಚಂದ್ರ

'ಆರ್ಕೆಸ್ಟ್ರಾ ಮೈಸೂರು', 'ಬಡವ ರಾಸ್ಕಲ್', 'ಫ್ಯಾಮಿಲಿ ಡ್ರಾಮಾ', 'ಡೇರ್‌ಡೆವಿಲ್ ಮುಸ್ತಾಫಾ', 'ಮರ್ಯಾದೆ ಪ್ರಶ್ನೆ', 'ಎಕ್ಕ' ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ನಟಿಸಿರುವ ಪೂರ್ಣಚಂದ್ರ ಮೈಸೂರು ಅವರ ಹೊಸ ಸಿನಿಮಾ ಸದ್ದಿಲ್ಲದೇ ಪೂರ್ಣಗೊಂಡಿದೆ.

'ಹೆಗ್ಗಣ ಮುದ್ದು' ಎಂಬ ಶೀರ್ಷಿಕೆಯುಳ್ಳ ಈ ಸಿನಿಮಾವನ್ನು ನಟ ಧನಂಜಯ ಅವರ 'ಡಾಲಿ ಪಿಕ್ಚರ್ಸ್' ನಿರ್ಮಾಣ ಮಾಡಿದ್ದು, ಅವಿನಾಶ್ ಬಳೆಕ್ಕಳ ನಿರ್ದೇಶಿಸಿದ್ದಾರೆ. ಇದು ಇವರ ಮೊದಲ ಸಿನಿಮಾ. ಪೂರ್ಣ ಅವರಿಗೆ ಜೋಡಿಯಾಗಿ ನಟ ಹಾಗೂ ಕಲಾ ನಿರ್ದೇಶಕ ಅರುಣ್ ಸಾಗರ್ ಪುತ್ರಿ ಅದಿತಿ ಸಾಗರ್ ನಟಿಸಿದ್ದಾರೆ. ಈಗಾಗಲೇ ಶಿವರಾಜ್‌ಕುಮಾರ್ ಅವರ ಜೊತೆಗೆ 'ವೇದ' ಸಿನಿಮಾದಲ್ಲಿ ನಟಿಸಿದ್ದ ಅದಿತಿ ಮೊದಲ ಬಾರಿಗೆ 'ಹೆಗ್ಗಣ ಮುದ್ದು' ಮೂಲಕ ಪೂರ್ಣ ಪ್ರಮಾಣದ ನಾಯಕಿಯಾಗಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ.

ಪ್ರಸಿದ್ಧ ಗಾದೆ ಮಾತಿನಿಂದ ಸ್ಫೂರ್ತಿ ಪಡೆದು ಈ ಶೀರ್ಷಿಕೆ ಇಡಲಾಗಿದೆ ಎಂದಿದೆ ಚಿತ್ರತಂಡ. ಇದೊಂದು ಡ್ರಾಮ ಥ್ರಿಲ್ಲರ್ ಸಿನಿಮಾವಾಗಿದೆ. 'ಸಂಬಂಧಗಳ ಬಗ್ಗೆ ಇರುವ ಸಿನಿಮಾ ಇದಾಗಿದೆ. ಹೆತ್ತವರಿಗೆ ಹೆಗ್ಗಣ ಮುದ್ದು ಅಂತ ಹೇಗೆ ಹೇಳ್ತಿವೋ ಹಾಗೆ ಈ ಸಿನಿಮಾದಲ್ಲಿ ನನಗೆ ನಾನೇ ಮುದ್ದು ಎನ್ನುವುದನ್ನು ಹೇಳಲಾಗಿದೆ' ಎನ್ನುತ್ತಾರೆ ಅವಿನಾಶ್. ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಸದ್ಯ ರಿಲೀಸ್‌ಗೆ ತಯಾರಿ ಮಾಡಿಕೊಳ್ಳುತ್ತಿದೆ ಚಿತ್ರತಂಡ. ಚಿತ್ರಕ್ಕೆ ಕಾರ್ತಿಕ್ ಚೆನ್ನೋಜಿ ರಾವ್ ಮತ್ತು ರೋಣದ ಬಕ್ಕೇಶ್ ಸಂಗೀತ ನಿರ್ದೇಶನ ಮಾಡಿದ್ದಾರೆ. ನಚಿಕೇತ್ ಬಳೆಕ್ಕಳ ಕಥೆ ಬರೆದು ಕ್ಯಾಮೆರಾ ಹಿಡಿದಿದ್ದಾರೆ. ಡಾಲಿ ಪಿಕ್ಚರ್ಸ್‌ನ 'ಜೆಸಿ' ಸಿನಿಮಾ ರಿಲೀಸ್ ಆದ ಬಳಿಕ 'ಹೆಗ್ಗಣ ಮುದ್ದು' ತೆರೆಗೆ ಬರಲಿದೆ.

'ಜನ ನಾಯಗನ್' ಟಿಕೆಟ್ ಬೆಲೆ ₹2000!

ಜನವರಿ 9ರಂದು ತೆರೆಕಾಣಲಿರುವ ವಿಜಯ್ ನಟನೆಯ 'ಜನ ನಾಯಗನ್' ತಮಿಳು ಸಿನಿಮಾದ ಟಿಕೆಟ್ ದರ ಬೆಂಗಳೂರಿನಲ್ಲಿ ₹2000 ತಲುಪಿದೆ.

ಈ ಸಿನಿಮಾದ ಮೊದಲ ಪ್ರದರ್ಶನ ಅಂದು ಬೆಳಗ್ಗೆ 6.30ರಿಂದಲೇ ಆರಂಭವಾಗುತ್ತಿದ್ದು, ಮಲ್ಟಿಪ್ಲೆಕ್ಸ್‌ಗಳಲ್ಲಿ ಟಿಕೆಟ್ ದರ ₹1000–₹1500 ರ ವರೆಗಿದೆ. ಬೆಂಗಳೂರು ಪೂರ್ವದಲ್ಲಿರುವ 'ಮುಕುಂದ' ಏಕಪರದೆ ಥಿಯೇಟರ್‌ನಲ್ಲಿ 6.30ರ ಪ್ರದರ್ಶನದ ಟಿಕೆಟ್ ₹2000ಕ್ಕೆ ಸೋಲ್ಡ್ ಔಟ್ ಆಗಿದೆ. ಬೆಂಗಳೂರಿನ 'ವೈಷ್ಣವಿ ಮತ್ತು ವೈಭವ್' ಚಿತ್ರಮಂದಿರಗಳಲ್ಲಿ ಮೊದಲ ಪ್ರದರ್ಶನದ ಎಲ್ಲಾ ಮಾದರಿಯ ಟಿಕೆಟ್‌ಗಳಿಗೆ ₹1000 ನಿಗದಿಪಡಿಸಲಾಗಿದೆ. ನಗರದ 'ಗೋವರ್ಧನ', 'ವೀರೇಶ್', 'ನವರಂಗ್'ನಲ್ಲೂ ಮೊದಲ ಪ್ರದರ್ಶನದ ಟಿಕೆಟ್‌ಗಳು ಗರಿಷ್ಠ ₹1000 ಇದೆ. ಅದೇ ಚೆನ್ನೈನಲ್ಲಿ ಇದೇ ಸಿನಿಮಾದ ಟಿಕೆಟ್ ದರ ₹190 ಇದೆ. ಬೆಂಗಳೂರಿನಲ್ಲಿ ಆನ್‌ಲೈನ್ ಮೂಲಕ ಟಿಕೆಟ್ ಮಾರಾಟವನ್ನು ಆರಂಭಿಸಿರುವ ಚಿತ್ರತಂಡ, ತಮಿಳುನಾಡಿನಲ್ಲಿ ಟಿಕೆಟ್ ಮಾರಾಟ ಇನ್ನೂ ಆರಂಭಿಸಿಲ್ಲ.

51 ವರ್ಷದ ವಿಜಯ್‌ಗೆ ಇದೇ ಕೊನೆಯ ಸಿನಿಮಾ ಎನ್ನಲಾಗಿದೆ. ಈಗಾಗಲೇ ರಾಜಕೀಯಕ್ಕೆ ಧುಮುಕಿರುವ ಅವರು ಆ ಕ್ಷೇತ್ರದಲ್ಲೇ ಮುಂದುವರಿಯಲಿದ್ದಾರೆ. ಹೀಗಾಗಿ ಅಭಿಮಾನಿಗಳ ಟಿಕೆಟ್ ಖರೀದಿ ಜೋರಾಗಿಯೇ ಇದೆ. ಮೊದಲೆರಡು ಪ್ರದರ್ಶನಗಳ ಟಿಕೆಟ್‌ಗಳು ಈಗಾಗಲೇ ಬಿಕರಿಯಾಗಿವೆ. ತಂದೆ–ಮಗಳ ಬಾಂಧವ್ಯದ ಕಥೆಯ ಈ ಚಿತ್ರದಲ್ಲಿ ವಿಜಯ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದು, ಪೂಜಾ ಹೆಗ್ಡೆ, ಬಾಬಿ ಡಿಯೋಲ್, ಮಮಿತಾ ಬೈಜು, ಗೌತಮ್ ವಾಸುದೇವ್ ಮೆನನ್, ಪ್ರಕಾಶ್ ರಾಜ್, ಪ್ರಿಯಾಮಣಿ ಮತ್ತಿತರರು ಇದ್ದಾರೆ.

ಮಾರ್ಚ್ 13ಕ್ಕೆ 'ಆಕಾಶ್'


ಪುನೀತ್ ರಾಜ್‌ಕುಮಾರ್

ನಟ ದಿವಂಗತ ಪುನೀತ್ ರಾಜ್‌ಕುಮಾರ್ ನಟನೆಯ 'ಆಕಾಶ್' ಸಿನಿಮಾ ಮಾರ್ಚ್ 13ರಂದು ರೀರಿಲೀಸ್ ಆಗಲಿದೆ. ಈ ಕುರಿತು ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಸಾಮಾಜಿಕ ಮಾಧ್ಯಮಗಳಲ್ಲಿ ಮಾಹಿತಿ ನೀಡಿದ್ದಾರೆ.

2024ರಲ್ಲಿ ಪುನೀತ್ ಜನ್ಮದಿನದ ಸಂದರ್ಭದಲ್ಲಿ(ಮಾರ್ಚ್ 17) 'ಜಾಕಿ' ಸಿನಿಮಾ ರೀರಿಲೀಸ್ ಆಗಿತ್ತು. 2025ರಲ್ಲಿ ಪುನೀತ್ ರಾಜ್‌ಕುಮಾರ್ ನಾಯಕರಾಗಿ ನಟಿಸಿದ್ದ ಮೊದಲ ಸಿನಿಮಾ 'ಅಪ್ಪು' ಮರುಬಿಡುಗಡೆಯಾಗಿ ಭರ್ಜರಿ ಪ್ರದರ್ಶನ ಕಂಡಿತ್ತು. ಈ ವರ್ಷ 'ಆಕಾಶ್' ತೆರೆ ಕಾಣುತ್ತಿದೆ. ಈ ಮೂಲಕ ಪ್ರತಿ ವರ್ಷವೂ ಅಪ್ಪು ಅವರ ಸಿನಿಮಾವನ್ನು ಪಿಆರ್‌ಕೆ ಪ್ರೊಡಕ್ಷನ್ಸ್ ರೀರಿಲೀಸ್ ಮಾಡುತ್ತಿದೆ.

ಸುಮಾರು 21 ವರ್ಷಗಳ ಹಿಂದೆ ತೆರೆಕಂಡಿದ್ದ ಈ ಸಿನಿಮಾವನ್ನು ಮಹೇಶ್ ಬಾಬು ನಿರ್ದೇಶಿಸಿದ್ದರು. 200ಕ್ಕೂ ಅಧಿಕ ದಿನ ಚಿತ್ರಮಂದಿರಗಳಲ್ಲಿ ಓಡಿದ್ದ ಈ ಸಿನಿಮಾ ಮಹೇಶ್ ಬಾಬು ಅವರ ಚೊಚ್ಚಲ ನಿರ್ದೇಶನದ ಸಿನಿಮಾ. ರಮ್ಯಾ ನಾಯಕಿಯಾಗಿ ನಟಿಸಿದ್ದ ಈ ಸಿನಿಮಾವನ್ನು ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಾಣ ಮಾಡಿದ್ದರು.

ಮುಂದುವರಿಯಲಿದೆ ಭಟ್ರ 'ಅಮಲು'

ಯೋಗರಾಜ್ ಭಟ್

'ಖಾಲಿ ಕ್ವಾಟ್ರು ಬಾಟ್ಲಿ ಹಂಗೆ ಲೈಫು..', 'ನಾವ್ ಮನೆಗೆ ಹೋಗೋದಿಲ್ಲ'.., 'ಹಾಲು ಕುಡ್ದ ಮಕ್ಳೆ ಬದ್ಕಲ್ಲ...' ಹೀಗೆ ನಿರ್ದೇಶಕ ಯೋಗರಾಜ್ ಭಟ್–ನಟ ಶರಣ್ ಕಾಂಬಿನೇಷನ್‌ನಲ್ಲಿ ಹಲವು 'ಎಣ್ಣೆ ಹಾಡು'ಗಳು ಬಂದಿವೆ. ಇದಕ್ಕೆ ಹೊಸ ಸೇರ್ಪಡೆ 'ಅಮಲು'. ನಿರ್ದೇಶನದ ಜೊತೆಗೆ ಗೀತ ಸಾಹಿತ್ಯದಲ್ಲಿ ಮುಂದುವರಿಯುವ ಇಚ್ಛೆಯನ್ನು 'ಅಮಲು' ರಿಲೀಸ್ ವೇಳೆ ಯೋಗರಾಜ್ ಭಟ್ ಬಿಚ್ಚಿಟ್ಟಿದ್ದಾರೆ.

ಶರಣ್ ಜೊತೆಗಿನ 'ಎಣ್ಣೆ ಹಾಡು'ಗಳ ನಂಟು ಇನ್ನೂ ಮುಂದುವರಿಯಲಿದೆ ಎನ್ನುವ ಸೂಚನೆಯನ್ನು ನೀಡುತ್ತಾ ಮಾತಿಗಿಳಿದ ಯೋಗರಾಜ್ ಭಟ್, 'ನನ್ನ ಮನೆಯ ಬಳಿಯೇ ಒಬ್ಬ ಕುಡುಕನಿದ್ದಾನೆ. ಆತ ನನ್ನ 'ಶರಬತ್ತು ಗೀತೆ'ಗಳ ಅಭಿಮಾನಿ. 'ನಾನು ಕುಡಿದು ಮಾತನಾಡುತ್ತಿಲ್ಲ' ಎನ್ನುತ್ತಾಲೇ ನನ್ನೊಂದಿಗೆ ಮಾತಿಗಿಳಿಯುತ್ತಿದ್ದ. ಪ್ರತಿ ಕುಡುಕ ಹೇಳುವುದು ಈ ಮಾತನ್ನೇ. ಇದನ್ನೇ ಹಾಡು ಮಾಡಿದರೆ ಚೆನ್ನಾಗಿರುತ್ತದೆ ಎಂದು 'ಅಮಲು' ಬರೆದೆ. ಮೆಲೋಡಿಯಸ್ ಆಗಿದ್ದರೆ ಕಾಡುತ್ತದೆ ಎಂದು ಹೀಗೆ ಹಾಡು ಮಾಡಿದ್ದೇವೆ. ಈ 'ಶರಬತ್ತು ಗೀತೆ'ಗಳ 'ಅಮಲು' ಆಲ್ಬಂ ಮುಂದುವರಿಯಲಿದೆ. ಮುಂದೆ 'ಬಾಯಾರಿಕೆಗೆ ಏನು ಕಾರಣ' ಎನ್ನುವ ಹಾಡು ಬರಲಿದೆ. ವಾಸುಕಿ ವೈಭವ್ ಇದನ್ನು ಹಾಡಿದ್ದಾರೆ. ಇದಾದ ಬಳಿಕ ಶರಣ್ ಅವರೇ ಮತ್ತೊಂದು ಹಾಡಿಗೆ ದನಿಯಾಗಲಿದ್ದಾರೆ' ಎಂದರು.

ನಟ ಶರಣ್ ಮಾತನಾಡಿ,'ಈ 'ಅಮಲು' ಬರೀ ಕುಡುಕರ ಹಾಡಲ್ಲ. ಹಾಡಿನಲ್ಲಿ ಸಾಕಷ್ಟು ಜೀವನದ ಒಳಾರ್ಥವಿದೆ' ಎಂದರು.

'ಎಸ್‌ಐಆರ್ ವಿರುದ್ಧ 'ಸುಪ್ರೀಂ' ಮೆಟ್ಟಿಲೇರುವೆ'

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಹೇಳಿಕೆ

ಸಾಗರ ದ್ವೀಪ/ಕೋಲ್ಕತ್ತ/ದೇವಧರ್ (ಪಿಟಿಐ): 'ಅಮಾನವೀಯ ರೀತಿಯಲ್ಲಿ ರಾಜ್ಯದಲ್ಲಿ ನಡೆಸಲಾಗುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧ ಮಂಗಳವಾರ (ಜ.6) ಸುಪ್ರೀಂ ಕೋರ್ಟ್ ಮೆಟ್ಟಿಲೇರುತ್ತೇನೆ' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದರು.

ದಕ್ಷಿಣ 24 ಪರಗಣ ಜಿಲ್ಲೆಯ ಸಾಗರ ದ್ವೀಪದಲ್ಲಿ ಸೋಮವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, 'ಎಸ್‌ಐಆರ್ ಕುರಿತ ಭಯ, ಹಿಂಸೆ ಮತ್ತು ಪಟ್ಟಿಯಿಂದ ಹೆಸರು ಕೈಬಿಡುವ ಪ್ರಕ್ರಿಯೆ ಕಾರಣದಿಂದ ಹಲವರು ಪ್ರಾಣ ತೆತ್ತಿದ್ದಾರೆ ಮತ್ತು ಹಲವರು ಆಸ್ಪತ್ರೆಗೆ ಸೇರಿದ್ದಾರೆ' ಎಂದರು.

'ಅವಕಾಶ ನೀಡಿದರೆ, ನಾನೊಬ್ಬ ಸಾಮಾನ್ಯ ಪ್ರಜೆಯಾಗಿ ಈ ಅಮಾನವೀಯ ಪ್ರಕ್ರಿಯೆ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರುತ್ತೇನೆ. ನಾನೂ ಕೂಡ ತರಬೇತಿ ಹೊಂದಿದ ವಕೀಲೆಯೇ ಆಗಿದ್ದೇನೆ' ಎಂದು ಹೇಳಿದರು.

'ಸೂಕ್ತ ಕಾರಣಗಳನ್ನೇ ನೀಡದೆ ಜನರು ಹೆಸರುಗಳನ್ನು ಪಟ್ಟಿಯಿಂದ ನಿರಂಕುಶವಾಗಿ ಕಿತ್ತು ಹಾಕಲಾಗುತ್ತಿದೆ. ಸಾಮಾನ್ಯವಾಗಿ ಯಾವಾಗಲೂ ನಡೆಯುವ ಒಂದು ಆಡಳಿತಾತ್ಮಕವಾದ ಪ್ರಕ್ರಿಯೆಯನ್ನು ಭಯ ಹುಟ್ಟಿಸುವ ರೀತಿಯಲ್ಲಿ ಕೈಗೊಳ್ಳಲಾಗುತ್ತಿದೆ. ಅದೂ ವಿಧಾನಸಭೆ ಚುನಾವಣೆಗೂ ಮೊದಲು' ಎಂದು ಅಭಿಪ್ರಾಯಪಟ್ಟರು.

'ತಾವು ಮತದಾರರು ಎಂಬುದನ್ನು ಖಚಿತಪಡಿಸುವುದಕ್ಕಾಗಿ ರೋಗಿಗಳನ್ನು, ವೃದ್ಧರನ್ನು ಉದ್ದ ಉದ್ದದ ಸಾಲುಗಳಲ್ಲಿ ನಿಲ್ಲಿಸಲಾಗುತ್ತಿದೆ. ಬಿಜೆಪಿಯ ವೃದ್ಧ ಪೋಷಕರನ್ನು ಈ ರೀತಿ ನಿಲ್ಲಿಸಿದರೆ ಅವರಿಗೆ ಹೇಗೆ ಅನ್ನಿಸುತ್ತದೆ?' ಎಂದು ಪ್ರಶ್ನಿಸಿದರು.

ದೇವ್‌ಗೆ ನೋಟಿಸ್

ಎಸ್‌ಐಆರ್‌ಗೆ ಸಂಬಂಧಿಸಿ ಹೇಳಿಕೆಯನ್ನು ನೀಡಲು ಮತ್ತು ಕೆಲವು ದಾಖಲೆಗಳನ್ನು ಸಲ್ಲಿಸಲು ಬರುವಂತೆ ಟಿಎಂಸಿ ಸಂಸದ ಮತ್ತು ನಟ ದೀಪಕ್ ಅಧಿಕಾರಿ (ದೇವ್) ಸೇರಿ ಅವರ ಕುಟುಂಬದ ಮೂವರಿಗೆ ಚುನಾವಣಾ ಆಯೋಗ ನೋಟಿಸ್ ನೀಡಿದೆ. ಈ ಕ್ರಮವನ್ನು ಟಿಎಂಸಿ ವಿರೋಧಿಸಿದೆ.

ತಂದೆ ಅವರ ವೃತ್ತಿ ಕಾರಣದಿಂದ ದೀಪಕ್ ಅವರ ಕುಟುಂಬವು ಮುಂಬೈಗೆ ಸ್ಥಳಾಂತರಗೊಂಡಿತ್ತು. ಆದರೆ, ಈಗ ಕುಟುಂಬವು ಕೋಲ್ಕತ್ತದಲ್ಲಿ ನೆಲಸಿದೆ. 'ಪೌರತ್ವವನ್ನು ಸಾಬೀತುಪಡಿಸಬೇಕು ಎಂಬುದಾಗಿ ನಟನಿಗೆ ನೋಟಿಸ್ ನೀಡಲಾಗಿದೆ' ಎಂದು ಆಯೋಗದ ಕಚೇರಿ ಮೂಲಗಳು ತಿಳಿಸಿವೆ.

ದಕ್ಷಿಣ 24 ಪರಗಣ ಜಿಲ್ಲೆಯ ಸಾಗರ ದ್ವೀಪವನ್ನು ಸಂಪರ್ಕಿಸುವ 5 ಕಿ.ಮೀ ಉದ್ದದ 'ಗಂಗಾಸಾಗರ ಸೇತು' ಸೇತುವೆಗೆ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಸಾಂಪ್ರದಾಯಿಕ ವಾದ್ಯ ನುಡಿಸಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಉದ್ಘಾಟಿಸಿದರು –ಪಿಟಿಐ ಚಿತ್ರ

ಜಾರ್ಖಂಡ್‌ಗೆ ಸಿಇಸಿ 2 ದಿನಗಳ ಪ್ರವಾಸ

ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರು ಎರಡು ದಿನಗಳ ಭೇಟಿಗಾಗಿ ಸೋಮವಾರ ಜಾರ್ಖಂಡ್ ತಲುಪಿದರು. ಈ ವೇಳೆ ಜ್ಞಾನೇಶ್ ಕುಮಾರ್ ಅವರು ದೇವಧರ್‌ನಲ್ಲಿ ಬೂತ್ ಮಟ್ಟದ ಅಧಿಕಾರಿಗಳೊಂದಿಗೆ (ಬಿಎಲ್‌ಒ) ಸಭೆ ನಡೆಸಿ, ವಿವಿಧ ದೇವಾಲಯಗಳಿಗೂ ಭೇಟಿ ನೀಡಿದರು.

ಸಭೆಯಲ್ಲಿ ಮಾತನಾಡಿ, 'ಉತ್ತಮ ಪ್ರಜಾಪ್ರಭುತ್ವಕ್ಕೆ ಮತದಾರರ ಪಟ್ಟಿಯನ್ನು ಸ್ವಚ್ಛ ಮಾಡುವುದು ಅಡಿಪಾಯವಿದ್ದಂತೆ. ಅಂತೆಯೇ ಇಂಥ ಪಟ್ಟಿಯನ್ನು ಸಿದ್ಧಪಡಿಸುವ ಬಿಎಲ್‌ಒಗಳು ಸ್ವಚ್ಛ ಮತದಾರರ ಪಟ್ಟಿಗೆ ಅಡಿಪಾಯವಿದ್ದಂತೆ. ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವಾಗ ಹಿಂಜರಿಕೆಯಾಗಬಾರದು ಎನ್ನುವ ದೃಷ್ಟಿಯಿಂದ ಬಿಎಲ್‌ಒಗಳಿಗೆ ಗುರುತಿನ ಚೀಟಿ ನೀಡಲಾಗಿದೆ' ಎಂದು ಜ್ಞಾನೇಶ್ ಕುಮಾರ್ ಅಭಿಪ್ರಾಯಪಟ್ಟರು.

ಬಾಸುಕೀನಾಥ್ ದೇವಸ್ಥಾನ, ಬಾಬಾ ವೈದ್ಯನಾಥ್ ದೇವಾಲಯಕ್ಕೆ ಜ್ಞಾನೇಶ್ ಕುಮಾರ್ ಭೇಟಿ ನೀಡಿದರು. 'ದೇಶ ಹಾಗೂ ಜಾರ್ಖಂಡ್‌ನ ಶಾಂತಿ, ಶ್ರೇಯೋಭಿವೃದ್ಧಿಗೆ ಶಿವನಲ್ಲಿ ಪ್ರಾರ್ಥಿಸಿದೆ' ಎಂದು ಅವರು ತಿಳಿಸಿದರು.

ಎಸ್‌ಐಆರ್ ಪ್ರಕ್ರಿಯೆಯನ್ನು ನಿಲ್ಲಿಸುವಂತೆ ಮಮತಾ ಅವರು ಕೇಂದ್ರ ಚುನಾವಣಾ ಆಯೋಗಕ್ಕೆ ಬರೆದ ಪತ್ರಕ್ಕೆ ನೀಡಿದ ಪ್ರತಿಕ್ರಿಯೆಗಳು

ರಾಜ್ಯದ ಜನರು ಎಸ್‌ಐಆರ್ ಅನ್ನು ಭರವಸೆ ಬೆಳಕು ಎಂಬಂತೆ ಕಾಣುತ್ತಿದ್ದಾರೆ. ಈ ಪ್ರಕ್ರಿಯೆಯು ಭಯವನ್ನು ಹುಟ್ಟಿಸಿದೆ ಎಂಬುದು ಟಿಎಂಸಿ ಸೃಷ್ಟಿಸಿದ ಸಂಕಥನ. ಎದೆಗುಂದದೆ ಪ್ರಕ್ರಿಯೆಯನ್ನು ಮುಂದುವರಿಸಿ
ಸುವೇಂದು ಅಧಿಕಾರಿ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಪ್ರಜಾಪ್ರಭುತ್ವದಲ್ಲಿ ಯಾವುದೇ ಪ್ರಕ್ರಿಯೆಗೆ ಆತಂಕ ವ್ಯಕ್ತಪಡಿಸಲು ಯಾವುದೇ ರಾಜ್ಯದ ಮುಖ್ಯಮಂತ್ರಿಗೆ ಹಕ್ಕು ಇದೆ. ವಸ್ತುನಿಷ್ಠವಾಗಿರುವ ಆಯೋಗವು ಈ ಬಗ್ಗೆ ತೃಪ್ತಿದಾಯಕ ಉತ್ತರ ನೀಡುತ್ತದೆ ಎಂಬ ನಂಬಿಕೆ ಇದೆ
ಸಿ.ವಿ. ಆನಂದ್ ಬೋಸ್, ರಾಜ್ಯಪಾಲ

ಆಂಧ್ರ: ಒಎನ್‌ಜಿಸಿ ಡ್ರಿಲ್ಲಿಂಗ್ ತಾಣದಲ್ಲಿ ಅನಿಲ ಸೋರಿಕೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ಡಾ.ಬಿ.ಆರ್.ಅಂಬೇಡ್ಕರ್ ಕೋನಸೀಮ ಜಿಲ್ಲೆಯಲ್ಲಿರುವ ಒಎನ್‌ಜಿಸಿಗೆ ಸೇರಿದ ಡ್ರಿಲ್ಲಿಂಗ್ ತಾಣದಲ್ಲಿ ಸೋಮವಾರ ಭಾರಿ ಪ್ರಮಾಣದಲ್ಲಿ ಅನಿಲ ಸೋರಿಕೆಯಾದ ಪರಿಣಾಮ ಬೆಂಕಿ ಹೊತ್ತಿಕೊಂಡು ಆತಂಕ ಸೃಷ್ಟಿಯಾಗಿತ್ತು.

ಜಿಲ್ಲೆಯ ಮಲ್ಕಿಪುರಂ ತಾಲ್ಲೂಕಿನ ಇರುಸುಮಂಡಲಮ್ ಗ್ರಾಮದಲ್ಲಿ ಈ ಅವಘಡ ಸಂಭವಿಸಿದೆ. ಅನಿಲವು ಗಗನಮುಖಿಯಾಗಿ ಹೊರಹೊಮ್ಮಿದ್ದಲ್ಲದೇ, ಭಾರಿ ಪ್ರಮಾಣದ ಜ್ವಾಲೆ ಹೊತ್ತಿಕೊಳ್ಳಲೂ ಕಾರಣವಾಯಿತು. ಇದರ ಪರಿಣಾಮವಾಗಿ, ಆ ಪ್ರದೇಶದಲ್ಲಿ 500ಕ್ಕೂ ಹೆಚ್ಚು ತೆಂಗಿನ ಮರಗಳು ಸುಟ್ಟು ಕರಕಲಾಗಿವೆ.

ಈ ಅವಘಡ ಸಂಭವಿಸಿದ ಬೆನ್ನಲ್ಲೇ, ಮುಂಜಾಗ್ರತಾ ಕ್ರಮವಾಗಿ ಡ್ರಿಲ್ಲಿಂಗ್ ತಾಣದಿಂದ 5 ಕಿ.ಮೀ. ವ್ಯಾಪ್ತಿಯಲ್ಲಿ ವಾಸ ಮಾಡುತ್ತಿರುವ ಜನರನ್ನು ಅಧಿಕಾರಿಗಳು ಸ್ಥಳಾಂತರಗೊಳಿಸಿದರು.

ಅಗ್ನಿಶಾಮಕ ದಳ ಹಾಗೂ ತುರ್ತು ಸ್ಪಂದನಾ ತಂಡಗಳು ಸ್ಥಳಕ್ಕೆ ಧಾವಿಸಿ, ಅನಿಲ ಸೋರಿಕೆ ತಡೆಗಟ್ಟುವ ಜೊತೆಗೆ ಬೆಂಕಿ ನಂದಿಸಿದವು. ಬಾಧಿತ ಗ್ರಾಮಗಳ ಜನರಿಗಾಗಿ ಪರಿಹಾರ ಕೇಂದ್ರಗಳನ್ನು ಆರಂಭಿಸಲಾಗಿದೆ.

ಕಾರ್ಯಾಚರಣೆ ವೇಳೆ, ಒತ್ತಡದಲ್ಲಿ ದಿಢೀರ್ ಹೆಚ್ಚಳ ಉಂಟಾಗಿದ್ದೇ ಅವಘಡಕ್ಕೆ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಈ ತಾಣದಿಂದ 500–600 ಮೀಟರ್ ವ್ಯಾಪ್ತಿಯಲ್ಲಿ ಜನವಸತಿ ಇಲ್ಲ. ಹೀಗಾಗಿ ಸಾವು–ನೋವು ಸಂಭವಿಸಿಲ್ಲ.

ಪ್ರಾತಿನಿಧ್ಯ ಖಾತರಿ: 'ಸುಪ್ರೀಂ'

ನವದೆಹಲಿ (ಪಿಟಿಐ): ಬಾರ್ ಕೌನ್ಸಿಲ್‌ಗಳಲ್ಲಿ ವಿಶೇಷ ಸಾಮರ್ಥ್ಯದ ವಕೀಲರ ಪ್ರಾತಿನಿಧ್ಯವನ್ನು ಖಾತರಿಪಡಿಸುತ್ತೇವೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ವಿಶೇಷ ಸಾಮರ್ಥ್ಯದ ವಕೀಲರ ಪ್ರಾತಿನಿಧ್ಯವನ್ನು ಸಾಂಸ್ಥಿಕಗೊಳಿಸಲು ತಿದ್ದುಪಡಿಯ ಅಗತ್ಯವಿದೆ ಎಂಬುದನ್ನೂ ನ್ಯಾಯಪೀಠವು ಗಮನಿಸಿದೆ.

ಬಾರ್ ಕೌನ್ಸಿಲ್ ಆಫ್ ಇಂಡಿಯಾಕ್ಕೆ (ಬಿಸಿಐ) ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸುವ ವಕೀಲರಿಂದ ₹1.25 ಲಕ್ಷದ ಬದಲು, ₹15 ಸಾವಿರ ನಾಮನಿರ್ದೇಶನ ಶುಲ್ಕ ಪಡೆಯುವಂತೆ ಸೂಚಿಸಿದೆ.

ವಕೀಲ ಪಂಕಜ್ ಸಿನ್ಹಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು, ಭಾರತೀಯ ವಕೀಲರ ಪರಿಷತ್ತು ಶಾಸನಬದ್ಧವಾದ ಚೌಕಟ್ಟಿನಲ್ಲಿದ್ದು, ವಕೀಲರ ರಾಜ್ಯ ಪರಿಷತ್ತುಗಳಲ್ಲಿ ವಿಶೇಷ ಸಾಮರ್ಥ್ಯದ ವಕೀಲರ ಭಾಗವಹಿಸುವಿಕೆಗೆ ಪೂರಕವಾದ ನಾಮನಿರ್ದೇಶನ ಶುಲ್ಕ, ನಿಯಮಾವಳಿ ರೂಪಿಸಿಕೊಳ್ಳಬೇಕು ಎಂದು ಹೇಳಿತು.

ಬಿಸಿಐನ ನಿರ್ಧಾರ ತೆಗೆದುಕೊಳ್ಳುವ ಸಮಿತಿಗಳಲ್ಲಿ ವಿಶೇಷ ಸಾಮರ್ಥ್ಯದ ವಕೀಲರು ಸಕ್ರಿಯರಾಗಿ ಭಾಗಿಯಾಗಬೇಕು. ಆದರೆ, ಚುನಾವಣಾ ಶುಲ್ಕವೇ ದುಬಾರಿಯಾಗಿದೆ. ಇಂತಹವರಿಗೆ ಸಾಂಕೇತಿಕ ಶುಲ್ಕವನ್ನಷ್ಟೇ ವಿಧಿಸಬೇಕು ಎಂದು ಸಿಜೆಐ ಸೂರ್ಯ ಕಾಂತ್ ಹೇಳಿದರು.

ವಿಶೇಷ ಸಾಮರ್ಥ್ಯ ಹೊಂದಿದ ವಕೀಲರಿಗೆ ₹25 ಸಾವಿರ ಶುಲ್ಕ ಭರಿಸುವುದು ಸಹ ಹೊರೆಯಾಗಬಹುದು ಎಂಬುದನ್ನು ವಕೀಲೆ ಇಂದಿರಾ ಜೈಸಿಂಗ್ ನ್ಯಾಯಪೀಠದ ಗಮನಕ್ಕೆ ತಂದರು.

ವಕೀಲರ ಕಳವಳವನ್ನು ಅರ್ಥಮಾಡಿಕೊಂಡ ಬಿಸಿಐ ಅಧ್ಯಕ್ಷ ಮತ್ತು ಹಿರಿಯ ವಕೀಲ ಮನನ್ ಕುಮಾರ್ ಮಿಶ್ರಾ ಅವರು ಸಾಂಕೇತಿಕ ನಾಮನಿರ್ದೇಶನದ ಶುಲ್ಕವಾಗಿ ₹15 ಸಾವಿರ ನಿಗದಿಪಡಿಸಬಹುದು ಎಂದು ಹೇಳಿದರು. ಇದಕ್ಕೆ ವಕೀಲರ ಪರಿಷತ್ತು ಸಿದ್ಧವಿದೆ ಎಂದರು.

ಸೂರ್ಯವಂಶಿ ಮಿಂಚಿನಾಟ: ದಕ್ಷಿಣ ಆಫ್ರಿಕಾ ಹೈರಾಣ

ಬೆನೋನಿ (ದಕ್ಷಿಣ ಆಫ್ರಿಕಾ): ನಾಯಕ ವೈಭವ್ ಸೂರ್ಯವಂಶಿ ಅವರ ಮಿಂಚಿನ ಅರ್ಧಶತಕದ (68; 24 ಎಸೆತ, 4x1, 6x10) ನೆರವಿನಿಂದ ಭಾರತ ತಂಡ ಸೋಮವಾರ ನಡೆದ 19 ವರ್ಷದೊಳಗಿನವರ ಏಕದಿನ ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಡಿಎಲ್‌ಎಸ್ ಆಧಾರದಲ್ಲಿ 8 ವಿಕೆಟ್‌ಗಳಿಂದ ಸೋಲಿಸಿತು. ಇನ್ನೊಂದು ಪಂದ್ಯ ಉಳಿದಿರುವಂತೆ ಭಾರತ ಸರಣಿಯಲ್ಲಿ 2–0 ಗೆಲುವಿನ ಮುನ್ನಡೆ ಪಡೆಯಿತು.

ವಿಲ್ಲೊಮೂರ್ ಪಾರ್ಕ್‌ನಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ಯುವ ತಂಡ 49.3 ಓವರುಗಳಲ್ಲಿ 245 ರನ್‌ಗಳಿಗೆ ಆಲೌಟಾಯಿತು. ಜೇಸನ್ ರೌಲ್ಸ್ (114, 113ಎ, 4x7, 6x3) ಶತಕ ಬಾರಿಸಿದರು. ಮಳೆಯ ಕಾರಣ ಭಾರತ ಯುವ ತಂಡದ ಗುರಿಯನ್ನು 27 ಓವರುಗಳಲ್ಲಿ 174 ರನ್‌ಗಳಿಗೆ ಪರಿಷ್ಕರಿಸಲಾಯಿತು. ಭಾರತ ತಂಡ 23.3 ಓವರುಗಳಲ್ಲಿ 2 ವಿಕೆಟ್‌ಗೆ 176 ರನ್ ಹೊಡೆದು ಗೆಲುವು ಆಚರಿಸಿತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ ಯುವ ತಂಡ: 49.3 ಓವರುಗಳಲ್ಲಿ 245 (ಜೇಸನ್ ರೌಲ್ಸ್ 114, ಡೇನಿಯಲ್ ಬಾಸ್ಮನ್ 31; ಕಿಶನ್ ಸಿಂಗ್ 46ಕ್ಕೆ4, ಆರ್.ಎಸ್.ಅಂಬರೀಶ್ 47ಕ್ಕೆ2): ಭಾರತ ಯುವ ತಂಡ: 23.3 ಓವರುಗಳಲ್ಲಿ 2ಕ್ಕೆ 176 (ವೈಭವ್ ಸೂರ್ಯವಂಶಿ 68, ವೇದಾಂತ್ ತ್ರಿವೇದಿ ಔಟಾಗದೇ 31, ಅಭಿಜ್ಞಾನ್ ಕುಂದು ಔಟಾಗದೇ 48; ಮೈಕೆಲ್ ಕ್ರುಯಿಸ್‌ಕಾಂಪ್ 23ಕ್ಕೆ2).

ಬ್ಯಾಸ್ಕೆಟ್‌ಬಾಲ್: ಪುರುಷರ ತಂಡಕ್ಕೆ ಜಯ

ಬೆಂಗಳೂರು: ಕರ್ನಾಟಕ ಪುರುಷರ ತಂಡವು ಚೆನ್ನೈನಲ್ಲಿ ನಡೆಯುತ್ತಿರುವ 75ನೇ ಸೀನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಸೋಮವಾರ 94–75ರಿಂದ ಸರ್ವಿಸಸ್ ತಂಡವನ್ನು ಮಣಿಸಿತು. ಆದರೆ, ರಾಜ್ಯ ಮಹಿಳಾ ತಂಡವು ರೈಲ್ವೇಸ್ ತಂಡದ ವಿರುದ್ಧ ಪರಾಭವಗೊಂಡಿತು.

ಪುರುಷರ ತಂಡವು ಪ್ರಿಯಾಂಶು ತೋಮರ್ (22 ಪಾಯಿಂಟ್ಸ್) ಹಾಗೂ ಆ್ಯರನ್ ಮೊಂತೆರೊ (20 ಪಾಯಿಂಟ್ಸ್) ಅವರ ಜಂಟಿ ಆಟದ ಬಲದಿಂದ ಎ ಗುಂಪಿನ ಪಂದ್ಯದಲ್ಲಿ ಸರ್ವಿಸಸ್ ವಿರುದ್ಧ ಸುಲಭ ಜಯ ಸಾಧಿಸಿತು. ಸಂಘಟಿತ ಆಟವಾಡಿದ ರೈಲ್ವೇಸ್ ತಂಡದ ಆಟಗಾರ್ತಿಯರು, ಮಹಿಳೆಯರ ವಿಭಾಗದ ಪಂದ್ಯದಲ್ಲಿ, 98–65ರಿಂದ ಕರ್ನಾಟಕ ತಂಡವನ್ನು ನಿರಾಯಾಸವಾಗಿ ಮಣಿಸಿದರು.

ದೊಡಿಗ್‌ಗೆ ಆಘಾತ ನೀಡಿದ ಮಾನಸ್

ಬೆಂಗಳೂರು ಓಪನ್ ಟೆನಿಸ್: 2ನೇ ಸುತ್ತಿಗೆ ನಾಗಲ್ • ಜೇ ಕ್ಲರ್ಕ್ ನಿರ್ಗಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿಹರೆಯದ ಆಟಗಾರ ಮಾನಸ್ ಧಾಮ್ನೆ ಅವರು ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಮೊದಲ ದಿನವಾದ ಸೋಮವಾರ ಐದನೇ ಶ್ರೇಯಾಂಕದ ಕ್ರೊವೇಷ್ಯಾ ಆಟಗಾರ ಮಾತ್ಯೆ ದೊಡಿಗ್ ಅವರಿಗೆ ಮೂರು ಸೆಟ್‌ಗಳ ಹಣಾಹಣಿಯಲ್ಲಿ ಆಘಾತ ನೀಡಿದರು.

ವೈಲ್ಡ್‌ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದ ಪುಣೆಯ ಆಟಗಾರನಿಗೆ ಇದು ವೃತ್ತಿಜೀವನದ ದೊಡ್ಡ ಗೆಲುವು ಎನಿಸಿತು. 18 ವರ್ಷ ವಯಸ್ಸಿನ ಧಾಮ್ನೆ ಒತ್ತಡ ನಿಭಾಯಿಸಿಕೊಂಡು ವಿಶ್ವಕ್ರಮಾಂಕದಲ್ಲಿ 231ನೇ ಸ್ಥಾನದಲ್ಲಿರುವ ಆಟಗಾರನನ್ನು 7–5, 4–6, 6–1 ರಿಂದ ಸೋಲಿಸಿ ಎರಡನೇ ಸುತ್ತು ಪ್ರವೇಶಿಸಿದರು. ಕಳೆದ ವರ್ಷ ಧಾಮ್ನೆ ಈ ಟೂರ್ನಿಯ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದರು.

ಹೋದ ವರ್ಷ ಗಾಯದ ಸಮಸ್ಯೆಗಳಿಂದ ಬಳಲಿದ್ದ ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಾಗಲ್ ಮೊದಲ ಸುತ್ತಿನಲ್ಲಿ 6–3, 6–2 ರಿಂದ ಕರ್ನಾಟಕದ ಎಸ್.ಡಿ.ಪ್ರಜ್ವಲ್ ದೇವ್ ಅವರನ್ನು ಸುಲಭವಾಗಿ ಸೋಲಿಸಿದರು. ಇದು ಮೂರು ತಿಂಗಳಲ್ಲಿ ನಾಗಲ್ ಆಡಿದ ಮೊದಲ ಪಂದ್ಯವಾಗಿದ್ದು, ಚುರುಕಿನ ಚಲನೆಯಿಂದ ಅವರ ಫಿಟ್ ಆಗಿರುವುದು ಎದ್ದುಕಂಡಿತು.

ಪಂದ್ಯದ ಮೊದಲ ಗೇಮ್‌ನಲ್ಲೇ ನಾಗಲ್ ಸರ್ವ್ ಕಳೆದುಕೊಂಡಿದ್ದರು. ಆದರೆ ಅದರಿಂದೇನೂ ಪರಿಣಾಮ ಆಗಲಿಲ್ಲ. ತಕ್ಷಣ ಲಯಕ್ಕೆ ಮರಳಿದ ಅವರು ಗುಣಮಟ್ಟದ ಆಟ ಮತ್ತು ಬಿರುಸಿನ ಸರ್ವ್‌ಗಳನ್ನು ಮಾಡಿದರು. ಅವರಿಗೆ ಮೈಸೂರಿನ ಆಟಗಾರ ಸಾಟಿಯಾಗಲಿಲ್ಲ.

ಇದಕ್ಕೆ ಮೊದಲು, ಮೂರನೇ ಶ್ರೇಯಾಂಕ ಆಟಗಾರನಾದ ಬ್ರಿಟನ್‌ನ ಜೇ ಕ್ಲರ್ಕ್ ಅವರಿಗೆ 6–4, 1–6, 2–6 ರಿಂದ ಆಘಾತ ನೀಡಿದ ಫ್ರಾನ್ಸ್‌ನ ಮ್ಯಾಟಿಯೊ ಮಾರ್ಟಿನು ಅವರೂ ಎರಡನೇ ಸುತ್ತಿಗೆ ಮುನ್ನಡೆದರು.

ಭಾರತದ ಆಟಗಾರ ಇದ್ದ ಮುಖ್ಯ ಡ್ರಾದ ಮೊದಲ ಪಂದ್ಯದಲ್ಲಿ ಧಾಮ್ನೆ ಅವರ ಆಟ ಎದ್ದುಕಂಡಿತು. ಅವರು ಚುರುಕಾದ ಚಲನೆ, ಕೋರ್ಟ್‌ನುದ್ದಕ್ಕೂ ಓಡಾಡಿ, ದೊಡಿಗ್ ಅವರ ಭರ್ಜರಿ ಸರ್ವ್‌ಗಳನ್ನು ನಿಭಾಯಿಸಿದರು. ಕ್ರೊವೇಷ್ಯಾದ ಆಟಗಾರನಿಗೆ ಸ್ಥಿರವಾದ ಆಟ ಕಂಡುಕೊಳ್ಳಲಾಗಲಿಲ್ಲ.

ಇಟಲಿಯ ಪಿಯಾಟಿ ಟೆನಿಸ್ ಸೆಂಟರ್‌ನಲ್ಲಿ ಸುಮಾರು ಐದು ವರ್ಷಗಳಿಂದ ತರಬೇತಿಯಲ್ಲಿರುವ ಧಾಮ್ನೆ ಅವರ ಬ್ಯಾಕ್‌ಹ್ಯಾಂಡ್ ಹೊಡೆತಗಳು ಪರಿಣಾಮಕಾರಿ ಎನಿಸಿದವು. ದೊಡಿಗ್ ಅವರಿಗೆ ಲಯಕಂಡುಕೊಳ್ಳಲು ಭಾರತದ ಆಟಗಾರ ಅವಕಾಶ ನೀಡಲಿಲ್ಲ.

ರಷ್ಯಾದ ಪೀಟರ್ ಬರ್ ಬಿಯರ್ಕೋವ್ (ಎಟಿಪಿ) ಇನ್ನೊಂದು ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಹೆರಾಲ್ಡ್ ಮಾಯೊಟ್ (ಫ್ರಾನ್ಸ್) ಅವರಿಗೆ 7–6 (4), 5–7, 4–6 ರಲ್ಲಿ ಮಣಿದರು.

ಕೆನಡಾದ ಡ್ಯಾನ್ ಮಾರ್ಟಿನ್ 6–7 (7–4), 7–5, 6–4 ರಿಂದ ಉಕ್ರೇನ್‌ನ ವ್ಲಾಡಿಸ್ಲಾವ್ ಒರ್ಲೋವ್ ಅವರನ್ನು ಸೋಲಿಸಿದರು.

ಕ್ರೊವೇಷ್ಯಾದ ಮಾತ್ಯೆ ದೊಡಿಗ್ ಅವರನ್ನು ಸೋಲಿಸಿದ ಭಾರತದ ಮಾನಸ್ ಧಾಮ್ನೆ ಅವರ ಬ್ಯಾಕ್‌ಹ್ಯಾಂಡ್ ರಿಟರ್ನ್ ಚಿತ್ರ: ಕೃಷ್ಣಕುಮಾರ್ ಪಿ.ಎಸ್.

ಯೂತ್ ಕಂಟೆಂಡರ್: ಶಾರ್ವಿಲ್, ಸಾಕ್ಷ್ಯಾ ರನ್ನರ್ಸ್

ಪ್ರಜಾವಾಣಿ ವಾರ್ತೆ/ಪಿಟಿಐ

ವಡೋದರಾ: ಕರ್ನಾಟಕದ ಉದಯೋನ್ಮುಖ ಆಟಗಾರರಾದ ಶಾರ್ವಿಲ್ ಕಂಬ್ಳೇಕರ್ ಹಾಗೂ ಸಾಕ್ಷ್ಯಾ ಸಂತೋಷ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಯೂತ್ ಕಂಟೆಂಡರ್‌ನಲ್ಲಿ ಕ್ರಮವಾಗಿ 11 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ಸಿಂಗಲ್ಸ್ ರನ್ನರ್–ಅಪ್ ಪ್ರಶಸ್ತಿ ಗೆದ್ದುಕೊಂಡರು.

ಸೋಮವಾರ ನಡೆದ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಸಾಕ್ಷ್ಯಾ 13–15, 8–11, 10–12 ರಿಂದ ಮಹಾರಾಷ್ಟ್ರದ ಆದ್ಯಾ ಬಿ. ಎದುರು ಸೋಲನುಭವಿಸಿದರು. ಶಾರ್ವಿಲ್ 8–11, 6–11, 13–11, 4–11ರಿಂದ ರಾಜ್‌ದೀಪ್ ಬಿಸ್ವಾಸ್ (ಪಶ್ಚಿಮ ಬಂಗಾಳ) ಎದುರು ಮಣಿದರು.

15 ವರ್ಷದೊಳಗಿನ ಮಿಶ್ರ ಡಬಲ್ಸ್‌ನಲ್ಲಿ ರೇಯಾನ್ಶ್ ಜಲಾನ್ ಹಾಗೂ ತನಿಷ್ಕಾ ಕಪಿಲ್ ಕಾಲಭೈರವ ಜೋಡಿ ರನ್ನರ್–ಅಪ್ ಆಯಿತು. ಕರ್ನಾಟಕದ ಈ ಜೋಡಿ, ಫೈನಲ್ ಹಣಾಹಣಿಯಲ್ಲಿ 8–11, 8–11, 3–11ರಿಂದ ವಿವಾನ್ ಡಿ. ಹಾಗೂ ನೈಶಾ ಆರ್. (ಗುಜರಾತ್–ಮಹಾರಾಷ್ಟ್ರ) ವಿರುದ್ಧ ಪರಾಭವಗೊಂಡಿತು.

15 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ವಿವಾನ್ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು. ಬಾಲಕಿಯರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಆಟಗಾರ್ತಿ ಅಂಕೊಲಿಕಾ ಚಕ್ರವರ್ತಿ, ಎರಡನೇ ಶ್ರೇಯಾಂಕದ ಆಟಗಾರ್ತಿ ನೈಶಾ ಹಾಗೂ ತನಿಷ್ಕಾ ತಮ್ಮ ತಮ್ಮ ಪಂದ್ಯಗಳಲ್ಲಿ ಗೆಲುವಿನೊಂದಿಗೆ ಎಂಟರ ಘಟ್ಟ ಪ್ರವೇಶಿಸಿದರು.

ಶಾರ್ವಿಲ್ ಕಂಬ್ಳೇಕರ್ ಹಾಗೂ ಸಾಕ್ಷ್ಯಾ ಸಂತೋಷ್

ಮನೋಜ್ ಕೊಠಾರಿ ನಿಧನ

ಕೋಲ್ಕತ್ತ (ಪಿಟಿಐ): ವಿಶ್ವ ಬಿಲಿಯರ್ಡ್ಸ್ ಮಾಜಿ ಚಾಂಪಿಯನ್ ಮನೋಜ್ ಕೊಠಾರಿ ಅವರು ಹೃದಯಸ್ತಂಭನದಿಂದ ಸೋಮವಾರ ನಿಧನರಾದರು. ಅವರಿಗೆ 67 ವರ್ಷ ವಯಸ್ಸಾಗಿತ್ತು.

ಭಾರತ ಬಿಲಿಯರ್ಡ್ಸ್ ತಂಡದ ಮುಖ್ಯ ಕೋಚ್ ಆಗಿದ್ದ ಮನೋಜ್ ಅವರಿಗೆ ಪತ್ನಿ ಹಾಗೂ ಪುತ್ರ, ಮಾಜಿ ಬಿಲಿಯರ್ಡ್ಸ್ ಆಟಗಾರ ಸೌರವ್ ಕೊಠಾರಿ ಇದ್ದಾರೆ.

'ಮನೋಜ್ ಅವರು ಯಕೃತ್ತಿನ ಕಸಿ ಮಾಡಿಸಿಕೊಳ್ಳಲು ತಮಿಳುನಾಡಿನ ತಿರುನಲ್ವೇಲಿಯ ಕಾವೇರಿ ಆಸ್ಪತ್ರೆಗೆ ದಾಖಲಾಗಿದ್ದರು. 10 ದಿನಗಳ ಹಿಂದೆ ಯಶಸ್ವಿಯಾಗಿ ಯಕೃತ್ತಿನ ಕಸಿ ಮಾಡಲಾಗಿತ್ತು. ಆದರೆ, ಸೋಮವಾರ ಬೆಳಿಗ್ಗೆ 7.30ಕ್ಕೆ ಹೃದಯಸ್ತಂಭನ ಉಂಟಾಗಿ ಕೊನೆಯುಸಿರೆಳೆದರು' ಎಂದು ಕುಟುಂಬದವರು ತಿಳಿಸಿದ್ದಾರೆ.

ಮನೋಜ್ ಅವರು ಬೆಂಗಳೂರಿನಲ್ಲಿ 1990ರಲ್ಲಿ ನಡೆದ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್ ಪ್ರಶಸ್ತಿ ಗೆದ್ದುಕೊಂಡಿದ್ದರು.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

EXECUTIVE / SENIOR EXECUTIVE ELECTRICAL MAINTENANCE

No. of Positions : 3
Work Location : Belur Plant (Dharwad) and Kumbalagodu Plant (Bangalore)
Education : Diploma (Electrical) or ITI (electrical)
Experience : -10+ years of proven experience in a similar role, preferably in the media industry.

- In Depth knowledge of Siemens, Lenze drives & Mitsubishi PLC.
- Problem solving- Identifying & resolving machine problem issues efficiently & effectively.
- Spares and service co-ordination for other TPML plants related to Hiline machinery & utilities
- Plan daily maintenance activities and monitor their execution
- Effective Implementation of Preventive Maintenance / Predictive Maintenance Systems.
- Minimize equipment downtime, monitor & take corrective actions to ensure maintenance targets.

Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ನಾಕೌಟ್ ಮೇಲೆ ಕರ್ನಾಟಕ ಕಣ್ಣು

ವಿಜಯ್ ಹಜಾರೆ ಟ್ರೋಫಿ: ರಾಜಸ್ಥಾನ ವಿರುದ್ಧ ಪಂದ್ಯ ಇಂದು • ಪಡಿಕ್ಕಲ್ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಅಜೇಯ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಎಲೀಟ್ 'ಎ' ಗುಂಪಿನಲ್ಲಿ ಕೊನೆಯಿಂದ ಎರಡನೇ ಸ್ಥಾನದಲ್ಲಿರುವ ರಾಜಸ್ಥಾನ ತಂಡವವನ್ನು ಮಂಗಳವಾರ ಎದುರಿಸಲಿದೆ. ಆತ್ಮವಿಶ್ವಾಸದಲ್ಲಿರುವ ಕರ್ನಾಟಕವು ಈ ಪಂದ್ಯ ಗೆದ್ದು ಕ್ವಾರ್ಟರ್‌ಫೈನಲ್‌ಗೇರುವ ಉಮೇದಿನಲ್ಲಿದೆ.

ಹಾಲಿ ಚಾಂಪಿಯನ್ ಕರ್ನಾಟಕ ಐದು ಪಂದ್ಯಗಳಿಂದ ಪರಿಪೂರ್ಣ 20 ಅಂಕಗಳನ್ನು ಗಳಿಸಿದೆ. ಗುಜರಾತ್ ಕಾಲೇಜು ಮೈದಾನದಲ್ಲಿ ನಡೆಯಲಿರುವ ಪಂದ್ಯ ಗೆದ್ದರೆ ಇನ್ನೂ ಒಂದು ಪಂದ್ಯ ಬಾಕಿಯಿರುವಂತೆ ಕರ್ನಾಟಕ ನಾಕೌಟ್‌ಗೆ ಮುನ್ನಡೆಯಲಿದೆ.

ನಾಕೌಟ್ ಹಂತದ ಪಂದ್ಯಗಳು ಜನವರಿ 12ರಿಂದ ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ನಡೆಯಲಿವೆ.

ಎಂಟು ತಂಡಗಳಿರುವ 'ಎ' ಗುಂಪಿನಲ್ಲಿ ಮಧ್ಯ ಪ್ರದೇಶ (16 ಅಂಕ) ಸದ್ಯ ಎರಡನೇ ಸ್ಥಾನದಲ್ಲಿದೆ. ಈ ತಂಡವು ಮಂಗಳವಾರ ಜಾರ್ಖಂಡ್ ತಂಡವನ್ನು ಮತ್ತು ಗುರುವಾರ ಕರ್ನಾಟಕ ತಂಡವನ್ನು ಎದುರಿಸಲಿದ್ದು, ಎರಡೂ ಪಂದ್ಯ ಗೆದ್ದರೆ ಮಾತ್ರ ಒಟ್ಟು 24 ಅಂಕ ಗಳಿಸಲಿದ್ದು ಗುಂಪಿನಲ್ಲಿ ಅಗ್ರಸ್ಥಾನಕ್ಕೇರುವ ಅವಕಾಶ ಹೊಂದಿದೆ.

ಪ್ರತಿ ಗುಂಪಿನಲ್ಲಿ ಅಗ್ರ ಎರಡು ಸ್ಥಾನ ಪಡೆಯುವ ತಂಡಗಳು ಎಂಟರ ಘಟ್ಟ ತಲುಪಲಿವೆ.

ಪಡಿಕ್ಕಲ್ ಮೇಲೆ ಗಮನ: ಯಶಸ್ಸಿನ ಅಲೆಯಲ್ಲಿ ತೇಲುತ್ತಿರುವ ಕರ್ನಾಟಕ ಮತ್ತು ಸತತ ಸೋಲುಗಳಿಂದ ಕಂಗೆಟ್ಟಿರುವ ರಾಜಸ್ಥಾನದ ಸ್ಥಿತಿ ಅವಲೋಕಿಸಿದರೆ, ಹಾಲಿ ಚಾಂಪಿಯನ್ ತಂಡವೇ ಫೇವರೀಟ್ ಆಗಿದೆ. ರನ್ ಹೊಳೆ ಹರಿಸಿರುವ ದೇವದತ್ತ ಪಡಿಕ್ಕಲ್ ಅವರ ಮೇಲೆಯೇ ಎಲ್ಲರ ಗಮನ ಇದೆ. ನಾಲ್ಕು ಶತಕ ಸಿಡಿಸಿರುವ 25 ವರ್ಷ ವಯಸ್ಸಿನ ಪಡಿಕ್ಕಲ್ 5 ಪಂದ್ಯಗಳಿಂದ 514 ರನ್ ಕಲೆಹಾಕಿದ್ದಾರೆ.

ರಾಷ್ಟ್ರೀಯ ಆಯ್ಕೆಗಾರರ ಅವಕೃಪೆಗೆ ಒಳಗಾದರೂ ಅವರು ರನ್‌ಹಸಿವಿನ ಮೂಲಕ ಟೂರ್ನಿಯಲ್ಲಿ ಸ್ಥಿರ ಪ್ರದರ್ಶನ ನೀಡಿದ್ದಾರೆ. ಬಹುತೇಕ ಎಲ್ಲ ಪಂದ್ಯಗಳಲ್ಲಿ ಉತ್ತಮ ಆರಂಭ ನೀಡಿರುವ ಕಾರಣ ಮಧ್ಯಮ ಕ್ರಮಾಂಕದ ಆಟಗಾರರು ನಿರಾಳವಾಗಿ ಆಡುವಂತಾಗಿದೆ. ಉತ್ತಮ ಲಯದಲ್ಲಿರುವ ಅವರು ಹೊಡೆತಗಳ ಆಯ್ಕೆಯಲ್ಲೂ ಎಡವಿಲ್ಲ.

ನ್ಯೂಜಿಲೆಂಡ್ ವಿರುದ್ಧ ಏಕದಿನ ಸರಣಿಗೆ ಸಜ್ಜಾಗುತ್ತಿರುವ ಭಾರತ ತಂಡದ ವಿಕೆಟ್ ಕೀಪರ್ ಕೆ.ಎಲ್.ರಾಹುಲ್ ಅವರೂ ದೊಡ್ಡ ಇನಿಂಗ್ಸ್ ಆಡುವ ತವಕದಲ್ಲಿದ್ದಾರೆ.

ಲಯಕ್ಕೆ ಮರಳಿರುವ ಆರ್.ಸ್ಮರಣ್ ಅವರು ತ್ರಿಪುರ ವಿರುದ್ಧ 82 ಎಸೆತಗಳಲ್ಲಿ 60 ರನ್ ಗಳಿಸಿದ್ದರು. ರಣಜಿ ಟ್ರೋಫಿಯ ಇದುವರೆಗಿನ ಅಭಿಯಾನದಲ್ಲಿ ಕರ್ನಾಟಕ ಯಶಸ್ಸು ಸಾಧಿಸುವಲ್ಲಿ ಸ್ಮರಣ್ ಗಣನೀಯ ಪಾತ್ರ ವಹಿಸಿದ್ದಾರೆ.

ಆದರೆ ಬೌಲಿಂಗ್‌ನಲ್ಲಿ ಸುಧಾರಣೆಗೆ ಅವಕಾಶವವಿದೆ. ಭಾರತ ತಂಡದ ಬೌಲರ್ ಪ್ರಸಿದ್ಧ ಕೃಷ್ಣ ಜೊತೆ ವೈಶಾಖ ವಿಜಯಕುಮಾರ, ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರಿಂದ ಉತ್ತಮ ಪ್ರದರ್ಶನದ ನಿರೀಕ್ಷೆಯಲ್ಲಿದೆ.

ಕರ್ನಾಟಕ ತಂಡದ ಮಯಂಕ್ ಅಗರವಾಲ್, ದೇವದತ್ತ ಪಡಿಕ್ಕಲ್

ರೈಲ್ವೇಸ್ ವಿರುದ್ಧದ ಪಂದ್ಯಕ್ಕೆ ವಿರಾಟ್ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟಿಂಗ್ ತಾರೆ ವಿರಾಟ್ ಕೊಹ್ಲಿ ಅವರು ಮಂಗಳವಾರ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಡಿ ಗುಂಪಿನ ಪಂದ್ಯದಲ್ಲಿ ಆಡುತ್ತಿಲ್ಲ.

ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಹೋದ ತಿಂಗಳು ನಡೆದಿದ್ದ ಟೂರ್ನಿಯ ಮೊದಲೆರಡು ಪಂದ್ಯಗಳಲ್ಲಿ ವಿರಾಟ್ ಆಡಿದ್ದರು. ಕ್ರಮವಾಗಿ 131 ಮತ್ತು 77 ರನ್ ಗಳಿಸಿದ್ದರು. ನಂತರದ ಎರಡು ಪಂದ್ಯಗಳಲ್ಲಿ ಅವರು ಆಡಿರಲಿಲ್ಲ. ಭಾರತ ತಂಡದ ಆಟಗಾರರು ಬಿಡುವು ಇದ್ದಾಗ ದೇಶಿ ಕ್ರಿಕೆಟ್ ಟೂರ್ನಿಯಲ್ಲಿ ಕನಿಷ್ಠ ಎರಡು ಪಂದ್ಯಗಳನ್ನು ಆಡಬೇಕು ಎಂಬ ನಿಯಮದನ್ವಯ ಅವರು ಆಡಿದ್ದರು.

ಮಂಗಳವಾರ ರೈಲ್ವೇಸ್ ಎದುರು ನಡೆಯುವ ಪಂದ್ಯದಲ್ಲಿ ಅವರು ಆಡಲಿದ್ದಾರೆ ಎಂದು ದೆಹಲಿ ಜಿಲ್ಲಾ ಕ್ರಿಕೆಟ್ ಸಂಸ್ಥೆಯು ಈಚೆಗೆ ತಿಳಿಸಿತ್ತು.

'ರೈಲ್ವೇಸ್ ಎದುರಿನ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಅವರು ಆಡುವುದಿಲ್ಲ' ಎಂದು ದೆಹಲಿ ತಂಡದ ಮುಖ್ಯ ಕೋಚ್ ಸರಣದೀಪ್ ಸಿಂಗ್ ಪಿಟಿಐಗೆ ಸೋಮವಾರ ತಿಳಿಸಿದ್ದಾರೆ.

ಇದೇ 11ರಿಂದ ಆರಂಭವಾಗಲಿರುವ ನ್ಯೂಜಿಲೆಂಡ್ ಎದುರಿನ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ವಿರಾಟ್ ಆಡಲಿದ್ದಾರೆ.

ರೂಟ್ ಶತಕ; ಹೆಡ್ ಮಿಂಚಿನಾಟ

ಸಿಡ್ನಿ (ಎಎಫ್‌ಪಿ): ಅನುಭವಿ ಜೋ ರೂಟ್ ಅವರ ಆಕರ್ಷಕ 160 ರನ್‌ಗಳ (242ಎ, 4x15) ನೆರವಿನಿಂದ ಇಂಗ್ಲೆಂಡ್ ತಂಡ ಆ್ಯಷಸ್ ಸರಣಿಯ ಐದನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದ ಎರಡನೇ ದಿನ 384 ರನ್‌ಗಳ ಉತ್ತಮ ಮೊತ್ತ ಕಲೆಹಾಕಿತ್ತು. ಆದರೆ ವೇಗವಾಗಿ ಆಡಿದ ಟ್ರಾವಿಸ್ ಹೆಡ್ ಅಜೇಯ 91 ರನ್ ಬಾರಿಸಿದ್ದು, ಆಸ್ಟ್ರೇಲಿಯಾ ಹೋರಾಟ ನಡೆಸುತ್ತಿದೆ.

ಸೋಮವಾರ ಎರಡನೇ ದಿನದಾಟ ಮುಗಿದಾಗ ಆಸ್ಟ್ರೇಲಿಯಾ 2 ವಿಕೆಟ್‌ಗೆ 166 ರನ್ ಗಳಿಸಿದೆ. ಆಸ್ಟ್ರೇಲಿಯಾ ಸರಣಿಯಲ್ಲಿ 3-1 ಮುನ್ನಡೆ ಗಳಿಸಿದೆ.

35 ವರ್ಷ ವಯಸ್ಸಿನ ರೂಟ್ ಅವರಿಗೆ ಇದು 41ನೇ ಟೆಸ್ಟ್ ಶತಕವಾಗಿದ್ದು, ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್ ಅವರನ್ನು ಸರಿಗಟ್ಟಿದರು. ರೂಟ್ 17 ಬಾರಿ ಟೆಸ್ಟ್‌ನಲ್ಲಿ 150ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಅವರು ಈ ಹಿಂದಿನ ಮೂರು ಪ್ರವಾಸಗಳಲ್ಲಿ ಆಸ್ಟ್ರೇಲಿಯಾ ನೆಲದಲ್ಲಿ ಶತಕ ಗಳಿಸಲಾಗದೇ ಒತ್ತಡಕ್ಕೆ ಒಳಗಾಗಿದ್ದರು. ಆದರೆ ಅಹರ್ನಿಶಿಯಾಗಿ ನಡೆದ ಎರಡನೇ ಟೆಸ್ಟ್‌ನಲ್ಲಿ ಅಜೇಯ 138 ರನ್ ಬಾರಿಸಿ ಆ ಕೊರತೆ ನೀಗಿಸಿದ್ದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 97.3 ಓವರುಗಳಲ್ಲಿ 384 (ಜೋ ರೂಟ್ 160, ಹ್ಯಾರಿ ಬ್ರೂಕ್ 84, ಜೇಮಿ ಸ್ಮಿತ್ 46; ಮೈಕೆಲ್ ನೆಸೆರ್ 60ಕ್ಕೆ4); ಆಸ್ಟ್ರೇಲಿಯಾ: 34.1 ಓವರುಗಳಲ್ಲಿ 2 ವಿಕೆಟ್‌ಗೆ 166 (ಟ್ರಾವಿಸ್ ಹೆಡ್ ಬ್ಯಾಟಿಂಗ್ 91, ಮಾರ್ನಸ್ ಲಾಬುಷೇನ್ 48; ಬೆನ್ ಸ್ಟೋಕ್ಸ್ 30ಕ್ಕೆ2).

ಜೋ ರೂಟ್ ಶತಕ ಸಂಭ್ರಮ — ಎಎಫ್‌ಪಿ ಚಿತ್ರ

ಟೆಸ್ಟ್ ಕ್ರಿಕೆಟ್‌ನಲ್ಲಿ ಹೆಚ್ಚು ಶತಕ

ಶತಕ	ಆಟಗಾರ	ದೇಶ
51	ಸಚಿನ್ ತೆಂಡೂಲ್ಕರ್	ಭಾರತ
45	ಜಾಕ್ ಕಾಲಿಸ್	ದಕ್ಷಿಣ ಆಫ್ರಿಕಾ
41	ರಿಕಿ ಪಾಂಟಿಂಗ್	ಆಸ್ಟ್ರೇಲಿಯಾ
41	ಜೋ ರೂಟ್	ಇಂಗ್ಲೆಂಡ್
38	ಕುಮಾರ ಸಂಗಕ್ಕರ	ಶ್ರೀಲಂಕಾ

ಶ್ರೇಯಸ್‌ಗೆ ಮುಂಬೈ ತಂಡದ ಸಾರಥ್ಯ

ಮುಂಬೈ (ಪಿಟಿಐ): ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಯಲ್ಲಿ ಉಳಿದ ಪಂದ್ಯಗಳನ್ನು ಆಡುವ ಮುಂಬೈ ತಂಡಕ್ಕೆ ಭಾರತ ತಂಡದ ಆಟಗಾರ ಶ್ರೇಯಸ್ ಅಯ್ಯರ್ ಅವರನ್ನು ನಾಯಕರನ್ನಾಗಿ ಸೋಮವಾರ ನೇಮಕ ಮಾಡಲಾಗಿದೆ. ಇದುವರೆಗೆ ನಾಯಕರಾಗಿದ್ದ ಶಾರ್ದೂಲ್ ಠಾಕೂರ್ ಗಾಯಾಳಾಗಿದ್ದಾರೆ.

ಆದರೆ, ಶಾರ್ದೂಲ್ ಅವರಿಗೆ ಆಗಿರುವ ಗಾಯದ ಸಮಸ್ಯೆ ಏನೆಂಬುದನ್ನು ಮುಂಬೈ ತಂಡದ ಮುಖ್ಯ ಆಯ್ಕೆಗಾರ ಸಂಜಯ್ ಪಾಟೀಲ್ ಸ್ಪಷ್ಟಪಡಿಸಿಲ್ಲ.

2025ರ ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಏಕದಿನ ಪಂದ್ಯದ ವೇಳೆ ಕ್ಯಾಚ್ ಪಡೆಯುವ ಯತ್ನದಲ್ಲಿ ಪ್ಲೀಹದ (ಸ್ಪ್ಲೀನ್) ನೋವಿಗೆ ಒಳಗಾಗಿದ್ದ ಅಯ್ಯರ್ ನಂತರ ವಿಶ್ರಾಂತಿಯಲ್ಲಿದ್ದರು.

ನ್ಯೂಜಿಲೆಂಡ್ ವಿರುದ್ಧ ಆಡುವ ಭಾರತ ಏಕದಿನ ತಂಡಕ್ಕೆ ಅಯ್ಯರ್ ಅವರನ್ನು ನೇಮಕ ಮಾಡಲಾಗಿದೆ. ಆದರೆ ಅವರು ಫಿಟ್ನೆಸ್ ಸಾಬೀತುಪಡಿಸಬೇಕಾಗಿದೆ.

ಐಪಿಎಲ್ ಪ್ರಸಾರಕ್ಕೆ ಬಾಂಗ್ಲಾ ನಿರ್ಬಂಧ

ಢಾಕಾ (ಪಿಟಿಐ): ಜಗತ್ತಿನ ಶ್ರೀಮಂತ ಟಿ20 ಲೀಗ್‌ನಿಂದ ತನ್ನ ಆಟಗಾರ ಮುಸ್ತಫಿಝುರ್ ರೆಹಮಾನ್ ಅವರನ್ನು ಬಿಸಿಸಿಐ ಸೂಚನೆಯ ಮೇರೆಗೆ ಕೈಬಿಟ್ಟಿರುವುದನ್ನು ಪ್ರತಿಭಟಿಸಿ ಐಪಿಎಲ್ ಪ್ರಸಾರವನ್ನು ನಿಷೇಧಿಸುವುದಾಗಿ ಬಾಂಗ್ಲಾದೇಶ ಸೋಮವಾರ ಪ್ರಕಟಿಸಿದೆ.

ಭಾರತದ ಜೊತೆಗಿನ ರಾಜತಾಂತ್ರಿಕ ಸಂಬಂಧ ಹದಗೆಡುತ್ತಿರುವ ನಡುವೆಯೇ ಬಾಂಗ್ಲಾದೇಶ ಈ ಕ್ರಮಕ್ಕೆ ಮುಂದಾಗಿದೆ. ಮಾರ್ಚ್ 26ರಂದು ಐಪಿಎಲ್ ಆರಂಭವಾಗಬೇಕಿದೆ.

ಕೋಲ್ಕತ್ತ ನೈಟ್ ರೈಡರ್ಸ್ ತಂಡದಿಂದ ಮುಸ್ತಫಿಝುರ್ ಅವರನ್ನು ಕೈಬಿಡಲು ಬಿಸಿಸಿಐ 'ತಾರ್ಕಿಕ ಕಾರಣ' ನೀಡಿಲ್ಲ ಎಂದು ಮಹಮದ್ ಯೂನುಸ್ ಅವರ ಮಧ್ಯಂತರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಭಾರತದಲ್ಲಿ ಟಿ20 ವಿಶ್ವಕಪ್‌ನಲ್ಲಿ ಆಡಲು ನಿರಾಕರಿಸಿರುವ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯು, ತನ್ನ ಪಂದ್ಯಗಳನ್ನು ಶ್ರೀಲಂಕಾಕ್ಕೆ ಸ್ಥಳಾಂತರಿಸುವಂತೆ ಐಸಿಸಿಗೆ ಕೋರಿಕೆ ಸಲ್ಲಿಸಿದೆ. ಶ್ರೀಲಂಕಾ, ವಿಶ್ವಕಪ್‌ನ ಜಂಟಿ ಆತಿಥ್ಯ ವಹಿಸಿದೆ.

'ಟಿ20 ವಿಶ್ವಕಪ್‌ಗೆ ಭಾರತಕ್ಕೆ ನಮ್ಮ ತಂಡವನ್ನು ಕಳುಹಿಸುವುದು ಸುರಕ್ಷಿತವೆನಿಸುತ್ತಿಲ್ಲ. ಈ ಬಗ್ಗೆ ಐಸಿಸಿಗೆ ಮನವಿ ಪತ್ರ ಸಲ್ಲಿಸಿದ್ದು, ಪ್ರತಿಕ್ರಿಯೆ ಬಂದ ನಂತರ ಮುಂದಿನ ನಡೆಯ ಬಗ್ಗೆ ತೀರ್ಮಾನಿಸಲಾಗುವುದು' ಎಂದು ಬಿಸಿಬಿ ಅಧ್ಯಕ್ಷ ಅಮೀನುಲ್ ಇಸ್ಲಾಂ ಹೇಳಿದ್ದಾರೆ.

ಜೆಎಸ್‌ಡಬ್ಲ್ಯು ಸಖ್ಯ ತೊರೆದ ನೀರಜ್ ಚೋಪ್ರಾ



ನವದೆಹಲಿ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತ ಜಾವೆಲಿನ್ ತಾರೆ ನೀರಜ್ ಚೋಪ್ರಾ ಅವರು ಜೆಎಸ್‌ಡಬ್ಲ್ಯು ಜೊತೆಗಿನ ಸುಮಾರು ಒಂದು ದಶಕದ ತಮ್ಮ ಬಾಂಧವ್ಯಕ್ಕೆ ಕೊನೆಹಾಡಿದ್ದಾರೆ. ತಮ್ಮದೇ ಅಥ್ಲೀಟ್ ಮ್ಯಾನೇಜ್‌ಮೆಂಟ್ ಕಂಪನಿ 'ವೆಲ್ ಸ್ಪೋರ್ಟ್ಸ್' ಸ್ಥಾಪಿಸಿದ್ದಾರೆ.

ಚೋಪ್ರಾ ಅವರು 2016ರಿಂದ ಜೆಎಸ್‌ಡಬ್ಲ್ಯು ಜೊತೆ ಸಂಪರ್ಕ ಹೊಂದಿದ್ದರು. 'ಒಂದು ದಶಕದಿಂದ ನಮ್ಮಿಬ್ಬರ ಸಖ್ಯವು ಪ್ರಗತಿ, ವಿಶ್ವಾಸ ಮತ್ತು ಸಾಧನೆಯ ಪಯಣವಾಗಿತ್ತು. ನನ್ನ ವೃತ್ತಿಬದುಕಿನಲ್ಲಿ ಜೆಎಸ್‌ಡಬ್ಲ್ಯು ಪ್ರಮುಖ ಪಾತ್ರ ವಹಿಸಿದೆ. ಅವರ ಬೆಂಬಲಕ್ಕಾಗಿ ನಾನು ಕೃತಜ್ಞನಾಗಿರುವೆ' ಎಂದು 27 ವರ್ಷ ವಯಸ್ಸಿನ ಚೋಪ್ರಾ ಹೇಳಿಕೆಯಲ್ಲಿ ತಿಳಿದ್ದಾರೆ.

ಎರಡೂ ಕಡೆಯವರು 'ಅತೀವ ಗೌರವ ಮತ್ತು ಹೆಮ್ಮೆಯೊಂದಿಗೆ' ಪ್ರತ್ಯೇಕವಾಗುತ್ತಿದ್ದಾರೆ ಎಂದು ಹೇಳಿಕೆ ತಿಳಿಸಿದೆ.

10 YEAR WARRANTY
BAJAJ SECURE • AMC • ROAD SIDE ASSISTANCE
72198 21111
SHRIRAM Finance | IDFC FIRST Bank ALWAYS YOU FIRST | BAJAJ AUTO CREDIT | L&T Finance | TATA CAPITAL Two Wheeler Loans

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಜನವರಿ 31, 2026 ರ ವರೆಗೆ ಅನ್ವಯವಾಗುವ ಉಳಿತಾಯ. ಕ್ಯಾಶ್ ಬ್ಯಾಕ್ ಉಲ್ಲೇಖಿಸಲ್ಪಟ್ಟ ಒಟ್ಟು ಉಳಿತಾಯ. ಶೂನ್ಯ ಪ್ರೊಸೆಸಿಂಗ್ ಶುಲ್ಕ ಮತ್ತು ಉಚಿತ ಸೇವೆಗಳಿಂದ (3 ಸ್ಟ್ಯಾಂಡರ್ಡ್ ಫ್ರೀ ಸರ್ವಿಸಸ್ ಮತ್ತು 2 ಹೆಚ್ಚುವರಿ ಫ್ರೀ ಸರ್ವಿಸಸ್) ಉಳಿಯುವ ಮೊತ್ತವಾಗಿದೆ. ಉಚಿತ ಸೇವೆಯ ಉಳಿತಾಯವು ನಿಗದಿತ ಲೇಬರ್ ಶುಲ್ಕಗಳಿಗೆ ಅನ್ವಯಿಸುತ್ತದೆ. ಅನ್ವಯವಾಗುವ ಕೊಡುಗೆಗಳು ಮೋಡೆಲ್ಸ್/ರಾಜ್ಯಗಳಲ್ಲಿ ಬದಲಾಗಬಹುದು. ಶೂನ್ಯ PF ಮೇಲಿನ ಉಳಿತಾಯ ಫೈನಾನ್ಸರ್‌ರನ್ನು ಅವಲಂಬಿಸಿದೆ ಮತ್ತು ಆಯಾಯ ಸ್ಥಳಗಳಲ್ಲಿ ಬದಲಾಗಬಹುದು. ಫೈನಾನ್ಸರ್‌ರ ಸ್ವಂತ ವಿವೇಚನೆಯಡಿ ಹಣಕಾಸು ಲಭ್ಯ. ಸಾಹಸಗಳನ್ನು ತಜ್ಞರು ವೃತ್ತಿಪರ ಮೇಲ್ವಿಚಾರಣೆಯಲ್ಲಿ ನಿಯಂತ್ರಿತ ಮತ್ತು ಸುರಕ್ಷಿತ ವಾತಾವರಣದಲ್ಲಿ ಸಾರ್ವಜನಿಕ ಅಥವಾ ಸಾರ್ವಜನಿಕ ರಸ್ತೆಗಳಿಂದ ಪ್ರತ್ಯೇಕವಾಗಿ ನಿರ್ವಹಿಸಿರುತ್ತಾರೆ. ಇಂತಹ ಸಾಹಸಗಳನ್ನು ಪುನರಾವರ್ತಿಸಬಾರದಾಗಿ ವಿನಂತಿ. ಯಾವಾಗಲೂ ಸಂಚಾರ ಮತ್ತು ಸುರಕ್ಷತಾ ನಿಯಮಗಳನ್ನು ಅನುಸರಿಸಿ. ಪಲ್ಸರ್ 125 ಆಫರ್ ನಿಯಾನ್ ಮತ್ತು ಕಾರ್ಬನ್ ಫೈಬರ್ ಮೋಡೆಲ್‌ಗಳ ಮೇಲೆ.

Authorised Dealers for Bajaj Auto Ltd.: Bangalore • Bommanahalli AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli** RV BAJAJ: 6360308373 • **Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri circle** KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur** : KHIVRAJ BAJAJ: - 9148752305 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 9900072690 • **Hubli** CHANNAMMA BAJAJ: 9008030908 • **Arvind Nagar branch** 8884771881 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGASHREE BAJAJ: 988690116, **MISHA BAJAJ**: 9632684225. • **Chikodi** MISHA BAJAJ: 9632765225 • **Gokak** MISHA BAJAJ: 9035454225 • **Bellary AADI BAJAJ: 9606050250• Raichur SHREE BALAJI AUTOMOBILES: 9880235539• Koppal I A BAJAJ: 9632512938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 7022627411•(Bus Stand Road) 7022627412• **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805, 9663566620 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8867776567 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477• **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.